ಭಾನುವಾರ, ಸೆಪ್ಟೆಂಬರ್ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 255 | ಪುಟ 16

www.prajavani.net f prajavani.net prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಧಾನ್ಯದಿಂದ ಕಲಾಕೃತಿ**
ವಿವಿಧ ಧಾನ್ಯಗಳಿಂದ ವಿದ್ಯಾರ್ಥಿಗಳು ತಯಾರಿಸಿದ ಕಲಾಕೃತಿಯನ್ನು ಧಾರವಾಡದ ಕೃಷಿ ವಿವಿಯಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಪ್ರದರ್ಶನಕ್ಕಿಡಲಾಗಿದ್ದು, ಇದು ಎಲ್ಲರ ಗಮನ ಸೆಳೆಯಿತು





**ನಾಟ್ಯವೈಭವ**
ದಾವಣಗೆರೆಯಲ್ಲಿ ನಡೆದ ಪದವಿಪೂರ್ವ ಶಿಕ್ಷಣ ಸಮಾವೇಶದಲ್ಲಿ ಕಲಾವಿದೆ ದೇವಸೇನಾ ಅವರ ಭರತನಾಟ್ಯ ಪ್ರದರ್ಶನ ಗಮನಸೆಳೆಯಿತು

ಆರ್‌ಐಟಿ: ಶೇ 7.5ರಷ್ಟು ವರಮಾನ 6

ತಣಿಗೆಬೈಲಿನಲ್ಲಿ 'ಆನೆ ವಿಹಾರಧಾಮ' 7

# ಕಿರಾಣಿ ಅಂಗಡಿಗಳಿಗೆ ಗ್ರಹಣ

## ಇ–ಕಾಮರ್ಸ್, ಕ್ವಿಕ್ ಕಾಮರ್ಸ್ ಕಂಪನಿ 'ದಾಳಿ', ಎರಡು ಲಕ್ಷ ಅಂಗಡಿಗಳಿಗೆ ಬೀಗ

● ಕೆ.ಎಚ್.ಓಬಳೇಶ್

**ಒಳನೋಟ**

ಬೆಂಗಳೂರು: 'ಅದು 1974ರ ಸಮಯ. ಕುಟುಂಬದ ನಿರ್ವಹಣೆಗಾಗಿ ಕಿರಾಣಿ ಅಂಗಡಿ ತೆರೆದೆ. ಬೆಳಿಗ್ಗೆ ಏಳು ಗಂಟೆಗೆ ವ್ಯಾಪಾರ ಶುರುವಾಗುತ್ತಿತ್ತು. ಗ್ರಾಹಕರ ಸೇವೆಯಲ್ಲಿ ತೃಪ್ತಿಯಿತ್ತು. ಈಗ ಆನ್‌ಲೈನ್ ವ್ಯಾಪಾರದ ಭರಾಟೆ ಜೋರಾಗಿದೆ. ಇದರಿಂದ ಕಿರಾಣಿ ವ್ಯಾಪಾರದ ಬೇರುಗಳು ಸಡಿಲವಾಗಿವೆ. ಎರಡು ವರ್ಷದ ಹಿಂದೆ ವ್ಯಾಪಾರ ಒಮ್ಮೆಲೆ ಇಳಿಮುಖವಾಗಿದ್ದರಿಂದ ಅಂಗಡಿ ಮುಚ್ಚುವುದು ಅನಿವಾರ್ಯವಾಯಿತು. ಎಂಬಿಎ ಓದಿರುವ ಮಗನ ಉದ್ಯೋಗದ ಆಯ್ಕೆಯೇ ಬೇರೆಯಿತ್ತು. ಬೇರೆಯವರಿಗೆ ಮಳಿಗೆಯನ್ನು ಬಾಡಿಗೆ ನೀಡಿದ್ದು, ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದೇನೆ'.

ಐವತ್ತು ವರ್ಷ ಜೀವನಕ್ಕೆ ಊರುಗೋಲಾಗಿದ್ದ ಅಂಗಡಿಯನ್ನು ಮುಚ್ಚಿದ ಕಥೆ ಹೇಳುವಾಗ ದಾವಣಗೆರೆಯ ವಸಂತ ರಸ್ತೆಯಲ್ಲಿರುವ ಶ್ರೀಸಿದ್ಧಿವಿನಾಯಕ ಪ್ರಾವಿಷನ್ ಸ್ಟೋರ್ ಮಾಲೀಕ ವಿಜಯ್ ಎನ್. ಭಟ್ ಅವರ, ಗಂಟಲ ಸೆರೆ ಉಬ್ಬಿ ಬಂದಿತ್ತು.

ಮೂರು ತಲೆಮಾರುಗಳಿಂದ ದಿನಸಿ ವ್ಯಾಪಾರ ಮಾಡುತ್ತಿದ್ದ ಬಾಗಲಕೋಟೆಯ ರಾಚಪ್ಪರ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಸದ್ಯ ಅಂಗಡಿ ಮುಚ್ಚಿರುವ ಅವರು, ಬೇರೆಯವರ ಜಮೀನನ್ನು ಗುತ್ತಿಗೆ ಪಡೆದು ಕೃಷಿ ಮಾಡುತ್ತಿದ್ದಾರೆ. ಬಿಡುವಿದ್ದಾಗ ಕೂಲಿ ಕೆಲಸಕ್ಕೂ ತೆರಳುತ್ತಾರೆ.

'ನನ್ನ ತಾತ, ಅಪ್ಪ, ನಾನು ಹಾಗೂ ನನ್ನಿಬ್ಬರು ತಮ್ಮಂದಿರು ಕಿರಾಣಿ ವ್ಯಾಪಾರವನ್ನೇ ನಂಬಿಕೊಂಡಿದ್ದೆವು. ಆನ್‌ಲೈನ್ ವ್ಯಾಪಾರ ಜೋರಾಗಿರುವುದರಿಂದ ಅಂಗಡಿಗೆ ಬರುವವರು ಕಡಿಮೆಯಾದರು. ಮಾರಾಟಕ್ಕೆ ತಂದ ಉತ್ಪನ್ನಗಳು ಖರೀದಿಸುವವರು ಇಲ್ಲದೆ ಹಾಳಾದವು. ಅಂಗಡಿಯ ಬಾಡಿಗೆ ಕಟ್ಟುವಷ್ಟೂ ಲಾಭ ಬರಲಿಲ್ಲ. ಸಾಕಷ್ಟು ನಷ್ಟ ಅನುಭವಿಸಿ, ಸಾಲದ ಸುಳಿಗೆ ಸಿಲುಕಿ, ಅಂಗಡಿ ಮುಚ್ಚಬೇಕಾಯಿತು' ಎಂದು ಹೇಳುವಾಗ ಅವರ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡಿತ್ತು.

5



ಎಐ ಚಿತ್ರ: ಕಣಕಾಲಮಠ

**ಸ್ಥಗಿತಗೊಂಡಿರುವ ಕಿರಾಣಿ ಅಂಗಡಿಗಳ ಸಂಖ್ಯೆ**

| | |
|---|---|
| ದೇಶದ ಮಹಾನಗರಗಳಲ್ಲಿ | 90 ಸಾವಿರ |
| ಟೈರ್ 1 ನಗರಗಳ ವ್ಯಾಪ್ತಿಯಲ್ಲಿ | 60 ಸಾವಿರ |
| ಟೈರ್ 2 ಮತ್ತು ಟೈರ್ 3 ನಗರಗಳಲ್ಲಿ | 50 ಸಾವಿರ |

ಆಧಾರ: ಎಐಸಿಪಿಡಿಎಫ್, ಕೇರ್‌ಎಡ್ಜ್, ಇನ್‌ವೆಸ್ಟ್ ಇಂಡಿಯಾ

**1.3** ಕೋಟಿ ದೇಶದಲ್ಲಿರುವ ಕಿರಾಣಿ ಅಂಗಡಿಗಳ ಸಂಖ್ಯೆ

**10%** ದೇಶದ ಜಿಡಿಪಿಗೆ ಕಿರಾಣಿ ಅಂಗಡಿಗಳ ಕೊಡುಗೆ

**₹64** ಸಾವಿರ ಕೋಟಿ 2024–25ರಲ್ಲಿ ಕ್ವಿಕ್ ಕಾಮರ್ಸ್ ಕಂಪನಿಗಳ ವಹಿವಾಟು

> **ಮಾಲ್ ಸಂಸ್ಕೃತಿ ನಂತರ ಅಂಗಡಿ ಬಾಡಿಗೆ, ಸಿಬ್ಬಂದಿಯ ವೇತನದಷ್ಟೂ ವ್ಯಾಪಾರ ಆಗುತ್ತಿಲ್ಲ. ಟ್ರೆಂಡ್‌ಗೆ ತಕ್ಕಂತೆ ವ್ಯಾಪಾರ ಮಾಡುವುದು ಅನಿವಾರ್ಯ**
> **ರವೀಂದ್ರ ಮಾದಮಶೆಟ್ಟಿ,** ಅಧ್ಯಕ್ಷ, ಕಿರಾಣಾ ಬಜಾರ್ ವ್ಯಾಪಾರಿಗಳ ಸಂಘ, ಕಲಬುರಗಿ

> **ಆನ್‌ಲೈನ್ ವ್ಯಾಪಾರದಿಂದ ವ್ಯವಹಾರಕ್ಕೆ ಪೆಟ್ಟು ಬಿದ್ದಿರುವುದು ದಿಟ. ಸಾಂಪ್ರದಾಯಿಕ ಗ್ರಾಹಕರನ್ನು ಉಳಿಸಿಕೊಳ್ಳಲು ಪರದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ**
> **ರಾಜೇಶ್,** ಪಂಚಮಿ ಅಂಗಡಿ, ಮಂಗಳೂರು

## ಮಣಿಪುರ: ಹಿಂಸಾಚಾರದಿಂದ ದೂರವಿರಲು ನರೇಂದ್ರ ಮೋದಿ ಮನವಿ

# ಶಾಂತಿ, ಸಮೃದ್ಧಿಗೆ ಪ್ರಧಾನಿ ಪಣ

ಚುರಚಾಂದಪುರ/ಇಂಫಾಲ್ (ಪಿಟಿಐ): ಗಲಭೆ, ಹಿಂಸಾಚಾರವನ್ನು ದೂರವಿಡುವಂತೆ ಮಣಿಪುರದ ವಿವಿಧ ಸಂಘಟನೆಗಳಿಗೆ ಕರೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಎಲ್ಲ ಸಂಘಟನೆಗಳು ಶಾಂತಿ ಮಾರ್ಗ ಕಂಡುಕೊಳ್ಳಬೇಕು ಎಂದು ಶನಿವಾರ ಹೇಳಿದರು.

'ಶಾಂತಿ ಪಥದಲ್ಲಿ ಸಾಗಿದರೆ ಮಾತ್ರ ಅಭಿವೃದ್ಧಿ ಸಾಧ್ಯ. ಸಂಘರ್ಷ ಪೀಡಿತ ರಾಜ್ಯವನ್ನು ಶಾಂತಿ, ಪ್ರಗತಿ ಮತ್ತು ಸಮೃದ್ಧಿಯ ಸಂಕೇತವನ್ನಾಗಿ ಮಾಡುವ ಗುರಿಯತ್ತ ಮುನ್ನಡೆಸಲು ಕೇಂದ್ರ ಸರ್ಕಾರ ಕಾರ್ಯನಿರ್ವಹಿಸುತ್ತಿದೆ' ಎಂದು ಪ್ರತಿಪಾದಿಸಿದರು.

2023ರ ಮೇ ತಿಂಗಳಿನಿಂದ ಜನಾಂಗೀಯ ಗಲಭೆಯಿಂದ ತತ್ತರಿಸಿರುವ ರಾಜ್ಯಕ್ಕೆ ಪ್ರಧಾನಿ ಮೋದಿ ಅವರು ಮೊದಲ ಬಾರಿಗೆ ಭೇಟಿ ನೀಡಿ, ಚುರಚಾಂದಪುರ ಮತ್ತು ಇಂಫಾಲ್‌ನಲ್ಲಿ ಅಂದಾಜು ₹8,500 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿದರು. ಎರಡೂ ಕಡೆಯೂ ಅವರು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು.

ಗಲಭೆ ಪೀಡಿತ ರಾಜ್ಯಕ್ಕೆ ಎರಡು ವರ್ಷಗಳಿಂದ ಭೇಟಿ ನೀಡದ ಕಾರಣಕ್ಕಾಗಿ ವಿರೋಧ ಪಕ್ಷಗಳಿಂದ ತೀವ್ರ ಟೀಕೆ ಎದುರಿಸಿದ್ದ ಮೋದಿ ಅವರು, 'ಮಣಿಪುರದ ಜನರೊಂದಿಗೆ ಕೇಂದ್ರ ಸರ್ಕಾರ ದೃಢವಾಗಿ ನಿಂತಿದ್ದು, ಶಾಂತಿ ಸ್ಥಾಪನೆ ಮತ್ತು ಪ್ರಗತಿಗೆ ಸಂಬಂಧಿಸಿದಂತೆ ನಡೆಸಿದ ಪ್ರಯತ್ನಗಳು ಫಲನೀಡುತ್ತಿವೆ' ಎಂದು ತಿಳಿಸಿದರು.

'ಇಲ್ಲಿನ ಜನರ ಕನಸುಗಳನ್ನು ನನಸು ಮಾಡಲು ಮತ್ತು ಮಕ್ಕಳ ಭವಿಷ್ಯವನ್ನು ರಕ್ಷಿಸಲು, ಶಾಂತಿ ನೆಲಸುವುದು ಅತ್ಯಗತ್ಯವಾಗಿದೆ. ಅದಕ್ಕಾಗಿ ಎಲ್ಲ ಸಂಘಟನೆಗಳು ಮುಂದಾಗಬೇಕು' ಎಂದು ಅವರು ಮನವಿ ಮಾಡಿದರು.

**'ಹಿಂಸಾಚಾರ ದುರಾದೃಷ್ಟಕರ':** 'ಮಣಿಪುರವು ಭರವಸೆ ಮತ್ತು ಆಕಾಂಕ್ಷೆಗಳ ಭೂಮಿ. ಆದರೆ, ಈ ಸುಂದರ ಪ್ರದೇಶದ ಮೇಲೆ ಹಿಂಸಾಚಾರ ತನ್ನ ನೆರಳನ್ನು ಬೀರಿರುವುದು ದುರದೃಷ್ಟಕರ' ಎಂದರು.

'ಪರಿಹಾರ ಶಿಬಿರದಲ್ಲಿ ಸಂತ್ರಸ್ತರನ್ನು ಭೇಟಿಯಾದೆ. ಅವರ ಜತೆ ಮಾತನಾಡಿದ ಬಳಿಕ, ಮಣಿಪುರದಲ್ಲಿ ಹೊಸ ಭರವಸೆ ಮತ್ತು ವಿಶ್ವಾಸ ಉದಯಿಸುತ್ತಿದೆ ಎಂಬುದು ಮನವರಿಕೆಯಾಗಿದೆ' ಎಂದು ಹೇಳಿದರು.

7



ಮಣಿಪುರದ ಚುರಚಾಂದಪುರದ ಪರಿಹಾರ ಶಿಬಿರಕ್ಕೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ಬಾಲಕಿ ಜತೆ ಸಂವಾದ ನಡೆಸಿದರು ಪಿಟಿಐ ಚಿತ್ರ

### 'ಪ್ರಹಸನ, ಕಾಟಾಚಾರ'

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಐದು ತಾಸಿಗೂ ಕಡಿಮೆ ಅವಧಿ ಭೇಟಿ ನೀಡಿರುವುದನ್ನು ಕಾಂಗ್ರೆಸ್ ಪಕ್ಷವು ತೀವ್ರವಾಗಿ ಟೀಕಿಸಿದೆ.

'ಇದು ದುರಂತದಲ್ಲಿ ಗಾಯಗೊಂಡವರಿಗೆ ಮಾಡಿದ ಅವಮಾನವಾಗಿದ್ದು, ಪ್ರಧಾನಿ ಪ್ರವಾಸವೂ ಪ್ರಹಸನ ಮತ್ತು ಕಾಟಾಚಾರದಿಂದ ಕೂಡಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

'2022ರ ಜನವರಿಯಲ್ಲಿ ಮಣಿಪುರದಲ್ಲಿ ನಡೆದ ವಿಧಾನಸಭಾ ಚುನಾವಣೆಯ ಪ್ರಚಾರ ಸಭೆಯಲ್ಲಿ ಭಾಗವಹಿಸಲು ಮೋದಿ ಅಲ್ಲಿಗೆ ಈ ಹಿಂದೆ ತೆರಳಿದ್ದರು' ಎಂದು ಖರ್ಗೆ ಈ ವೇಳೆ ನೆನಪಿಸಿದ್ದಾರೆ.

'ಮಣಿಪುರವು 864 ದಿನಗಳಿಂದ ಹಿಂಸೆಗೆ ಸಾಕ್ಷಿಯಾಗಿದೆ. ಇದುವರೆಗೆ 300 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ' ಎಂದರು.

7

**ಚಿನಕುರುಳಿ** ಪ್ರಕಾಶ್ ಶೆಟ್ಟಿ




## ಡ್ರಗ್ಸ್ ಮಾರಾಟಗಾರರ ಸ್ನೇಹ ಸಂಪಾದಿಸಿ ಅವರ ಜತೆ ಪಾರ್ಟಿ ಮಾಡಿದ ಆರೋಪ

# ಇನ್‌ಸ್ಪೆಕ್ಟರ್ ಸೇರಿ 10 ಮಂದಿ ಅಮಾನತು

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಚಾಮರಾಜಪೇಟೆ ಠಾಣೆಯ ಇನ್‌ಸ್ಪೆಕ್ಟರ್ ಮಂಜಣ್ಣ
- ಹಣಕಾಸು ವರ್ಗಾವಣೆ ಬಗ್ಗೆ ತನಿಖೆ

ಬೆಂಗಳೂರು: ಡ್ರಗ್ಸ್ ಮಾರಾಟ ಮಾಡುವವರ ಸ್ನೇಹ ಸಂಪಾದಿಸಿ ಅವರೊಂದಿಗೆ ಪಾರ್ಟಿ ನಡೆಸಿದ್ದ ಹಾಗೂ ಡ್ರಗ್ಸ್ ನಿಯಂತ್ರಣಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳದ ಆರೋಪದ ಮೇರೆಗೆ ಚಾಮರಾಜಪೇಟೆ ಠಾಣೆಯ ಇನ್‌ಸ್ಪೆಕ್ಟರ್ ಮಂಜಣ್ಣ ಸೇರಿದಂತೆ 10 ಮಂದಿ ಪೊಲೀಸರನ್ನು ಅಮಾನತು ಮಾಡಲಾಗಿದೆ.

ಚಾಮರಾಜಪೇಟೆ ಠಾಣೆಯ ಆರು ಹಾಗೂ ಜೆ.ಜೆ. ನಗರದ ನಾಲ್ಕು ಸಿಬ್ಬಂದಿ ಸೇರಿ 10 ಮಂದಿಯನ್ನು ಅಮಾನತು ಮಾಡಲಾಗಿದೆ.

ಮಂಜಣ್ಣ ಅವರನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಅಮಾನತು ಮಾಡಿದ್ದರೆ, ಉಳಿದ ಸಿಬ್ಬಂದಿ ವಿರುದ್ಧ ಪಶ್ಚಿಮ ವಿಭಾಗದ ಡಿಸಿಪಿ ಗಿರೀಶ್ ಅವರು ಕ್ರಮ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

**ಅಮಾನತುಗೊಂಡವರು ಯಾರು?:** ಚಾಮರಾಜಪೇಟೆ ಠಾಣೆಯ ಹೆಡ್ ಕಾನ್‌ಸ್ಟೆಬಲ್‌ಗಳಾದ ರಮೇಶ್ ಹಾಗೂ ಶಿವರಾಜ್, ಕಾನ್‌ಸ್ಟೆಬಲ್‌ಗಳಾದ ಮಧುಸೂದನ್, ಪ್ರಸನ್ನ, ಶಂಕರ್, ಆನಂದ್, ಜೆ.ಜೆ. ನಗರ ಠಾಣೆಯ ಎಎಸ್‌ಐ ಕುಮಾರ್, ಹೆಡ್‌ಕಾನ್‌ಸ್ಟೆಬಲ್ ಆನಂದ್ ಹಾಗೂ ಸಿಬ್ಬಂದಿ ಬಸವನಗೌಡ ಸೇರಿ ಹತ್ತು ಮಂದಿ ಅಮಾನತುಗೊಂಡಿದ್ದಾರೆ.

'ಡ್ರಗ್ಸ್ ಮಾರಾಟ ಮಾಡುವವರ ಜತೆಗೆ ಪೊಲೀಸ್ ಸಿಬ್ಬಂದಿಗೆ ನೇರ ಸಂಬಂಧವಿದೆ. ಅವರ ಜತೆಗೆ ಪಾರ್ಟಿ ನಡೆಸಿದ್ದಾರೆ ಎಂಬುದರ ಕುರಿತು ದೂರು ಬಂದಿತ್ತು. ಪ್ರಾಥಮಿಕ ಪರಿಶೀಲನೆಯ ವೇಳೆ ದೂರಿನಲ್ಲಿ ಸತ್ಯಾಂಶವಿದ್ದಂತೆ ಕಂಡುಬಂದಿದ್ದು, ಇಲಾಖೆ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ. ಡ್ರಗ್ಸ್ ಮಾರಾಟ ಮಾಡುವವರು ಹಾಗೂ ಪೊಲೀಸ್ ಸಿಬ್ಬಂದಿ ನಡುವೆ ಹಣಕಾಸು ವರ್ಗಾವಣೆ ಆಗಿದೆಯೇ ಎಂಬುದರ ಕುರಿತೂ ಪರಿಶೀಲನೆ ನಡೆಯುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ಭಾರತ–ಪಾಕ್ ಕ್ರಿಕೆಟ್‌ಗೆ ಆಕ್ರೋಶ

## ದುಬೈನಲ್ಲಿ ಇಂದು ಪಂದ್ಯ: ಶಿವಸೇನಾ, ಎಎಪಿ ವಿರೋಧ

ಮುಂಬೈ/ದುಬೈ (ಪಿಟಿಐ, ರಾಯಿಟರ್ಸ್): ಏಷ್ಯಾಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸಾಂಪ್ರದಾಯಿಕ ಎದುರಾಳಿಗಳಾದ ಭಾರತ–ಪಾಕಿಸ್ತಾನ ಪಂದ್ಯಕ್ಕೆ ಕೆಲವು ವಲಯಗಳಿಂದ ಭಾರಿ ವಿರೋಧ ವ್ಯಕ್ತವಾಗಿದೆ. ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯ ಕರಿಛಾಯೆ ಈ ಪಂದ್ಯದ ಮೇಲೆ ಬಿದ್ದಿದೆ.

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ಭಯೋತ್ಪಾದಕರ ದಾಳಿಯಲ್ಲಿ 26 ಪ್ರವಾಸಿಗರು ಮೃತಪಟ್ಟ ಬಳಿಕ ಇತ್ತೀಚಿನ ದಿನಗಳಲ್ಲಿ ಎರಡು ದೇಶಗಳ ನಡುವಣ ಬಾಂಧವ್ಯವು ಮತ್ತಷ್ಟು ಹದಗೆಟ್ಟಿದೆ.

> **ಪಂದ್ಯ ವಿರೋಧಿಸಲು ಉದ್ಧವ್ ಠಾಕ್ರೆ ಅವರಿಗೆ ನೈತಿಕತೆ ಇಲ್ಲ. ಕಾಂಗ್ರೆಸ್ ಕಾಲಘಟ್ಟದಲ್ಲಿಯೂ ಭಾರತ– ಪಾಕ್ ನಡುವೆ ಪಂದ್ಯಗಳು ನಡೆದಿದ್ದವು**
> **ನರೇಶ್ ಗಣಪತ್ ಮಹಸ್ಕೆ,** ಸಂಸದ– ಶಿವಸೇನಾ (ಶಿಂದೆ ಬಣ) ವಕ್ತಾರ

ಉಗ್ರರ ದಾಳಿಯ ಬಗ್ಗೆ ಸಾರ್ವಜನಿಕರ ಆಕ್ರೋಶ ಇನ್ನೂ ತಣ್ಣಗಾಗಿಲ್ಲ. ಭಾನುವಾರ ನಡೆಯಲಿರುವ ಪಂದ್ಯದ ಸಾವಿರಾರು ಟಿಕೆಟ್‌ಗಳು ಈಗಲೂ ಲಭ್ಯ ಇವೆ. ಶುಕ್ರವಾರ ನಡೆದ ಭಾರತ ತಂಡದ ಅಭ್ಯಾಸದ ವೇಳೆ ಕೆಲವೇ ಕೆಲವು ಅಭಿಮಾನಿಗಳು ಹಾಜರಿದ್ದರು. ಹೀಗಾಗಿ, ಎರಡು ರಾಷ್ಟ್ರಗಳ ನಡುವಿನ 'ಹಬ್ಬದ ಸಂಭ್ರಮ'ವೂ ಕಣ್ಮರೆಯಾಗಿದೆ.

ಭಾನುವಾರ ನಡೆಯುವ ಪಂದ್ಯದಲ್ಲಿ ಭಾಗವಹಿಸದಂತೆ ಭಾರತೀಯರು ಸಾಮಾಜಿಕ ಜಾಲತಾಣಗಳಲ್ಲಿ ಬಹಿಷ್ಕಾರದ ಕರೆಗಳನ್ನು ಸಹ ನೀಡಿದ್ದಾರೆ.

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

6

## ಬೃಹತ್ ಶೋಭಾಯಾತ್ರೆ

ಪ್ರಜಾವಾಣಿ ಚಿತ್ರ: ಚಂದ್ರಪ್ಪ ವಿ



ಗಣೇಶ ಮೂರ್ತಿ ವಿಸರ್ಜನೆ ಅಂಗವಾಗಿ ಚಿತ್ರದುರ್ಗದ ಬಿ.ಡಿ ರಸ್ತೆಯಲ್ಲಿ ಶನಿವಾರ ಬೃಹತ್ ಶೋಭಾಯಾತ್ರೆ ನಡೆಯಿತು

## ಹಾಸನದಲ್ಲಿ ಅಪಘಾತ: ಮೃತರ ಸಂಖ್ಯೆ 10ಕ್ಕೆ ಏರಿಕೆ, 20 ಮಂದಿಗೆ ಗಾಯ

# ಮೆರವಣಿಗೆಯಲ್ಲೇ ಜೀವಗಳು ಮರೆ

ಪ್ರಜಾವಾಣಿ ವಾರ್ತೆ

ಹಾಸನ: ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ, ಇನ್ನೊಂದು ಗಂಟೆಯಲ್ಲಿ ಗಣೇಶನ ಮೂರ್ತಿಯನ್ನು ವಿಸರ್ಜಿಸಿ ಎಲ್ಲರೂ ಮನೆಗೆ ತೆರಳಬೇಕಿತ್ತು. ಆದರೆ, ಮೂರ್ತಿ ವಿಸರ್ಜನಾ ಮೆರವಣಿಗೆಯ ಮೇಲೆಯೇ ನುಗ್ಗಿದ ಕ್ಯಾಂಟರ್‌ನಿಂದಾಗಿ 10 ಮಂದಿ ಮೃತಪಟ್ಟರು.

ಮೃತರಲ್ಲಿ 9 ಮಂದಿ 17–24 ವಯಸ್ಸಿನವರು. ಮನೆಗೆ ಆಧಾರ ಆಗಬೇಕಿದ್ದ ಮಕ್ಕಳನ್ನು ಕಳೆದುಕೊಂಡ ಹೆತ್ತವರ ಆಕ್ರಂದನ ಮುಗಿಲು ಮುಟ್ಟಿತ್ತು.

'ಅಪಘಾತದಲ್ಲಿ 20 ಜನರು ಗಾಯಗೊಂಡಿದ್ದು, ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮೂವರಿಗೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇವರಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

'ಮೃತರಲ್ಲಿ ಐವರು ವಿದ್ಯಾರ್ಥಿಗಳಿದ್ದು, ಮೊಸಳೆ ಹೊಸಹಳ್ಳಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಹಾಗೂ ಪದವಿಪೂರ್ವ ಕಾಲೇಜಿನಲ್ಲಿ ಓದುತ್ತಿದ್ದರು' ಎಂದು ಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ ತಿಳಿಸಿದರು.

'ರಾತ್ರಿಯೇ ಮರಣೋತ್ತರ ಪರೀಕ್ಷೆ ಮಾಡಿ ಮೃತದೇಹಗಳನ್ನು ಕುಟುಂಬದವರಿಗೆ ಒಪ್ಪಿಸಲಾಗಿದೆ. ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಸರ್ಕಾರದಿಂದಲೇ ಭರಿಸಲಾಗುವುದು' ಎಂದು ಹೇಳಿದರು.

ಮೃತರ ಕುಟುಂಬದವರಿಗೆ ತಲಾ ₹2 ಲಕ್ಷ, ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ನೀಡುವುದಾಗಿ ಪ್ರಧಾನಿ ಕಾರ್ಯಾಲಯ ಪ್ರಕಟಿಸಿದೆ.

> **ಗಾಯಗೊಂಡ ವಿದ್ಯಾರ್ಥಿಗಳು ಮುಂದಿನ ಪರೀಕ್ಷೆಗೆ ಹಾಜರಾಗುವುದು ಕಷ್ಟ. ಅವರಿಗೆ ವಿನಾಯಿತಿ ಕೊಡಿಸಲು ಚರ್ಚಿಸಲಾಗುವುದು**
> **ಕೃಷ್ಣ ಬೈರೇಗೌಡ,** ಜಿಲ್ಲಾ ಉಸ್ತುವಾರಿ ಸಚಿವ

> **ಮೃತರು ಬಡ ಕುಟುಂಬದವರು. ಕನಿಷ್ಠ ₹10 ಲಕ್ಷ ಪರಿಹಾರ ಕೊಡಬೇಕು. ಪಕ್ಷದಿಂದ ತಲಾ ₹ 1 ಲಕ್ಷ, ಗಾಯಾಳುಗಳಿಗೆ ಚಿಕಿತ್ಸಾ ವೆಚ್ಚ ನೀಡಲಾಗುವುದು**
> **ಎಚ್.ಡಿ. ದೇವೇಗೌಡ,** ರಾಜ್ಯಸಭಾ ಸದಸ್ಯ

### ಮೃತಪಟ್ಟವರು...

- ಬಳ್ಳಾರಿಯ ಪ್ರವೀಣ್ ಕುಮಾರ್ (21)
- ಹೊಳೇನರಸೀಪುರ ತಾಲ್ಲೂಕಿನ ಕೆ.ಬಿ. ಪಾಳ್ಯದ ರಾಜೇಶ್ (17)
- ಡಣಾಯಕನಹಳ್ಳಿ ಕೊಪ್ಪಲು ನಿವಾಸಿ ಈಶ್ವರ (17)
- ಕಬ್ಬಿನಹಳ್ಳಿಯ ಕುಮಾರ್, (25), ಪ್ರವೀಣ್ (25)
- ಹಾಸನ ತಾಲ್ಲೂಕಿನ ಮುತ್ತಿಗೆ ಹಿರೀಹಳ್ಳಿಯ ಗೋಕುಲ್ (17)
- ಬಂಟರಹಳ್ಳಿಯ ಪ್ರಭಾಕರ್ (52)
- ಶಿವಯ್ಯನಕೊಪ್ಪಲು ನಿವಾಸಿ ಚಂದನ್(26)
- ಚಿತ್ರದುರ್ಗ ಜಿಲ್ಲೆಯ ಗವಿರಂಗಾಪುರದ ಮಿಥುನ್ (23)
- ಚಿಕ್ಕಮಗಳೂರು ಜಿಲ್ಲೆ ಮಣೇನಹಳ್ಳಿಯ ಸುರೇಶ್ (22)

### ತಂದೆ, ಪುತ್ರಿ ಸಾವು

ಬೆಂಗಳೂರು: ಹಾಸನದ ಮೊಸಳೆ ಹೊಸಹಳ್ಳಿಯಲ್ಲಿ ಸಂಭವಿಸಿದ್ದ ಅಪಘಾತದ ಮಾದರಿಯಲ್ಲೇ ಬೆಂಗಳೂರು ನಗರದ ಸುಮನಹಳ್ಳಿ ಜಂಕ್ಷನ್‌ನಲ್ಲಿ ಶನಿವಾರ ಬೆಳಿಗ್ಗೆ ನಿಯಂತ್ರಣ ತಪ್ಪಿದ ಟ್ರಕ್‌ವೊಂದು ಆಟೊ, ಕಾರು ಹಾಗೂ ಎರಡು ದ್ವಿಚಕ್ರ ವಾಹನಗಳಿಗೆ ಡಿಕ್ಕಿ ಹೊಡೆದು ತಂದೆ ಹಾಗೂ ಪುತ್ರಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಚಿಕ್ಕಗೊಲ್ಲರಹಟ್ಟಿಯ ನಿವಾಸಿ ಡಿ.ಯೇಸು (44) ಹಾಗೂ ಅವರ ಮಗಳು ಜೆನ್ನಿಫರ್ (24) ಮೃತಪಟ್ಟವರು. ಘಟನೆಯಲ್ಲಿ ಬೈಕ್ ಸವಾರ ಗಾಯಗೊಂಡಿದ್ದಾರೆ. ಕಾರಿನಲ್ಲಿದ್ದ ದಂಪತಿ ಹಾಗೂ ಅವರ ಮೂರು ವರ್ಷದ ಮಗು ಅಪಾಯದಿಂದ ಪಾರಾಗಿದ್ದಾರೆ. ಯೇಸು ಅವರು ಆಟೊ ಚಾಲಕರಾಗಿದ್ದರು. ಜೆನ್ನಿಫರ್ ಅವರಿಗೆ ಮುಂದಿನ ತಿಂಗಳು ವಿವಾಹ ನಿಶ್ಚಯವಾಗಿತ್ತು.

2

### ಎರಡು ಸಮೀಕ್ಷೆ ನಾಳೆಯಿಂದ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತರ ಮೊದಲ ಸಮೀಕ್ಷೆ ಹಾಗೂ 15 ಜಿಲ್ಲೆಗಳಲ್ಲಿ ಮಾಜಿ ದೇವದಾಸಿಯರ ಮರು ಸಮೀಕ್ಷೆ ಸೋಮವಾರದಿಂದ (ಸೆ. 15) ಆರಂಭವಾಗಲಿದೆ. ಒಟ್ಟು 45 ಕೆಲಸದ ದಿನ ನಡೆಯಲಿದೆ.

ಬೆಳಗಾವಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಧಾರವಾಡ, ಹಾವೇರಿ, ಗದಗ, ಕಲಬುರಗಿ, ಯಾದಗಿರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯಲ್ಲಿ ಮಾಜಿ ದೇವದಾಸಿಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಕುರಿತ ಮಾಹಿತಿ ಸಂಗ್ರಹಿಸಲು ಮರು ಸಮೀಕ್ಷೆ ನಡೆಯಲಿದೆ. ಎರಡೂ ಸಮೀಕ್ಷೆಗಳನ್ನು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಡೆಸಲಿದೆ.

ಸಮೀಕ್ಷೆಗೆ ವೆಬ್ ಅಪ್ಲಿಕೇಷನ್ ಸಿದ್ಧಪಡಿಸಲಾಗಿದೆ. ಲಿಂಗತ್ವ ಅಲ್ಪಸಂಖ್ಯಾತರ ಮೊದಲ ಸಮೀಕ್ಷೆಯನ್ನು ತಾಲ್ಲೂಕು, ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ, ಮಾಜಿ ದೇವ ದಾಸಿಯರ ಮರು ಸಮೀಕ್ಷೆಯನ್ನು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ನಡೆಸಲಾಗುತ್ತದೆ.

# ಹೈಕೋರ್ಟ್‌ಗೆ 'ಸುಪ್ರೀಂ' ಛೀಮಾರಿ

## 11 ವರ್ಷಗಳ ಬಳಿಕ ಗೃಹ ಮಂಡಳಿ ಮೇಲ್ಮನವಿ ಮಾನ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾರ್ವಜನಿಕ ಹಿತಾಸಕ್ತಿಯ ಪ್ರಕರಣಗಳಲ್ಲಿ ಉತ್ತರದಾಯಿತ್ವ ಮತ್ತು ದಕ್ಷತೆಯನ್ನು ಒತ್ತಿ ಹೇಳಿರುವ ಸುಪ್ರೀಂ ಕೋರ್ಟ್, 'ವ್ಯಾಜ್ಯಗಳಲ್ಲಿ ಸರ್ಕಾರದ ವಿಳಂಬಗಳನ್ನು ಹೈಕೋರ್ಟ್‌ಗಳು ಕ್ಷಮಿಸಬಾರದು' ಎಂದು ನಿರ್ದೇಶನ ನೀಡಿದೆ.

ಸರ್ಕಾರದ ನಿರ್ಲಕ್ಷ್ಯ ಮತ್ತು ಆಲಸಿತನಕ್ಕೆ ಹೈಕೋರ್ಟ್‌ಗಳು ಬೆಲೆಕೊಡಬಾರದು ಎಂದಿರುವ ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಆರ್.ಮಹದೇವನ್ ಅವರ ಪೀಠವು, 'ಸರ್ಕಾರದ ಮನವಿಗೆ ಸ್ಪಂದಿಸಿ ಹೈಕೋರ್ಟ್ ಹಲವು ಹಿಂದಿನ ಪ್ರಕರಣಗಳ ವಿಚಾರಣೆ ಮರು ಆರಂಭಿಸಿ, ಸಾಮಾನ್ಯ ಜನರನ್ನು ನಿರಂತರವಾಗಿ ವ್ಯಾಜ್ಯಗಳಿಗೆ ಎಳೆದು ತರುತ್ತಿರುವುದು ಸರಿಯಲ್ಲ' ಎಂದು ಕಟುವಾಗಿ ಹೇಳಿದೆ.

ಸಿವಿಲ್ ಪ್ರಕರಣವೊಂದರಲ್ಲಿ ತೀರ್ಪು ಹೊರಬಿದ್ದ 3,966 ದಿನಗಳು ಅಂದರೆ ಸುಮಾರು 11 ವರ್ಷಗಳ ವಿಳಂಬದ ನಂತರ ಎರಡನೇ ಮೇಲ್ಮನವಿ ಸಲ್ಲಿಕೆಗೆ ಕರ್ನಾಟಕ ಗೃಹ ಮಂಡಳಿ ಮಾಡಿದ ಮನವಿಯನ್ನು ಪರಿಗಣಿಸಿದ ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ರದ್ದುಗೊಳಿಸಿದೆ. 170 ಪುಟಗಳ ತೀರ್ಪಿನಲ್ಲಿ ನ್ಯಾಯಪೀಠವು ಹೈಕೋರ್ಟ್‌ಗೆ ಛೀಮಾರಿ ಹಾಕಿದೆ.

'ಸರ್ಕಾರಿ ಇಲಾಖೆಗಳು ವಿಳಂಬಕ್ಕಾಗಿ ನೈಜ ವಿವರಣೆಯ ಬದಲಿಗೆ, ಆಡಳಿತಾತ್ಮಕ ವಿಳಂಬಗಳು ಅಥವಾ ಅಧಿಕಾರಿಗಳ ಆಲಸಿತನದ ಕಾರಣ ನೀಡುತ್ತವೆ. ಸರ್ಕಾರದ ಅಸಮರ್ಥತೆಯನ್ನು ಪರಿಗಣಿಸದೆ, ಉತ್ತರದಾಯಿತ್ವ ಶಿಸ್ತು ಮತ್ತು ಹೊಣೆಗಾರಿಕೆಯನ್ನು ಪರಿಗಣಿಸುವ ಮೂಲಕ ಸಾರ್ವಜನಿಕ ಹಿತಾಸಕ್ತಿಯನ್ನು ಉತ್ತಮವಾಗಿ ಕಾಪಾಡಲು ಸಾಧ್ಯ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಇತರ ಆರೋಪಿಗಳಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಛೀಮಾರಿ ಹಾಕಿತ್ತು.

### ನ್ಯಾಯಪೀಠ ಹೇಳಿದ್ದೇನು?



- ತೀಕ್ಷ್ಣ ಪದಗಳಲ್ಲಿ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ, ವಿಳಂಬವನ್ನು ಕ್ಷಮಿಸುವುದು ಅಪರೂಪದ ಪ್ರಕರಣಗಳಿಗೆ ಸೀಮಿತವಾಗಬೇಕು. ಅದೇ ನಿಯಮವಾಗಬಾರದು. ಸರ್ಕಾರಿ ವ್ಯಾಜ್ಯಗಳನ್ನು ಕೂಡ ಖಾಸಗಿ ವ್ಯಾಜ್ಯಗಳ ರೀತಿಯಲ್ಲಿಯೇ ಪರಿಗಣಿಸಬೇಕು ಎಂದು ಕಿವಿಮಾತು ಹೇಳಿದೆ.
- ಸೂಕ್ತ ಕಾರಣಗಳಿಲ್ಲದೆ, ಕೇವಲ ಅರ್ಜಿದಾರರ ಗುರುತಿನ ಆಧಾರದ ಮೇಲೆ ವಿಳಂಬವನ್ನು ಕ್ಷಮಿಸಲು ಸಾಧ್ಯವಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ಮಿತಿಯ ಕಾಯ್ದೆಯ ಸೆಕ್ಷನ್ 5ರ ಅಡಿಯಲ್ಲಿ ರಾಜ್ಯಕ್ಕೆ ವಿಶೇಷ ಪರಿಗಣನೆಯ ಅವಕಾಶವಿದೆ ಎಂಬ ವಾದವನ್ನು ತಿರಸ್ಕರಿಸಿದೆ.

### ಪ್ರಕರಣ ಏನು?

ಕರ್ನಾಟಕ ಗೃಹ ಮಂಡಳಿಯು 11 ವರ್ಷಗಳ ವಿಳಂಬದ ನಂತರ ಮೇಲ್ಮನವಿ ಸಲ್ಲಿಸಲು ಅವಕಾಶ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಕಾರ್ಯನಿರ್ವಾಹಕ ಎಂಜಿನಿಯರ್ ಸೇರಿದಂತೆ ಹಲವು ಅಧಿಕಾರಿಗಳ ನಿರ್ಲಕ್ಷ್ಯದ ಕಾರಣದಿಂದ ಮೇಲ್ಮನವಿ ಸಲ್ಲಿಕೆ ವಿಳಂಬವಾಗಿದೆ ಎಂದು ಸಮಜಾಯಿಷಿ ನೀಡಿತ್ತು. ಈ ಅಧಿಕಾರಿಗಳಿಗೆ 2006ರಿಂದ ನಿರಂತರವಾಗಿ ಜ್ಞಾಪಿಸಿದರೂ ಮೇಲ್ಮನವಿ ಸಲ್ಲಿಸಲು ಸೂಕ್ತ ದಾಖಲೆಗಳನ್ನು ಒದಗಿಸಲಿಲ್ಲ ಎಂದು ಗೃಹ ಮಂಡಳಿ ತಿಳಿಸಿತ್ತು.

ಆದರೆ, ಸಂಬಂಧಿಸಿದ ಎಂಜಿನಿಯರ್ ವಿರುದ್ಧ 2017ರ ಮಾರ್ಚ್ ತಿಂಗಳಲ್ಲಿ ಅಂದರೆ, ವಿಳಂಬಕ್ಕೆ ಕ್ಷಮೆ ಕೋರಿ ಮೇಲ್ಮನವಿ ಸಲ್ಲಿಸುವ ತಿಂಗಳ ಮೊದಲಷ್ಟೇ ಕ್ರಮ ಕೈಗೊಳ್ಳಲಾಗಿದೆ ಎಂಬುದು ಅಚ್ಚರಿ ಮೂಡಿಸಿದೆ. ತಮ್ಮ ತಪ್ಪು ಮುಚ್ಚಿಹಾಕಲು ಅಧಿಕಾರಿಯನ್ನು ಬಲಿಪಶು ಮಾಡಲಾಗಿದೆ ಎಂದು ನ್ಯಾಯಪೀಠ ಹೇಳಿದೆ.

## ಸುಪ್ರೀಂ ಕೋರ್ಟ್ ನೇಮಿಸಿರುವ ಕೇಂದ್ರ ಉನ್ನತಾಧಿಕಾರ ಸಮಿತಿ ಶಿಫಾರಸು

# 'ಮಲೆ ಮಹದೇಶ್ವರ ಹುಲಿ ಸಂರಕ್ಷಿತ ಪ್ರದೇಶ'

ಪ್ರಜಾವಾಣಿ ವಾರ್ತೆ

ನವದೆಹಲಿ: ಹುಲಿಗಳ ವಾಸಕ್ಕೆ ಪೂರಕ ವಾತಾವರಣ ಹೊಂದಿರುವ ಮಲೆ ಮಹದೇಶ್ವರ ವನ್ಯಜೀವಿ ಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ಸುಪ್ರೀಂ ಕೋರ್ಟ್ ನೇಮಿಸಿರುವ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಶಿಫಾರಸು ಮಾಡಿದೆ.

ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವಲಯದಲ್ಲಿ ಇತ್ತೀಚೆಗೆ ಸಂಭವಿಸಿದ ಐದು ಹುಲಿಗಳ ಸಾವಿನ ಪ್ರಕರಣದ ಬಗ್ಗೆ ಸಮಿತಿ ತನಿಖೆ ನಡೆಸಿ 55 ಪುಟಗಳ ವರದಿ ಸಿದ್ಧಪಡಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದೆ. ಪಶ್ಚಿಮ ಘಟ್ಟದಲ್ಲಿ ಪದೇ ಪದೇ ಸಂಭವಿಸುತ್ತಿರುವ ಇಂತಹ ಘಟನೆಗಳಿಂದಾಗಿ ಹುಲಿಗಳ ಸಂರಕ್ಷಣೆ ಕುರಿತು ಗಂಭೀರ ಯೋಜನೆಗಳನ್ನು ರೂಪಿಸಬೇಕಿದೆ ಎಂದು ಸಮಿತಿ ಸಲಹೆ ನೀಡಿದೆ.

ಮಹದೇಶ್ವರ ಬೆಟ್ಟ, ಹನೂರು ಹಾಗೂ ಯಡೆಯಾರಳ್ಳಿ ಮೀಸಲು ರಕ್ಷಿತಾರಣ್ಯವನ್ನು ಒಟ್ಟುಗೂಡಿಸಿ 906 ಚ.ಕಿ.ಮೀ ಅರಣ್ಯವನ್ನು ಮಲೆಮಹದೇಶ್ವರ ವನ್ಯಜೀವಿ ಧಾಮ ಎಂದು 2013ರಲ್ಲಿ ಘೋಷಿಸಲಾಗಿತ್ತು. ಈ ವನ್ಯಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ಅರಣ್ಯ ಇಲಾಖೆ 2017–18ರಲ್ಲಿ ಪ್ರಸ್ತಾವ ಕಳುಹಿಸಿತ್ತು. ಈ ಪ್ರಸ್ತಾವಕ್ಕೆ ರಾಜ್ಯ ವನ್ಯಜೀವಿ ಮಂಡಳಿ 2019ರಲ್ಲಿ ಅನುಮೋದನೆ ನೀಡಿತ್ತು. ವನ್ಯಧಾಮದಲ್ಲಿರುವ ಗ್ರಾಮಗಳು, ವಸತಿ ಪ್ರದೇಶಗಳ ವಿವರಗಳನ್ನು ಸ್ಪಷ್ಟವಾಗಿ ನಮೂದಿಸುವಂತೆ ಸೂಚಿಸಿ ಪ್ರಾಧಿಕಾರವು ಪ್ರಸ್ತಾವ ವಾಪಸ್ ಕಳುಹಿಸಿತ್ತು. ಆ ಬಳಿಕ, ಅರಣ್ಯ ಇಲಾಖೆ ಪರಿಷ್ಕೃತ ಪ್ರಸ್ತಾವ ಸಲ್ಲಿಸಿತ್ತು. ಘೋಷಣೆಗೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳೂ ಪೂರ್ಣಗೊಂಡಿದ್ದವು. ಜನಪ್ರತಿನಿಧಿ ಗಳ ವಿರೋಧದಿಂದಾಗಿ ಈ ಪ್ರಕ್ರಿಯೆ ನನೆಗುದಿಗೆ ಬಿದ್ದಿತ್ತು. ಹುಲಿಗಳ ಸಾವಿನ ಬಗ್ಗೆ ತನಿಖೆ ನಡೆಸಿದ್ದ ಎನ್‌ಟಿಸಿಎ ವಿಶೇಷ ತನಿಖಾ ತಂಡವು ವನ್ಯಜೀವಿಧಾಮವನ್ನು ಹುಲಿ ಸಂರಕ್ಷಿತ ಪ್ರದೇಶ ವನ್ನಾಗಿ ಘೋಷಿಸಬೇಕು ಎಂದು ಶಿಫಾರಸು ಮಾಡಿತ್ತು. ಇದೀಗ, ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕೆಂಬ ಬೇಡಿಕೆ ಮುನ್ನೆಲೆಗೆ ಬಂದಿದೆ.

### ಹುಲಿ ಕೊಲ್ಲಲು ಪ್ರಚೋದನೆ

ಪಶ್ಚಿಮ ಘಟ್ಟದಲ್ಲಿ 2006ರಲ್ಲಿ 402 ಹುಲಿಗಳಿದ್ದವು. 2022ರಲ್ಲಿ ಅವುಗಳ ಸಂಖ್ಯೆ 1,087ಕ್ಕೆ ಏರಿದೆ. ಕರ್ನಾಟಕದಲ್ಲಿ ಕಳೆದ ಐದು ವರ್ಷಗಳಲ್ಲಿ 80 ಹುಲಿಗಳು ಮೃತ ಪಟ್ಟಿವೆ. ಈ ಭಾಗದಲ್ಲಿ ಹುಲಿಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ಮಾನವ–ಹುಲಿ ಸಂಘರ್ಷ ಗಣನೀಯವಾಗಿ ಜಾಸ್ತಿಯಾಗಿದೆ. ಜನರು ಹೆಚ್ಚು ಹೆಚ್ಚು ಉದ್ರೇಕಗೊಳ್ಳುತ್ತಿದ್ದಾರೆ. ಜನರು ಹಾಗೂ ಕೆಲವು ರಾಜಕಾರಣಿಗಳು ಹುಲಿಗಳನ್ನು ಕೊಲ್ಲಲು ಪ್ರಚೋದನೆ ನೀಡುತ್ತಿದ್ದಾರೆ. ಇದು ಕಳವಳಕಾರಿ ಬೆಳವಣಿಗೆ ಎಂದು ಸಿಇಸಿ ವಿಶ್ಲೇಷಿಸಿದೆ.



### ಶಿಫಾರಸುಗಳು

- ಮಾನವ–ಹುಲಿ ಸಂಘರ್ಷ ತಡೆಗೆ ಅಲ್ಪಾವಧಿ–ದೀರ್ಘಾವಧಿ ಕ್ರಮಗಳನ್ನು ಕೈಗೊಳ್ಳಬೇಕು
- ಹುಲಿ ಚಲನವಲನಗಳ ಮೇಲ್ವಿಚಾರಣೆಗೆ ಮತ್ತು ಮಾನವನ ಅಕ್ರಮ ಚಟುವಟಿಕೆಗಳನ್ನು ನೈಜ ಸಮಯದಲ್ಲಿ ಪತ್ತೆ ಹಚ್ಚಲು ಕ್ಯಾಮೆರಾ ಟ್ರ್ಯಾಪ್ ಹಾಗೂ ಸುಧಾರಿತ ಕೃತಕ ಬುದ್ಧಿಮತ್ತೆ (ಎಐ) ಪತ್ತೆ ವ್ಯವಸ್ಥೆಗಳನ್ನು ಸ್ಥಾಪಿಸಬೇಕು
- ಸೂಕ್ಷ್ಮ ಪ್ರದೇಶಗಳಲ್ಲಿ, ವಿಶೇಷವಾಗಿ ಗಡಿ ಪ್ರದೇಶಗಳಲ್ಲಿ ಅನುಮಾನಾಸ್ಪದ ಚಟುವಟಿಕೆ ಗಳನ್ನು ಪತ್ತೆ ಹಚ್ಚಲು ಜಿಪಿಎಸ್ ಆಧಾರಿತ ಗಸ್ತು ವ್ಯವಸ್ಥೆಯನ್ನು ದುಪ್ಪಟ್ಟುಗೊಳಿಸಬೇಕು
- ಕಾಡುಗಳಲ್ಲಿ ಜಾನುವಾರುಗಳು ಮೃತಪಟ್ಟಲ್ಲಿ ಕ್ಯಾಮೆರಾ ಟ್ರ್ಯಾಪ್ ಮೂಲಕ 24/7 ಮೇಲ್ವಿಚಾರಣೆ ನಡೆಸಬೇಕು
- ಐದು ಹುಲಿಗಳ ಸಾವಿಗೆ ಅರಣ್ಯ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಪ್ರಮುಖ ಕಾರಣ

**ಹವಾಮಾನ ಮುನ್ಸೂಚನೆ:** ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಆಗುವ ಸಾಧ್ಯತೆ



ಕರುಗಳೊಂದಿಗೆ ಹಸು

## ಮೂರು ಕರುವಿಗೆ ಜನ್ಮ ನೀಡಿದ ಹಸು

ಪ್ರಜಾವಾಣಿ ವಾರ್ತೆ

**ದಾಬಸ್ ಪೇಟೆ:** ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಕಂಬಾಳು ಮಠದಲ್ಲಿರುವ ಹಸುವೊಂದು ಮೂರು ಕರುಗಳಿಗೆ ಜನ್ಮ ನೀಡಿದೆ.

ಶನಿವಾರ ಬೆಳಿಗ್ಗೆ ಹಸು ಕೆಲವೇ ನಿಮಿಷಗಳಲ್ಲಿ ಮೂರು ಕರುಗಳನ್ನು ಹಾಕಿದೆ. ಈ ಹಸು ಮಠಕ್ಕೆ ಪ್ರೀತಿಪಾತ್ರವಾಗಿದ್ದು ಲಕ್ಷ್ಮೀ ಹೆಸರಿನಲ್ಲಿ ಕರೆಯುತ್ತಾರೆ. ಮಠಾಧೀಶರಾದ ಚನ್ನವೀರ ಶಿವಾಚಾರ್ಯಸ್ವಾಮೀಜಿಗಳು ಹಾಗೂ ಸಿಬ್ಬಂದಿ ಹಸು ಲಕ್ಷ್ಮಿ ಮತ್ತು ಮೂರು ಕರುಗಳ ಆರೈಕೆ ಮಾಡಿದರು.

# ನಟ ದರ್ಶನ್ ಪತ್ನಿ ಫ್ಲ್ಯಾಟ್‌ನಲ್ಲಿ ಕಳವು

### ₹3 ಲಕ್ಷ ನಗದು ಕಳ್ಳತನ, ಕೆಲಸದವರ ಮೇಲೆ ಅನುಮಾನ ವ್ಯಕ್ತಪಡಿಸಿ ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರ ಬನಶಂಕರಿ ಮೂರನೇ ಹಂತದ ಹೊಸಕೆರೆ ಹಳ್ಳಿಯ ಪ್ರೆಸ್ಟೀಜ್ ಸೌತ್ ರಿಡ್ಜ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಕಳ್ಳತನ ನಡೆದಿದ್ದು, ಈ ಸಂಬಂಧ ಚನ್ನಮ್ಮನಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿಜಯಲಕ್ಷ್ಮಿ

ವಿಜಯಲಕ್ಷ್ಮಿ ಅವರ ವ್ಯವಸ್ಥಾಪಕ ನಾಗರಾಜ್ ನೀಡಿರುವ ದೂರು ಆಧರಿಸಿ, ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 306ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

₹3 ಲಕ್ಷ ನಗದು ಕಳ್ಳತನವಾಗಿದೆ ಎಂದು ದೂರು ನೀಡಲಾಗಿದೆ. ಮನೆ ಕೆಲಸದವರ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾರೆ. ಕೆಲಸದವರನ್ನು ಕರೆಸಿ, ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.

'ಹತ್ತು ವರ್ಷಗಳಿಂದ ವಿಜಯಲಕ್ಷ್ಮಿ ಅವರ ಮನೆಯಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ಸೆ.4ರಂದು ವಿಜಯಲಕ್ಷ್ಮಿ ಅವರು ಕರೆದು ಬೆಡ್ ರೂಮ್‌ನ ಕಾಟನ್ ಬಾಕ್ಸ್‌ನಲ್ಲಿ ಹಣವಿದೆ. ಅದನ್ನು ತೆಗೆದುಕೊಂಡು ಬರುವಂತೆ ಸೂಚಿಸಿದ್ದರು. ಅವರು ಹೇಳಿದಷ್ಟು ಹಣ ತೆಗೆದುಕೊಂಡು ಉಳಿದ ಹಣವನ್ನೇ ಅಲ್ಲೇ ಬಿಟ್ಟು ಬಂದಿದ್ದೆ. ಆ ಹಣವನ್ನು ತೆಗೆದುಕೊಂಡು ವಿಜಯಲಕ್ಷ್ಮಿ ಅವರು ಮೈಸೂರಿಗೆ ತೆರಳಿದ್ದರು. ಮನೆಯ ಬಾಗಿಲಿಗೆ ಬೀಗ ಹಾಕಿ ಕೀ ನನಗೆ ಕೊಟ್ಟು ಹೋಗಿದ್ದರು. ವಿಜಯಲಕ್ಷ್ಮಿ ಅವರ ತಾಯಿಗೆ ಮನೆ ಕೀ ಕೊಟ್ಟು ನಾನೂ ಹೊರಗೆ ಹೋಗಿದ್ದೆ. ಸೆ.5ರಂದು ನಾನೂ ಮೈಸೂರಿಗೆ ತೆರಳಿ, ಸೆ.7ರಂದು ವಿಜಯಲಕ್ಷ್ಮಿ ಅವರನ್ನು ಕರೆದುಕೊಂಡು ಬಂದು ಹೊಸಕೆರೆಹಳ್ಳಿಯಲ್ಲಿ ಇರುವ ಅವರ ಫ್ಲ್ಯಾಟ್‌ಗೆ ಬಿಟ್ಟು ನನ್ನ ಮನೆಗೆ ತೆರಳಿದ್ದೆ. ಮರು ದಿನ ವಿಜಯಲಕ್ಷ್ಮಿ ಅವರು ಕರೆ ಮಾಡಿ ರೂಮ್‌ನಲ್ಲಿದ್ದ ಹಣ ಕಾಣಿಸುತ್ತಿಲ್ಲ ಎಂಬುದಾಗಿ ತಿಳಿಸಿದ್ದರು' ಎಂದು ನಾಗರಾಜ್ ಅವರು ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಮನೆಯ ಎಲ್ಲ ಕಡೆ ಹುಡುಕಾಟ ನಡೆಸಿದರೂ ಹಣ ಸಿಕ್ಕಿಲ್ಲ. ಮನೆ ಕೆಲಸದವರನ್ನು ವಿಚಾರಿಸಿದಾಗ ಗೊತ್ತಿಲ್ಲ ಎಂದು ತಿಳಿಸಿದ್ದಾರೆ' ಎಂದು ದೂರಿನಲ್ಲಿ ವಿವರಿಸಿದ್ದಾರೆ.

## 'ಟೀ ಚೆನ್ನಾಗಿಲ್ಲ' ಎಂದಿದ್ದಕ್ಕೆ ಚಾಲಕನ ಮೇಲೆ ಹಲ್ಲೆ

ಅಪರಾಧ ಸುದ್ದಿಗಳು

'ಟೀ ಚೆನ್ನಾಗಿಲ್ಲ' ಎಂದು ಹೇಳಿದ್ದಕ್ಕೆ ಸಿಟ್ಟಿಗೆದ್ದ ಟೀ ಶಾಪ್ ಸಿಬ್ಬಂದಿ, ಬಿಎಂಟಿಸಿ ಬಸ್ ಚಾಲಕನ ಮೇಲೆ ಫ್ಲಾಸ್ಕ್‌ನಿಂದ ಹಲ್ಲೆ ನಡೆಸಿರುವ ಘಟನೆ ಮೆಜೆಸ್ಟಿಕ್‌ನಲ್ಲಿ ಶನಿವಾರ ಬೆಳಿಗ್ಗೆ ನಡೆದಿದೆ.

ಈ ಸಂಬಂಧ ಟೀ ಶಾಪ್ ಸಿಬ್ಬಂದಿ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಲಕ ಮುಗಪ್ಪ ಗುಲ್ಲಪ್ಪನವರ್ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಮುಗಪ್ಪ ಅವರು ಡಿಪೊ ಸಂಖ್ಯೆ 46ರಲ್ಲಿ ಬಿಎಂಟಿಸಿ ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ಶನಿವಾರ ಬೆಳಿಗ್ಗೆ ನಿರ್ವಾಹಕ ಅರವಿಂದ್ ಅವರ ಜತೆಗೆ ದೊಡ್ಡಬಳ್ಳಾಪುರಕ್ಕೆ ತೆರಳುವುದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಮೆಜೆಸ್ಟಿಕ್‌ನ ಪ್ಲಾಟ್ ಫಾರ್ಮ್ ಸಂಖ್ಯೆ 27ರಲ್ಲಿ ಬಸ್ ನಿಲುಗಡೆ ಮಾಡಿ ರಮೇಶ್ ಅವರ ಜತೆಗೆ ಟೀ ಕುಡಿಯಲು ತೆರಳಿದ್ದರು. ಶಾಪ್ 21ರ ಬಳಿಗೆ ತೆರಳಿದಾಗ ಇಲ್ಲಿ ಟೀ ಚೆನ್ನಾಗಿಲ್ಲ. ಬೇರೆ ಕಡೆ ಹೋಗೋಣ ಎಂದು ರಮೇಶ್ ಅವರಿಗೆ ಮುಗ್ಗಪ್ಪ ಹೇಳುತ್ತಿದ್ದರು. ಅದನ್ನು ಕೇಳಿಸಿಕೊಂಡ ಶಾಪ್ ಸಿಬ್ಬಂದಿ, ಫ್ಲಾಸ್ಕ್‌ನಿಂದ ಹಲ್ಲೆ ಮಾಡಿದ್ದಾನೆ. ಅಲ್ಲದೇ ಅಂಗಡಿಯಿಂದ ಹೊರಗೆ ಕಟ್ಟಿಗೆಯಿಂದಲೂ ಹಲ್ಲೆ ನಡೆಸಿದ್ದಾನೆ' ಎಂದು ಮೂಲಗಳು ಹೇಳಿವೆ.

'ನಮ್ಮ ಅಂಗಡಿಯ ಬಗ್ಗೆಯೇ ಕೆಟ್ಟದಾಗಿ ಮಾತನಾಡುತ್ತೀಯಾ? ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾನೆ. ಹಲ್ಲೆಯಿಂದ ರಕ್ತಸ್ರಾವವಾಗಿದೆ' ಎಂದು ಮಗಪ್ಪ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

## ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಮಹದೇವಪುರ ಹಾಗೂ ಕಾಟನ್‌ಪೇಟೆ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶನಿವಾರ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಮಹದೇವಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸ್ಕೂಟರ್‌ಗೆ ಟ್ಯಾಂಕರ್ ಡಿಕ್ಕಿ ಹೊಡೆದು ದ್ವಿಚಕ್ರ ವಾಹನ ಸವಾರ, ಕೊಡಿಗೇಹಳ್ಳಿಯ ನಿವಾಸಿ ಮೆಹಬೂಬ್ (45) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಶನಿವಾರ ಬೆಳಿಗ್ಗೆ ಬೆಳ್ತೂರು–ಕೊಡಿಗೇಹಳ್ಳಿ ರಸ್ತೆಯಲ್ಲಿ ಮೆಹಬೂಬ್ ಅವರು ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಆ ವೇಳೆ ವೇಗವಾಗಿ ಬಂದ ಟ್ಯಾಂಕರ್, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ.

ಕಾಟನ್‌ಪೇಟೆಯಲ್ಲಿ ಶುಕ್ರವಾರ ಸಂಜೆ ಸಂಭವಿಸಿದ ಸರಣಿ ಅಪಘಾತದಲ್ಲಿ ಪಾದಚಾರಿ ಮಹಿಳೆ ಮೃತಪಟ್ಟಿದ್ದಾರೆ. ಕಾಟನ್‌ಪೇಟೆ ಬಳಿ ರಸ್ತೆ ಮಧ್ಯೆ ನಿಲುಗಡೆ ಮಾಡಿದ್ದ ಸರಕು ಸಾಗಣೆ ವಾಹನವನ್ನು ಪಕ್ಕಕ್ಕೆ ನಿಲುಗಡೆ ಮಾಡಲು ಮುಂದಾದ ವೇಳೆ ನಿಯಂತ್ರಣ ತಪ್ಪಿ, ಏಳು ವಾಹನಗಳಿಗೆ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಮಹಿಳೆ ಮೃತಪಟ್ಟಿದ್ದಾರೆ.

ಆಟೊ ಚಾಲಕ ಕಿರಣ್‌ನನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ಸಂಚಾರ ಠಾಣೆ ಪೊಲೀಸರು ಹೇಳಿದರು. ಚಾಮರಾಜಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

## ತಂತ್ರಜ್ಞಾನ ಆಧಾರಿತ ಮಾನಸಿಕ ಆರೋಗ್ಯ ಸೇವೆ

**ಬೆಂಗಳೂರು:** ತಂತ್ರಜ್ಞಾನ ಆಧಾರಿತ ಮಾನಸಿಕ ಆರೋಗ್ಯ ಸೇವೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಜತೆಗೆ ಎಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್ ಒಡಂಬಡಿಕೆ ಮಾಡಿಕೊಂಡಿದೆ.

ಮಾನಸಿಕ ಆರೋಗ್ಯ ಬಲಪಡಿಸುವುದು ಈ ಒಡಂಬಡಿಕೆಯ ಉದ್ದೇಶವಾಗಿದೆ. ಈ ಒಡಂಬಡಿಕೆಯಡಿ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಆರೋಗ್ಯ ವೃತ್ತಿಪರರಿಗೆ ಸಾಮರ್ಥ್ಯ ವೃದ್ಧಿಸುವುದು, ಮಾನಸಿಕ ಆರೋಗ್ಯ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಮಾನಸಿಕ ಆರೋಗ್ಯ ನೀತಿಗಳನ್ನು ರೂಪಿಸಲು ಈ ಒಪ್ಪಂದ ಸಹಕಾರಿ ಎಂದು ಸಂಸ್ಥೆ ತಿಳಿಸಿದೆ.

ಕೌಟುಂಬಿಕ ಸಮಸ್ಯೆ, ಆರ್ಥಿಕ ಸಂಕಷ್ಟ, ಉದ್ಯೋಗ ನಷ್ಟ, ಶೈಕ್ಷಣಿಕ ಒತ್ತಡ ಸೇರಿ ವಿವಿಧ ಕಾರಣಗಳಿಂದ ಎಲ್ಲ ವಯೋಮಾನದವರು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಈ ಸಮಸ್ಯೆಗಳ ನಿವಾರಣೆಗೆ ತಂತ್ರಜ್ಞಾನ ಆಧಾರಿತ ಪರಿಹಾರೋಪಾಯ ಕಂಡುಕೊಳ್ಳಲು ಈ ಒಡಂಬಡಿಕೆ ಸಹಕಾರಿ ಎಂದು ಎಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್ ಉಪಾಧ್ಯಕ್ಷ (ಮಾರುಕಟ್ಟೆ) ಉನ್ನಿಕೃಷ್ಣನ್ ಎಸ್.ಎಂ. ತಿಳಿಸಿದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ಪ್ರಾಧ್ಯಾಪಕ ಡಾ.ಸಿ. ನವೀನ್ ಕುಮಾರ್, ಎಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್ ವ್ಯವಸ್ಥಾಪಕ ಜಗದೀಶ್ ಉಪಸ್ಥಿತರಿದ್ದರು.

## ಇಂದಿರಾ ಕ್ಯಾಂಟೀನ್ ಸುತ್ತಮುತ್ತ ಸ್ವಚ್ಛತೆಗೆ ಸೂಚನೆ



**ಬೆಂಗಳೂರು:** ಇಂದಿರಾ ಕ್ಯಾಂಟೀನ್ ಒಳಗೆ ಹಾಗೂ ಸುತ್ತಮುತ್ತ ಸ್ವಚ್ಛತೆ ಕಾಪಾಡಬೇಕು ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಸೂಚಿಸಿದರು.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಶನಿವಾರ ಭೇಟಿ ನೀಡಿ, ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಿದ ನಂತರ, ಸ್ವಚ್ಛತೆ ಕಾಪಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಾರ್ಡ್ 35ರ ಪೌರಕಾರ್ಮಿಕರ ಮಸ್ಟರಿಂಗ್ ಸ್ಥಳಕ್ಕೆ ಭೇಟಿ ಕೊಟ್ಟ ಆಯುಕ್ತರು, ಪೌರಕಾರ್ಮಿಕರ ಹಾಜರಾತಿ ಪರಿಶೀಲಿಸಿ, ಅವರೊಡನೆ ಸಮಾಲೋಚಿಸಿ, ಸಿಬ್ಬಂದಿಗೆ ವ್ಯವಸ್ಥಿತವಾಗಿ ತ್ಯಾಜ್ಯ ನಿರ್ವಹಣೆ ಮಾಡಲು ಹೇಳಿದರು.

ಹೆಚ್ಚುವರಿ ಆಯುಕ್ತ ದಿಗ್ವಿಜಯ್ ಬೋಡ್ಕೆ ಅವರು ವಾರ್ಡ್ 162ರ ಗಿರಿನಗರದ ಆಟಿ ಟಿಪ್ಪರ್ ಮಸ್ಟರಿಂಗ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸಮಯಕ್ಕೆ ಸರಿಯಾಗಿ ಮಸ್ಟರಿಂಗ್ ಸ್ಥಳಕ್ಕೆ ಬರುವಂತೆ ಸೂಚಿಸಿದರು.

ವಾರ್ಡ್ 198 ಆದರ್ಶ ಲೇಔಟ್, ವಾರ್ಡ್ 126 ಮಾರುತಿ ಮಂದಿರ, ವಾರ್ಡ್ 101 ರ ಕೆ.ಎಚ್.ಬಿ ಕಾಲೊನಿ, ಸಿದ್ದಯ್ಯ ಪುರಾಣಿಕ ರಸ್ತೆ, ವಾರ್ಡ್ 156 ರ ಗಾಳಿ ಆಂಜನೇಯ ರಸ್ತೆ, ವಿಜಯನಗರ ವಿಭಾಗ, ಗೋವಿಂದರಾಜ ನಗರ, ವಿದ್ಯಾಪೀಠ ವಾರ್ಡ್‌ನಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.



ಸಂಸ್ಕೃತೋತ್ಸವ ಆಚರಣೆಯ ಪ್ರಯುಕ್ತ ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು ಹಾಗೂ ಪ್ರತಿಭಾ ಸಂಸತ್ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರನ್ನು ವಿದ್ವಾನ್ ಎಂ. ಶಿವಕುಮಾರ್ ಸ್ವಾಮಿ ಅವರು ಸನ್ಮಾನಿಸಿದರು. ಎಡಿಜಿಪಿ ಶರಶ್ಚಂದ್ರ, ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯದ ಕುಲಪತಿ ಎಸ್.ಅಹಲ್ಯಾಶರ್ಮ ಹಾಗೂ ವೆಂಕಟೇಶ್ ಉಪಸ್ಥಿತರಿದ್ದರು

–ಪ್ರಜಾವಾಣಿ ಚಿತ್ರ

## ಸ್ನೇಹಮಯಿ ಕೃಷ್ಣ ವಿರುದ್ಧ ದೂರು

**ಮಂಗಳೂರು:** ಮೈಸೂರಿನ ಸ್ನೇಹಮಯಿ ಕೃಷ್ಣ ಅವರು ಸೌಜನ್ಯಾ ಕೊಲೆಗೆ ಸಂಬಂಧಿಸಿ ಆಕೆಯ ಮಾವ ಅವರ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ. ಸೌಜನ್ಯಾ ಹೋರಾಟದ ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿದ್ದಾರೆ ಎಂದು ಆರೋಪಿಸಿ ಬೆಳ್ತಂಗಡಿ ತಾಲ್ಲೂಕಿನ ಇಂದಬೆಟ್ಟುವಿನ ವೆಂಕಪ್ಪ ಕೋಟ್ಯಾನ್ ಎಂಬುವರು ಪೊಲೀಸರಿಗೆ ದೂರು ನೀಡಿದ್ದಾರೆ.

ಸುಳ್ಳು ದೂರು ನೀಡಿರುವ ಆರೋಪಿಯನ್ನು ತನಿಖೆಗೆ ಒಳಪಡಿಸಬೇಕು. ಸುಳ್ಳು ದೂರು ನೀಡಲು ಪ್ರೇರೇಪಿಸಿರುವವರನ್ನು ಪತ್ತೆಮಾಡಬೇಕು. ಹೋರಾಟಗಾರರಿಗೆ ಅವಮಾನ ಮಾಡಿರುವ ಆರೋಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳ ಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ತಂದೆ, ಪುತ್ರಿ ಸಾವು: ಕುಟುಂಬಕ್ಕೆ ಆಘಾತ

ಒಂದನೇ ಪುಟದಿಂದ...

ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಲು ತಂದೆ ಹಾಗೂ ಮಗಳು ಶನಿವಾರ ಬೆಳಿಗ್ಗೆ ಆಟೊದಲ್ಲಿ ತೆರಳುತ್ತಿದ್ದರು. ಸುಮನಹಳ್ಳಿ ಜಂಕ್ಷನ್‌ನ ಮುಖ್ಯರಸ್ತೆಯಲ್ಲಿ ಬೆಳಿಗ್ಗೆ 7.45ರ ಸುಮಾರಿಗೆ ಆಟೊ ಸಾಗುವಾಗ ಕಾಮಾಕ್ಷಿಪಾಳ್ಯ – ಮಾಗಡಿ ರಸ್ತೆಯ ಕೈಗಾರಿಕಾ ಪ್ರದೇಶದಿಂದ ಬಂದ ಟ್ರಕ್‌ವೊಂದು ಇಳಿಜಾರಿನಲ್ಲಿ ನಿಯಂತ್ರಣ ತಪ್ಪಿ ಮೊದಲು ಬೈಕ್‌ಗೆ ಡಿಕ್ಕಿಯಾಗಿದೆ. ನಂತರ ಆಟೊ, ಕಾರು ಹಾಗೂ ಮತ್ತೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಪಾದಚಾರಿ ಮಾರ್ಗದಲ್ಲಿದ್ದ ತಡೆಗೋಡೆಗೆ ಗುದ್ದಿತ್ತು. ಟ್ರಕ್ ಡಿಕ್ಕಿಯ ರಭಸಕ್ಕೆ ಆಟೊ ಎರಡು ಭಾಗವಾಗಿ ಟ್ರಕ್ ಕೆಳಗೆ ಸಿಲುಕಿಕೊಂಡಿತ್ತು. ಇದನ್ನು ಗಮನಿಸಿದ್ದ ಸ್ಥಳೀಯರು ಹಾಗೂ ಇತರೆ ವಾಹನ ಸವಾರರು ಆಟೊದಲ್ಲಿದ್ದ ತಂದೆ ಹಾಗೂ ಮಗಳ ರಕ್ಷಣೆಗೆ ಮುಂದಾದರು. ಅಷ್ಟರಲ್ಲಿ ಅವರು ಮೃತಪಟ್ಟಿದ್ದರು. ಘಟನೆಯಲ್ಲಿ ಮತ್ತೊಬ್ಬ ಬೈಕ್ ಸವಾರನ ಕಾಲಿಗೆ ಗಾಯವಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಾಗಾಲ್ಯಾಂಡ್‌ನವರಾದ ಟ್ರಕ್ ಚಾಲಕ ಪರಾರಿ ಆಗಿದ್ದಾರೆ. ಆತನ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಟ್ರಕ್ ಚಾಲಕನ ನಿಯಂತ್ರಣ ತಪ್ಪಿ ದುರ್ಘಟನೆ ಸಂಭವಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ವಾಹನದ ಬ್ರೇಕ್ ವಿಫಲವಾಗಿತ್ತೇ ಅಥವಾ ಚಾಲಕ ಬ್ರೇಕ್ ಒತ್ತದೇ ಆ್ಯಕ್ಸಿಲೇಟರ್ ಒತ್ತಿದ್ದರಿಂದ ಅಪಘಾತ ಸಂಭವಿಸಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.



ಅಪಘಾತದ ದೃಶ್ಯ

**ದಂಪತಿ –ಮಗು ಪಾರು:** ಕಾರಿನಲ್ಲಿ ವಿಜಯ್ ಅವರು ತಮ್ಮ ಮೂರು ವರ್ಷದ ಪುತ್ರ ಹಾಗೂ ಪತ್ನಿ ಜೊತೆಗೆ ಆಸ್ಪತ್ರೆಗೆ ತೆರಳುತ್ತಿದ್ದರು. ಟ್ರಕ್ ಡಿಕ್ಕಿಯಾದ ರಭಸಕ್ಕೆ ಇವರ ಕಾರಿನ ಮುಂಭಾಗ ನಜ್ಜುಗುಜ್ಜಾಗಿದ್ದು, ಮೂವರೂ ಪಾರಾಗಿದ್ದಾರೆ.



ಅಪಘಾತದಲ್ಲಿ ಮೃತಪಟ್ಟ ಯೇಸು ಹಾಗೂ ಅವರ ಪುತ್ರಿ ಜೆನ್ನಿಫರ್

'ಪೂಜಾ ಕಲ್ಯಾಣ ಮಂಟಪ ರಸ್ತೆಯಿಂದ ವೇಗವಾಗಿ ಬಂದ ಟ್ರಕ್ ನಮ್ಮ ಕಣ್ಣೆದುರೇ ಆಟೊಗೆ ಡಿಕ್ಕಿ ಹೊಡೆಯಿತು. ನಂತರ ನಮ್ಮ ಕಾರಿಗೆ ಡಿಕ್ಕಿಯಾಯಿತು. ತಕ್ಷಣವೇ ಎಡಬದಿಗೆ ಕಾರು ತೆಗೆದುಕೊಂಡು ಪಾರಾದೆವು' ಎಂದು ವಿಜಯ್ ತಿಳಿಸಿದರು.

ಘಟನಾ ಸ್ಥಳಕ್ಕೆ ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಬುಕಿಂಗ್ ರದ್ದು ಪಡಿಸಿದ್ದ ಚಾಲಕ:** ಉತ್ಪನ್ನಗಳನ್ನು ನಗರದಿಂದ ಚೆನ್ನೈಗೆ ಕೊಂಡೊಯ್ಯಲು ಟ್ರಕ್ ಬುಕ್ ಮಾಡಲಾಗಿತ್ತು. ಚೆನ್ನೈನಿಂದ ಇನ್ನೂ 20 ಕಿ.ಮೀ ದೂರಕ್ಕೆ ಹೋಗಬೇಕು ಎಂದು ಕಾರ್ಖಾನೆ ಮಾಲೀಕ ಹೇಳಿದ್ದರು. ಚಾಲಕ ಹೆಚ್ಚುವರಿ ಹಣ ಕೊಡುವಂತೆ ಕೇಳಿದ್ದ. ಮಾಲೀಕರು ಒಪ್ಪಿರಲಿಲ್ಲ. ಚಾಲಕ ಬುಕಿಂಗ್ ರದ್ದು ಪಡಿಸಿ ವಾಪಸ್ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ.

## ಬೈಕ್ ಡಿಕ್ಕಿ: ಸವಾರ, ಕಡವೆ ಸಾವು

ಪ್ರಜಾವಾಣಿ ವಾರ್ತೆ

**ಕುಂದಾಪುರ (ಉಡುಪಿ ಜಿಲ್ಲೆ):** ಶಂಕರನಾರಾಯಣ ಪೊಲೀಸ್ ಠಾಣಾ ವ್ಯಾಪ್ತಿಯ ಕಮಲಶಿಲೆ ಸಮೀಪದ ತಾರೆಕೊಡ್ಲು ಎಂಬಲ್ಲಿ ಕಾಡಿನಿಂದ ರಸ್ತೆಗೆ ಏಕಾಏಕಿ ಧಾವಿಸಿ ಬಂದ ಕಡವೆಗೆ ಬೈಕ್ ಡಿಕ್ಕಿಯಾಗಿ ಸವಾರ ಮೃತಪಟ್ಟಿದ್ದಾರೆ. ಕಡವೆಯೂ ಸತ್ತಿದೆ.

ಕಾವ್ರಾಡಿ ಗ್ರಾಮದ ನೆಲ್ಲಿಕಟ್ಟೆಯ ಶೇಖರ ಮೊಗವೀರ ಎಂಬುವರ ಪುತ್ರ ಶ್ರೇಯಸ್ (22) ಮೃತರು. ಸಹ ಸವಾರ ಪಡು ವಾಲ್ತೂರಿನ ವಿಘ್ನೇಶ್ (19) ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರಿಬ್ಬರು ಶನಿವಾರ ಕಮಲಶಿಲೆ ದೇವಸ್ಥಾನದಿಂದ ಮನೆಗೆ ತೆರಳುತ್ತಿದ್ದಾಗ ಅವಘಡ ನಡೆದಿದೆ.

ಕಡವೆಯ ಕೋಡುಗಳು ಶ್ರೇಯಸ್ ದೇಹಕ್ಕೆ ನುಗ್ಗಿ, ತೀವ್ರ ರಕ್ತಸ್ರಾವ ಉಂಟಾಗಿತ್ತು. ಶಂಕರನಾರಾಯಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

# ಮಹಿಳೆಯರಿಗೆ ಉಚಿತ ಆಟೊ ನೀಡಲು ಚಿಂತನೆ

## ಲಿಂಗತ್ವ ಅಲ್ಪಸಂಖ್ಯಾತರು, ಮಹಿಳೆಯರಿಗೆ ಆಟೊ ಚಾಲನಾ ತರಬೇತಿ ಕಾರ್ಯಕ್ರಮದಲ್ಲಿ ಎನ್‌.ಎ. ಹ್ಯಾರಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಆಟೊ ರಿಕ್ಷಾ ಮಾತ್ರವಲ್ಲ ಕಾರು ಚಾಲನಾ ತರಬೇತಿಯನ್ನೂ ನೀಡಬೇಕು. ಆನಂತರ ವಾಹನವನ್ನು ಒದಗಿಸುವ ಮೂಲಕ ಅವರು ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳಲು ನೆರವಾಗಬೇಕು. ಈ ಬಗ್ಗೆ ಜಿಬಿಎ ಜತೆ ಚರ್ಚಿಸಲಾಗುವುದು ಎಂದು ಬಿಡಿಎ ಅಧ್ಯಕ್ಷ ಎನ್‌.ಎ.ಹ್ಯಾರಿಸ್ ಹೇಳಿದರು.

ಬಿ.ಪ್ಯಾಕ್ ಹಾಗೂ ಸಿಜಿಐ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ 'ಶಾಂತಿನಗರ ಕ್ಷೇತ್ರದ ಲಿಂಗತ್ವ ಅಲ್ಪಸಂಖ್ಯಾತರು ಮತ್ತು ಮಹಿಳೆಯರಿಗೆ ಉಚಿತ ಆಟೊ ಚಾಲನಾ ತರಬೇತಿ'ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಚಾಲನಾ ತರಬೇತಿ ಪಡೆದ ಅರ್ಹರಿಗೆ ಸರ್ಕಾರದಿಂದಲೇ ಉಚಿತವಾಗಿ ಆಟೊ ಒದಗಿಸುವುದು ಅವಶ್ಯ ಎಂದು ಹೇಳಿದರು.

ಕಿರ್ಲೋಸ್ಕರ್ ಸಿಸ್ಟಮ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಗೀತಾಂಜಲಿ ವಿಕ್ರಂ ಕಿರ್ಲೋಸ್ಕರ್ ಮಾತನಾಡಿ, 'ಆಟೊ ಚಲಾಯಿಸುವವರು ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರು ಇದ್ದಾಗ ರಾತ್ರಿ ಪ್ರಯಾಣ ಬೆಳೆಸುವ ಮಹಿಳೆಯರಿಗೆ ಧೈರ್ಯ ಬರುತ್ತದೆ. ಈ ಮೂಲಕ ಸಾರಿಗೆ ವ್ಯವಸ್ಥೆಯಲ್ಲಿ ದೇಶದಲ್ಲಿಯೇ ಬೆಂಗಳೂರು ಮಾದರಿಯಾಗಬೇಕು' ಎಂದರು.

ಸಿಜಿಐ ಉಪಾಧ್ಯಕ್ಷೆ ಲಕ್ಷ್ಮಿ ಗಣೇಶ್ ಮಾತನಾಡಿ, 'ವೃತ್ತಿ ಜೀವನ ಪ್ರಾರಂಭಿಸಬೇಕೆಂಬ ಅಭಿಲಾಷೆ ಹೊಂದಿರುವ ಮಹಿಳೆಯರಿಗೆ ಇದು ಉತ್ತಮ ಅವಕಾಶ. ಉಚಿತವಾಗಿ ತರಬೇತಿ ನೀಡಲಾಗುತ್ತಿದೆ' ಎಂದರು.

ಬಿ.ಪ್ಯಾಕ್ ವ್ಯವಸ್ಥಾಪಕ ಟ್ರಸ್ಟಿ ರೇವತಿ ಅಶೋಕ್ ಮಾತನಾಡಿ, 'ಎರಡನೇ ಹಂತದಲ್ಲಿ 100ಕ್ಕೂ ಹೆಚ್ಚು ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಆಟೊ ಚಾಲನಾ ತರಬೇತಿ ನೀಡಲಿದ್ದೇವೆ. ನಾಯಕತ್ವ, ಇಂಗ್ಲಿಷ್ ಸಂವಹನ, ಗ್ರಾಹಕ ನಿರ್ವಹಣೆ, ಡಿಜಿಟಲ್ ಹಾಗೂ ಆರ್ಥಿಕ ಕೌಶಲಗಳನ್ನು ಕಲಿಸಿ ಕೊಡಲಾಗುವುದು' ಎಂದು ಮಾಹಿತಿ ನೀಡಿದರು.

ಸಿಜಿಐ ಉಪಾಧ್ಯಕ್ಷೆ ಆರತಿ ಹಿರೇಮಠ, ಇಎಸ್‌ಜಿ ಮತ್ತು ಸಿಎಸ್‌ಆರ್ ನಿರ್ದೇಶಕ ಸುಧಾಕರ್ ಪೈ, ಬಿ. ಪ್ಯಾಕ್ ಸದಸ್ಯೆ ಚಿತ್ರಾ ತಲ್ವಾರ್, ಬಿ.ಕ್ಲಿಪ್‌ನ ಸಂಪತ್, ಕಾವೇರಿ ಕೇದಾರನಾಥ್, ಸರಸ್ವತಿ, ರಾಘವೇಂದ್ರ ಪೂಜಾರಿ ಎಚ್. ಎಸ್., ಭರತ್, ಸಿಜಿಐ ಸದಸ್ಯೆ ರೂಪಾ ಸಿದ್ದರಾಜು ಉಪಸ್ಥಿತರಿದ್ದರು.



ಆಟೊ ರಿಕ್ಷಾ ಕೌಶಲ ತರಬೇತಿ ಕಾರ್ಯಕ್ರಮಕ್ಕೆ ಎನ್‌.ಎ. ಹ್ಯಾರಿಸ್ ಚಾಲನೆ ನೀಡಿದರು. ರೇವತಿ ಅಶೋಕ್, ಲಕ್ಷ್ಮಿ ಗಣೇಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

# 12 ಗಂಟೆಗಳಲ್ಲಿ ಮೂವರು ಯುವಕರಿಗೆ ಹೃದಯ ಕಸಿ

**ಬೆಂಗಳೂರು:** ಹೃದಯ ಸಂಬಂಧಿ ಸಂಕೀರ್ಣ ಸಮಸ್ಯೆ ಎದುರಿಸುತ್ತಿದ್ದ ಮೂವರು ಯುವಕರಿಗೆ 12 ಗಂಟೆಗಳ ಅವಧಿಯಲ್ಲಿ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆ ವೈದ್ಯರು ಹೃದಯ ಕಸಿ ನಡೆಸಿದ್ದಾರೆ.

ಶಸ್ತ್ರಚಿಕಿತ್ಸೆಗೆ ಒಳಗಾದ ಮೂವರೂ 30 ವರ್ಷದೊಳಗಿನವರಾಗಿದ್ದಾರೆ. ಸೂಕ್ತ ಹೃದಯ ದಾನಿಗಳಿಗಾಗಿ ಇವರು ಒಂದು ವರ್ಷದಿಂದ ಕಾಯುತ್ತಿದ್ದರು. ದಾನಿಗಳ ಹೃದಯ ಹೊಂದಾಣಿಕೆಯಾದ್ದರಿಂದ, ಯಲಹಂಕದ ಸ್ಪರ್ಶ್ ಆಸ್ಪತ್ರೆ, ಹೆಬ್ಬಾಳದ ಆಸ್ಟರ್ ಸಿಎಂಐ ಆಸ್ಪತ್ರೆ ಮತ್ತು ಹಳೆ ವಿಮಾನ ನಿಲ್ದಾಣ ರಸ್ತೆಯ ಮಣಿಪಾಲ್ ಆಸ್ಪತ್ರೆಯಿಂದ ಗ್ರೀನ್ ಕಾರಿಡಾರ್ ಮೂಲಕ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಗೆ ಹೃದಯಗಳನ್ನು ರವಾನಿಸಲಾಯಿತು ಎಂದು ಆಸ್ಪತ್ರೆ ತಿಳಿಸಿದೆ.

'ಹೃದ್ರೋಗ ತಜ್ಞರು, ಅರಿವಳಿಕೆ ತಜ್ಞರು ಸೇರಿ ವಿವಿಧ ವಿಭಾಗಗಳ ವೈದ್ಯಕೀಯ ತಜ್ಞರನ್ನು ಒಳಗೊಂಡ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದೆ. ಮೂವರು ರೋಗಿಗಳು ಹೃದಯ ಕಸಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದ್ದು, ವೇಗವಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಗಳ ಕುಟುಂಬಸ್ಥರು ಅಂಗಾಂಗ ದಾನಕ್ಕೆ ಸಮ್ಮತಿಸಿದ ಪರಿಣಾಮ ಈ ಶಸ್ತ್ರಚಿಕಿತ್ಸೆ ಸಾಧ್ಯವಾಯಿತು' ಎಂದು ಹೃದ್ರೋಗ ತಜ್ಞ ಡಾ. ವರುಣ್ ಶೆಟ್ಟಿ ಹೇಳಿದ್ದಾರೆ.



ದಾಸರಹಳ್ಳಿ ಸಾಮೂಹಿಕ ಗಣೇಶೋತ್ಸವ ಸಮಿತಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಹಿಳೆಯರಿಗೆ ಎಸ್‌. ಮುನಿರಾಜು, ಸುಜಾತ ಮುನಿರಾಜು ಅವರು ಬಹುಮಾನ ಮತ್ತು ಪ್ರಶಂಸನಾ ಪತ್ರ ವಿತರಿಸಿದರು

# ದಾಸರಹಳ್ಳಿ: ಸಾಮೂಹಿಕ ಗಣೇಶೋತ್ಸವ

ಪ್ರಜಾವಾಣಿ ವಾರ್ತೆ

**ಪೀಣ್ಯ ದಾಸರಹಳ್ಳಿ:** ಬಾಗಲಗುಂಟೆಯ ಎಂಇಐ ಆಟದ ಮೈದಾನದ ಬಾಲಗಂಗಾಧರನಾಥ ಮಹಾಸ್ವಾಮಿ ರಂಗಮಂದಿರದಲ್ಲಿ ದಾಸರಹಳ್ಳಿ ಸಾಮೂಹಿಕ ಗಣೇಶೋತ್ಸವ ಸಮಿತಿ ವತಿಯಿಂದ ಆಯೋಜಿಸಲಾಗಿರುವ ಗಣೇಶೋತ್ಸವಕ್ಕೆ ಶಾಸಕ ಎಸ್‌.ಮುನಿರಾಜು ಚಾಲನೆ ನೀಡಿದರು.

ಸೂರಜ್ ಫೌಂಡೇಶನ್ ಸಂಸ್ಥಾಪಕಿ ಸುಜಾತ ಮುನಿರಾಜು ನೇತೃತ್ವದಲ್ಲಿ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಗಾಯನ ಸ್ಪರ್ಧೆ, ನೃತ್ಯ ಸ್ಪರ್ಧೆ ಹಾಗೂ ಭಜನೆ, ಸಾಂಸ್ಕೃತಿಕ ಕಾರ್ಯಕ್ರಮ ನಡೆದು ವಿಜೇತರಿಗೆ ಬಹುಮಾನ ಮತ್ತು ಪ್ರಶಂಸನಾ ಪತ್ರ ವಿತರಿಸಲಾಯಿತು.

ಎಸ್‌. ಮುನಿರಾಜು ಮಾತನಾಡಿ, 'ಗಾಯಕರಾದ ವಿಜಯ ಪ್ರಕಾಶ್ ಮತ್ತು ಅನುರಾಧ ಭಟ್ ತಂಡದಿಂದ ಸಂಗೀತ ರಸಸಂಜೆ, ಭಾನುವಾರ ಬೆಳಿಗ್ಗೆಯಿಂದ ಪೂಜೆಗಳು ಜರುಗಲಿವೆ. ಸಂಜೆ ಗಣೇಶನ ಪ್ರಸಾದವಾದ ಲಡ್ಡು ಹರಾಜು ಹಾಕಲಾಗುವುದು. 51 ಗಣೇಶ ಮೂರ್ತಿಗಳನ್ನು ಸಾಮೂಹಿಕ ಕಲಾತಂಡಗಳ ಮೆರವಣಿಗೆಯೊಂದಿಗೆ ಬಾಗಲಗುಂಟೆ, ಮಲ್ಲಸಂದ್ರ ಪೈಪ್ ಲೈನ್, ದಾಸರಹಳ್ಳಿ ಮೆಟ್ರೊ ಮಾರ್ಗವಾಗಿ ಸಾಗಿ ಚೊಕ್ಕಸಂದ್ರ ಕೆರೆಯಲ್ಲಿ ವಿಸರ್ಜಿಸಲಾಗುವುದು. ಸಾಮೂಹಿಕ ಕಲಾತಂಡಗಳ ಮೆರವಣಿಗೆ ನಡೆಯಲಿದೆ' ಎಂದು ಎಸ್‌. ಮುನಿರಾಜು ಅವರು ಮಾಹಿತಿ ನೀಡಿದರು.

# ರನ್ಯಾ ಆಸ್ತಿ ಜಪ್ತಿ ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿನ್ನ ಕಳ್ಳಸಾಗಣೆ ಆರೋಪದ ಪ್ರಕರಣದಲ್ಲಿ ನಟಿ ರನ್ಯಾ ಅವರ ಆಸ್ತಿ ಜಪ್ತಿಗಾಗಿ ಹೊರಡಿಸಿದ್ದ ಜಾರಿ ನಿರ್ದೇಶನಾಲಯದ (ಇ.ಡಿ) ಆದೇಶಕ್ಕೆ ಹೈಕೋರ್ಟ್ ಮುಂದಿನ ವಿಚಾರಣೆವರೆಗೂ ತಡೆ ನೀಡಿದೆ.

ಇ.ಡಿ ಆದೇಶ ಪ್ರಶ್ನಿಸಿ ಹರ್ಷವರ್ಧಿನಿ ರನ್ಯಾ ಅಲಿಯಾಸ್ ರನ್ಯಾ ರಾವ್ (34) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಇ.ಡಿ ಹೊರಡಿಸಿರುವ ಜಪ್ತಿ ಆದೇಶವು ಮೇಲ್ನೋಟಕ್ಕೆ ಅನುಸೂಚಿತ ಅಪರಾಧ ವರದಿಯಾಗುವುದಕ್ಕೂ ಮುನ್ನ ಸಂಪಾದಿಸಿರುವ ಆಸ್ತಿಗಳನ್ನು ಒಳಗೊಂಡಿದೆ. ಹೀಗಾಗಿ, ಈ ಆದೇಶ ತನ್ನ ವ್ಯಾಪ್ತಿ ಮೀರಿದ ಆದೇಶವಾಗಿದೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ, ಜಪ್ತಿ ಆದೇಶಕ್ಕೆ ಮುಂದಿನ ವಿಚಾರಣೆವರೆಗೂ ತಡೆ ನೀಡಿದೆ.

ರನ್ಯಾ ರಾವ್ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ ವಾದ ಮಂಡಿಸಿದ್ದರು. ಹೈಕೋರ್ಟ್ ವಕೀಲ ವೈ.ಎಲ್‌. ಮಹೇಶ್ ವಕಾಲತ್ತು ವಹಿಸಿದ್ದಾರೆ.

ಪ್ರಜಾವಾಣಿ
# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### Engg/ Production Technical

**WE ARE** 100% **GRANITE** Export Oriented unit **HIRING**
- **AUTOCAD** - 2 Nos.
- **GRAPHIC / PRODUCT Designer** - 2 Nos.

**Reach us at**
Location: Bgl office / Remote.
mail: info@sbstones.com
**Call: 80157 55877**

**WANTED FOR** Company near Hosur-Precision Tool-Room work. CNC LATHE PROGRAMMER cum SETTER cum OPERATOR for BFW CNC Lathe. Full/ Part Time. Salary at Industry Levels. 9789055141

### Manager

**JAMES BOND** Dry cleaners requires store Managers (Candidates with minimum 2 years experience in Dry cleaning only) Salary: 18,000 to 25,000 + incentives Location: Konanakunte or Indiranagar or Gandhi Bazaar, Bangalore Timings: 9:30am to 9pm, Call: 8050666007

**MANAGER MALE/** Female for Plywood Shop Lalbagh Road, above 50 years preferred. Starting salary 15000. Apply through whatsapp. 9243120231.

### Teachers/ Professors

**REQUIRES TRAINED/** Untrained Teacher for English & Social Studies. Contact immediately with certificates. Principal CAMLIN ENGLISH SCHOOL, 4th cross, near 7th Main Bus Stop, Hampinagar, Bangalore-560104. Phone: 080-23301363

**HIGH SCHOOL** Social Science Teacher needed for CHITRAKOOTA CBSE SCHOOL in Nagarbhavi, KENGERI RING ROAD. Immediately. Call: 6361522604

**THE MYSORE EDUCATION SOCIETY**
"Brahmi", KISHORA KENDRA, 10th MAIN, 15th CROSS, MALLESWARAM, BANGALORE–560 003. Website: www.mesinstitutions.in

**Invites applications for the following posts**

**Post: 1. Chief Executive Officer**

**Educational Qualification:** Ph.D. in Arts / Commerce / Science / Technology. Proven track record in academic administration with leadership responsibilities. Age: Below 60 years.

**Post: 2. Principal**

**Educational Qualification:** Ph.D. degree in Arts, Commerce, Science, or allied disciplines, with a consistently good academic record.
**Experience:** At least 15 years of teaching/research experience in a recognized institution of higher education, with a minimum of 10 years in leadership/ administrative roles such as HoD, Vice-Principal, Dean, or equivalent.
**Research & Academic Credentials:** Significant publications in peer-reviewed journals, participation in national/international conferences, and experience in securing research grants will be an added advantage.
**Age:** Below 60 years at the time of application.

**Post: 3. Placement Officer**

**Education Qualification:** Postgraduate degree in Management / Commerce / Science / Arts or related field. 5–10 years of experience in placement coordination / career services. Age: Below 45 years. Strong communication, ICT and networking skills.
The remuneration for all the posts will be commensurate with qualifications, skillset & Experience.

- Applications for the post of **Chief Executive Officer** with CV and copies of certificates of their qualifications and experience etc., should reach the **Secretary**, MES at the above address on or before 24.09.2025 duly superscribing the envelope with "Application for the post of **CHIEF EXECUTIVE OFFICER**".
- Applications for the post of **Principal, Placement Officer** with CV and copies of certificates of their qualifications and experience etc., should reach the **Chief Executive**, MES at the above address on or before 24.09.2025 duly superscribing the envelope with "Application for the post of **PRINCIPAL / PLACEMENT OFFICER**".
- Candidates with experience are preferred.
- Decision of the selection committee is final.
- Resorting to any sort of influence will be deemed as a disqualification of the candidature.
- Download the application form from the MES website: https://mesinstitutions.in.

**Advt. No. MES/19/ADM-1/2025 Dated: 07.09.2025**
**CHIEF EXECUTIVE**

### General



**WANTED STORES** IN CHARGE (Female) Exp: 2 years. Basic Computer Knowledge. Industry in Peenya. Immediate appointment. 9972410541, 9845915484 infusilindia@infusil.in

### Wanted

**URGENTLY REQUIRED,** Data capture exe, Team leads, MIS exe, Trainer, IT Person & Project Manager Day/ Night shift, at shivaji nagar/ infantry road office Blore, Freshers/ Exp, Male/ Female offering Good Salary & incentives for Application Processing Hub, immediate joiners preferred. Call or WhatsApp: 7019889405/ 9731870519/ 7090526122

### Security & Detectives

**WANTED CLIENT** LIAISON OFFICER for a Leading Security Service Company to look after the units between Koramangala to Krishnagiri. Preferred Ex-serviceman. Salary-Commensurate with qualification and experience. Send resume: rajadhani98456@gmail.com WhatsApp: 9742240017

### Accounts & Finance

**REPUTED CONSTRUCTION COMPANY BANGALORE REQUIRES: B.com Graduate with 2 years experience in Accounts & Tally. Contact: 9448083424. Email: pgiriraju@yahoo.com**







## REAL ESTATE SELLING

### Sites

### Electronic City

**KHB Sites in Surya City Near Jigani STRRA & BMRDA Approved Plots**
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

### Anekal

**PLOT FOR** sale Anekal SRR Exurbia west facing 40*40 wide Roads,park, water 4000 sqft 9538356995

### Banashankari

**AVAILABLE BANASHANKARI** 6th Stage, 6th Block 30x40, W/F,Near 100" Road Budget Friendly Call Lingaraju: 9663393533

**BDA SITES** Available @`Banashankari 6th Stage all Blocks 20x30, 30x40, 40x60 50x80 In Good Location Contact: 99722-06988

**BENGALURU, BANASHANKARI,** 3rd Stage Prime Locations, 1 Ground (60×40), Genuine Buyers Only. J.S. Ramarao: Ph: 9841013625

**SITE FOR** Sale 30x40 South Facing at Banashankari 6th stage 3rd Block Contact: owner: 9113201131

### Bannerghatta Road

**BANNERGHATTA ROAD** Bilekahalli Near Shanthi Nikethan School Ramana Shree Enclave 60x50, East, E-Katha Site, 4,80,00,000/- 9980761200

**SALE: BDA** SITE No.90 BTM 1st Stage, North Facing 40x60, 60'Road, Semi-Commercial, Adjacent to JALA BHAVAN, Approx 100Mtrs to Bannerghatta Main Road. Genuine Buyers Call: Muralidhar- 9741929567

### Basaweshwaranagar

**SITE FOR SALE** VALUED 2 CRORE 50 LAKHS NOW SELLING FOR 2 CRORE ONLY: 9035883017

### Intl Airport Road

**INTERNATIONAL AIRPORT** Road Commercial Land 11,500 Sqft For Sale Broker's Pls Excuse Mob: 9845623970/ 9739400838

### Jayanagar

**SALE-SITE 40X65** North Facing Jayanagar 4th T Block on 40feet Road Excellent Location Ct: 9844134068 8073859758

### J P Nagar

**"J.P.NAGAR, SRINIDHI_LAYOUT** 30x51 Residential Site, East Facing, BBMP A Katha, Full White. Owner: 9845088449/ 9845249799"

**SALE BDA** 30x40 North Face 30ft Road JPNagar 9th Phase 7th Block Good Location: 8050705145

### Kengeri

**FOR SALE-** Converted Betterment Paid Land extent 35000 sqft A Khata. E Khata available. Opp to Kengeri Satellite Bus Stop Rs. 12000 per sqft. Brokers Excuse. Contact: 9880459141.

***30X40 E/F** BBMP* 'A' Khata Site-Sale KENGERI SATELLITE TOWN, Arunachalam Layout,Clear Title.₹.10000/-. 9742681666/ 9886634578

**SUNCITY PROPERTY** 40X60 West Rs.8500 Sft BALAJI LAYOUT Vishweshwaraiya1st BLOCK 55X40 East Rs.9500 sft Contact: 9448793428

### Kanakapura Road

**"EXCELLENT LOCATION** for`investment behind_ISKON Temple Near Doddakallasandra Metro_Station 30x50_Rs.1.76 Crore, 40x60 Rs.2.40 Crore. 9845286505"

### Kempegowda Layout

**"AVAILABLE KEMPEGOWDA-LAYOUT** 50x80 West facing Commercial Site 4th Block `H`Sector 300 feet Road. Contact: 9632788913"

**KEMPEGOWDA LAYOUT,** Commercial/ Residential BDA Site for Sale 20x30, 30x40, 40x60, 50x80. Contact Kumar- 9945119449

**NADA PRABHU** Kempegowda layout BDA Site For Sale 30x40, 40x60, 50x80 Contact: 7676900174 6363496142

**DIRECT OWNER** Near Metro Station, Kempegowda Layout, Vishweshwaraiah Layout, 30x40, 40x60, 50x80 Commercial: 9620696913/ 9880781399

### Majestic And Around

**BDA PLOT** 25*45 For sale Okalipuram BBMP Approved Building Plan Loan with ICICI Bank opp LULU MALL 9686851510

### Mysore

**GOVERNMENT EMPLOYEES** Society, Ilawala, Meghalapura, 40x60, West, Allottee, Clear Title, For Sale, Immediate Registration, Contact-7795494932

**POLICE LAYOUT,** Lalithadripura, 40x60, West, Well Developed, Allottee, Clear Title, For Sale, Immediate Registration, Contact-7795494932

### Nagarabhavi

**"NAGARABHAVI 11TH-BLOCK** 40x60 West facing Site for sale, Good location, Owner meeting. 8884240888/ 7892780002"

**40X60 BDA** SITE SALE Nagarbhavi Health Layout, Oppsite Park, South Facing Semi Commercial Contact: 9980409820

### Outer Ring Road

**ORR(MAGADI RD-TUMKUR** Rd) facing corner commercial site 2,800 Sqft near Pipeline/Chowdeshwarinagar Rs. 22,000 call: 9980555558

### Vijayanagar

**SITE FOR SALE:** 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

### Vishweshwariah Layout

**"VISHVESWARAIAH LAYOUT** 6th-Block KLE.College 40x60_Suoth, 40_feet_Road, near Siddaganga Compound ₹10,000/-P.Sqft Negotiable. 9448432633"

**'VISHVESWARAIAH 1ST_BLOCK** 50x80_North, 6th_Block 40x60_North, 7th_Block 30x40, Good_location. 9448733456/ 7259675150"

**BDA SITE SALE** VISHWESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

**BUYING/ SELLING** 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

**VISHWESHWARAIAH LAYOUT** 9th 50x60 NW Site. 2145 Commercial 60ft RTO Road Rs. 24000/- Sqft: 9845793121

### Chikkaballapura

**DC CONVERTED,TOWN** Planning Approved Sites for Sale at Chikkaballapur Near Isha Foundation. Contact:9008817966, 9591346969

### Bidadi

**NORTH FACING (1620sft) SITE FOR SALE -KHB COLONY BIDADI TOWNPH - 9741922392PH - 9535393333**

### Hosur Road

**PLOT SALE** ONLY 12 LEFT. Rs.900 Sqft. Rayakottai Road, Near_Krishnagiri Court. Tamilnadu. 9443225303, 9566899288.

### Nandini Layout

**SALE 40X60** Site Near Nandhini Layout 1.5km From Metro Station @ 8500/- sqft Call 9008018844

### House

### Basaveshwaranagar

**INDEPENDENT HOUSE** LEASE 5 BHK 60 LAKHS, 3BHK 30 LAKHS, 2 BHK 30 LAKHS: 9035883017

### Basavanagudi

**SHASHTRINAGAR OFF** K.R.Road, BDA 20x30 North facing, old house (site value) sale 1,30,00,000/- 9980659543 /9845144365






### J P Nagar

**SALE 20X30** old Building West Facing J.P.Nagar 4th Phase Rs. 1.40cr Negotiable Contact: 9916779743

### Padmanabha Nagar

**PADMANABHA NAGAR,** 2 unit House, West facing, 1370 sft. (220 sft. Extra site) 3,50,00,000/- -9845144365

### Rajarajeshwari Nagar

**BEML 5TH-STAGE** SALE 40x60_ULTRA MODERN 5BHK HOUSE 1yr_OLD LIFT,_HOME THETRE Rs.8cr NEGO SHIVU 9880004149/ 9035441234

### Sanjaynagar

**NAGASHETTIHALLI SANJAYNAGAR** Near Boopasandra Main Road House for Sale 30X40 South G+1 1.6 crores Negotiable 9880886377

### Vishweshwariah Layout

**HOUSE BUILT** on BDA Site at 3rd block, SMV Layout is for Sale. Direct Owner: 9845300889/ 9731574999.

### Moodalpalya

**15X40 SOUTH** G+2 Building 5 Houses, East Door, SVG Nagar, Moodalapalya, E-Katha 83L Owner 9448673482

### Cookes Town

**NORTH ROAD** excellent location old two adjacent houses 1) 28x70, 2) 30x70 both together 58x70 for sale 26,000/ Sft Negotiable :98451-84220

### Flat

### R T Nagar

**GROUND FIRST** DUPLEX INDEPENDENT FLAT 1 BHK VACANT POSITION READY TO OCCUPY 60 LAKHS: 9035883017

### Koramangala

**SALE-2BHK FALT** 1250sft Koramangala NGV, one attached & Common Bath, Toilet With one Carparking Ct:9844134068 8073859758

### Kothanur

**2 BHK FLAT** near Kristu Jayanthi College. Attractive interior work, spacious rooms, modular kitchen, easy access to markets, schools. Swimming pool, Children play area, Gym, Party Hall. 8892247447.

### Banashankari

**FOR SALE** New Ready to move Luxury 3 BHK 1750 sft 2.54 Cr & 2000 sft 2.90 Cr with individual E-Khatha Flats for Sale @ Banashankari 2nd stage near BDA complex Brokers excuse Call 9741868566

### Agricultural Land

### Out-Station

**70KM FROM** Bangalore,Malavalli 26acr land suitable for agriculture, farmland development 37lakhs only 9741040748

### Commerical

### Koramangala

**SALE KORAMANGALA** 5th Block Commercial Property price 50 crores, Monthly Income 26 lakhs. Contact. 9845720810

### Farm House/ Land/ Resorts

### Out-Station

**27 ACRES** land for sale in Sira Taluk, 141 KM FROM BANGALORE, 1 KM FROM NH48 (BANGALORE-MUMBAI) SUITABLE FOR WAREHOUSE INDUSTRY RESORTS. GENUINE BUYERS CALL- 9845397798

***CHANCE PROPERTY*** Near Kotagiri, Nilgiris, Tamil Nadu: 63 Acres Patta Land with Teak Wood for Just Rs.70 cr. Ph:9848392893, 9052200009

## BUILDERS ESSENTIAL

### Water Proofing

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## REAL ESTATE BUYING

### Flat

### General

**HOSKEREHALLI** Wanted 4BHK gated community Flat 3000sft, W/N facing. Tata Promont preferable. 3.50CR. Immediate Registration. durga824@gmail.com

### Sites

### Kanakapura Road

**WANT SITE 40X60** (smaller/bigger site is also fine) at BCCHS Layout, off Kanakapura Road. Immediate settlement. Dr.Roopak 9880299011.

### Multiple Locations

**WANTED BDA SITES** Anjanapura- Arkavathi Banashankari 6th.Stage, Vishweswaraiah, Kempegowda. SAPTHAGIRI (Opp.BDA Head Office, Kumara Park). 9036360366.

### Vishweshwariah Layout

***BUYING/ SELLING*** 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

**WANTED VISHWESHWARAIAH** Layout 30x40 & 40x60 BDA Property Contact: 7899570235



## RENTAL PROPERTIES

### Accommodation Available

### Commercial

**RUNNING XEROX** Centre For Rent or Lease West of Chord Road Near Metro Station: 9916119936

**FOR RENT,** J.P.Nagar 24th Main Road,`East facing Commercial 2400sft. Site Independent Ground Floor Building, Good Location for`Coffee Shop,Italian Foods, South Indian Hotel, for`Office Purpose, Suraj Realtors- 9845232711

**WAREHOUSE/ OFFICE SPACE** available for rent, near Hoodi, Whitefield, Bangalore, Area Gf-20,000`sqft, 1st floor-20,000`sqft. Call 8150943158

**BANASHANKARI 6TH STAGE** 80`Feet Road,11th`Block 50x80 Site Built-to-Suit. And 2nd`Block, 80`Feet Road,50x80 RENT for Vacant`Site. Call 9945724472

**BANNERGHATTA ROAD** near Honeywell 3500 Sft. Commercial, Rent 1,75,000/-, Suitable for`Godown, RCC Building 20' Height, 20HP Power- 9980761200

### Flats

**"TO-LET (FOR LEASE ONLY)** North-Facing 2BHK Semi-Furnished`Flat is`for`Lease SRS_White_Pearl Apartment Flat`No.A-305, Opp.Kithaganur Panchayath`Office Kithagnur`Main`Road, K.R.Puram, Bangalore.Call: 9441181124, 8328460672"

# ಬಾನುಗೆ ವಿರೋಧ: ಅಪಚಾರ

## ವಿಚಾರಗೋಷ್ಠಿಯಲ್ಲಿ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದಸರಾ ಉದ್ಘಾಟನೆಗೆ ಆಹ್ವಾನಿಸಿರುವ ಬುಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರನ್ನು ದೇವಸ್ಥಾನಕ್ಕೆ ಬಿಡುವುದಿಲ್ಲ ಎಂದು ಹೇಳಿರುವುದು ಧಾರ್ಮಿಕ ಅಪಚಾರವಾಗಿದೆ ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದರು.

ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ ನಗರದ ಬಸವ ಸಮಿತಿ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ನ್ಯಾಯದ ಹರಿಕಾರ ಪೈಗಂಬರ್ ಮುಹಮ್ಮದ್' ಕುರಿತ ವಿಚಾರಗೋಷ್ಠಿಯಲ್ಲಿ ಮಾತನಾಡಿದರು.

'ರಾಜಕಾರಣಿಗಳಲ್ಲಿ ಅಸಹನೆಯಷ್ಟೇ ಕಾಣುತ್ತಿದೆ. ಅದಕ್ಕೆ ಇತ್ತೀಚಿನ ಉದಾಹರಣೆ ಕನ್ನಡ ಭಾಷೆಯನ್ನು ಎತ್ತರಕ್ಕೆ ಕೊಂಡೊಯ್ದ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿದ್ದನ್ನು ವಿವಾದವನ್ನಾಗಿಸಲಾಗುತ್ತಿದೆ. ಮುಸ್ಲಿಂ ಎಂಬ ಕಾರಣಕ್ಕೆ ದಸರಾದಲ್ಲಿ ಭಾಗವಹಿಸದಂತೆ ತಡೆಯಲು ಶ್ರಮಿಸುತ್ತಿರುವುದು ದೊಡ್ಡ ಧಾರ್ಮಿಕ ಅಪಚಾರ ಎಂಬುದು ವಿರೋಧಿಸುತ್ತಿರುವವರಿಗೆ ತಿಳಿಯುತ್ತಿಲ್ಲ ಅನ್ನುವುದೇ ವಿಷಾದದ ಸಂಗತಿ. ಎಲ್ಲರನ್ನೂ ಒಳಗೊಂಡರೆ ಮಾತ್ರ ನಮ್ಮ ಸಮಾಜ ಬೆಳೆಯುವುದಕ್ಕೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕುರ್‌ಆನ್, ಭಗವದ್ಗೀತೆ, ಬೈಬಲ್ ಸೇರಿದಂತೆ ಎಲ್ಲ ಧರ್ಮ ಗ್ರಂಥಗಳಲ್ಲಿನ ಸಂದೇಶಗಳನ್ನು ಮುಸ್ಲಿಮರು, ಹಿಂದೂಗಳು, ಕ್ರೈಸ್ತರು ಪರಸ್ಪರ ಹಂಚಿಕೊಳ್ಳಬೇಕು. ಆ ರೀತಿಯ ಕೊಡುಕೊಳ್ಳುವಿಕೆಯ ಸಂಬಂಧಗಳು ಬೆಳೆದರೆ ಮಾತ್ರ ಮನುಷ್ಯರು ಒಂದಾಗಿ, ಇನ್ನೊಬ್ಬರನ್ನು ಸಹಿಸಿಕೊಂಡು ಇರಲು ಸಾಧ್ಯ ಎಂದರು.

ಪ್ರವಾದಿ ಮುಹಮ್ಮದ್ ಹೆಣ್ಣು ಮಕ್ಕಳು, ದೀನ ದಲಿತರ ಪರವಾಗಿ ಕರುಣೆಯಿಂದ ಕೆಲಸ ಮಾಡಿದ್ದರು. 'ನೆರೆಮನೆಯವನು ಹಸಿದಿರುವಾಗ, ನೀವು ಹೊಟ್ಟೆ ಪೂರ್ತಿ ತಿನ್ನಬೇಡಿ, ಹಂಚಿಕೊಂಡು ತಿನ್ನಿ' ಎನ್ನುವ ಮೂಲಕ ಪ್ರವಾದಿ ಅವರು ಬಂಡವಾಳ ಶಾಹಿಗಳ ವಿರೋಧಿ ಎಂಬುದನ್ನು ತೋರಿಸಿಕೊಟ್ಟಿದ್ದರು ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌.ಮುಕುಂದರಾಜ್ ಮಾತನಾಡಿ, 'ದ್ವೇಷ, ಕೊಲೆ, ಹಿಂಸೆ ಮಾಡುವುದು ಏಕೆ? ಮನುಷ್ಯ ಅತ್ಯಂತ ಕ್ರೂರ ಪ್ರಾಣಿ. ಈ ಪ್ರಾಣಿಯನ್ನು ಮನುಷ್ಯನನ್ನಾಗಿ ಮಾಡಲು ಪ್ರವಾದಿ ಹುಟ್ಟಿ ಬರಬೇಕಾಯಿತು. 12ನೇ ಶತಮಾನದಲ್ಲೂ ಅಸಹನೀಯ ವಾತಾವರಣ ಇತ್ತು. ದುಡಿಯುವ ವರ್ಗದರ ಮೇಲೆ ತೆರಿಗೆ ಹಾಕಿ, ಶೋಷಣೆ ಮಾಡಲಾಗುತ್ತಿತ್ತು. ಧರ್ಮ ನಡವಳಿಕೆಯಲ್ಲಿ ಇರಬೇಕೆ ಹೊರತು ನಾಲಿಗೆಯಲ್ಲಿ ಅಲ್ಲ' ಎಂದರು.

ಜಮಾಅತೆ ಇಸ್ಲಾಮಿ ಹಿಂದ್ ರಾಜ್ಯ ಘಟಕದ ಅಧ್ಯಕ್ಷ ಮೊಹಮ್ಮದ್ ಸಾದ್ ಬೆಳಗಾಮಿ, ಶಾಸಕ ರಿಜ್ವಾನ್ ಅರ್ಷದ್, ರಾಜ್ಯ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ, ಬಸವಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಗುರು ಸಿಂಗ್ ಸಭಾದ ಪ್ರೊ. ಹರ್ಜಿಂದರ್ ಸಿಂಗ್ ಭಾಟಿಯಾ, ಜಮಾಅತೆ ಇಸ್ಲಾಮಿ ಹಿಂದ್‌ನ ಅಕ್ಬರ್ ಅಲಿ ಉಡುಪಿ ಮಾತನಾಡಿದರು.

ಇದೇ ವೇಳೆ ಶಾಂತಿ ಪ್ರಕಾಶನ ಪ್ರಕಟಿಸಿರುವ ಪ್ರವಾದಿ ಮುಹಮ್ಮದರನ್ನು ಅರಿಯಿರಿ ಹಾಗೂ ಭಾರತೀಯ ಸಮಾಜದಲ್ಲಿ ಪ್ರವಾದಿ ಮುಹಮ್ಮದರ ಆದರ್ಶದ ಔಚಿತ್ಯ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.


ನಗರದಲ್ಲಿ ಆಯೋಜಿಸಿದ್ದ ವಿಚಾರಗೋಷ್ಠಿಯಲ್ಲಿ ಅಕ್ಬರ್ ಅಲಿ ಉಡುಪಿ, ವಿ.ಗೋಪಾಲಗೌಡ, ಮೊಹಮ್ಮದ್ ಸಾದ್ ಬೆಳಗಾಮಿ, ಅರವಿಂದ ಜತ್ತಿ, ಎಲ್‌.ಎನ್‌. ಮುಕುಂದರಾಜ್ ಮತ್ತು ಮೂಡ್ನಾಕೂಡು ಚಿನ್ನಸ್ವಾಮಿ ಪಾಲ್ಗೊಂಡಿದ್ದರು
ಪ್ರಜಾವಾಣಿ ಚಿತ್ರ

### 'ನ್ಯಾಯಾಂಗ ಮಧ್ಯ ಪ್ರವೇಶಿಸಲಿ'

ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಮಾತನಾಡಿ, 'ಸಂವಿಧಾನದಲ್ಲಿ ಎಲ್ಲರೂ ಸಮಾನ ಎಂದು ಹೇಳುವಾಗ ಧರ್ಮಗಳ ನಡುವೆ ಕಲಹ ಉಂಟು ಮಾಡುವ ಪಟ್ಟಭದ್ರ ಹಿತಾಸಕ್ತಿಗಳು ಇವೆ. ವಕ್ಫ್ ಕಾಯ್ದೆಯನ್ನು ಸಂಸತ್‌ನಲ್ಲಿ ಚರ್ಚೆಯಿಲ್ಲದೇ ತಿದ್ದುಪಡಿ ಮಾಡಿ ಅದರ ಮೂಲಭೂತ ಹಕ್ಕುಗಳಿಗ ಚ್ಯುತಿ ಉಂಟು ಮಾಡಲಾಗಿದೆ. ಈ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿದೆ. ಶೋಷಿತ ಹೆಣ್ಣುಮಕ್ಕಳಿಗೆ ನ್ಯಾಯ ಕೊಡಿಸುವುದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ವಿಫಲವಾಗಿವೆ. ಅನ್ಯಾಯ ನಡೆದಾಗ ಮಧ್ಯೆ ಪ್ರವೇಶಿಸುವ ಜವಾಬ್ದಾರಿ ನ್ಯಾಯಾಂಗಕ್ಕೂ ಇದೆ. ಸರ್ಕಾರಗಳು ಸಂವಿಧಾನಬದ್ಧ ಕರ್ತವ್ಯ ನಿರ್ವಹಿಸದೇ ಇದ್ದಾಗ ಅನ್ಯಾಯಕ್ಕೆ ಒಳಗಾದವರ ಬಗ್ಗೆ ಯೋಚನೆ ಮಾಡಿ ನ್ಯಾಯಾಂಗ ತೀರ್ಪು ನೀಡಬೇಕಿದೆ' ಎಂದು ಹೇಳಿದರು.

'ನಗರದಲ್ಲಿ ರಸ್ತೆಗಳು ಹದಗೆಟ್ಟಿವೆ. ಜನರು ಸಾಯುತ್ತಿದ್ದಾರೆ. ನಿಮ್ಮನ್ನು ಕೇಳುವವರು ಯಾರೂ ಇಲ್ಲವಾ? ಇದನ್ನು ನಿಮ್ಮ ನಗರಾಭಿವೃದ್ಧಿ ಸಚಿವರಿಗೆ ಹೇಳ್ರಿ' ಎಂದು ವೇದಿಕೆಯಲ್ಲಿದ್ದ ಶಾಸಕ ರಿಜ್ವಾನ್ ಅರ್ಷದ್‌ಗೆ ಗೋಪಾಲಗೌಡರು ಹೇಳಿದರು.

# 501 ಗಿಡ ನೆಟ್ಟ ಶಾಲಾ ಮಕ್ಕಳು

## 'ಮಗುವಿಗೊಂದು ಗಿಡ, ಶಾಲೆಗೊಂದು ವನ' ಅಭಿಯಾನ

ಪ್ರಜಾವಾಣಿ ವಾರ್ತೆ

**ಕೆ.ಆರ್‌.ಪುರ:** ಭಾರತೀಯ ಸ್ತ್ರೀ ಶಕ್ತಿ ಸಂಘಟನಾ ಟ್ರಸ್ಟ್ ಮತ್ತು ಮಿಡಿತ ಫೌಂಡೇಶನ್ ಸಹಯೋಗದಲ್ಲಿ ಚನ್ನಸಂದ್ರದ ಎ.ಕೆ.ಗೋಪಾಲ್ ಬಡಾವಣೆಯ ಸರ್ಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ 'ಮಗುವಿಗೊಂದು ಗಿಡ ಶಾಲೆಗೊಂದು ವನ' ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಅಭಿಯಾನದಲ್ಲಿ ಭಾಗವಹಿಸಿದ್ದ ಗಣ್ಯರು ಹಾಗೂ ಸ್ವಯಂ ಸೇವಕರೊಂದಿಗೆ ಸೇರಿ ಮಕ್ಕಳು 501 ಗಿಡಗಳನ್ನು ನೆಟ್ಟು ಮುಂದಿನ ದಿನಗಳಲ್ಲಿ ಪೋಷಿಸುವ ಪ್ರತಿಜ್ಞೆ ಮಾಡಿದರು.

ಬಿಜೆಪಿ ರಾಜ್ಯ ಪರಿಷತ್ತು ಸದಸ್ಯ ಎಲ್.ರಾಜೇಶ್ ಮಾತನಾಡಿ, 'ಒಂದು ಮರ ವರ್ಷಕ್ಕೆ 150 ಕೆ.ಜಿಗೂ ಹೆಚ್ಚು ಆಮ್ಲಜನಕ ನೀಡುತ್ತದೆ. ಇದೆ ರೀತಿ ಒಂದು ಬೈಕ್ ಅಥವಾ ಕಾರ್ ವರ್ಷಕ್ಕೆ 250 ಕೆ.ಜಿಗೂ ಹೆಚ್ಚು ಕಾರ್ಬನ್ ಡೈಆಕ್ಸೈಡ್ ಹೊರಬಿಡುತ್ತದೆ. ಆದ್ದರಿಂದ ಗಿಡ ನೆಡುವ ಮೂಲಕ ಪ್ರಕೃತಿಗೆ ಒಳ್ಳೆಯದು ಮಾಡಬೇಕು, ಇಲ್ಲದಿದ್ದರೆ ಪ್ರಕೃತಿ ವಿಕೋಪ ಆಗುತ್ತದೆ' ಎಂದರು.


ಶಾಲಾ ಮಕ್ಕಳು ಗಣ್ಯರೊಂದಿಗೆ ಗಿಡಗಳನ್ನು ನೆಟ್ಟರು

ಮಿಡಿತ ಫೌಂಡೇಶನ್ ಅಧ್ಯಕ್ಷ ಪರಿಸರ ಮಂಜುನಾಥ್ ಮಾತನಾಡಿ, 'ಒಂದು ಎಕರೆ ಖಾಲಿ ಜಾಗದಲ್ಲಿ 501 ಗಿಡಗಳನ್ನು ನೆಡಲಾಗಿದೆ. ಅರಳಿ, ಆಲ, ಬೇವು, ಮಾವು, ಸಂಪಿಗೆ, ಮರಗಲು, ಹೊಂಗೆ, ಕಾಡುಮಲ್ಲಿಗೆ, ತೊರೆಮತ್ತಿ, ಕದಂಬ, ನೇರಳೆ, ಸೀಬೆ, ಗಸೆಗಸೆ, ಬಾದಾಮಿ ಗಿಡಗಳನ್ನು ನೆಡಲಾಗಿದೆ' ಎಂದು ಹೇಳಿದರು.

ಮಹದೇವಪುರ ಟಾಸ್ಕ್ ಫೋರ್ಸ್ ಆರೋಗ್ಯ ಮತ್ತು ವಿಪತ್ತು ನಿರ್ವಹಣಾ ಘಟಕದ ಅಧ್ಯಕ್ಷ ಗುಟ್ಟ ಮಾರಪ್ಪ, ಭಾರತೀಯ ಸ್ತ್ರೀ ಶಕ್ತಿ ಸಂಘಟನಾ ಟ್ರಸ್ಟ್ ಅಧ್ಯಕ್ಷೆ ಭಾಗ್ಯ, ಭೀಮ್ ಪ್ರಜಾಸಂಘದ ಅಧ್ಯಕ್ಷ ವೈಟ್ ಫೀಲ್ಡ್ ಮುರುಗೇಶ್, ಮುಖ್ಯ ಶಿಕ್ಷಕಿ ಪ್ರೇಮಾಕುಮಾರಿ ಉಪಸ್ಥಿತರಿದ್ದರು.

# ಕವನ ವಾಚನ ಸ್ಪರ್ಧೆಗೆ ಆಹ್ವಾನ

**ಬೆಂಗಳೂರು:** ಬಿಎಂಶ್ರೀ ಪ್ರತಿಷ್ಠಾನದಲ್ಲಿ ಕೆ. ಮೋಹನ್ ದೇವ್ ಆಳ್ವ–ಎಂ.ಕೆ. ಶೈಲಜಾ ಆಳ್ವ ಸ್ಥಾಪಿಸಿರುವ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ದತ್ತಿ, ದತ್ತಾತ್ರೇಯ ರಾಮಚಂದ್ರ ಬೇಂದ್ರೆ ದತ್ತಿ, ರೆವರೆಂಡ್ ಚೆನ್ನಪ್ಪ ದಾನಿ ಎಲ್ಲಪ್ಪ ಉತ್ತಂಗಿ ದತ್ತಿ, ಕೃಷ್ಣಮೂರ್ತಿ ಪುರಾಣಿಕ ದತ್ತಿಗಳ ಆಶ್ರಯದಲ್ಲಿ 10ರಿಂದ 16 ವರ್ಷದೊಳಗಿನವರಿಗೆ ಅಕ್ಟೋಬರ್ 12ರಂದು ಬೆಳಿಗ್ಗೆ 10ಕ್ಕೆ ಕವನ ವಾಚನ ಸ್ಪರ್ಧೆ ಏರ್ಪಡಿಸಲಾಗಿದೆ.

ಗೋವಿಂದ ಪೈ, ದ.ರಾ.ಬೇಂದ್ರೆ, ಕೃಷ್ಣಮೂರ್ತಿ ಪುರಾಣಿಕರ ಯಾವುದಾದರೂ ಒಂದು ಕವನವನ್ನು ಸ್ಪರ್ಧಿಗಳು ವಾಚಿಸಬೇಕು. ಪ್ರಥಮ ಬಹುಮಾನ ₹ 4,000, ದ್ವಿತೀಯ ಬಹುಮಾನ ₹ 3,000, ತೃತೀಯ ಬಹುಮಾನ ₹ 2,000 ನಗದು ಮತ್ತು ಪ್ರಮಾಣ ಪತ್ರ ಇರಲಿದೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವವರು ಅಕ್ಟೋಬರ್ 6ರ ಒಳಗೆ ಬಿಎಂಶ್ರೀ ಪ್ರತಿಷ್ಠಾನ ಕಚೇರಿ, 3ನೇ ಮುಖ್ಯರಸ್ತೆ, ಬಿಎಂಶ್ರೀ ಪ್ರತಿಷ್ಠಾನ ರಸ್ತೆ, ನರಸಿಂಹರಾಜ ಕಾಲೊನಿ, ಬೆಂಗಳೂರು–560004 ಇಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗಾಗಿ–9972812127 ಸಂಪರ್ಕಿಸಬಹುದು ಎಂದು ಬಿಎಂಶ್ರೀ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜ ತಿಳಿಸಿದ್ದಾರೆ.

## ನಗರದಲ್ಲಿ ಇಂದು



**ಮೂರು ಪುಸ್ತಕಗಳು ಬಿಡುಗಡೆ:** ಎಚ್‌.ಎಸ್‌. ಶ್ರೀಮತಿ ಅವರ 'ಸ್ತ್ರೀವಾದೀ ಸಾಹಿತ್ಯ ವಿಮರ್ಶೆ', ಕೆ.ವಿ. ನಾರಾಯಣ ಅವರ 'ಹೊಸ ಓದುಗರಿಗೆ ಕುವೆಂಪು' ಮತ್ತು 'ಕನ್ನಡ ನುಡಿ ರಚನೆ–ಕೆಲವು ನೆಲೆಗಳು', ಪುಸ್ತಕ ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಪುಸ್ತಕ ಪರಿಚಯ: ಓ.ಎಲ್‌. ನಾಗಭೂಷಣಸ್ವಾಮಿ, ಕೆ.ವೈ. ನಾರಾಯಣಸ್ವಾಮಿ, ಶಶಿಕಲಾ ಎಚ್‌., ಆಯೋಜನೆ: ಆಕೃತಿ ಪುಸ್ತಕ, ಜೀರುಂಡೆ ಪುಸ್ತಕ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

**'ಹೆಗಲು' ಪುಸ್ತಕ ಬಿಡುಗಡೆ:** ಪ್ರೊ.ಎಂ.ಕೆ. ಶ್ರೀಧರ್ ಅವರ ಒಡನಾಡಿ ನರಸಿಂಹ ಅವರ ಕಾರ್ಯದ ಬಗ್ಗೆ, ಉಪಸ್ಥಿತಿ: ಮಲ್ಲೇಪುರಂ ಜಿ. ವೆಂಕಟೇಶ್, ಟಿ.ಎಸ್‌. ನಾಗಾಭರಣ, ಮಧು ಸಿಂಘಾಲ್, ಭಾರತಿ ಹೆಗಡೆ, ಆಯೋಜನೆ: ಬೆನಕ ಬುಕ್ಸ್ ಬ್ಯಾಂಕ್ ಯಳಗಲ್ಲು (ಕೋಡೂರು), ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 10.30

**ಸುವರ್ಣ ಮಹೋತ್ಸವ ಸಮಾರಂಭ: ಉದ್ಘಾಟನೆ:** ಎಚ್‌.ಕೆ. ಪಾಟೀಲ, ಅತಿಥಿಗಳು: ಎಚ್‌.ಎಂ. ರೇವಣ್ಣ, ತೇಜಸ್ವಿ ಸೂರ್ಯ, ಎಲ್‌.ಎ. ರವಿಸುಬ್ರಹ್ಮಣ್ಯ, ಟಿ.ಎಚ್‌.ಎಂ. ಕುಮಾರ್, ಎನ್‌. ವೆಂಕಟೇಶ್, ಬಿ.ಎಸ್‌. ಸತ್ಯನಾರಾಯಣ, ಎಂ. ವೆಂಕಟೇಶ್, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಆಯೋಜನೆ: ಅಶೋಕನಗರ ಸಹಕಾರ ಬ್ಯಾಂಕ್, ಸ್ಥಳ: ಶ್ರೀರಾಮ ಮಂದಿರ, ಎನ್‌.ಆರ್‌. ಕಾಲೊನಿ, ಬೆಳಿಗ್ಗೆ 10

**ಶಾಂತಲಾ ನೃತ್ಯವೈಭವ:** ಬೃಂದಾ, ದಿವಿಜಾ, ಅತಿಥಿ: ರೋಹಿಣಿ ಅನಂತ್, ಆಯೋಜನೆ: ಶಾಂತಲಾ ಆರ್ಟ್ಸ್ ಟ್ರಸ್ಟ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 10

**'ಆರ್ಗ್ಯಾನಿಕ್ ಸಂತೆ':** ಅತಿಥಿ: ಮಧುಸೂದನ್ ಹವಾಲ್ದಾರ್, ಪ್ರದರ್ಶನ: ಸರಸ್ವತಿ ಸಂಗೀತ ಶಾಲೆ, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 10

**ಬ್ರಹ್ಮಶ್ರೀ ನಾರಾಯಣ ಗುರುಗಳ 171ನೇ ಜಯಂತಿ ಆಚರಣೆ:** ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಸತೀಶ್ ರೆಡ್ಡಿ, ಅತಿಥಿಗಳು: ಎಚ್‌. ಆಂಜನೇಯ, ಪಿತಾಂಬರ ಹೆರಾಜೆ, ಶಾಂತಾರಾಮ್, ಆಯೋಜನೆ: ಬಿಲ್ಲವ ಅಸೋಸಿಯೇಷನ್ ಬೆಂಗಳೂರು, ಸ್ಥಳ: ದೇವಕಿ ಆನಂದ ಸುವರ್ಣ ಕನ್ವೆನ್ಷನ್ ಹಾಲ್, ಬಿಲ್ಲವ ಭವನ, ಬನ್ನೇರುಘಟ್ಟ ರಸ್ತೆ, ಹುಳಿಮಾವು, ಬೆಳಿಗ್ಗೆ 10.30

**26ನೇ ವರ್ಷದ ಸರ್ವಸದಸ್ಯರ ಸಭೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ:** ಉದ್ಘಾಟನೆ: ರಾಮಲಿಂಗಾರೆಡ್ಡಿ, ಮುಖ್ಯ ಅತಿಥಿಗಳು: ಎಂ. ಕೃಷ್ಣಪ್ಪ, ಹನುಮಂತರಾಯಪ್ಪ, ನಾಗೇಂದ್ರ ಡಿ.ಎಲ್‌., ಉಮಾಪತಿ ಶ್ರೀನಿವಾಸ ಗೌಡ, ಅಂಜನಪ್ಪ ವಿ., ಪ್ರತಿಭಾ ಪುರಸ್ಕಾರ ವಿತರಣೆ: ರಾಮಚಂದ್ರ ಆರ್‌., ಶಿಲ್ಪ ಎಂ., ಶಿಕ್ಷಣ ನಿಧಿ ಚೆಕ್ ವಿತರಣೆ: ಅಬ್ದುಲ್ ಅಹದ್, ಅಧ್ಯಕ್ಷತೆ: ಚಿಕ್ಕಭೈರಪ್ಪ ಎಸ್‌.ಎಂ., ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನೌಕರರ ಪತ್ತಿನ ಸಹಕಾರ ಸಂಘ, ಸ್ಥಳ: ಸರ್. ಪುಟ್ಟಣ್ಣ ಚೆಟ್ಟಿ ಪುರಭವನ (ಟೌನ್ ಹಾಲ್), ಜೆ.ಸಿ.ರಸ್ತೆ, ಬೆಳಿಗ್ಗೆ 10.30

**17ನೇ ವಾರ್ಷಿಕ ಸಭೆ:** ಅತಿಥಿ: ಪ್ರೊ.ಎಸ್‌. ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಚನ್ನೇಗೌಡ ಸಿ., ಆಯೋಜನೆ: ಕನಕಲೋಕ ಸೌಹಾರ್ದ ಕ್ರೆಡಿಟ್ ಸಹಕಾರಿ, ಸ್ಥಳ: ಅಯೋಧ್ಯ ವೈಭವ ಪಾರ್ಟಿಹಾಲ್, ಮೂಡಲಪಾಳ್ಯ ವೃತ್ತ, ನಾಗರಬಾವಿ, ಬೆಳಿಗ್ಗೆ 10.30

**ಪರಿಸರದ ಕುರಿತಾಗಿ 3ರಿಂದ 10 ವರ್ಷದೊಳಗಿನ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ:** ಆಯೋಜನೆ: ಕರ್ನಾಟಕ ಜೀವವೈವಿಧ್ಯ ಮಂಡಳಿ, ಸ್ಥಳ: ರಂಗೋಲಿ ಮೆಟ್ರೊ ಕಲಾ ಕೇಂದ್ರ, ಎಂ.ಜಿ.ರಸ್ತೆ, ಬೆಳಿಗ್ಗೆ 10.30

**ಬಿ.ಆರ್‌.ಎಲ್ 79:** ಬಿ.ಆರ್‌. ಲಕ್ಷ್ಮಣರಾವ್ ಅವರ 'ವಿಪುಲ ರೂಪಧಾರಿಣಿ' ಪುಸ್ತಕ ಬಿಡುಗಡೆ, 'ಕೊಂಚ ಸಮಯ ಬೇಕು' ದೃಶ್ಯ ಗೀತೆಗಳ ಜನಾರ್ಪಣೆ, ಅತಿಥಿಗಳು: ಚ.ಹ. ರಘುನಾಥ್, ಎಚ್‌.ಎಸ್‌. ಸತ್ಯನಾರಾಯಣ, ಉಪಸ್ಥಿತಿ: ಬಿ.ಆರ್‌. ಲಕ್ಷ್ಮಣರಾವ್, ಮೃತ್ಯುಂಜಯ ದೊಡ್ಡವಾಡ, ಅನನ್ಯಾ ಭಟ್, ಆಯೋಜನೆ: ಸಪ್ನ ಬುಕ್, ಸಂಗೀತ ಧಾಮ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾಭವನ, ಎನ್‌.ಆರ್‌. ಕಾಲೊನಿ, ಬೆಳಿಗ್ಗೆ 10.30

**ಪ್ರೊ. ತಳುಕಿನ ವೆಂಕಣ್ಣಯ್ಯ ಸುಬ್ರಹ್ಮಣ್ಯ ಸ್ಮಾರಕ ಸಾಹಿತ್ಯ ಪ್ರಶಸ್ತಿ, ಶಿಕ್ಷಕ ರತ್ನ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿ ವೇತನ ಹಾಗೂ ಪ್ರತಿಭಾ ಪುರಸ್ಕಾರ:** ಮುಖ್ಯ ಅತಿಥಿ: ಎಲ್‌.ಎಸ್‌. ಶಾಮಸುಂದರ ಶರ್ಮ, ಅಧ್ಯಕ್ಷತೆ: ಎನ್‌. ಸತ್ಯಪ್ರಕಾಶ್, 'ಪ್ರೊ.ತಳುಕಿನ ವೆಂಕಣ್ಣಯ್ಯ ಸುಬ್ರಹ್ಮಣ್ಯ ಸ್ಮಾರಕ ಸಾಹಿತ್ಯ' ಪ್ರಶಸ್ತಿ: ಸೂರ್ಯಪ್ರಕಾಶ್ ಪಂಡಿತ್, 'ಶಿಕ್ಷಕ ರತ್ನ' ಪ್ರಶಸ್ತಿ: ಚಿದಂಬರ ಎ., ಶಾಂತಾ ನಾಗೇಶ್, ಸಿ.ವಿ. ಪದ್ಮ, ಕವಿತಾ ನಾರಾಯಣ್, ಕಾಗಿನ್‌ಕರ್, 'ವಿಶೇಷ ಶಿಕ್ಷಕ' ಪ್ರಶಸ್ತಿ: ಭಾನುಮತಿ ಎಂ.ಜಿ., ಆಯೋಜನೆ: ಜ್ಞಾನದೀಪಿಕ ಶೈಕ್ಷಣಿಕ ದತ್ತಿ, ಸ್ಥಳ: ಗೋಲ್ಡನ್ ಜುಬಲಿ ಹಾಲ್, ಎಂಇಎಸ್ ಟೀಚರ್ಸ್ ಕಾಲೇಜು, ರಾಜಾಜಿನಗರ 2ನೇ ಬ್ಲಾಕ್, ಬೆಳಿಗ್ಗೆ 10.30

**ತಿಂಗಳ ಕವಿಗೋಷ್ಠಿ–ಗೀತ ಗಾಯನ–ಪ್ರಶಸ್ತಿ ಪ್ರದಾನ:** ಬಿ.ಜೆ. ಕುಲಕರ್ಣಿ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಅತಿಥಿ: ವಿನೋದ, ಉಪಸ್ಥಿತಿ: ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ಸಂತವಾಣಿ ಪಿ. ಸುಧಾಕರ್, ಯು. ಸಿರಾಜ್ ಅಹಮದ್ ಸೊರಬ, ಶಿವಪ್ರಸಾದ್ ಆರಾಧ್ಯ ಮಲ್ಲರಬಾಣವಾಡಿ, ಸಿ. ಪ್ರಸನ್ನಕುಮಾರ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30



**ವೈಭವ ಗಣೇಶೋತ್ಸವ:** ಮಂಗಳಾರತಿ, ಅನ್ನಸಂತರ್ಪಣೆ ಹಾಗೂ ಕಲಾ ಜಾಥಾ ವೈಭವ, ಆಯೋಜನೆ: ವೈಭವ ಗಣೇಶ ಹಿಂದೂ ಧಾರ್ಮಿಕ ಸೇವಾ ಪ್ರತಿಷ್ಠಾನ, ಜಯಂತ್ ಸೇವಾ ಫೌಂಡೇಷನ್, ಸ್ಥಳ: ಆಲದಮರದ ಸರ್ಕಲ್, ಆರ್‌ಟಿಒ ರಸ್ತೆ, ರೈಲ್ವೆ ಲೇಔಟ್, ಮಲ್ಲತ್ತಹಳ್ಳಿ, ಮಧ್ಯಾಹ್ನ 1



**ಕರ್ನಾಟಕ ಶಾಸ್ತ್ರೀಯ ಸಂಗೀತ:** ಗಾಯನ: ಆರ್‌.ಎಸ್‌. ನಂದಕುಮಾರ್, ಪಿಟೀಲು: ವೀಣಾ ಸುರೇಶ್, ಮೃದಂಗ: ರಾಮಾನುಜಂ, ಖಂಜಿರ: ಲತಾ ರಾಮಾಚಾರ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್‌. ರಸ್ತೆ, ಸಂಜೆ 5.30

**'ಏಕಾದಶಿ ಮಹಾತ್ಮೆ' ಯಕ್ಷಗಾನ ಪ್ರದರ್ಶನ:** ಭಾಗವತರು: ಗಿರೀಶ್ ರೈ ಕಕ್ಕೇಪದವು, ದೇವರಾಜ್ ಆಚಾರ್ಯ, ಚಂಡೆ ಮದ್ದಳೆ: ಚಂದ್ರಶೇಖರ ಸರಪಾಡಿ, ಶ್ರೀಧರ ವಿಟ್ಲ, ಚಕ್ರತಾಳ: ವಸಂತ ವಾಮದಪದವು, ಹಾಸ್ಯ: ಮಹೇಶ ಮಣಿಯಾಣಿ, ಸ್ತ್ರೀ ವೇಷ: ಪ್ರಶಾಂತ್ ಶೆಟ್ಟಿ ನೆಲ್ಯಾಡಿ, ಸತೀಶ್ ನೀರ್ಕೆರೆ, ಚರಣ್ ಗೌಡ, ಆಯೋಜನೆ: ಯಕ್ಷಮಿತ್ರರು ಬಸವೇಶ್ವರನಗರ, ಸ್ಥಳ: ಬಯಲು ರಂಗಮಂದಿರ, ವಿ.ಎಲ್‌.ಎಸ್‌. ಶಾಲಾ ಪಕ್ಕದ ಮೈದಾನ, ಶಾರದಾ ಕಾಲೊನಿ, ಬಸವೇಶ್ವರನಗರ, ಮಧ್ಯಾಹ್ನ 2.30

**'ಯಕ್ಷಚಂದ್ರ' ಪುಸ್ತಕ ಬಿಡುಗಡೆ ಮತ್ತು 'ಶರಸೇತು ಬಂಧನ' ಯಕ್ಷಗಾನ ಪ್ರದರ್ಶನ:** ಅಧ್ಯಕ್ಷತೆ: ದಿನಕರ ಶೆಟ್ಟಿ, ಉಪಸ್ಥಿತಿ: ಕೆ.ಈ. ರಾಧಾಕೃಷ್ಣ, ವಿಶ್ವೇಶ್ವರ ಭಟ್, ಬಳ್ಕೂರು ಕೃಷ್ಣಯಾಜಿ, ಟಿ.ಎಸ್‌. ಸತ್ಯವತಿ, ಅಜಿತ್ ಹೆಗ್ಡೆ ಶಾನಾಡಿ, ಕೊಂಡದಕುಳಿ ರಾಮಚಂದ್ರ ಹೆಗಡೆ, ರವಿಶಂಕರ್ ಭಟ್, ದೀಪಕ್ ಶೆಟ್ಟಿ ಬಾರ್ಕೂರು, ಆರ್‌.ಜಿ. ಭಟ್ ವರ್ಗಾಸುರ, ಮೋಹನ ಹೆಗಡೆ ಹೆರವಟ್ಟಾ, ಮಾರುತಿಪ್ರಸಾದ್, ಸ್ಥಳ: ಪ್ರಸನ್ನ ವೀರಾಂಜನೇಯ ದೇವಸ್ಥಾನ, ಮಹಾಲಕ್ಷ್ಮೀ ಲೇಔಟ್, ಮಧ್ಯಾಹ್ನ 3.30



ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

**'ಸಡನ್ನಾಗ್ ಸತ್ತೋದ್ರೆ?!' ನಾಟಕ ಪ್ರದರ್ಶನ:** ರಚನೆ ಮತ್ತು ನಿರ್ದೇಶನ: ಶೈಲೇಶ್ ಕುಮಾರ್ ಎಂ.ಎಂ., ತಂಡ: ಸ್ಪೈಡ್ ವಿಂಗ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 7


# ‘ಉಪಜಾತಿ ನಮೂದಿಸಬೇಡಿ’

## ಜಾತಿ ಕಾಲಂ: ಕರ್ನಾಟಕ ರಾಜ್ಯ ಪ್ರವರ್ಗ–1ರ ಜಾತಿಗಳ ಒಕ್ಕೂಟದ ಅಧ್ಯಕ್ಷ ಹೇಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ಜಾತಿಯ ಕಾಲಂನಲ್ಲಿ ಯಾವುದೇ ಕಾರಣಕ್ಕೂ ಉಪಜಾತಿಯ ವಿವರವನ್ನು ನಮೂದಿಸಬಾರದು. ಒಂದು ವೇಳೆ ಹಾಗೆ ಬರೆಸಿದರೆ ಈ ಹಿಂದಿನ ಸಮೀಕ್ಷೆಯ ವರದಿಯಂತೆ ಸಮುದಾಯದ ಜನಸಂಖ್ಯೆಯ ಬಗ್ಗೆ ಸ್ಪಷ್ಟತೆ ದೊರೆಯುವುದಿಲ್ಲ’ ಎಂದು ಕರ್ನಾಟಕ ರಾಜ್ಯ ಪ್ರವರ್ಗ–1ರ ಜಾತಿಗಳ ಒಕ್ಕೂಟದ ಅಧ್ಯಕ್ಷ, ವಿಧಾನಪರಿಷತ್ ಸದಸ್ಯ ಡಿ.ಟಿ.ಶ್ರೀನಿವಾಸ್ ತಿಳಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗೊಲ್ಲ ಜಾತಿಯಲ್ಲಿ ಅನೇಕ ಉಪಜಾತಿಗಳನ್ನು ನಮೂದಿಸಲಾಗಿರುತ್ತದೆ. ಆದರೆ, ಮುಖ್ಯವಾದ ಜಾತಿ ಯಾವುದೆಂದು ಮನಗಂಡು, ಗೊಲ್ಲ ಎಂಬ ಜಾತಿಯನ್ನು ಮಾತ್ರ ಬರೆಯಿಸಬೇಕಿದೆ. ಯಾದವ, ಹಣಬರು, ಕಾಡುಗೊಲ್ಲ ಇತ್ಯಾದಿ ಉಪಜಾತಿಗಳನ್ನು ಜಾತಿ ಕಾಲಂನಲ್ಲಿ ನಮೂದಿಸಿದಾಗ ನಮ್ಮ ಜಾತಿಯ ಸಂಖ್ಯೆ ಕಡಿಮೆಯಾಗಿ, ಮೀಸಲಾತಿ ಪ್ರಮಾಣ ಕಡಿಮೆ ಆಗುತ್ತದೆ.



ಡಿ.ಟಿ. ಶ್ರೀನಿವಾಸ್

ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಮುಂದೆ ಬರಲು ಸಾಧ್ಯವಾಗುವುದಿಲ್ಲ’ ಎಂದರು.

‘ಒಕ್ಕೂಟದ ಅಡಿಯಲ್ಲಿ ಬರುವ ಎಲ್ಲ ಜಾತಿಗಳು ಕುಟುಂಬದ ವಿವರವನ್ನು ಒದಗಿಸಬೇಕು. ಜಾತಿಯ ಕಾಲಂನಲ್ಲಿ ಮೂಲ ಜಾತಿಯನ್ನು ಮಾತ್ರ ನಮೂದಿಸಬೇಕು. ಉಪಜಾತಿಯ ಮಾಹಿತಿ ಇದ್ದಲ್ಲಿ ಬೇರೆ ಕಡೆ ನಮೂದಿಸಬೇಕು’ ಎಂದು ಹೇಳಿದರು.

‘ಪ್ರವರ್ಗ 1ರ ಒಕ್ಕೂಟದ ಅಡಿ 97 ಜಾತಿಗಳು ಹಾಗೂ 376 ಉಪಜಾತಿಗಳು ಸೇರಿ ಸುಮಾರು 75 ಲಕ್ಷಕ್ಕೂ ಅಧಿಕ ಜನಸಂಖ್ಯೆಯಿದೆ. ಅಲೆಮಾರಿ ಜನಾಂಗಗಳಾದ ಗೊಲ್ಲ, ಕಾಡುಗೊಲ್ಲ, ದೊಂಬಿದಾಸರು, ಜೋಗಿಗಳು ಸೇರಿ 46 ಜಾತಿಗಳ ಜನರ ಜೀವನ ಹೀನಾಯ ಸ್ಥಿತಿಗೆ ತಲುಪಿದೆ. ಆದ್ದರಿಂದ ಪ್ರವರ್ಗ 1ರಡಿ ಬರುವ ಜಾತಿಗಳಿಗೆ ಮೀಸಲಾತಿ ಹೆಚ್ಚಿಸಿ, ವಿವಿಧ ಸರ್ಕಾರಿ ಸೌಲಭ್ಯಗಳನ್ನು ಒದಗಿಸಬೇಕು’ ಎಂದು ಆಗ್ರಹಿಸಿದರು.

### ‘ಹಿಂದೂ, ಮರಾಠವೆಂದು ನಮೂದಿಸಿ’

‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಮರಾಠರು ಧರ್ಮದ ಕಾಲಂನಲ್ಲಿ ‘ಹಿಂದೂ’ ವೆಂದು, ಜಾತಿಯ ಕಾಲಂನಲ್ಲಿ ‘ಮರಾಠ’ರೆಂದು ನಮೂದಿಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಎಂ.ಜಿ.ಮುಳೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮನೆ ಮನೆಗೆ ಬರುವ ಗಣತಿದಾರರಿಗೆ ಸಮರ್ಪಕ ಮಾಹಿತಿ ಒದಗಿಸಬೇಕು. ಉಪಜಾತಿ ಕಾಲಂನಲ್ಲಿ ಕುಣಬಿ, ಮಾತೃಭಾಷೆ ಕಾಲಂನಲ್ಲಿ ಮರಾಠಿ ಎಂದು ನಮೂದಿಸಬೇಕು. ರಾಜ್ಯದಲ್ಲಿ ಮರಾಠ ಸಮುದಾಯದ ಜನಸಂಖ್ಯೆ 40 ಲಕ್ಷಕ್ಕಿಂತ ಅಧಿಕವಿದೆ. ಆದರೆ, ಸರ್ಕಾರವು 16 ಲಕ್ಷವೆಂದು ಈ ಹಿಂದೆ ತೋರಿಸಿದೆ. ಸಮುದಾಯದ ಜನಸಂಖ್ಯೆ ಸರ್ಕಾರಕ್ಕೆ ನಿಖರವಾಗಿ ತಿಳಿಯಲು ಪ್ರತಿಯೊಬ್ಬರೂ ಹಿಂದುಳಿದ ವರ್ಗಗಳ ಆಯೋಗ ನಡೆಸಲಿರುವ ಈ ಸಮೀಕ್ಷೆಯಲ್ಲಿ ಭಾಗವಹಿಸಬೇಕು’ ಎಂದು ಹೇಳಿದರು.

ಮರಾಠ ಮುಖಂಡರಾದ ಸುರೇಶ್ ರಾವ್ ಸಾಟಿ, ಎಸ್.ಆರ್.ಸಿಂಧೆ, ಟಿ.ಆರ್.ಸುನಿಲ್ ಚೌಹಾಣ್, ವೆಂಕಟರಾವ್ ಉಪಸ್ಥಿತರಿದ್ದರು.

# ಮಲ್ಟಿಪ್ಲೆಕ್ಸ್‌ಗಳಲ್ಲಿ ಟಿಕೆಟ್ ದರ ₹236

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಲ್ಟಿಪ್ಲೆಕ್ಸ್ ಸೇರಿದಂತೆ ಎಲ್ಲ ಚಿತ್ರಮಂದಿರಗಳಲ್ಲಿ ಟಿಕೆಟ್ ದರವನ್ನು (ತೆರಿಗೆ ಬಿಟ್ಟು) ಗರಿಷ್ಠ ₹200ಕ್ಕೆ ನಿಗದಿಪಡಿಸಿ ಗೃಹ ಇಲಾಖೆ ಶುಕ್ರವಾರ ಅಧಿಸೂಚನೆ ಹೊರಡಿಸಿತ್ತು. ಇದರ ಬೆನ್ನಲ್ಲೇ ರಾಜ್ಯದ ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾ ಟಿಕೆಟ್ ದರ ₹236 (ಶೇ 18 ಜಿಎಸ್‌ಟಿ ಒಳಗೊಂಡು) ಆಗಿದೆ.

ಶನಿವಾರವೇ(ಸೆ.13) ಈ ದರ ಜಾರಿಯಾಗಿದೆ. ಏಕಪರದೆ ಚಿತ್ರಮಂದಿರಗಳು ₹100–₹150ರ ಟಿಕೆಟ್ ದರವನ್ನು ಮುಂದುವರಿಸಿವೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಕ್ಲಾಸಿಕ್, ಕ್ಲಾಸಿಕ್ ಪ್ಲಸ್, ಪ್ರೈಂ, ಎಕ್ಸ್‌ಟ್ರಾ ಲೆಗ್‌ರೂಂ, ರಿಕ್ಲೈನರ್ ಎಂಬ ಹೆಸರಿನಲ್ಲಿ ವಿಭಾಗಗಳಿದ್ದು, ಇವುಗಳೆಲ್ಲವುದಕ್ಕೂ ₹230–₹236 ದರ ನಿಗದಿಯಾಗಿದೆ. ಈ ಮೊದಲು ಕ್ಲಾಸಿಕ್ ವಿಭಾಗದಲ್ಲಿರುವ ಸೀಟಿಗೆ ಕಡಿಮೆ ದರ, ಪ್ರೈಂಗೆ ಅದಕ್ಕಿಂತ ಹೆಚ್ಚು ಹಾಗೂ ರಿಕ್ಲೈನರ್‌ಗಳಿಗೆ ₹500ಕ್ಕಿಂತಲೂ ಅಧಿಕ ದರವಿತ್ತು. ಪರಭಾಷಾ ನಟರ ಚಿತ್ರಗಳು ಬಂದ ಸಂದರ್ಭದಲ್ಲಿ ಪ್ರೈಂ, ರಿಕ್ಲೈನರ್‌ಗಳ ದರ ₹1000 ತಲುಪಿದ ಉದಾಹರಣೆಗಳಿವೆ.

> **ಟಿಕೆಟ್ ದರ ಹೆಚ್ಚಿದ್ದರೆ ಸಿನಿಮಾ ನೋಡುವುದಿಲ್ಲ ಎನ್ನುವ ಕಾರಣಕ್ಕೇ ಈ ಮಿತಿ ಹಾಕಲಾಗಿದೆ. ಏಕಪರದೆ ಚಿತ್ರಮಂದಿರಗಳಲ್ಲಿ ಇದ್ದ ದರವೇ ಮುಂದುವರಿಯಲಿದೆ**
> **ಕೆ.ವಿ.ಚಂದ್ರಶೇಖರ್,** ಪ್ರದರ್ಶಕರ ಸಂಘದ ಅಧ್ಯಕ್ಷ

ಇದೀಗ ಮಲ್ಟಿಪ್ಲೆಕ್ಸ್‌ಗಳಲ್ಲಿ ಎಲ್ಲಾ ಸೀಟ್‌ಗಳಿಗೆ ₹236 ಟಿಕೆಟ್ ದರವಿದೆ. ಐಮ್ಯಾಕ್ಸ್‌ನಲ್ಲೂ ಕಡಿಮೆ ದರದಲ್ಲೇ ಸಿನಿಮಾ ನೋಡುವ ಅವಕಾಶ ಇದೀಗ ಜನರಿಗೆ ಒದಗಿದೆ. ಮಲ್ಟಿಪ್ಲೆಕ್ಸ್‌ಗಳು ಈ ಹಿಂದೆ ವಾರದ ದಿನಗಳಲ್ಲಿ ಕ್ಲಾಸಿಕ್, ಕ್ಲಾಸಿಕ್ ಪ್ಲಸ್ ಸೀಟುಗಳಿಗೆ ₹180–₹200ರವರೆಗೆ ಟಿಕೆಟ್ ದರ ನಿಗದಿಪಡಿಸುತ್ತಿದ್ದವು. ಮುಂದಿನ ವಾರದ ಟಿಕೆಟ್ ದರವನ್ನು ಗಮನಿಸಿದಾಗ ವಾರದ ದಿನಗಳಲ್ಲೂ ₹236 ದರವನ್ನು ಹಲವು ಮಲ್ಟಿಪ್ಲೆಕ್ಸ್‌ಗಳು ಮುಂದುವರಿಸಿವೆ. ಈ ಮೂಲಕ ಟಿಕೆಟ್ ದರ ಇಳಿಕೆಯ ನಷ್ಟವನ್ನು ಸರಿದೂಗಿಸಲು ಮಲ್ಟಿಪ್ಲೆಕ್ಸ್‌ಗಳ ಮುಂದಾಗಿವೆ. ಇದು ಕನ್ನಡ ಸಿನಿಮಾಗಳಿಗೆ ಹೊಡೆತ ನೀಡುವ ಸಾಧ್ಯತೆ ಇದೆ.

### ಆತಂಕಪಡಬೇಕಾಗಿಲ್ಲ ನರಸಿಂಹಲು

ಸರ್ಕಾರದ ಈ ಆದೇಶದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು, ‘ಟಿಕೆಟ್ ದರ ಮಿತಿಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿದ್ದವರು, ಸಮಿತಿಯ ಸದ್ಯಸರೆಲ್ಲರೂ ಕಾರಣರು. ಪ್ರಮುಖವಾಗಿ ಸಾ.ರಾ. ಗೋವಿಂದು ಅವರು ಸತತವಾಗಿ ಈ ಬಗ್ಗೆ ಸರ್ಕಾರದ ಜೊತೆ ಚರ್ಚೆ ನಡೆಸಿದ್ದರು. ಟಿಕೆಟ್ ದರ ಕಡಿಮೆ ಇದ್ದ ಸಂದರ್ಭದಲ್ಲಿ ಇಡೀ ಕುಟುಂಬವೇ ಚಿತ್ರಮಂದಿರಗಳಿಗೆ ಬರಲಿದೆ. ಗಳಿಕೆ ಕೊಂಚ ಕಮ್ಮಿ ಆಗಬಹುದು. ಆದರೆ ಹೆಚ್ಚಿನ ಜನರು ಸಿನಿಮಾ ನೋಡಿದ ಸಂದರ್ಭದಲ್ಲಿ ಅದು ಸರಿಹೊಂದಲಿದೆ. ಹೀಗಾಗಿ ದೊಡ್ಡ ಸಿನಿಮಾ ಮಾಡುವವರು ಯಾರೂ ಆತಂಕಪಡಬೇಕಾಗಿಲ್ಲ’ ಎಂದರು.

# ‘ದಾಳಿಂಬೆ ಫಾರ್ಮ್ ಟೂರಿಸಂ’ಗೆ ಚಾಲನೆ

## ಪೋಮೆಕ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಸಹಯೋಗದಲ್ಲಿ ಹೊಸ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

**ಯಲಹಂಕ:** ತಾಲ್ಲೂಕಿನ ನಾಗದಾಸನಹಳ್ಳಿಯ ಎನ್‌ಸಿಆರ್ ಫಾರ್ಮ್‌ನಲ್ಲಿ ಪೋಮೆಕ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಸಹಯೋಗದಲ್ಲಿ ಇದೇ ಮೊದಲ ಬಾರಿಗೆ ‘ದಾಳಿಂಬೆ ಫಾರ್ಮ್ ಟೂರಿಸಂ’ ಕಾರ್ಯಕ್ರಮ ಆಯೋಜಿಸಲಾಗಿತ್ತು.

‘ತೋಟದಲ್ಲಿ ನಡೆದಾಡುತ್ತ, ಗಿಡದಿಂದ ನೀವೇ ಹಣ್ಣು ಕಿತ್ತು, ಮನೆಗೆ ತೆಗೆದುಕೊಂಡು ಹೋಗಿ’ ಎಂಬ ಪರಿಕಲ್ಪನೆಗೆ ನಾಗರಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಅಶೋಕ್ ಸಂಗಪ್ಪ ಆಲೂರ್, ‘ಇದೊಂದು ವಿನೂತನ ಕಾರ್ಯಕ್ರಮವಾಗಿದ್ದು, ರೈತರು ನೇರವಾಗಿ ಗ್ರಾಹಕರನ್ನು ಸಂಪರ್ಕಿಸುವ ಒಳ್ಳೆಯ ಪ್ರಯತ್ನವಾಗಿದೆ. ಇದರಿಂದ ರೈತರಿಗೆ ನ್ಯಾಯಸಮ್ಮತ ಬೆಲೆ ದೊರಕಿಸಲು ಸಹಾಯ ಮಾಡುವುದರ ಜೊತೆಗೆ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಣ್ಣುಗಳು ಕಡಿಮೆ ದರದಲ್ಲಿ ದೊರೆಯಲು ಅವಕಾಶ ಕಲ್ಪಿಸಿರುವುದು ಶ್ಲಾಘನೀಯ ಕಾರ್ಯ’ ಎಂದರು.



ಪ್ರೊ.ಅಶೋಕ್ ಸಂಗಪ್ಪ ಆಲೂರ್ ಅವರು ಎನ್‌ಸಿಆರ್ ಫಾರ್ಮ್‌ನಲ್ಲಿ ದಾಳಿಂಬೆ ಹಣ್ಣುಗಳನ್ನು ವೀಕ್ಷಿಸಿದರು. ಚಂದ್ರ ಎನ್ ಆರ್, ಡಾ.ಸುನಿಲ್ ಡಿ ತಮಗಲೆ ಉಪಸ್ಥಿತರಿದ್ದರು

ರೈತ ಚಂದ್ರ ಅವರು, ಪ್ರತಿ ಕೆ.ಜಿ ದಾಳಿಂಬೆಯನ್ನು ಇಲ್ಲಿ ₹200ಕ್ಕೆ ಮಾರಾಟ ಮಾಡುತ್ತಿದ್ದರೆ, ಇದೇ ಹಣ್ಣು ಮಾರುಕಟ್ಟೆಯಲ್ಲಿ ₹400ಕ್ಕೆ ಮಾರಾಟವಾಗುತ್ತಿದೆ. ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸುವುದರಿಂದ ರೈತರಿಗೆ ಹೆಚ್ಚುವರಿ ಲಾಭ ಹಾಗೂ ಗ್ರಾಹಕರಿಗೆ ಉಳಿತಾಯವಾಗುವ ಮೂಲಕ ಇಬ್ಬರಿಗೂ ಲಾಭದಾಯಕ ಆಗುತ್ತದೆ ಎಂದರು.

ಉದ್ಘಾಟನಾ ಸಮಾರಂಭದ ಹೊತ್ತಿಗೆ ಒಂದು ಸಾವಿರ ಕೆ.ಜಿಯಷ್ಟು ಹಣ್ಣು ಮಾರಾಟವಾಗಿದ್ದಕ್ಕೆ ಅವರು ಹರ್ಷ ವ್ಯಕ್ತಪಡಿಸಿದರು.

ದಾಳಿಂಬೆ ಬೆಳೆ ಸಲಹೆಗಾರ ಡಾ.ಸುನಿಲ್.ಡಿ ತಮಗಲೆ ಮತ್ತು ಕೃಷಿ ಪದವೀಧರ ಡಾ.ಅಂಬರೀಶ್.ಬಿ.ಎನ್ ಹಾಗೂ ಪೋಮೆಕ್ಸ್ ಇಂಟರ್‌ನ್ಯಾಷನಲ್ ನಿರ್ವಾಹಕರು ಈ ಯೋಜನೆಯನ್ನು ಮುನ್ನಡೆಸುತ್ತಿದ್ದಾರೆ. ಎನ್‌ಸಿಆರ್ ಫಾರ್ಮ್‌ನಲ್ಲಿ ಜಿಯೋ-ಟ್ಯಾಗ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ರೈತ ಚಂದ್ರ.ಎನ್ ಆರ್ ಮಾತನಾಡಿ, ‘ಪ್ರತಿ ಮರದಿಂದ ಸರಾಸರಿ 30 ಕೆಜಿ ಹಣ್ಣು ದೊರೆಯುವ ನಿರೀಕ್ಷೆಯಿದ್ದು, ಪ್ರತಿ ಹಣ್ಣು 200ರಿಂದ 500ಗ್ರಾಂ ತೂಕ ಬರುತ್ತಿದೆ ಎಂದರು. ಗ್ರಾಹಕರು ದಾಳಿಂಬೆ ಕೃಷಿಯ ಬಗ್ಗೆಯೂ ಮಾಹಿತಿ ಪಡೆದುಕೊಂಡಿದ್ದು, ಅವರಿಂದ ಉತ್ತಮ ಸ್ಪಂದನೆ ದೊರೆತಿದೆ’ ಎಂದರು.

ರೈತರಾದ ಅರವಿಂದ್, ಗಿರೀಶ್, ನಂಜುಂಡಗೌಡ, ಡಾ.ದೇವರಾಜ್, ಮಹೇಶ್, ಮುನೇಗೌಡ, ಆನಂದ್, ಮಂಜುನಾಥ್, ರಾಜೇಂದ್ರ, ಹರೀಶ್ ಬಯ್ಯಣ್ಣ ಉಪಸ್ಥಿತರಿದ್ದರು.

70 ವರ್ಷದ ಡಾ.ಜಗದೀಶ್ ಅವರು 50 ಕೆಜಿ ಹಣ್ಣು ಖರೀದಿಸಿ, ರೈತರನ್ನು ನೇರವಾಗಿ ಗ್ರಾಹಕರಿಗೆ ಸಂಪರ್ಕಿಸುವ ಪ್ರಯತ್ನವನ್ನು ಶ್ಲಾಘಿಸಿದರು. ಭಾನುವಾರವೂ ಈ ಕಾರ್ಯಕ್ರಮ ಮುಂದುವರಿಯಲಿದೆ.

## ಬ್ರಿಟನ್‌ಗೆ ಕರ್ನಾಟಕದ ಆರು ಕುಲಪತಿಗಳ ನಿಯೋಗ ಕಳಿಸಲು ನಿರ್ಧಾರ

# ಗುಣಮಟ್ಟ ಕುಸಿತ: ಅಧ್ಯಯನಕ್ಕೆ ತಂಡ

• ಚಂದ್ರಹಾಸ ಹಿರೇಮಳಲಿ

**ಲಂಡನ್:** ವಿಶ್ವವಿದ್ಯಾಲಯಗಳ ಶಿಕ್ಷಣ ಹಾಗೂ ಸಂಶೋಧನಾ ಗುಣಮಟ್ಟ ಹೆಚ್ಚಿಸಲು ಬ್ರಿಟನ್ ಜತೆ ಸಹಯೋಗಕ್ಕೆ ಮುಂದಾಗಿರುವ ಕರ್ನಾಟಕ ಸರ್ಕಾರ, ಮೊದಲ ಹಂತದಲ್ಲಿ ರಾಜ್ಯದ ಆರು ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಅಧ್ಯಯನಕ್ಕೆ ಕಳುಹಿಸಿಕೊಡಲು ನಿರ್ಧರಿಸಿದೆ.

ರಾಜ್ಯದ ಹಲವು ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಗುಣಮಟ್ಟ ತೀವ್ರ ಕುಸಿಯುತ್ತಿದ್ದು, ಕೆಲವು ಕೋರ್ಸ್‌ಗಳಿಗೆ ಬೇಡಿಕೆ ಇಲ್ಲದಂತೆ ಆಗಿದೆ. ಶತಮಾನ ಪೂರೈಸಿರುವ ಹಳೆಯ ವಿಶ್ವವಿದ್ಯಾಲಯಗಳೂ ಬಾಗಿಲು ಮುಚ್ಚುವ ಸ್ಥಿತಿಗೆ ತಲುಪಿವೆ. ಇಂತಹ ಎಲ್ಲ ವಿಶ್ವವಿದ್ಯಾಲಯಗಳನ್ನು ಸಹಜ ಸ್ಥಿತಿಗೆ ತಂದು, ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಪೂರಕವಾಗಿ ಸಜ್ಜುಗೊಳಿಸಲು ಕೇಂಬ್ರಿಡ್ಜ್, ವೇಲ್ಸ್, ವೋಲ್ವರ್ ಹ್ಯಾಮ್ಟನ್ ಸೇರಿದಂತೆ ಬ್ರಿಟನ್‌ನ ಹಲವು ವಿಶ್ವವಿದ್ಯಾಲಯಗಳು ನೆರವು ನೀಡಲಿವೆ.

ಬ್ರಿಟನ್ ಪ್ರವಾಸದಲ್ಲಿರುವ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಈ ಕುರಿತು ಇಲ್ಲಿನ ವಿಶ್ವವಿದ್ಯಾಲಯಗಳ ಜತೆ ಮಾತುಕತೆ ನಡೆಸಿದರು. ಮೊದಲ ಹಂತದಲ್ಲಿ ಆರು ವಿಶ್ವವಿದ್ಯಾಲಯಗಳ ಕುಲಪತಿಗಳು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಎಂ.ಜಯಕರ್ ನೇತೃತ್ವದಲ್ಲಿ ಬ್ರಿಟನ್‌ಗೆ ಭೇಟಿ ನೀಡಿ, ಬೇಡಿಕೆ ಇರುವ ಕೋರ್ಸ್‌ಗಳು, ಕಲಿಕಾ ಪದ್ಧತಿ, ಪ್ರತಿ ಕೋರ್ಸ್‌ಗಳ ಅವಧಿ, ಉದ್ಯೋಗದ ಅವಕಾಶಗಳು, ಆಡಳಿತ ವ್ಯವಸ್ಥೆ, ಸಂಶೋಧನಾ ವಿಧಾನದ ಸ್ವರೂಪಗಳ ಕುರಿತು ಮಾಹಿತಿ ಕಲೆ ಹಾಕಲಿದ್ದಾರೆ. ನಂತರ ಕರ್ನಾಟಕದಲ್ಲೂ ಅಗತ್ಯ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲಿದ್ದಾರೆ.

### ಆರು ನಗರಗಳಲ್ಲಿ ಆರೋಗ್ಯ ಕೌಶಲ ಕೇಂದ್ರ

ಬ್ರಿಟನ್‌ನ ರಾಷ್ಟ್ರೀಯ ಆರೋಗ್ಯ ಸೇವೆಯ ಮಾದರಿಯಲ್ಲೇ ರಾಜ್ಯದ ವೈದ್ಯಕೀಯ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಕರ್ನಾಟಕ ಸರ್ಕಾರ ಒಪ್ಪಂದ ಮಾಡಿಕೊಂಡಿದೆ.

ಒಪ್ಪಂದ ಪ್ರಕಾರ ಬ್ರಿಟನ್ ಸಹಯೋಗದಲ್ಲಿ ಮೊದಲ ಹಂತದಲ್ಲಿ ಕಲಬುರಗಿ, ಗದಗ, ಬೆಂಗಳೂರು, ಮಂಗಳೂರು ದಾವಣಗೆರೆ, ಮೈಸೂರು ನಗರಗಳಲ್ಲಿ ತಲಾ ಒಂದು ಆರೋಗ್ಯ ಕೌಶಲ ಕೇಂದ್ರಗಳ ಸ್ಥಾಪನೆ ಮಾಡಲಾಗುತ್ತದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಜಿ. ಚಂದ್ರಶೇಖರ್ ಮತ್ತು ಹೋಲ್ವರ್ ಹ್ಯಾಮ್ಟನ್ ವಿಶ್ವವಿದ್ಯಾಲಯದ ಎನ್ ಎಚ್ ಎಸ್ ಟ್ರಸ್ಟ್ ನ ಸಿಇಒ ಕಾರ್ಡ್ವಿಕ್ ಜೋ, ಸಹ ಕುಲಪತಿ ಪ್ರಶಾಂತ್ ಪಿಳ್ಳೈ ಒಪ್ಪಂದಕ್ಕೆ ಸಹಿ ಹಾಕಿದರು.

ಒಪ್ಪಂದದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ‘ಬ್ರಿಟನ್‌ನ ಆರೋಗ್ಯ ಸೇವೆ ವಿಶ್ವಕ್ಕೆ ಮಾದರಿಯಾಗಿದೆ. ಎಲ್ಲ ಪ್ರಕಾರದ ರೋಗಗಳಿಗೂ ಸರ್ಕಾರವೇ ಉಚಿತ ಚಿಕಿತ್ಸೆ ನೀಡುತ್ತಿದೆ. ಇಲ್ಲಿನ ಗುಣಮಟ್ಟದ ಸೇವೆಯನ್ನು ಕರ್ನಾಟಕದಲ್ಲೂ ಅಳವಡಿಸಿಕೊಳ್ಳಲು ಇಲ್ಲಿನ ಆಯ್ದ ವೈದ್ಯರು, ಆಡಳಿತಾಧಿಕಾರಿಗಳನ್ನು ಹಂತಹಂತವಾಗಿ ಬ್ರಿಟನ್‌ಗೆ ಕಳುಹಿಸಲಾಗುವುದು. ಅಲ್ಲಿನ ತಜ್ಞರನ್ನು ಕರ್ನಾಟಕಕ್ಕೆ ಕರೆಯಿಸಲಾಗುವುದು’ ಎಂದು ಮಾಹಿತಿ ನೀಡಿದರು.



ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನಿರ್ದೇಶಕ ಕೆ.ಜಿ. ಚಂದ್ರಶೇಖರ್ ಮತ್ತು ವೋಲ್ವರ್ ಹ್ಯಾಮ್ಟನ್ ವಿಶ್ವ ವಿದ್ಯಾಲಯದ ಎನ್‌ಎಚ್‌ಎಸ್ ಟ್ರಸ್ಟ್‌ನ ಸಿಇಒ ಕಾರ್ಡ್ ವಿಕ್ ಜೋ, ಕುಲಪತಿ ಪ್ರಶಾಂತ್ ಪಿಳ್ಳೈ ಒಪ್ಪಂದಕ್ಕೆ ಸಹಿ ಹಾಕಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಉಪಸ್ಥಿತರಿದ್ದರು



> **ಬ್ರಿಟನ್ ವಿಶ್ವವಿದ್ಯಾಲಯಗಳ ನಿರ್ವಹಣೆ, ಗುಣಮಟ್ಟದ ಶಿಕ್ಷಣದ ಅಧ್ಯಯನಕ್ಕಾಗಿ ತೆರಳುವ ಕುಲಪತಿಗಳ ತಂಡ ಮೊದಲು ವೇಲ್ಸ್ ಗೆ ಭೇಟಿ ನೀಡಲಿದೆ**
> **ಡಾ.ಎಂ.ಸಿ.ಸುಧಾಕರ್,** ಉನ್ನತ ಶಿಕ್ಷಣ ಸಚಿವ

## ಚಿಟಿಕೆ ಸುದ್ದಿ

### 20ಕ್ಕೆ ಕನ್ನಡ ಚರ್ಚಾ ಸ್ಪರ್ಧೆ

ಬೆಂಗಳೂರು: ಉದಯಭಾನು ಕಲಾಸಂಘವು ಸಾಹಿತಿ ಅ.ನ. ಕೃಷ್ಣರಾಯರ ಸ್ಮರಣಾರ್ಥ ಇದೇ 20ರಂದು ಬೆಳಿಗ್ಗೆ 10 ಗಂಟೆಯಿಂದ ಕೆಂಪೇಗೌಡ ನಗರದಲ್ಲಿರುವ ಸಂಘದ ಸಭಾಂಗಣದಲ್ಲಿ ಅಂತರಕಾಲೇಜು ಕನ್ನಡ ಚರ್ಚಾಸ್ಪರ್ಧೆ ಹಮ್ಮಿಕೊಂಡಿದೆ.

‘ವಿಜ್ಞಾನದ ವಿಕಾಸವೇ ವಿಶ್ವದ ವಿನಾಶಕ್ಕೆ ಕಾರಣ’ ಸ್ಪರ್ಧೆಯ ಚರ್ಚಾ ವಿಷಯವಾಗಿದೆ. ಪಾರಿತೋಷಕ, ವೈಯಕ್ತಿಕ ಬಹುಮಾನ ಹಾಗೂ ಸಮಾಧಾನಕರ ಬಹುಮಾನವನ್ನು ಸ್ಪರ್ಧೆ ಒಳಗೊಂಡಿದೆ. ಪದವಿಪೂರ್ವ ಮತ್ತು ಪದವಿ ಕಾಲೇಜು ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದು. ಪ್ರತಿಯೊಂದು ಕಾಲೇಜಿನಿಂದಲೂ ಇಬ್ಬರು ವಿದ್ಯಾರ್ಥಿ ಪ್ರತಿನಿಧಿಗಳು ಚರ್ಚಾ ವಿಷಯದ ಬಗ್ಗೆ ಪರ ಮತ್ತು ವಿರೋಧದ ಬಗ್ಗೆ ಮಾತನಾಡಬಹುದು.

ಪ್ರವೇಶ ಶುಲ್ಕ ₹100 ಸಹಿತ ಪ್ರವೇಶ ಪತ್ರವನ್ನು ಇದೇ 17ರೊಳಗೆ ಕಳುಹಿಸಬೇಕು ಎಂದು ಸಂಘದ ಗೌರವ ಕಾರ್ಯದರ್ಶಿ ರಾಧಾಕೃಷ್ಣ ಕೌಂಡಿನ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080 26601831 ಅಥವಾ 9844192952

### ಪ್ರವೇಶ ದಿನಾಂಕ ವಿಸ್ತರಣೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಪ್ರವೇಶ ಪಡೆಯಲು ಕೊನೆಯ ದಿನಾಂಕವನ್ನು ಸೆ.30ರವರೆಗೆ ವಿಸ್ತರಿಸಲಾಗಿದೆ.

ಈಗಾಗಲೇ ನಿಗದಿಪಡಿಸಿದ ಸಮಯದಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗದ ವಿದ್ಯಾರ್ಥಿಗಳಿಗಾಗಿ ಅವಧಿ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ಶೈಕ್ಷಣಿಕ ಅರ್ಹತೆಯ ದಾಖಲೆ, ಅವುಗಳ ಪ್ರತಿಯೊಂದಿಗೆ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸಬೇಕು. ಸ್ಥಳದಲ್ಲಿಯೇ ಪ್ರವೇಶ ಪ್ರಕ್ರಿಯೆ ಪೂರೈಸಿ, ಶುಲ್ಕ ಸಂದಾಯ ಮಾಡಿ ಪ್ರವೇಶ ಪಡೆಯಲು ಅವಕಾಶ ನೀಡಲಾಗಿದೆ ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಸಚಿವರು ತಿಳಿಸಿದ್ದಾರೆ.

### ರಾಜ್ಯಮಟ್ಟದ ಕಥಾ ಸ್ಪರ್ಧೆಗೆ ಆಹ್ವಾನ

ಬೈಂದೂರು: ಸಾಂಸ್ಕೃತಿಕ, ಸಾಹಿತ್ಯ, ಸೇವಾ ಪ್ರತಿಷ್ಠಾನ ಸುರಭಿ ಬೈಂದೂರು ತನ್ನ ರಜತ ವರ್ಷದ ಸಂಭ್ರಮಕ್ಕಾಗಿ ರಾಜ್ಯಮಟ್ಟದ ಕಥಾ ಸ್ಪರ್ಧೆ–2025 ಆಯೋಜಿಸಿದೆ. ವಿಜೇತರಿಗೆ ಪ್ರಥಮ ₹10 ಸಾವಿರ, ದ್ವಿತೀಯ ₹8 ಸಾವಿರ, ತೃತೀಯ ₹5 ಸಾವಿರ ನಗದು ಬಹುಮಾನವಿದೆ.

ಕಥೆ ಸ್ವತಂತ್ರ ರಚನೆಯಾಗಿರಬೇಕು. ಈ ಹಿಂದೆ ಎಲ್ಲೂ ಪ್ರಕಟ ಅಥವಾ ಪ್ರಸಾರವಾಗಿರಬಾರದು. ಕನಿಷ್ಠ 800ರಿಂದ 1000 ಪದಗಳ ಮಿತಿಯಲ್ಲಿರಬೇಕು. ಸ್ಪರ್ಧಿಯ ಹೆಸರು, ಲೇಖಕರ ಹೆಸರು, ವಿಳಾಸ, ದೂರವಾಣಿ, ಭಾವಚಿತ್ರಗಳನ್ನು ಕಥೆಯೊಂದಿಗೆ ಕಳುಹಿಸಬೇಕು. ಕಥೆಗಳನ್ನು ಹಿಂತಿರುಗಿಸಲಾಗುವುದಿಲ್ಲ. ಸೆ. 20ರೊಳಗೆ ಸುಧಾಕರ ಪಿ., ನಿರ್ದೇಶಕರು, ಸುರಭಿ ಬೈಂದೂರು ವಿಳಾಸಕ್ಕೆ ಕಥೆಗಳನ್ನು ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ

ಸಂಪರ್ಕ: 9945944269

# ನೀಲಿ ಮಾರ್ಗ: ರ‍್ಯಾಕ್ ಸೌಲಭ್ಯ

## ವಿಮಾನ ನಿಲ್ದಾಣಕ್ಕೆ ಸಂಚರಿಸುವವರಿಗೆ ಲಗೇಜ್‌ಗಾಗಿ ಪ್ರತ್ಯೇಕ ವ್ಯವಸ್ಥೆ

• ಬಾಲಕೃಷ್ಣ ಪಿ.ಎಚ್.


ನೀಲಿ ಮಾರ್ಗದಲ್ಲಿ ಸಂಚರಿಸಲಿರುವ ಮೆಟ್ರೊ ರೈಲು

ಬೆಂಗಳೂರು: ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನಮ್ಮ ಮೆಟ್ರೊ ಮಾರ್ಗದಲ್ಲಿ ಸಂಚರಿಸಲಿರುವ ಮೆಟ್ರೊ ರೈಲುಗಳಲ್ಲಿ ಲಗೇಜ್ ರ‍್ಯಾಕ್‌ಗಳು ಇರಲಿವೆ. ಬೇರೆ ಯಾವುದೇ ಮಾರ್ಗದ ಮೆಟ್ರೊಗಳಲ್ಲಿ ಇಲ್ಲದ ಈ ಸೌಲಭ್ಯ ವಿಮಾನ ನಿಲ್ದಾಣಕ್ಕೆ ಸಂಚರಿಸುವ ಪ್ರಯಾಣಿಕರಿಗೆ ದೊರೆಯಲಿದೆ.

ನೀಲಿ ಮಾರ್ಗದಲ್ಲಿ ಸಂಚರಿಸಲಿರುವ ಮೆಟ್ರೊ ರೈಲಿನಲ್ಲಿ ಲಗೇಜ್‌ಗಾಗಿಯೇ ಪ್ರತ್ಯೇಕ ರ‍್ಯಾಕ್ ಬರಲಿದೆ. ಪ್ರತಿ ಬೋಗಿಯ ಎರಡು ತುದಿಗಳಲ್ಲಿ ಈಗ ಇಬ್ಬರು ಕುಳಿತುಕೊಳ್ಳಬಹುದಾದ ತಲಾ ಎರಡು ಸೀಟುಗಳಿವೆ. ಆ ಜಾಗದಲ್ಲಿ ರ‍್ಯಾಕ್ ಬರಲಿದೆ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ರೇಷ್ಮೆ ಮಂಡಳಿಯಿಂದ ಹಳದಿ ಮಾರ್ಗವನ್ನು, ಕೆ.ಆರ್. ಪುರದಲ್ಲಿ ನೇರಳೆ ಮಾರ್ಗವನ್ನು, ನಾಗವಾರದಲ್ಲಿ ಗುಲಾಬಿ ಮಾರ್ಗವನ್ನು, ಕೆಂಪಾಪುರದಲ್ಲಿ ಕಿತ್ತಳೆ ಮಾರ್ಗವನ್ನು ಹಾಗೂ ಅಗರದಲ್ಲಿ ಪ್ರಸ್ತಾವಿತ ಕೆಂಪು ಮಾರ್ಗವನ್ನು ನೀಲಿ ಮಾರ್ಗವು ಸಂಪರ್ಕಿಸುವುದರಿಂದ ನಗರದ ಎಲ್ಲ ಭಾಗಗಳಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುಲಭವಾಗಿ ಮೆಟ್ರೊದಲ್ಲಿ ಬರಲು ಸಾಧ್ಯವಾಗಲಿದೆ. ಈಗಿರುವ ಲಗೇಜ್ ನಿಯಮವನ್ನು ನೀಲಿ ಮಾರ್ಗಕ್ಕೆ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಸದ್ಯ ಕಾಮಗಾರಿಗಳು ನಡೆಯುತ್ತಿದ್ದು, ಮುಂದಿನ ವರ್ಷ ಪಾರ್ಶ್ವ ಸಂಚಾರ ಆರಂಭವಾಗಲಿದೆ. ಆಗ ಲಗೇಜ್ ನಿಯಮ ಪರಿಷ್ಕರಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

**ಈಗಿನ ವ್ಯವಸ್ಥೆ:** ಈಗಿರುವ ಮೆಟ್ರೊ ರೈಲುಗಳಲ್ಲಿ ಲಗೇಜ್‌ಗಾಗಿ ಪ್ರತ್ಯೇಕ ವ್ಯವಸ್ಥೆ ಇಲ್ಲ. 60 ಸೆಂಟಿ ಮೀಟರ್ ಉದ್ದ, 45 ಸೆಂಟಿ ಮೀಟರ್ ಅಗಲ ಮತ್ತು 25 ಸೆಂಟಿ ಮೀಟರ್ ಎತ್ತರದ ಬ್ಯಾಗ್‌ಗಳಲ್ಲಿ ಗರಿಷ್ಠ 15 ಕೆ.ಜಿ. ತೂಕದ ವಸ್ತುಗಳನ್ನು ಉಚಿತವಾಗಿ ಒಯ್ಯಬಹುದು. ಅದಕ್ಕಿಂತ ಭಾರವಿರುವ ಮತ್ತು ಅಧಿಕ ಬ್ಯಾಗ್‌ಗಳಿದ್ದರೆ ₹ 30 ಶುಲ್ಕ ನೀಡಬೇಕು. ಶುಲ್ಕ ಪಾವತಿಸದವರಿಗೆ ₹250ರ ವರೆಗೆ ದಂಡ ವಿಧಿಸಲು ಅವಕಾಶವಿದೆ. 30 ಕೆ.ಜಿ.ಗಿಂತ ಅಧಿಕ ಭಾರದ ಬ್ಯಾಗ್‌ಗಳನ್ನು ಒಯ್ಯುವಂತಿಲ್ಲ.

### ‘ಉಳಿದ ಮಾರ್ಗಗಳಲ್ಲೂ ಬೇಕು’

ಜನದಟ್ಟಣೆ ಸಮಯದಲ್ಲಿ ಮೆಟ್ರೊಗಳಲ್ಲಿ ಬ್ಯಾಗ್ ಹಾಕಿಕೊಂಡು ನಿಲ್ಲಲೂ ಸಾಧ್ಯವಿಲ್ಲದ ಪರಿಸ್ಥಿತಿ ಇರುತ್ತದೆ. ಲಗೇಜ್‌ಗಾಗಿ ಪ್ರತ್ಯೇಕ ವ್ಯವಸ್ಥೆಯು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ಮೆಟ್ರೊಗಳಲ್ಲಿ ಮಾತ್ರವಲ್ಲ, ಉಳಿದ ಮಾರ್ಗಗಳಲ್ಲಿಯೂ ಅಗತ್ಯವಿದೆ ಎಂದು ಮೆಟ್ರೊ ಪ್ರಯಾಣಿಕರೂ ಆಗಿರುವ ಐಟಿ ಉದ್ಯೋಗಿ ಪ್ರಜ್ವಲ್ ಕುಮಾರ್ ಅಭಿಪ್ರಾಯಪಟ್ಟರು.

**ನೀಲಿ ಮಾರ್ಗ:** ಕೇಂದ್ರ ರೇಷ್ಮೆ ಸಂಸ್ಥೆಯಿಂದ (ಸೆಂಟ್ರಲ್ ಸಿಲ್ಕ್ ಬೋರ್ಡ್) ಕೆ.ಆರ್.ಪುರದವರೆಗೆ (ಹಂತ 2ಎ) ಮತ್ತು ಕೆ.ಆರ್. ಪುರದಿಂದ ವಿಮಾನ ನಿಲ್ದಾಣದವರೆಗೆ (ಹಂತ 2ಬಿ) ಎರಡು ಹಂತದಲ್ಲಿ ಕಾಮಗಾರಿ ನಡೆಯುತ್ತಿದೆ. ಹಂತ 2ಎ ಭಾಗದಲ್ಲಿ 2026ರ ಸೆಪ್ಟೆಂಬರ್‌ನಲ್ಲಿ ಮೆಟ್ರೊ ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ. ಹಂತ 2ಬಿಯಲ್ಲಿ 2027ರ ಅಂತ್ಯಕ್ಕೆ ಸಂಚಾರ ಆರಂಭಗೊಳ್ಳುವ ನಿರೀಕ್ಷೆ ಇದೆ.

# ಅಮೆರಿಕದ ಶೇಕಡ 50 ಸುಂಕ ಪರ್ಯಾಯ ಮಾರ್ಗಕ್ಕೆ ದಾರಿ

## ಕೃಷಿ ತಂತ್ರಜ್ಞರ ಸಂಸ್ಥೆ ಅಧ್ಯಕ್ಷ ಎ.ಬಿ.ಪಾಟೀಲ ಹೇಳಿಕೆ

ಪ್ರಜಾವಾಣಿ ವಾರ್ತೆ



ನಗರದಲ್ಲಿ ಆಯೋಜಿಸಿದ್ದ ವಿಚಾರಸಂಕಿರಣದಲ್ಲಿ ಬಾಲು ಕೆಂಚಪ್ಪ, ಎ.ಬಿ. ಪಾಟೀಲ, ಸಿ.ಎನ್. ಶಿವಪ್ರಕಾಶ್ ಮತ್ತು ಎಚ್.ಕೆ. ಶಿವಕುಮಾರ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಭಾರತೀಯ ಉತ್ಪನ್ನಗಳ ಮೇಲೆ ಅಮೆರಿಕ ಶೇಕಡ 50ರಷ್ಟು ಸುಂಕ ವಿಧಿಸಿರುವುದರಿಂದ ಸಾಕಷ್ಟು ಸವಾಲುಗಳು, ಪರಿಣಾಮಗಳನ್ನು ಎದುರಿಸುವುದರ ಜತೆಗೆ ಪರ್ಯಾಯ ಮಾರ್ಗಕ್ಕೂ ದಾರಿ ಮಾಡಿಕೊಟ್ಟಿದೆ ಎಂದು ಕೃಷಿ ತಂತ್ರಜ್ಞರ ಸಂಸ್ಥೆ (ಐಎಟಿ) ಅಧ್ಯಕ್ಷ ಎ.ಬಿ.ಪಾಟೀಲ ಹೇಳಿದರು.

ರಾಜ್ಯ ಕೃಷಿ ವ್ಯವಹಾರ ಅಭಿವೃದ್ಧಿ ನಿಗಮ, ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ ಸಹಯೋಗದಲ್ಲಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ‘ಮುಕ್ತ ವ್ಯಾಪಾರ ಒಪ್ಪಂದ, ದೇಶದ ಕೃಷಿ ವಹಿವಾಟಿನ ಹಿತಾಸಕ್ತಿ ರಕ್ಷಣೆ’ ಕುರಿತ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಚೀನಾ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಮುಂದಾಗುತ್ತದೆ ಎಂದು ಭಾವಿಸಿರಲಿಲ್ಲ. ಯುದ್ಧದ ಕಾರ್ಮೋಡ, ಬದಲಾದ ರಾಜಕೀಯ ಸನ್ನಿವೇಶದಲ್ಲಿ ಭಾರತದೊಂದಿಗೆ ಹಲವು ದೇಶಗಳು ವ್ಯಾಪಾರ ಒಪ್ಪಂದಕ್ಕೆ ಉತ್ಸುಕವಾಗಿವೆ. ಆದರೆ, ಅಮೆರಿಕ ಶೇಕಡ 50ರಷ್ಟು ಸುಂಕವಿಧಿಸುವ ಮೂಲಕ ದೇಶದ ಕೃಷಿ ರಫ್ತು ಆರ್ಥಿಕತೆಗೆ ಪೆಟ್ಟು ನೀಡಲು ಮುಂದಾಗಿದೆ ಎಂದು ಹೇಳಿದರು.

ದೇಶದಲ್ಲಿ ಶೇಕಡ 79ರಷ್ಟು ಸಣ್ಣ ಪ್ರಮಾಣದ ರೈತರಿದ್ದಾರೆ. ರೈತ ಉತ್ಪಾದಕ ಸಂಸ್ಥೆಗಳು ನೋಂದಾಯಿತ ರೈತರಿಗೆ ಬೆಳೆದ ಉತ್ಪನ್ನಗಳ ಮಾರುಕಟ್ಟೆಗೆ ಅವಕಾಶವನ್ನು ಕಲ್ಪಿಸುತ್ತಿವೆ. ದೇಶದಿಂದ ಶೇಕಡ 87 ಬಿಲಿಯನ್‌ನಷ್ಟು ಉತ್ಪನ್ನಗಳು ಅಮೆರಿಕಕ್ಕೆ ರಫ್ತು ಆಗುತ್ತಿದ್ದು, ಶೇಕಡ 37 ರಷ್ಟು ಆಮದು ಮಾಡಿಕೊಳ್ಳುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಫ್ತು ನೀತಿಗೆ ಸಂಬಂಧಿಸಿದಂತೆ ನೀತಿಗಳನ್ನು ರೂಪಿಸಿ ರೈತರನ್ನು ಉತ್ತೇಜಿಸಬೇಕಿದೆ ಎಂದು ತಿಳಿಸಿದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್, ಭಾರತದಲ್ಲಿ 2024-25ನೇ ವರ್ಷದಲ್ಲಿ 355 ಮಿಲಿಯನ್ ಟನ್ ಆಹಾರ ಧಾನ್ಯಗಳು ಮತ್ತು 367 ಮಿಲಿಯನ್ ಟನ್ ತೋಟಗಾರಿಕೆ ಉತ್ಪನ್ನಗಳನ್ನು ಉತ್ಪಾದಿಸಿದ್ದು, 2019-2020ರವರೆಗೆ ಆಹಾರ ಆಮದು ಮಾಡಿಕೊಳ್ಳುತ್ತಿದ್ದ ಭಾರತ 2020-21ರಿಂದ ಆಹಾರ ರಫ್ತು ಮಾಡುವ ದೇಶವಾಗಿದೆ ಎಂದರು.

ಆರ್‌ಬಿಐನ ಮಾಜಿ ಮುಖ್ಯ ಪ್ರಧಾನ ವ್ಯವಸ್ಥಾಪಕ ಬಾಲುಕೆಂಚಪ್ಪ, ಕೆಪೆಕ್ ಪ್ರಧಾನ ವ್ಯವಸ್ಥಾಪಕ ಎಚ್. ಕೆ.ಶಿವಕುಮಾರ್, ಕೃಷಿ ತಂತ್ರಜ್ಞರ ಸಂಸ್ಥೆಯ ಕಾರ್ಯಕಾರಿ ಸಮಿತಿ ಅಧ್ಯಕ್ಷ ಎಸ್.ಬಿ. ಯೋಗಾನಂದ, ಕಾರ್ಯದರ್ಶಿ ಜಿ.ಎಚ್.ಯೋಗೇಶ್ ಪಾಲ್ಗೊಂಡಿದ್ದರು.



ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸೂಪರ್ ಡಿವಿಷನ್ ಲೀಗ್‌ನ ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ ತಂಡದ ಶರಣ್ ಎಸ್. (ನೀಲಿ) ಮತ್ತು ಬೆಂಗಳೂರು ಸಿಟಿ ಎಫ್‌ಸಿ ತಂಡದ ಆರ್.ಎಸ್. ಜೆಲ್ಸಿಸ್ ಅವರು ಚೆಂಡಿನ ಮೇಲೆ ಹತೋಟಿ ಸಾಧಿಸಲು ಪ್ರಯತ್ನಿಸಿದರು ಪ್ರಜಾವಾಣಿ ಚಿತ್ರ: ಬಿ.ಕೆ.ಜನಾರ್ದನ

## ಪೆರಿಟೋನಿಯಲ್ ಡಯಾಲಿಸಿಸ್ ಸೇವೆ

ಬೆಂಗಳೂರು: ರಾಜ್ಯದಲ್ಲಿ ಪೆರಿಟೋನಿಯಲ್ ಡಯಾಲಿಸಿಸ್ ಕಾರ್ಯಕ್ರಮ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಡಯಾಲಿಸಿಸ್ ಪ್ರಕ್ರಿಯೆಗೆ ಅಗತ್ಯವಿರುವ ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್‌ಸಿಎಲ್) ಮೂಲಕ, ಮೊದಲ ಹಂತದಲ್ಲಿ 350 ರೋಗಿಗಳಿಗೆ ಈ ಸೇವೆ ಒದಗಿಸಲು ಅಗತ್ಯ ಸಾಮಗ್ರಿ ಖರೀದಿಸುವಂತೆ ತಿಳಿಸಲಾಗಿದೆ.

ರಾಜ್ಯದಲ್ಲಿ ಈಗಾಗಲೇ ಪ್ರಧಾನ ಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಕಾರ್ಯಕ್ರಮದಡಿ ಎಲ್ಲ ಜಿಲ್ಲೆಗಳಲ್ಲಿ ಹೀಮೊಡಯಾಲಿಸಿಸ್ ಸೇವೆ ನೀಡಲಾಗುತ್ತಿದೆ. ಈಗ ಮೂತ್ರಪಿಂಡ ತಜ್ಞರು ಇರುವ ಜಿಲ್ಲಾ ಆಸ್ಪತ್ರೆಗಳಲ್ಲಿ ಪೆರಿಟೋನಿಯಲ್ ಡಯಾಲಿಸಿಸ್ ಸೇವೆ ಒದಗಿಸಲಾಗುತ್ತಿದೆ. ಆರಂಭದಲ್ಲಿ ಪ್ರತಿ ಜಿಲ್ಲೆಗೆ ತಲಾ 10 ರೋಗಿಗಳಂತೆ 350 ರೋಗಿಗಳನ್ನು ನಿರ್ದಿಷ್ಟಗೊಳಿಸಲಾಗಿದೆ. ವೈದ್ಯಕೀಯ ತಜ್ಞರು ರೋಗಿಗಳನ್ನು ಆಯ್ಕೆ ಮಾಡುತ್ತಾರೆ ಎಂದು ಹೇಳಲಾಗಿದೆ.

ಕ್ಯಾಥೆಟರ್ ಅಳವಡಿಕೆ, ಆಸ್ಪತ್ರೆ ವೆಚ್ಚ, ತರಬೇತಿ, ಪ್ರಥಮ ಪೆರಿಟೋನಿಯಲ್ ಡಯಾಲಿಸಿಸ್ ಸೆಷನ್ ಸೇರಿ ಪ್ರತಿ ರೋಗಿಗೆ ₹ 13 ಸಾವಿರ ವೆಚ್ಚವಾಗಲಿದ್ದು, ಇದನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಿಂದ ಭರಿಸಲಾಗುತ್ತದೆ. ಪ್ರತಿ ರೋಗಿಗೆ ತಿಂಗಳಿಗೆ 90-120 ಪೆರಿಟೋನಿಯಲ್ ಡಯಾಲಿಸಿಸ್ ಬ್ಯಾಗ್‌ಗಳು ಬೇಕಿದ್ದು, ಅವುಗಳನ್ನು ಕೆಎಸ್‌ಎಂಎಸ್‌ಸಿಎಲ್ ಮೂಲಕ ಖರೀದಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ₹106 ಕೋಟಿ ದಂಡ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಕಲ್ಪಿಸಿದ್ದ ಅವಕಾಶವನ್ನು ಬಳಸಿಕೊಂಡು, ನಗರದಲ್ಲಿ 37,86,173 ವಾಹನಗಳ ಮಾಲೀಕರು ದಂಡ ಪಾವತಿಸಿದ್ದಾರೆ. ಒಟ್ಟು ₹106 ಕೋಟಿ ದಂಡ ಸಂಗ್ರಹವಾಗಿದೆ ಎಂದು ಸಂಚಾರ ವಿಭಾಗದ ಮೂಲಗಳು ಹೇಳಿವೆ.

ಆಗಸ್ಟ್ 22ರಿಂದ ರಿಯಾಯಿತಿಯಲ್ಲಿ ದಂಡ ಪಾವತಿ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಸೆ.12 ಕೊನೆಯ ದಿನವಾಗಿತ್ತು.

ಬಿಟಿಪಿ ಅಸ್ತ್ರಂ, ಕರ್ನಾಟಕ ರಾಜ್ಯ ಪೊಲೀಸ್(ಕೆಎಸ್ ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ಅಥವಾ ಕರ್ನಾಟಕ ಒನ್ ವೆಬ್‌ಸೈಟ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ ನಮೂದಿಸಿ ಸಂಚಾರ ಉಲ್ಲಂಘನೆ ಪ್ರಕರಣಗಳನ್ನು ತಿಳಿದುಕೊಂಡು ವಾಹನ ಮಾಲೀಕರು ದಂಡ ಪಾವತಿಸಿದ್ದಾರೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

## ‘ಅಕ್ಕಿ ಕಳ್ಳ’: ಎಫ್‌ಐಆರ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ವಿರೋಧಿಗಳು ಪರಸ್ಪರ ಕಳ್ಳ ಎಂದು ಜರಿದುಕೊಂಡರೆ ಅದನ್ನೇ ಆಧಾರವಾಗಿಸಿಕೊಂಡು ಕ್ರಿಮಿನಲ್ ಪ್ರಕರಣ ದಾಖಲಿಸಲು ಆಗದು’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ನನ್ನ ವಿರುದ್ಧ ಚಿತ್ತಾಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಅದಕ್ಕೆ ಸಂಬಂಧಿಸಿದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ಗುರುಮಠಕಲ್‌ನ ಬಿಜೆಪಿ ಮುಖಂಡ ಮಣಿಕಂಠ ರಾಠೋಡ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಪುರಸ್ಕರಿಸಿದೆ.

ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ‘ಅಕ್ಕಿ ಕಳ್ಳ’ ಎಂದು ಸಂಬೋಧಿಸಿದ ಆರೋಪದಡಿ ಮಣಿಕಂಠ ರಾಠೋಡ್ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಿದೆ.

‘ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲಿಸಿರುವುದು ಮೇಲ್ನೋಟಕ್ಕೆ ರಾಜಕೀಯ ಪ್ರೇರಿತವಾಗಿದೆ. ದೂರುದಾರರು ತಮ್ಮ ಅನುಕೂಲಕ್ಕಾಗಿ ನ್ಯಾಯಾಂಗ ಪ್ರಕ್ರಿಯೆಯನ್ನು ಅಸ್ತ್ರವನ್ನಾಗಿ ಬಳಕೆ ಮಾಡಿಕೊಂಡಿದ್ದಾರೆ. ಹೀಗಾಗಿ, ರಾಠೋಡ್ ವಿರುದ್ಧ ನ್ಯಾಯಾಂಗ ಪ್ರಕ್ರಿಯೆ ಆರಂಭಿಸಿರುವುದು ಕಾನೂನಿನ ದುರ್ಬಳಕೆಯಲ್ಲದೇ ಬೇರೇನೂ ಅಲ್ಲ. ಹೀಗಾಗಿ, ಪ್ರಕರಣ ರದ್ದುಗೊಳಿಸಲಾಗಿದೆ’ ಎಂದು ನ್ಯಾಯಪೀಠ ಹೇಳಿದೆ.

ಮಣಿಕಂಠ ರಾಠೋಡ್ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದ್ದರು. ಹೈಕೋರ್ಟ್ ವಕೀಲ ಜಿ.ಆರ್. ಬಸವಕಿರಣ್ ವಕಾಲತ್ತು ವಹಿಸಿದ್ದರು.

**ಪ್ರಕರಣವೇನು?:** ‘ಮಣಿಕಂಠ ರಾಠೋಡ್ 2025ರ ಮೇ 26ರಂದು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ವಿಡಿಯೊ ಅಪ್‌ಲೋಡ್ ಮಾಡಿ, ಅದರಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ‘ಲೇ ಅಕ್ಕಿ ಕಳ್ಳ’ ಎಂದು ನಿಂದಿಸಿದ್ದಾರೆ. ಅಂತೆಯೇ, ಕೋಲಿ ಕಬ್ಬಲಿಗ ಎಸ್.ಟಿ. ರಾಜ್ಯ ಘಟಕದ ಅಧ್ಯಕ್ಷ ಲಚ್ಚಪ್ಪ ಜಮಾದಾರ ಅವರನ್ನು ‘ಟೋಪಿ ಲಚ್ಯಾ’ ಎಂದು ಕರೆದು ಅವಮಾನಿಸಿದ್ದಾರೆ. ಆದ್ದರಿಂದ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಕಾಂಗ್ರೆಸ್ ಕಾರ್ಯಕರ್ತ ಹಣಮಂತ ದೂರು ನೀಡಿದ್ದರು.

ಇದನ್ನು ಆಧರಿಸಿ ಚಿತ್ತಾಪುರ ಪೊಲೀಸರು ಮಣಿಕಂಠ ರಾಠೋಡ್ ವಿರುದ್ಧ ಭಾರತೀಯ ನ್ಯಾಯ ಸಂಹಿತಾ-2023ರ ಕಲಂ 352 ಮತ್ತು 353(2) ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.



## ‘ಉನ್ನತ ಶಿಕ್ಷಣದ ವ್ಯಾಪಾರೀಕರಣ’

ಪ್ರಜಾವಾಣಿ ವಾರ್ತೆ


ಬೆಂಗಳೂರು: ಇತ್ತೀಚೆಗೆ ಲಂಡನ್ ಪ್ರವಾಸ ಕೈಗೊಂಡ ಕರ್ನಾಟಕ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಸಚಿವರು ರಾಜ್ಯದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಿಗೆ ಅವಕಾಶ ಕಲ್ಪಿಸುವುದಾಗಿ ಮತ್ತು ಇದರಿಂದ ರಾಜ್ಯದ ಶೈಕ್ಷಣಿಕ ಗುಣಮಟ್ಟ ವೃದ್ಧಿಸುವುದು ಎಂದು ಹೇಳಿದ್ದಾರೆ. ಇದು ಉನ್ನತ ಶಿಕ್ಷಣದ ವ್ಯಾಪಾರೀಕರಣ ಎಂದು ಎಐಡಿಎಸ್‌ಒ ಕರ್ನಾಟಕ ರಾಜ್ಯ ಸಮಿತಿ ತಿಳಿಸಿದೆ.

ರಾಜ್ಯ ಸರ್ಕಾರಿ ವಿಶ್ವವಿದ್ಯಾಲಯಗಳು ಅಧ್ಯಾಪಕರು ಹಾಗೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಸರ್ಕಾರದ ಈ ನಡೆಯು ಹಾಸ್ಯಾಸ್ಪದವಾಗಿದೆ. ಪ್ರಸ್ತುತ ಸರ್ಕಾರಿ ಶುಲ್ಕಗಳನ್ನು ಭರಿಸಲು ಸಾಧ್ಯವಾಗದೇ ಗಣನೀಯ ಪ್ರಮಾಣದ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ದೂರ ಉಳಿಯುತ್ತಿದ್ದಾರೆ.

ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಕರ್ನಾಟಕ ಸರ್ಕಾರವು ನೇಮಿಸಿದ್ದ ಎಸ್‌ಇಪಿ ಆಯೋಗವು ಕೂಡ ವಿದೇಶಿ ವಿಶ್ವವಿದ್ಯಾಲಯಗಳಿಗೆ ಅವಕಾಶ ನೀಡಬಾರದು ಎಂದು ತನ್ನ ವರದಿಯಲ್ಲಿ ತಿಳಿಸಿದೆ. ಆದರೂ ಸರ್ಕಾರವು ತನ್ನ ಅಜೆಂಡಾ ಮುಂದುವರಿಸುತ್ತಿದೆ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಆರೋಪಿಸಿದ್ದಾರೆ.

## ನಿಧನ ವಾರ್ತೆ

### ಪಿ.ಶ್ರೀನಿವಾಸ್



ಬೆಂಗಳೂರು: ಸಾವಯವ ಕೃಷಿ ಕ್ಷೇತ್ರದಲ್ಲಿ ‘ಸಾಯಿಲ್ ವಾಸು’ ಎಂದೇ ಜನಪ್ರಿಯರಾಗಿದ್ದ ಪಿ.ಶ್ರೀನಿವಾಸ್ (65) ಹೃದಯಾಘಾತದಿಂದ ಶನಿವಾರ ನಿಧನರಾದರು.

ಮೃತರಿಗೆ ತಾಯಿ, ಪತ್ನಿ ಮತ್ತು ಪುತ್ರ ಇದ್ದಾರೆ. ಅವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12ಕ್ಕೆ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

90ರ ದಶಕದಿಂದ ಸಾವಯವ ಕೃಷಿ ತರಬೇತಿ, ಪ್ರಚಾರದಲ್ಲಿ ಸಕ್ರಿಯರಾಗಿದ್ದ ವಾಸು ಅವರು ದೇಶದ ಸಾವಯವ ಕೃಷಿ ದಿಗ್ಗಜರೊಂದಿಗೆ ಒಡನಾಟವಿಟ್ಟುಕೊಂಡಿದ್ದರು. ಮಣ್ಣಿನ ಮಹತ್ವದ ಬಗ್ಗೆ ಅರಿವು ಮೂಡಿಸಲು ‘SOIL’ ಎಂಬ ಸಂಸ್ಥೆಯನ್ನು ಆರಂಭಿಸಿ ಮುನ್ನಡೆಸುತ್ತಿದ್ದರು. ದೇಶದುದ್ದಕ್ಕೂ ಸಂಚರಿಸಿ ಮಣ್ಣಿನ ಕಾರ್ಯಾಗಾರ ಮತ್ತು ತರಬೇತಿ ಏರ್ಪಡಿಸಿ, ಮಣ್ಣಿಗೆ ಜೀವ ತುಂಬುವ ಸುಲಭ ವಿಧಾನಗಳನ್ನು ರೈತರಿಗೆ ಮತ್ತು ಸಂಘ ಸಂಸ್ಥೆಗಳಿಗೆ ತಿಳಿಸಿಕೊಡುತ್ತಿದ್ದರು. ಮಳೆ ಆಶ್ರಿತ ಒಣಭೂಮಿಯಲ್ಲಿ, ಬೆಳೆ ವೈವಿಧ್ಯದ ಸಾಂಪ್ರದಾಯಿಕ ಅಕ್ಕಡಿ ವಿಧಾನವನ್ನು ಜನಪ್ರಿಯಗೊಳಿಸಿದ್ದರು.

# ‘ಕೋಮುಬಣ್ಣ ಕೊಟ್ಟರೆ ಕಠಿಣ ಕ್ರಮ’

## ಕ್ಯಾಂಟರ್ ಚಾಲಕನ ನಿರ್ಲಕ್ಷ್ಯ ದುರಂತಕ್ಕೆ ಮುಖ್ಯ ಕಾರಣ: ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

**ಹಾಸನ:** ‘ಕ್ಯಾಂಟರ್ ಚಾಲಕ ಮುಸ್ಲಿಂ ಎಂಬಂತೆ ಬಿಂಬಿಸುತ್ತಿರುವ ಕೆಲವರು ಘಟನೆಗೆ ಕೋಮು ಬಣ್ಣ ನೀಡುತ್ತಿರುವುದು ಕಂಡುಬಂದಿದೆ. ಅಂಥವರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಲು ಎಸ್‌ಪಿಗೆ ನಿರ್ದೇಶನ ನೀಡಲಾಗಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಹಾಸನ ತಾಲ್ಲೂಕು ಮೊಸಳೆಹೊಸ ಹಳ್ಳಿಯಲ್ಲಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರ ಜೊತೆಗೆ ಅವರು ಮಾತನಾಡಿದರು.

‘ಕ್ಯಾಂಟರ್ ಚಾಲಕ ಭುವನೇಶ್ ನಿರ್ಲಕ್ಷ್ಯ ದುರಂತಕ್ಕೆ ಮುಖ್ಯ ಕಾರಣ. ಆತನ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಜನರಿಂದ ತೀವ್ರ ಥಳಿತಕ್ಕೆ ಒಳಗಾಗಿದ್ದ ಆತನಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಎಲ್ಲ ರೀತಿಯ ಕಠಿಣ ಕ್ರಮ ಜರುಗಿಸಲಾಗುವುದು’ ಎಂದರು.

‘ಈ ಭಾಗದಲ್ಲಿ ವೈಜ್ಞಾನಿಕವಾಗಿ ರಸ್ತೆ ನಿರ್ಮಿಸಿಲ್ಲ. ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನಾನು ಹಾಗೂ ಸಂಸದರು ಪತ್ರ ಬರೆಯುತ್ತೇವೆ. ಮೃತರ ಕುಟುಂಬಗಳಿಗೆ ಪ್ರಾಧಿಕಾರವೂ ಪರಿಹಾರ ನೀಡಬೇಕಿದೆ’ ಎಂದರು.

**ಮುಖ್ಯಾಂಶಗಳು**

- ಆಸ್ಪತ್ರೆಗೆ ಭೇಟಿ ನೀಡಿದ ಸಚಿವರು, ಮುಖಂಡರು
- ‘ರಸ್ತೆ ವೈಜ್ಞಾನಿಕವಾಗಿ ನಿರ್ಮಾಣವಾಗಿಲ್ಲ’



ಹಾಸನದ ಜಿಲ್ಲಾಸ್ಪತ್ರೆಗೆ ಶನಿವಾರ ಭೇಟಿ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಗಾಯಾಳುಗಳ ಆರೋಗ್ಯದ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದರು

### ಬಿಜೆಪಿ ಅಧಿಕಾರದಲ್ಲಿದ್ದಾಗ ಹೆಚ್ಚಿನ ಪರಿಹಾರ ಕೊಟ್ಟಿದ್ರಾ?: ಸಿ.ಎಂ

**ಮೈಸೂರು:** ‘ಮೊಸಳೆಹೊಸಹಳ್ಳಿಯ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದೇವೆ. ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಎಷ್ಟು ಕೊಟ್ಟಿದ್ದರು? ಅವರು ಹೆಚ್ಚಾಗಿ ಕೊಟ್ಟಿದ್ದರೆ ಪರವಾಗಿಲ್ಲ ಎನ್ನಬಹುದಿತ್ತು...

–ಮೃತರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ನೀಡಲು ಬಿಜೆಪಿಯವರು ಒತ್ತಾಯಿಸಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮೇಲಿನಂತೆ ಪ್ರತಿಕ್ರಿಯಿಸಿದರು.

ಇಲ್ಲಿ ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ, ‘ಪರಿಹಾರ ಕೊಡುವುದು, ಸತ್ತವರನ್ನು ವಾಪಸು ಕರೆತರುತ್ತೇವೆ ಎಂದಲ್ಲ. ಇಂತಹ ಸಂದರ್ಭಗಳಲ್ಲಿ ಸರ್ಕಾರ ಹಿಂದಿನಿಂದಲೂ ಪರಿಹಾರ ನೀಡುತ್ತಿದೆ. ಕುಟುಂಬದವರಿಗೆ ಸಾಂತ್ವನ ಹೇಳುವ ಕೆಲಸವಿದು’ ಎಂದು ಹೇಳಿದರು.

‘ವಿಶೇಷವಾಗಿ ಯಾರೋ ಒಬ್ಬರಿಗೆ ಹೆಚ್ಚಿಸುವಂಥದ್ದಲ್ಲ; ಎಲ್ಲರಿಗೂ ಸಮಾನವಾಗಿ ಕೊಡಬೇಕು. ಮೃತರ ಕುಟುಂಬಗಳು ಆರ್ಥಿಕವಾಗಿ ಹಿಂದುಳಿದಿವೆ ಎಂಬ ಕಾರಣದಿಂದಲೇ ಪರಿಹಾರ ನೀಡಲಾಗಿದೆ’ ಎಂದು ಹೇಳಿದರು.

‘ಚಾಲಕರ ತಪ್ಪುಗಳಿಂದ ಅಪಘಾತಗಳಾದರೆ ಸರ್ಕಾರ ಹೇಗೆ ಹೊಣೆ ಆಗುತ್ತದೆ? ಮೆರವಣಿಗೆ ವೇಳೆ ಮುನ್ನೆಚ್ಚರಿಕೆ ವಹಿಸುತ್ತೇವೆ. ಹಾಸನದಲ್ಲಿ ಮೆರವಣಿಗೆ ಮೇಲೆ ಲಾರಿ ನುಗ್ಗಿ ಅನಾಹುತ ಸಂಭವಿಸಿದೆ. ಮೃತರಿಗೆ ಗೌರವ ಸಲ್ಲಿಸಿದ್ದೇವೆ’ ಎಂದು ಹೇಳಿದರು.

### ‘ಬಡವರ ಮಕ್ಕಳು ಸತ್ತರೆ ಬೆಲೆ ಇಲ್ಲವೇ?’

‘ವಿಮಾನ ದುರಂತದಲ್ಲಿ ಸತ್ತರೆ ₹1 ಕೋಟಿ ಪರಿಹಾರ, ಕ್ರೀಡಾಂಗಣ ಬಳಿ ಸತ್ತರೆ ₹ 50 ಲಕ್ಷ ಕೊಡುತ್ತೀರಿ. ಬಡವರ ಮಕ್ಕಳು ಸತ್ತರೆ ಬೆಲೆ ಇಲ್ಲವೇ? ಸರ್ಕಾರ ₹5 ಲಕ್ಷ ಪರಿಹಾರ ಘೋಷಿಸಿದೆ. ಕನಿಷ್ಠ ₹ 25 ಲಕ್ಷ ಕೊಡಲಿ’ ಎಂದು ಸ್ಥಳೀಯರು ಆಗ್ರಹಿಸಿದರು.

‘ಕೇರಳದಲ್ಲಿ ಸತ್ತರೆ ಕರ್ನಾಟಕದಿಂದ ಪರಿಹಾರ ಕೊಡುತ್ತೀರಿ. ನಮ್ಮ ರೈತರ ಮಕ್ಕಳು ಸತ್ತರೆ ಬಿಡಿಗಾಸು ಕೊಡುತ್ತೀರಿ. ₹5 ಲಕ್ಷ ಪರಿಹಾರ ನೀವೇ ಇಟ್ಟುಕೊಳ್ಳಿ’ ಎಂದು ಜಿಲ್ಲಾ ಉಸ್ತುವಾರಿ ಸಚಿವರ ಎದುರು ಅಸಮಾಧಾನ ಹೊರಹಾಕಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ‘ಈ ಬಗ್ಗೆ ಮುಖ್ಯಮಂತ್ರಿ ಅವರ ಜೊತೆ ಚರ್ಚಿಸಲಾಗುವುದು. ಅಗತ್ಯವಿರುವ ಎಲ್ಲ ಸೌಕರ್ಯ ಒದಗಿಸಲಾಗುವುದು’ ಎಂದು ಭರವಸೆ ನೀಡಿದರು.

## ಜನ್ಮದಿನವೇ ಮರಣದಿನವಾಯಿತು

ಪ್ರಜಾವಾಣಿ ವಾರ್ತೆ

**ಹೊಸದುರ್ಗ (ಚಿತ್ರದುರ್ಗ):** ಹೊಸದುರ್ಗ ತಾಲ್ಲೂಕು, ಗವಿರಂಗಾಪುರ ಗ್ರಾಮದ ಮಿಥುನ್ ಶುಕ್ರವಾರ ರಾತ್ರಿಯಷ್ಟೇ ಸ್ನೇಹಿತರೊಂದಿಗೆ ಜನ್ಮದಿನ ಆಚರಿಸಿಕೊಂಡು ನಂತರ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ದುರಂತದ ಪರಿಣಾಮ, ಜನ್ಮದಿನವೇ ಅವರ ಪಾಲಿಗೆ ಮರಣದಿನವೂ ಆಯಿತು.



ಎನ್.ಮಿಥುನ್

ಮಿಥುನ್ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಸ್ವಗ್ರಾಮದಲ್ಲಿ ನೀರವ ಮೌನ ಆವರಿಸಿತ್ತು. ಶನಿವಾರ ಮೃತದೇಹ ಕಂಡು ತಂದೆ–ತಾಯಿ, ಇಬ್ಬರು ಅಕ್ಕಂದಿರ ಆಕ್ರಂದನ ಮುಗಿಲು ಮುಟ್ಟಿತ್ತು.

ಗುರುವಾರ ರಾತ್ರಿ 12 ಗಂಟೆಗೆ ಗೆಳೆಯರು ಕೇಕ್ ಕತ್ತರಿಸಿ ಮಿಥುನ್‌ಗೆ ಶುಭಾಶಯ ಕೋರಿದ್ದರು. ತಂದೆ ವಿಜಯ ನಾಗರಾಜ್, ಗವಿರಂಗನಾಥ ಸ್ವಾಮಿ ದೇವಾಲಯದಲ್ಲಿ ಬಿಲ್ ಕಲೆಕ್ಟರ್ ಆಗಿದ್ದಾರೆ. ತಾಯಿ ಕುಸುಮಾ ಗೃಹಿಣಿ. ಇಬ್ಬರು ಹೆಣ್ಣು ಮಕ್ಕಳಲ್ಲಿ ಹಿರಿಯ ಮಗಳು ಎಂಜಿನಿಯರಿಂಗ್ ಮಾಡಿದ್ದು, ವಿವಾಹವಾಗಿದೆ. ಇನ್ನೊಬ್ಬರು ಹಾಸನದಲ್ಲಿ ಆಹಾರ ತಂತ್ರಜ್ಞಾನ ಪದವಿ ಪಡೆದಿದ್ದಾರೆ.

‘ಇನ್ನೊಂದು ಸೆಮಿಸ್ಟರ್ ಆಗಿದ್ದರೆ ಮಗನ ಎಂಜಿನಿಯರಿಂಗ್ ಮುಗಿಯುತ್ತಿತ್ತು. ಲ್ಯಾಪ್‌ಟಾಪ್ ಕೊಡಿಸು ಎಂದಿದ್ದ. ಸ್ನೇಹಿತರ ಬಳಿ ವಿಚಾರಿಸಿ ಲ್ಯಾಪ್‌ಟಾಪ್ ಖರೀದಿಗೆ ಮುಂದಾಗಿದ್ದೆ. ಶುಕ್ರವಾರ ರಾತ್ರಿ ಎರಡು ಬಾರಿ ಫೋನ್ ಮಾಡಿ ಮಾತಾಡಿದ್ದ’ ಎಂದು ವಿಜಯ ನಾಗರಾಜ್ ಕಣ್ಣೀರಿಟ್ಟರು.

### ದುಡಿದು ಓದುತ್ತಿದ್ದ ಪ್ರವೀಣ್



ಪ್ರವೀಣ್

**ಬಳ್ಳಾರಿ:** ಮೊಸಳೆಹೊಸಹಳ್ಳಿಯ ದುರಂತದಲ್ಲಿ ಮೃತಪಟ್ಟ ಬಳ್ಳಾರಿಯ ಎಂಜಿನಿಯರಿಂಗ್ ವಿದ್ಯಾರ್ಥಿ ಪ್ರವೀಣ್ ಕುಮಾರ್ (21) ತಾವೇ ದುಡಿದು ವಿದ್ಯಾಭ್ಯಾಸ ಕೈಗೊಂಡಿದ್ದರು. ರಜೆ ಸಿಕ್ಕಾಗ, ಬಿಡುವಿನ ವೇಳೆಯಲ್ಲಿ ಕೇಟರಿಂಗ್‌ಗಳಲ್ಲಿ ಕೆಲಸ ಮಾಡುತ್ತಿದ್ದರು.

ಅಂತಿಮ ವರ್ಷದ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಓದುತ್ತಿದ್ದ ಪ್ರವೀಣ್ ಕುಮಾರ್ ಇಂಟರ್ನ್‌ಶಿಪ್‌ಗೆ ಹೋಗಬೇಕಿತ್ತು. ಮೃತರ ತಾಯಿ ಸುಶೀಲಮ್ಮ ಮನೆ ಕೆಲಸ ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ.

ಪ್ರವೀಣ್ ಮೃತದೇಹ ಬಳ್ಳಾರಿಯ ನಾಗಲಕೆರೆಯ ಮನೆ ಬಳಿಗೆ ತಲುಪಿದಾಗ ತಾಯಿ, ಅಕ್ಕ, ಸಂಬಂಧಿಗಳು ಶೋಕದಲ್ಲಿದ್ದರು. ಬಳ್ಳಾರಿ ನಗರದ ಕೌಲ್ ಬಜಾರ್‌ನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು. ಮಾಜಿ ಸಚಿವ ಶ್ರೀರಾಮುಲು, ಮೇಯರ್ ಮುಲ್ಲಂಗಿ ನಂದೀಶ್ ಭೇಟಿ ನೀಡಿದರು.

### ‘ಕುಟುಂಬಕ್ಕೆ ಆಧಾರವಾಗುತ್ತಿದ್ದ’

**ಚಿಕ್ಕಮಗಳೂರು:** ‘ಇನ್ನೇನು ಎಂಜಿನಿಯರಿಂಗ್ ಮುಗಿಸಿ ಬದುಕಿಗೆ ಆಧಾರವಾಗಲಿದ್ದಾನೆ ಎಂದು ಕನಸು ಕಂಡಿದ್ದೆವು. ಅಷ್ಟರಲ್ಲಿ ಈ ರೀತಿಯಾಗಿದೆ...’



ಸುರೇಶ್

ಹಾಸನದ ಮೊಸಳೆ ಹೊಸಹಳ್ಳಿಯ ಅಪಘಾತ ದಲ್ಲಿ ಮಗನನ್ನು ಕಳೆದುಕೊಂಡ ತಾಲ್ಲೂಕಿನ ಮಾಣೇನಹಳ್ಳಿ ಗ್ರಾಮದ ಪೋಷಕರು ಶನಿವಾರ ಕಣ್ಣೀರಿಟ್ಟರು. ಮಾಣೇನಹಳ್ಳಿಯ ರವೀಶ್–ಲತಾ ದಂಪತಿಯ ಹಿರಿಯ ಮಗ ಸುರೇಶ್ (19) ಅವಘಡದಲ್ಲಿ ಮೃತಪಟ್ಟಿದ್ದಾರೆ.

ಹಾಸನದ ಮಲ್ನಾಡ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸುರೇಶ್, ಮೊಸಳೆ ಹೊಸಹಳ್ಳಿ ಸಮೀಪದ ವಸತಿ ನಿಲಯದಲ್ಲಿ ತಂಗಿದ್ದರು. ಶುಕ್ರವಾರ ಸಂಜೆ ಊಟದ ನಂತರ ಸ್ನೇಹಿತರ ಜತೆ ಗಣಪತಿ ವಿಸರ್ಜನೆ ಮೆರವಣಿಗೆ ನೋಡಲು ತೆರಳಿದ್ದರು.

ಮೃತದೇಹವನ್ನು ಶನಿವಾರ ಮಾಣೇನಹಳ್ಳಿಗೆ ತರಲಾಯಿತು. ಈ ವೇಳೆ ಗ್ರಾಮದಲ್ಲಿ ಆಕ್ರಂದನ ಮುಗಿಲು ಮುಟ್ಟಿತ್ತು. ಗ್ರಾಮಸ್ಥರು, ಸಂಬಂಧಿಕರ ಕಣ್ಣೀರಿನ ನಡುವೆ ಅಂತ್ಯಕ್ರಿಯೆ ನಡೆಯಿತು. ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಗ್ರಾಮಕ್ಕೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

## ಲಂಚ ವರದಿ: ಅಧ್ಯಯನಕ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಿಂದಿನ ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಗುತ್ತಿಗೆದಾರರು ಮಾಡಿದ್ದ ಶೇ 40 ಲಂಚ ಆರೋಪ ಕುರಿತು ತನಿಖೆ ನಡೆಸಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನದಾಸ್ ನೇತೃತ್ವದ ವಿಚಾರಣಾ ಆಯೋಗ ಸಲ್ಲಿಸಿರುವ ವರದಿಯನ್ನು ಕೂಲಂಕಶವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸಲು ನಿವೃತ್ತ ಐಎಎಸ್ ಅಧಿಕಾರಿ ಸುಧೀರ್ ಕೃಷ್ಣ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರ ಸಮಿತಿ ರಚಿಸಿದೆ.

ನಿವೃತ್ತ ಮುಖ್ಯ ಎಂಜಿನಿಯರ್‌ಗಳಾದ ಶ್ರೀನಿವಾಸ್, ಕೆ.ಪಿ. ಶಿವಕುಮಾರ್, ರಾಷ್ಟ್ರೀಯ ಹೆದ್ದಾರಿ ದಕ್ಷಿಣ ವಲಯ ಲೆಕ್ಕಾಧಿಕಾರಿ (ಮುಖ್ಯ ಎಂಜಿನಿಯರ್) ಲೋಕೇಶ್ ವಿ. ಕುಕ್ಯಾನ, ಲೋಕೋಪಯೋಗಿ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿ (ಸಂಪರ್ಕ ಮತ್ತು ಕಟ್ಟಡ), ಅಧೀಕ್ಷಕ ಎಂಜಿನಿಯರ್ (ಸಂಪರ್ಕ ಮತ್ತು ಕಟ್ಟಡ, ದಕ್ಷಿಣ)) ಈ ಐವರು ಸಮಿತಿಯ ಸದಸ್ಯರು. ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರದ ಮುಖ್ಯ ಎಂಜಿನಿಯರ್ ಸದಸ್ಯ ಕಾರ್ಯದರ್ಶಿ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ 2019ರ ಜುಲೈ 26ರಿಂದ 2023ರ ಮಾರ್ಚ್ 31ರ ಅವಧಿಯಲ್ಲಿ ಬಿಬಿಎಂಪಿ, ಬಿಡಿಎ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಜಲಸಂಪನ್ಮೂಲ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಳ ಬಿಲ್ ಮಂಜೂರು ಮಾಡಲು ಶೇ 40 ಲಂಚ, ಅವ್ಯವಹಾರ ನಡೆದಿದೆ ಎಂದು ಗುತ್ತಿಗೆದಾರರು ಆರೋಪಿಸಿದ್ದರು. ಈ ಬಗ್ಗೆ ತನಿಖೆ ನಡೆಸಲು ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ನಾಗಮೋಹನದಾಸ್ ನೇತೃತ್ವದಲ್ಲಿ ಆಯೋಗ ರಚಿಸಿತ್ತು.

ಆಯೋಗವು ಮೂರು ಲಕ್ಷ ಕಾಮಗಾರಿಗಳ ಪೈಕಿ, 1,729 ಕಾಮಗಾರಿಗಳನ್ನು ಮಾದರಿಯಾಗಿ ತೆಗೆದುಕೊಂಡು ಪರಿಶೀಲನೆ ನಡೆಸಿ ವರದಿ ನೀಡಿತ್ತು.

### ಚಿತ್ರದುರ್ಗ: ಕೊನೆ ಕ್ಷಣದಲ್ಲಿ ಡಿ.ಜೆಗೆ ಅನುಮತಿ

## ಯಶಸ್ವಿ ಶೋಭಾಯಾತ್ರೆ, ಶಾಂತಿಯುತ

ಪ್ರಜಾವಾಣಿ ವಾರ್ತೆ

**ಚಿತ್ರದುರ್ಗ:** ವಿಶ್ವ ಹಿಂದೂ ಪರಿಷತ್, ಬಜರಂಗದಳ ಪ್ರತಿಷ್ಠಾಪಿಸಿದ್ದ ಮಹಾ ಗಣಪತಿ ವಿಸರ್ಜನೆ ನಿಮಿತ್ತ ಶನಿವಾರ ಇಲ್ಲಿ ನಡೆದ ಶೋಭಾಯಾತ್ರೆಗೆ ಭಾರಿ ಸಂಖ್ಯೆಯಲ್ಲಿ ಗಣೇಶನ ಭಕ್ತರು ಸಾಕ್ಷಿಯಾದರು.

18ನೇ ವರ್ಷದ ಉತ್ಸವದ ಅಂಗವಾಗಿ ಬಿ.ಡಿ ರಸ್ತೆಯ ಜೈನಧಾಮದಲ್ಲಿ 18 ಅಡಿ ಎತ್ತರದ ಗಣೇಶ ಮೂರ್ತಿ ಪ್ರತಿಷ್ಠಾಪಿಸಲಾಗಿತ್ತು. ಭದ್ರತೆಯ ದೃಷ್ಟಿಯಿಂದ ಪೊಲೀಸರು ಡಿ.ಜೆ ಬಳಕೆಗೆ ಅವಕಾಶ ನಿರಾಕರಿಸಿದ್ದರು. ನಗರಕ್ಕೆ ಬರುತ್ತಿದ್ದ ಡಿ.ಜೆ ಘಟಕಗಳನ್ನು ಪ್ರವೇಶ ದ್ವಾರದಲ್ಲೇ ತಡೆದಿದ್ದರು.

ಆದರೆ ವಿಎಚ್‌ಪಿ, ಬಜರಂಗದಳದ ಕಾರ್ಯಕರ್ತರು ಶುಕ್ರವಾರ ಮಧ್ಯರಾತ್ರಿವರೆಗೂ ರಸ್ತೆತಡೆ ನಡೆಸಿ ಡಿ.ಜೆಗೆ ಅನುಮತಿ ನೀಡಲು ಪಟ್ಟು ಹಿಡಿದಿದ್ದರು. ಅಂತಿಮವಾಗಿ ಆರು ಡಿ.ಜೆಗಳಿಗೆ ಅನುಮತಿ ಸಿಕ್ಕಿತು. ರಾಜ್ಯ, ಹೊರ ರಾಜ್ಯಗಳಿಂದ ಬಂದಿದ್ದ ಭಕ್ತರು ಡಿ.ಜೆ ಸಂಗೀತಕ್ಕೆ ನರ್ತಿಸಿದರು.

ವಿವಿಧ ಮಠಗಳ ಪೀಠಾಧಿಪತಿಗಳು ಸಂಘಟನೆ, ರಾಜಕೀಯ ಪಕ್ಷಗಳ ಮುಖಂಡರು ಮಧ್ಯಾಹ್ನ 1.30ಕ್ಕೆ ಶೋಭಾಯಾತ್ರೆಗೆ ಚಾಲನೆ ನೀಡಿದರು. ವಿಶ್ವ ಹಿಂದೂ ಪರಿಷತ್ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಅವರ ಜಿಲ್ಲಾ ಪ್ರವೇಶಕ್ಕೆ ಜಿಲ್ಲಾಧಿಕಾರಿ ನಿರ್ಬಂಧ ಹೇರಿದ್ದರು. ಆದರೆ ಅವರು ಹೈಕೋರ್ಟ್ ಅನುಮತಿ ಪಡೆದು ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಪ್ರಮುಖ ರಸ್ತೆಗಳಲ್ಲಿ ಸಾಗಿದ ಶೋಭಾಯಾತ್ರೆ ಭಾನುವಾರ ನಸುಕಿನ ವೇಳೆಗೆ ಚಂದ್ರವಳ್ಳಿ ತಲುಪಿತು. ಅಲ್ಲಿನ ಕೆರೆಯಲ್ಲಿ ಮೂರ್ತಿ ವಿಸರ್ಜಿಸಲಾಯಿತು. ಭದ್ರತೆಗೆ 3,000ಕ್ಕೂ ಹೆಚ್ಚು ಸಿಬ್ಬಂದಿ ನಿಯೋಜಿಸಲಾಗಿತ್ತು.

**ಕೇಸರಿ ಧ್ವಜಕ್ಕೆ ₹6 ಲಕ್ಷ:** ಗಣಪತಿ ಪೂಜೆಗೆ ಬಳಸಿದ್ದ ವಿವಿಧ ವಸ್ತುಗಳ ಹರಾಜು ಪ್ರಕ್ರಿಯೆ ನಡೆಯಿತು.

ಮೂರ್ತಿಗೆ ಹೊದಿಸಿದ್ದ ಕೇಸರಿ ಧ್ವಜವನ್ನು (ಮುಕ್ತಿ ಬಾವುಟ) ಬಿಜೆಪಿ ಮುಖಂಡ ಹನುಮಂತೇಗೌಡ ಅವರು ₹6 ಲಕ್ಷಕ್ಕೆ ಪಡೆದರು.

ತಿರುಪತಿ ಮಾದರಿ ಪ್ರತಿಮೆಯನ್ನು ಉದ್ಯಮಿ ವಜ್ರ ಮಹೇಶ್ ₹5.25 ಲಕ್ಷಕ್ಕೆ, ಗಣೇಶ ಚಿತ್ರಪಟವನ್ನು ಮಂಜಣ್ಣ ₹1.5 ಲಕ್ಷ, ಫಲಾಹಾರವನ್ನು ಕಿರಣ್ ಕುಮಾರ್ ₹1 ಲಕ್ಷಕ್ಕೆ ಪಡೆದರು.

### ಮೊಳಗಿದ ‘ಪಪ್ಪಿ’ ಹಾಡು

ಬೆಟ್ಟಿಂಗ್ ಪ್ರಕರಣದಲ್ಲಿ ಬಂಧನದಲ್ಲಿರುವ ಶಾಸಕ ಕೆ.ಸಿ.ವೀರೇಂದ್ರ (ಪಪ್ಪಿ) ಅವರ ಗುಣಗಾನದ ಡಿ.ಜೆ ಹಾಡು ಶೋಭಾಯಾತ್ರೆ ವೇಳೆ ಮೊಳಗಿತು. ವಾಹನಕ್ಕೆ ಶಾಸಕರ ಭಾವಚಿತ್ರವುಳ್ಳ ಎಲ್‌ಇಡಿ ಪರದೆ ಅಳವಡಿಸಲಾಗಿತ್ತು. ‘ದುರ್ಗದ ನಾಡಿನ ಪಪ್ಪಿ, ನಮ್ಮಣ್ಣ ಪಪ್ಪಿ’ ಹಾಡಿಗೆ ಶಾಸಕರ ಅಭಿಮಾನಿಗಳು ಕುಣಿದರು.

**ಸಂಕ್ಷಿಪ್ತ ಸುದ್ದಿ**

### ಐವರ ವಿರುದ್ಧ ಪೋಕ್ಸೊ ಪ್ರಕರಣ

**ಯಾದಗಿರಿ:** ಬಾಲಕಿಯರ ಮದುವೆಯಾಗಿ, ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಐವರ ವಿರುದ್ಧ ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಪೋಕ್ಸೊ ಪ್ರಕರಣಗಳು ದಾಖಲಾಗಿವೆ.

ಸುರಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಾಲಕಿಗೆ 13 ವರ್ಷವಿದ್ದಾಗಲೇ ಮದುವೆ ಮಾಡಿದ್ದರು. 2023ರ ಜುಲೈನಲ್ಲಿ ಹೆಣ್ಣು ಶಿಶು, ಇದೇ ತಿಂಗಳ 7ರಂದು ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಈ ಸಂಬಂಧ ಬಾಲಕಿಯ ಪತಿ, ಆಕೆಯ ತಾಯಿ, ತಂದೆ ಮತ್ತು ಅತ್ತೆಯ ವಿರುದ್ಧ ಪ್ರಕರಣ ದಾಖಲಾಗಿದೆ.

ಸೈದಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 17 ವರ್ಷದ ಬಾಲಕಿಗೆ ಬೆದರಿಸಿ ದೇವರ ಫೋಟೊ ಮುಂದೆ ಆಕೆಗೆ ತಾಳಿ ಕಟ್ಟಿ ಮದುವೆಯಾಗಿ, ಆಕೆಯೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದ ಆರೋಪದಡಿ ಪತಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

### ಶಾಸಕಗೆ ಅಶ್ಲೀಲ ವಿಡಿಯೊ: ಬಂಧನ

**ಔರಾದ್ (ಬೀದರ್ ಜಿಲ್ಲೆ):** ಕ್ಷೇತ್ರದ ಶಾಸಕ ಪ್ರಭು ಚವಾಣ್ ಅವರ ವಾಟ್ಸ್‌ಆ್ಯಪ್ ಸಂಖ್ಯೆಗೆ ಅಶ್ಲೀಲ ವಿಡಿಯೊ ಕಳುಹಿಸಿ ₹ 30 ಸಾವಿರ ಬೇಡಿಕೆ ಇಟ್ಟಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ತಾಲ್ಲೂಕಿನ ನಂದಿಬಿಜಲಗಾಂವ್ ತಾಂಡಾದ ನಿವಾಸಿ ವಿಕಾಸ ಪವಾರ್ ಬಂಧಿತ. ಆರೋಪಿಯು ಶಾಸಕ ಹಾಗೂ ಯುವತಿಯೊಬ್ಬಳ ಫೋಟೊ ಜೋಡಿಸಿದ್ದು ಹಣ ನೀಡದಿದ್ದರೆ ಯೂಟ್ಯೂಬ್‌ನಲ್ಲಿ ಪ್ರಕಟಿಸುವುದಾಗಿ ಬೆದರಿಕೆ ಹಾಕಿದ್ದ.

### ಇಬ್ಬರು ನೌಕರರ ವಜಾ

**ಬೀದರ್:** ಹಣ ದುರ್ಬಳಕೆ, ಭ್ರಷ್ಟಾಚಾರ ಆರೋಪದಡಿ ಕರ್ನಾಟಕ ಪಶು ವೈದ್ಯಕೀಯ, ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಇಬ್ಬರು ಗುತ್ತಿಗೆ ನೌಕರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಹಣಕಾಸು ನಿಯಂತ್ರಣಾಧಿಕಾರಿ ಕಚೇರಿಯ ಸಹಾಯಕ ಸೋಮೇಶ್ವರ್ ಹಾಗೂ ಸಂಶೋಧನಾ ನಿರ್ದೇಶನಾಲಯದ ಅಟೆಂಡರ್ ತುಕಾರಾಮ್ ಮೇತ್ರೆ ಅಮಾನತುಗೊಂಡವರು.



Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಕಿರಾಣಿ ಅಂಗಡಿಗಳಿಗೆ ಗ್ರಹಣ

ಒಂದನೇ ಪುಟದಿಂದ..

ತಲೆಮಾರುಗಳಿಂದಲೂ ಕಿರಾಣಿ ಅಂಗಡಿಗಳು ಭಾರತೀಯ ಸಮಾಜದ ಅವಿಭಾಜ್ಯ ಅಂಗವಾಗಿವೆ. ಇವುಗಳಿಗೆ ಎರಡು ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. ದಶಕದ ಹಿಂದೆ ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ಈ ಅಂಗಡಿಗಳ ಪಾಲು ಶೇ 80ರಷ್ಟಿತ್ತು. ಇ-ಕಾಮರ್ಸ್ ಮತ್ತು ಕ್ವಿಕ್ ಕಾಮರ್ಸ್ ಕಂಪನಿಗಳ ಕಾರ್ಯಾಚರಣೆ ಹೆಚ್ಚಿರುವುದರಿಂದ ಇವುಗಳ ಪಾಲು ಅರ್ಧದಷ್ಟು ಕುಸಿದಿದೆ.

ಜನರಿಗೆ ಈಗ ನೆರೆಯ ಅಂಗಡಿಗೆ ಹೋಗಿ ದಿನಬಳಕೆಯ ವಸ್ತುಗಳನ್ನು ಖರೀದಿಸಲು ಪುರುಸೊತ್ತಿಲ್ಲ. ಕುಳಿತಲ್ಲಿಗೆ ಎಲ್ಲವೂ ತ್ವರಿತವಾಗಿ ಬೇಕೆಂಬ ಹಂಬಲ. ಹಾಗಾಗಿ, ಕ್ವಿಕ್ ಕಾಮರ್ಸ್‌ನ ಮೊರೆ ಹೋಗಿದ್ದಾರೆ.

ಬೆಳಿಗ್ಗೆ ವಾಯುವಿಹಾರಕ್ಕೆ ಹೋದವರು ಹಾಲಿನ ಪ್ಯಾಕೆಟ್, ದಿನಪತ್ರಿಕೆ ಖರೀದಿಸಿದ ಬಳಿಕ ದಿನಸಿ ಅಂಗಡಿಗೆ ಹೋಗುತ್ತಿದ್ದರು. ಅಂಗಡಿ ಮಾಲೀಕರೊಂದಿಗೆ ಕುಶಲೋಪರಿ ನಡೆಸಿ ದಿನಸಿ ಖರೀದಿಸಿ ಮನೆಯತ್ತ ಹೆಜ್ಜೆ ಹಾಕುತ್ತಿದ್ದರು. ಗ್ರಾಹಕ ಮತ್ತು ವ್ಯಾಪಾರಿ ನಡುವೆ ಬಾಂಧವ್ಯ ಬೆಸೆದುಕೊಂಡಿತ್ತು. ಕ್ವಿಕ್ ಕಾಮರ್ಸ್‌ನಿಂದ ಅದು ಕಣ್ಮರೆಯಾಗಿದೆ.

ಜಾಗತಿಕ ಮಟ್ಟದಲ್ಲಿ ಮೊದಲ ಬಾರಿಗೆ ಕೆಲವೇ ನಿಮಿಷಗಳಲ್ಲಿ ಜನರ ಮನೆ ಬಾಗಿಲಿಗೆ ದಿನಸಿ ತಲುಪಿಸುವ ಸೇವೆ ಆರಂಭಿಸಿದ್ದು, ಟರ್ಕಿ ದೇಶದ ‘ಗೆಟಿರ್’ ಎಂಬ ಕಂಪನಿ. 2013ರಲ್ಲಿ ಬ್ಲಿಂಕಿಟ್ ಕಂಪನಿಯು ಭಾರತದ ಮಹಾನಗರಗಳಲ್ಲಿ ಇನ್‌ಸ್ಟಂಟ್ ಡೆಲಿವರಿ ಸೇವೆ ಆರಂಭಿಸಿತು. ಈಗ ಬಿಗ್‌ಬಾಸ್ಕೆಟ್ ನೌ, ಇನ್‌ಸ್ಟಾ ಮಾರ್ಟ್, ಜೆಪ್ಟೊ, ಫ್ಲಿಪ್‌ಕಾರ್ಟ್ ಮಿನಿಟ್ಸ್ 10 ನಿಮಿಷದಲ್ಲಿ ಸೇವೆ ಒದಗಿಸುತ್ತವೆ. ಅಗ್ಗದ ರಿಯಾಯಿತಿ ಸೌಲಭ್ಯ ನೀಡುವ ಮೂಲಕ ಗ್ರಾಹಕರ ನೆಲೆಯನ್ನು ವಿಸ್ತರಿಸಿಕೊಳ್ಳುತ್ತಿವೆ. ಗೃಹ ಬಳಕೆಯ ಕೆಲವು ವಸ್ತುಗಳಿಗೆ ಶೇ 20ರಿಂದ ಶೇ 30ರಷ್ಟು ರಿಯಾಯಿತಿ ನೀಡುತ್ತವೆ. ಗ್ರಾಹಕರನ್ನು ಸೆಳೆಯುವುದೇ ಇದರ ಹಿಂದಿರುವ ತಂತ್ರ. ಇದು ಸಾಂಪ್ರದಾಯಿಕ ಕಿರಾಣಿ ಅಂಗಡಿಗಳ ಕತ್ತನ್ನು ಹಿಸುಕುತ್ತಿದೆ.

ಕ್ವಿಕ್ ಕಾಮರ್ಸ್ ಕಂಪನಿಗಳು ಆರಂಭದಲ್ಲಿ ದಿನಸಿ ಸಾಮಗ್ರಿಗಳನ್ನಷ್ಟೇ ವಿತರಿಸುತ್ತಿದ್ದವು. ಈಗ ಹಾಲು, ಮೊಟ್ಟೆಯಿಂದ ಹಿಡಿದು ಐಫೋನ್‌ನಂತಹ ಐಷಾರಾಮಿ ವಸ್ತುಗಳನ್ನೂ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುತ್ತವೆ. ಯುಗಾದಿ, ದೀಪಾವಳಿ ಹಬ್ಬದ ದಿನಗಳಂದು ಕಿರಾಣಿ ಅಂಗಡಿಗಳ ಮುಂದೆ ಜನರು ಸಾಲುಗಟ್ಟಿ ನಿಲ್ಲುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಈಗ ಅಂತಹ ದೃಶ್ಯಗಳನ್ನು ಕಾಣಲು ಸಾಧ್ಯವೇ ಇಲ್ಲದಂತಾಗಿದೆ. ಗ್ರಾಹಕರ ಕೊಳ್ಳುಬಾಕತನಕ್ಕೆ ತಕ್ಕಂತೆ ಹಬ್ಬದ ವೇಳೆಯೂ ಭರ್ಜರಿ ರಿಯಾಯಿತಿ ಪ್ರಕಟಿಸಿ ಗ್ರಾಹಕರನ್ನು ತಮ್ಮತ್ತ ಸೆಳೆಯುತ್ತಿವೆ.

‘ಕ್ವಿಕ್ ಕಾಮರ್ಸ್ ಸೇವೆಯಿಂದ ಶೇ 25ರಷ್ಟು ಗ್ರಾಹಕರ ಕೊರತೆ ಎದುರಾಗಿದೆ. ಯುವಜನರು ಅಂಗಡಿಗೆ ಬರುವುದೇ ಕಡಿಮೆಯಾಗಿದೆ’ ಎಂದು ಹೇಳುತ್ತಾರೆ ಮೈಸೂರಿನ ಸಂತೆಪೇಟೆಯ ಚಂದನ್ ಎಂಟರ್‌ಪ್ರೈಸಸ್ ಮಾಲೀಕ ಹರ್ಷ.

‘32 ವರ್ಷದಿಂದ ಅಂಗಡಿಯನ್ನು ನಡೆಸುತ್ತಿದ್ದೇನೆ. ಹಿಂದಿನವರು ತಿಂಗಳಿಗೆ ಬೇಕಾದ ಸಾಮಗ್ರಿಗಳ ಪಟ್ಟಿ ಹಿಡಿದು ಅಂಗಡಿಗಳಿಗೆ ಬರುತ್ತಿದ್ದರು. ಸಾಮಾಜಿಕವಾಗಿ ಬೆರೆಯುವುದು ಪ್ರಮುಖವಾಗಿತ್ತು. ಮದುವೆ, ಹಬ್ಬಗಳಿಗೆ ನಮ್ಮನ್ನು ಕರೆಯುವಷ್ಟು ಆತ್ಮೀಯತೆ ಬೆಳೆದಿತ್ತು. ಈ ದಿನಸಿ ಪಟ್ಟಿ ತರುವವರೇ ಕಾಣೆಯಾಗಿದ್ದಾರೆ’ ಎಂಬುದು ಅವರ ನೋವಿನ ನುಡಿ.

ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ದೊಡ್ಡ ಸಗಟುದಾರರು ನೇರವಾಗಿ ಅಥವಾ ಏಜೆಂಟರ ಮೂಲಕ ಖರೀದಿಸುತ್ತಿದ್ದರು. ಬಳಿಕ ಆ ಉತ್ಪನ್ನಗಳನ್ನು ಸಂಸ್ಕರಿಸಿ, ತೂಕಕ್ಕೆ ಅನುಗುಣವಾಗಿ ಪ್ಯಾಕಿಂಗ್ ಮಾಡಿ ನಗರ, ಪಟ್ಟಣ ಪ್ರದೇಶದಲ್ಲಿನ ಚಿಲ್ಲರೆ ದಿನಸಿ ಅಂಗಡಿಗಳಿಗೆ ತಲುಪಿಸುತ್ತಿದ್ದರು. ಚಿಲ್ಲರೆ ವ್ಯಾಪಾರಸ್ಥರಿಂದ ಹಣ ಪಡೆದ ಬಳಿಕ ಸಗಟುದಾರರು, ರೈತರಿಗೆ ಪೂರ್ಣ ಹಣ ನೀಡುತ್ತಿದ್ದ ಪದ್ಧತಿ ಇತ್ತು. ರೈತ, ಸಗಟುದಾರ ಮತ್ತು ಚಿಲ್ಲರೆ ವ್ಯಾಪಾರಿ ನಡುವೆ ಅವ್ಯಕ್ತವಾದ ಸಂಪರ್ಕ ಕೊಂಡಿ ಬೆಸೆದುಕೊಂಡಿತ್ತು. ಕ್ವಿಕ್ ಕಾಮರ್ಸ್ ಸೇವೆಯು ಇದನ್ನು ಪೂರೈಕೆ ಸರಪಳಿಯನ್ನು ತುಂಡರಿಸಿದೆ.


ಕಲಬುರಗಿಯ ಕಿರಾಣಿ ಬಜಾರ್‌ನ ಅಂಗಡಿಗಳಲ್ಲಿ ಕಿರಾಣಿ ಖರೀದಿ ಮಾಡುತ್ತಿರುವ ಗ್ರಾಹಕರು
ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

‘ಶಿವಮೊಗ್ಗದಲ್ಲಿ ಕ್ವಿಕ್ ಕಾಮರ್ಸ್ ಕಂಪನಿಗಳ ಪೈಪೋಟಿಯಿಂದ ಕಿರಾಣಿ ಅಂಗಡಿಗಳ ವಹಿವಾಟಿಗೆ ಶೇ 40ರಷ್ಟು ಹೊಡೆತ ಬಿದ್ದಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಕಿರಾಣಿ ವ್ಯಾಪಾರ ಮಾಡುವುದು ಕಷ್ಟವಾಗಲಿದೆ’ ಎಂದು ಹೇಳುತ್ತಾರೆ ಶಿವಮೊಗ್ಗದ ದಿನಸಿ ವರ್ತಕರ ಸಂಘದ ಅಧ್ಯಕ್ಷ ಪಿ.ಎಸ್. ಹಾಲಸ್ವಾಮಿ.

‘ಇದು ಪೈಪೋಟಿ ಯುಗ. ಡಿಜಿಟಲೀಕರಣ, ಪರವಾನಗಿ ನವೀಕರಣ, ವಿದ್ಯುತ್ ಶುಲ್ಕ, ಬಾಡಿಗೆ ಹೆಚ್ಚಳದ ಕಾರಣ ಕಿರಾಣಿ ಅಂಗಡಿಯವರಿಗೆ ಖರ್ಚು ಹೆಚ್ಚಾಗಿ ಲಾಭ ಕಡಿಮೆಯಾಗಿದೆ. ಶಿವಮೊಗ್ಗದಲ್ಲಿ ಕಿರಾಣಿ ಅಂಗಡಿಗಳು ಬಂದ್ ಆಗಿರುವುದು ಕಡಿಮೆ. ಸೀಮಿತ ಆದಾಯದಲ್ಲಿಯೇ ಬದುಕುವುದನ್ನು ಕಲಿತಿದ್ದಾರೆ. ಆದರೆ, ಕ್ವಿಕ್ ಕಾಮರ್ಸ್ ಕಂಪನಿಗಳಿಗೆ ಪೈಪೋಟಿ ನೀಡುವುದು ಸವಾಲಾಗಿದೆ’ ಎಂಬುದು ಅವರ ಅನುಭವ ಮಾತು.

**2 ಲಕ್ಷ ಅಂಗಡಿ ಸ್ಥಗಿತ:** ಅಖಿಲ ಭಾರತ ಗ್ರಾಹಕ ವಸ್ತುಗಳ ಪೂರೈಕೆ ಒಕ್ಕೂಟ (ಎಐಸಿಪಿಡಿಎಫ್) ದೇಶದ ಪ್ರಮುಖ ಸಗಟುದಾರರು ಮತ್ತು ಚಿಲ್ಲರೆ ವ್ಯಾಪಾರಸ್ಥರ ಪರ ಹೋರಾಡುವ ಒಕ್ಕೂಟವಾಗಿದೆ. ಇದರಡಿ 1.3 ಕೋಟಿ ಚಿಲ್ಲರೆ ವ್ಯಾಪಾರಿಗಳು ಮತ್ತು 8 ಲಕ್ಷ ವಿತರಕರಿದ್ದಾರೆ. ಒಕ್ಕೂಟದ ಮಾಹಿತಿ ಪ್ರಕಾರ, ಕ್ವಿಕ್ ಕಾಮರ್ಸ್ ಹಾವಳಿಯಿಂದ ದೇಶದಲ್ಲಿ 2 ಲಕ್ಷ ಕಿರಾಣಿ ಅಂಗಡಿಗಳು ಬಾಗಿಲು ಮುಚ್ಚಿವೆ.

ಕ್ವಿಕ್ ಕಾಮರ್ಸ್‌ನ ಈ ಕ್ಷಿಪ್ರ ಬೆಳವಣಿಗೆಯ ಹಿಂದೆ ತ್ವರಿತ ಬಿಕರಿ ಗ್ರಾಹಕ ಉತ್ಪನ್ನ ತಯಾರಿಸುವ ಕಂಪನಿಗಳ (ಎಫ್‌ಎಂಸಿಜಿ) ಪಾತ್ರವೂ ಇದೆ. ಗ್ರಾಹಕರ ಅಗತ್ಯಕ್ಕೆ ಅನುಗುಣವಾಗಿ ಉತ್ಪನ್ನಗಳನ್ನು ಪ್ಯಾಕಿಂಗ್ ಮಾಡಿ ಕ್ವಿಕ್ ಕಾಮರ್ಸ್ ಕಂಪನಿಗಳಿಗೆ ಒದಗಿಸುತ್ತವೆ.

ಕೋವಿಡ್ ಸಾಂಕ್ರಾಮಿಕದ ವೇಳೆ ಜನರು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಒತ್ತು ನೀಡಿದ್ದರು. ಈ ವೇಳೆ ಕಿರಾಣಿ ಅಂಗಡಿಗಳಿಗೆ ಎಡತಾಕಿದ್ದು ಕಡಿಮೆ. ಕ್ವಿಕ್ ಕಾಮರ್ಸ್ ಸೇವೆ ಅವಲಂಬಿಸಿದ್ದು ಹೆಚ್ಚು. ಆ ಸಂದರ್ಭದಲ್ಲಿ ಇವುಗಳ ತ್ವರಿತ ಸೇವೆಯು ಟೈರ್ 2 ಮತ್ತು ಟೈರ್ 3 ನಗರಗಳಿಗೂ ವಿಸ್ತರಿಸಿತು. ತ್ವರಿತವಾಗಿ ಸೇವೆ ಒದಗಿಸುವ ದಿಸೆಯಲ್ಲಿ ನಗರಗಳಲ್ಲಿ ಅಗತ್ಯವಿರುವೆಡೆ ‘ಡಾರ್ಕ್ ಸ್ಟೋರ್’ ತೆರೆಯುತ್ತಿವೆ.

ಸಣ್ಣ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಉದ್ರಿ ಹೋಗಿ ನೇರ ವ್ಯವಹಾರ ನಡೆಯುತ್ತಿದ್ದರೂ ಕಿರಾಣಿ ಅಂಗಡಿಯ ವಹಿವಾಟು ಕಡಿಮೆಯಾಗಿದೆ. ಸೂಪರ್ ಮಾರ್ಕೆಟ್‌ಗೆ ಹೋಗುವ ಗ್ರಾಹಕರಿಗೆ ಅಲ್ಲಿಯೇ ಎಲ್ಲ ಬಗೆಯ ಉತ್ಪನ್ನಗಳನ್ನು ಪರಿಶೀಲಿಸಿಕೊಳ್ಳಲು ಅವಕಾಶವಿದೆ. ಭರ್ಜರಿ ರಿಯಾಯಿತಿ ಸಿಗುವ ಕಾರಣ ಸಣ್ಣ ಅಂಗಡಿಗಳಿಗೆ ಬರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ದೂರದ ಮಾರುಕಟ್ಟೆಗೆ ಹೋಗಲಾಗದವರು ಮಾತ್ರ ಸಣ್ಣಪುಟ್ಟ ಅಂಗಡಿಗಳ ಗ್ರಾಹಕರಾಗಿ ಉಳಿದುಕೊಂಡಿದ್ದಾರೆ ಎನ್ನುತ್ತಾರೆ ಕಿರಾಣಿ ಅಂಗಡಿ ವರ್ತಕರು.

**ಪ್ರಿಡೇಟರಿ ಪ್ರೈಸಿಂಗ್:** ಕೆಲವು ಇ-ಕಾಮರ್ಸ್ ಕಂಪನಿಗಳು ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಸ್ಥಾಪಿಸಲು ತಂತ್ರಗಾರಿಕೆ ನಡೆಸುತ್ತವೆ. ತಮ್ಮ ಉತ್ಪನ್ನಗಳನ್ನು ಅದರ ಮೂಲ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಗ್ರಾಹಕರಿಗೆ ಮಾರಾಟ ಮಾಡುವ ತಂತ್ರ ಅನುಸರಿಸುತ್ತವೆ. ಅದಕ್ಕೆ ‘ಪ್ರಿಡೇಟರಿ ಪ್ರೈಸಿಂಗ್’ ಎಂದು ಕರೆಯಲಾಗುತ್ತದೆ. ಇದು ಕಾಂಪಿಟೇಷನ್ಸ್ ಕಾಯ್ದೆ 2002ರ ಸೆಕ್ಷನ್ 4ರ ಪ್ರಕಾರ ಇದು ಕಾನೂನುಬಾಹಿರ.

ದೈತ್ಯ ಕಂಪನಿಗಳ ಈ ತಂತ್ರವನ್ನು ಸಣ್ಣ ಕಂಪನಿಗಳು ಎದುರಿಸಲಾರದೆ ಮಾರುಕಟ್ಟೆಯ ಸ್ಪರ್ಧೆಯಿಂದ ಹೊರಬೀಳುತ್ತವೆ. ಆ ಮೂಲಕ ದೈತ್ಯ ಕಂಪನಿಯು ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಸಾಧಿಸುತ್ತದೆ. ಆರಂಭದಲ್ಲಿ ಗ್ರಾಹಕರಿಗೆ ಭಾರಿ ರಿಯಾಯಿತಿ ನೀಡಿದ್ದರಿಂದ ಆದ ನಷ್ಟ ತುಂಬಿಕೊಳ್ಳಲು ನಂತರದ ದಿನಗಳಲ್ಲಿ ಉತ್ಪನ್ನಗಳ ಬೆಲೆಯನ್ನು ಹೆಚ್ಚಿಸಿ ಲಾಭ ಮಾಡಿಕೊಳ್ಳುತ್ತದೆ.

ಎಫ್‌ಎಂಸಿಜಿ ಕಂಪನಿಗಳಿಂದ ಉತ್ಪನ್ನಗಳನ್ನು ಖರೀದಿಸುವ ಇ-ಕಾಮರ್ಸ್ ಮತ್ತು ಕ್ವಿಕ್ ಕಾಮರ್ಸ್ ಕಂಪನಿಗಳು ಭಾರಿ ರಿಯಾಯಿತಿ ನೀಡುತ್ತಿವೆ. ಇದಕ್ಕೆ ಅಖಿಲ ಭಾರತ ಗ್ರಾಹಕ ವಸ್ತುಗಳ ಪೂರೈಕೆ ಒಕ್ಕೂಟ ಆಕ್ಷೇಪ ವ್ಯಕ್ತಪಡಿಸಿದೆ. ರಿಯಾಯಿತಿ ಸಮರವು ಮಾರುಕಟ್ಟೆಯಲ್ಲಿ ಅನಾರೋಗ್ಯಕರ ಪೈಪೋಟಿ ಸೃಷ್ಟಿಸಲಿದೆ. ಕಿರಾಣಿ ಅಂಗಡಿಗಳ ವ್ಯಾಪಾರಕ್ಕೆ ಪೆಟ್ಟು ಬೀಳಲಿದೆ. ಜೊತೆಗೆ, ದೇಶದ ಆರ್ಥಿಕತೆಯ ಮಂದಗತಿ ಬೆಳವಣಿಗೆಗೆ ಕಾರಣವಾಗಲಿದೆ. ‘ಪ್ರಿಡೇಟರಿ ಪ್ರೈಸಿಂಗ್’ ಹಾಗೂ ರಿಯಾಯಿತಿ ಸೌಲಭ್ಯ ನೀಡುವುದಕ್ಕೆ ಮಾನದಂಡ ರೂಪಿಸಬೇಕು ಎಂದು ಒಕ್ಕೂಟವು, ಭಾರತೀಯ ಸ್ಪರ್ಧಾತ್ಮಕ ಆಯೋಗದ (ಸಿಸಿಐ) ಕದ ತಟ್ಟಿದೆ.

ಡಿಜಿಟಲ್ ಕರಾಮತ್ತು ‘ಮತ್ತೊಮ್ಮೆ ಬರುವುದಕ್ಕೆ ಸಮಯವಾಗದಿದ್ದರೆ ಯಾವ ದಿನಸಿ ಸಾಮಗ್ರಿಗಳು ಬೇಕೆಂದು ವಾಟ್ಸ್‌ಆ್ಯಪ್ ಮಾಡಿ ಸರ್, ಹುಡುಗನ ಹತ್ರ ಕೊಟ್ಟು ಕಳಿಸ್ತೀನಿ, ಅವನತ್ರನೇ ಕ್ಯೂಆರ್‌ಕೋಡ್ ಇರುತ್ತೆ, ಹಣವನ್ನು ಸ್ಕ್ಯಾನ್ ಮೂಲಕ ಪಾವತಿ ಮಾಡಬಹುದು’. ‘ಮೈಸೂರಿನ ಬಲ್ಲಾಳ ವೃತ್ತದ ಅಶೋಕ ಸ್ಟೋರ್ಸ್ ಮಾಲೀಕ ಕಶ್ಯಪ್ ಅವರು, ಗ್ರಾಹಕರೊಂದಿಗೆ ವ್ಯವಹರಿಸುವ ರೀತಿ ಇದು.

'ಗ್ರಾಹಕರನ್ನು ಪ್ರೀತಿಯಿಂದ ಮಾತನಾಡಿಸಬೇಕು. ಉತ್ಪನ್ನಗಳ ಗುಣಮಟ್ಟದಲ್ಲಿ ಸಮಸ್ಯೆ ಇದ್ದರೆ ಬದಲಾಯಿಸಿ ಕೊಡ್ತೀವಿ ಅನ್ನುವ ಭರವಸೆ ಮೂಡಿಸಬೇಕು. ಗ್ರಾಹಕರಿಗೂ ಮಾತುಕತೆ ಮೂಲಕ ಖರೀದಿ ಮಾಡುವುದು ಇಷ್ಟವಾಗುತ್ತದೆ. ಇಂಥ ಸಂಬಂಧಗಳು ಆನ್‌ಲೈನ್ ವ್ಯಾಪಾರದಲ್ಲಿ ಇರಲ್ಲ. ಅದುವೇ ನಮ್ಮ ಪ್ಲಸ್ ಪಾಯಿಂಟ್’ ಎನ್ನುತ್ತಾರೆ ಅವರು.

‘22 ವರ್ಷದಿಂದ ಅಂಗಡಿ ನಡೆಸುತ್ತಿದ್ದೇವೆ. ವ್ಯಾಪಾರಿಗಳು ಡಿಜಿಟಲ್ ಯುಗದಲ್ಲಿ ಬದಲಾಗಬೇಕಾದ ಅನಿವಾರ್ಯತೆ ಇದೆ. ಗ್ರಾಹಕರ ಬೇಡಿಕೆಯಂತೆ ಪಾವತಿಗೆ ಕ್ರೆಡಿಟ್ ಕಾರ್ಡ್ ಮಷಿನ್, ಯುಪಿಐ ಸ್ಕ್ಯಾನರ್ ಅಳವಡಿಸಿದ್ದೇವೆ. ಗ್ರಾಹಕರು ಕೇಳುವ ಯಾವುದೇ ವಸ್ತುಗಳನ್ನು ಇಲ್ಲ ಎನ್ನುವುದಿಲ್ಲ. ಪರಿಚಯದ ಅಂಗಡಿ, ಸಮೀಪದ ಮಾರುಕಟ್ಟೆಯಿಂದ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ತರಿಸಿ ನೀಡುತ್ತೇವೆ’ ಎಂಬುದು ಅವರ ವಿವರಣೆ.

ಸಣ್ಣ ಅಂಗಡಿ ನಡೆಸುತ್ತಿದ್ದ ಮಂಗಳೂರಿನ ಕಿರಾಣಿ ಅಂಗಡಿ ಮಾಲೀಕ ಇಮ್ತಿಯಾಜ್‌ಗೂ ಪುರುಸೊತ್ತಿಲ್ಲದ ಕೆಲಸ. ಕಾಲದ ಓಟದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮುಂದುವರಿದಿರುವುದರಿಂದ ಅವರು ಈಗ ಉದ್ಯಮಿಯಾಗಿದ್ದಾರೆ. ಕಿರಾಣಿ ಅಂಗಡಿಯನ್ನು ಡಿಜಿಟಲ್ ವ್ಯವಸ್ಥೆಗೆ ಹೊಂದಿಸಿಕೊಂಡಿದ್ದೇ ಇದಕ್ಕೆ ಕಾರಣ. ಅವರ ಬಿಎಚ್‌ಬಿ ಅಂಗಡಿಯ ವಾಟ್ಸ್‌ಆ್ಯಪ್ ನಂಬರ್‌ಗೆ ಅಗತ್ಯ ದಿನಸಿ ಸಾಮಗ್ರಿಗಳ ಪಟ್ಟಿಯನ್ನು ಹಾಕಿದರೆ ಮನೆಗೇ ತಲುಪಿಸುತ್ತಾರೆ. ಕರೆ ಮಾಡಿ ಹೇಳಿದರೂ ಟೈಪ್ ಮಾಡಿಕೊಂಡು ಆ ವಸ್ತುಗಳನ್ನು ತಲುಪಿಸುವುದಕ್ಕೂ ಸೌಲಭ್ಯ ಮಾಡಿಕೊಂಡಿದ್ದಾರೆ.

‘ವಾಟ್ಸ್‌ಆ್ಯಪ್‌ನಲ್ಲಿ ಬರುವ ಪಟ್ಟಿಯನ್ನು ನೋಡಿಕೊಂಡು ವಸ್ತುಗಳನ್ನು ಹೊಂದಿಸಿ ತಲುಪಿಸಲು ಸಿಬ್ಬಂದಿ ಇದ್ದಾರೆ. ಕರೆ ಬಂದರೆ ಟೈಪ್ ಮಾಡಿಕೊಂಡು ವಸ್ತುಗಳನ್ನು ತಲುಪಿಸುವುದಕ್ಕೂ ವ್ಯವಸ್ಥೆ ಇದೆ. ಇದನ್ನೆಲ್ಲ ಮಾಡುವಾಗಲೂ ನನಗೆ ಸಾಂಪ್ರದಾಯಿಕ ವ್ಯಾಪಾರದ್ದೇ ನೆನಪಾಗುತ್ತದೆ. ಅನಿವಾರ್ಯವಾಗಿ ಹೊಸತನದತ್ತ ವಾಲಬೇಕಾಯಿತು. ಇಲ್ಲವಾದರೆ ಪೈಪೋಟಿ ಯುಗದಲ್ಲಿ ಮುಂದುವರಿಯುವುದು ಕಷ್ಟ’ ಎನ್ನುತ್ತಾರೆ ಅವರು.

> ನನ್ನ ಬಳಿ ವಿದ್ಯಾರ್ಥಿಗಳು, ಕೆಲಸಗಾರರು ಸಾಮಗ್ರಿ ಖರೀದಿಸಲು ಬರುತ್ತಿದ್ದರು. ಈಗ ಎಲ್ಲರ ಕೈಯಲ್ಲೂ ಮೊಬೈಲ್ ಫೋನ್ ಇದೆ. ಮನೆಯಲ್ಲಿಯೇ ಕುಳಿತು ಆರ್ಡರ್ ಮಾಡುತ್ತಾರೆ. 10ರಿಂದ 15 ನಿಮಿಷದಲ್ಲಿ ಅವರ ಕೈಗೆ ಸಾಮಗ್ರಿಗಳು ಕೈಸೇರುತ್ತವೆ. ಹಾಗಾಗಿ, ಅಂಗಡಿಗೆ ಬರುವವರ ಸಂಖ್ಯೆ ಕ್ಷೀಣಿಸಿದೆ.
> **ರಮೇಶ್,** ಎಸ್.ಕೆ.ಸ್ಟೋರ್, ಮತ್ತಿಕೆರೆ, ಬೆಂಗಳೂರು

> ಕ್ವಿಕ್ ಕಾಮರ್ಸ್ ಕಂಪನಿಗಳು ಪೇಸ್ಟ್, ಶಾಂಪೂ ಮೊದಲಾದ ಲೇಬಲ್ಡ್ ಉತ್ಪನ್ನಗಳ ದೊಡ್ಡ ಪ್ಯಾಕೆಟ್‌ಗಳಿಗೆ ಭಾರಿ ರಿಯಾಯಿತಿ ನೀಡುತ್ತವೆ. ಗ್ರಾಹಕರು ಹಣ ಉಳಿಸುವ ಆಸೆಯಿಂದ ಇದಕ್ಕೆ ಮನಸೋಲುತ್ತಿದ್ದಾರೆ.
> **ಚಂದನ್,** ರಾಮ್ ಆ್ಯಂಡ್ ಕೋ ಕಿರಾಣಿ ಅಂಗಡಿ, ದಾವಣಗೆರೆ

> ಅಂಗಡಿಗೆ ಬರುವ ಜನರು ಆನ್‌ಲೈನ್‌ನಲ್ಲಿ ಹಾಗೂ ಸಗಟು ದರದಲ್ಲಿಯೇ ಸಾಮಗ್ರಿ ನೀಡುವಂತೆ ಚೌಕಾಸಿಗೆ ಇಳಿಯುತ್ತಾರೆ. ದುಬಾರಿ ಬಾಡಿಗೆ ನೀಡಿ, ದೂರದ ಊರುಗಳಿಂದ ಗುಣಮಟ್ಟದ ಸಾಮಗ್ರಿ ತಂದು ಕಡಿಮೆ ಹಣಕ್ಕೆ ನೀಡಿದರೆ ನಷ್ಟವಾಗಲಿದೆ.
> **ಜೈನುದ್ದೀನ್ ಅನ್ಸಾರಿ,** ಜೆ.ಕೆ.ಕಿರಾಣಿ ಸ್ಟೋರ್ಸ್, ಹುಬ್ಬಳ್ಳಿ

> ಕಿರಾಣಿ ಅಂಗಡಿಗೆ ಮಾಸಿಕ ₹20 ಸಾವಿರ ಬಾಡಿಗೆ ಪಾವತಿಸುತ್ತಿದ್ದೆ. ಇಬ್ಬರು ಕೆಲಸಗಾರರ ಸಂಬಳ, ಅಂಗಡಿ ನಿರ್ವಹಣೆಗಾಗಿ ತಿಂಗಳಿಗೆ ₹50 ಸಾವಿರ ಖರ್ಚು ಆಗುತ್ತಿತ್ತು. ಜನರು ಆನ್‌ಲೈನ್ ಮೂಲಕವೇ ತಮಗೆ ಬೇಕಾದ ಉತ್ಪನ್ನ ಖರೀದಿಸುವ ಕಾರಣ ಅಂಗಡಿಗೆ ಬರುವವರ ಸಂಖ್ಯೆ ಕಡಿಮೆಯಾಯಿತು. ಇದರಿಂದ ಅಂಗಡಿ ಮುಚ್ಚಿದ್ದೇನೆ.
> **ವೀರಭದ್ರಪ್ಪ ಶೆಟ್ಟಿ,** ಧಾರವಾಡ

ಬೆಂಗಳೂರಿನ ಯಶವಂತಪುರದ ಹನುಮಾನ್ ಪ್ರಾವಿಜನ್ ಸ್ಟೋರ್‌ನ ರಾಹುಲ್ ಮತ್ತು ಅವರ ಸಹೋದರರದ್ದು ಇದೇ ಕಥೆ. ಗ್ರಾಹಕರು ಅವರ ಅಂಗಡಿ ತೆರಳಿ ಅಥವಾ ವಾಟ್ಸ್‌ಆ್ಯಪ್‌ನಲ್ಲಿ ಸಾಮಗ್ರಿಗಳ ಪಟ್ಟಿ ನೀಡಿದರೆ ಅವರೇ ಮನೆ ಬಾಗಿಲಿಗೆ ಸಾಮಗ್ರಿ ಪೂರೈಸುತ್ತಾರೆ. ಇದಕ್ಕಾಗಿ ಅವರು ಯಾವುದೇ ಹೆಚ್ಚುವರಿ ಹಣ ವಸೂಲಿ ಮಾಡುವುದಿಲ್ಲ.

‘ಬೆಂಗಳೂರಿನಂತಹ ಮಹಾನಗರಗಳಲ್ಲಿ ಗ್ರಾಹಕರನ್ನು ಹಿಡಿದಿಟ್ಟುಕೊಳ್ಳುವುದು ಸುಲಭವಲ್ಲ. ಆದರೆ, ಗುಣಮಟ್ಟಕ್ಕೆ ರಾಜೀ ಮಾಡಿಕೊಳ್ಳಬಾರದು. ಇತ್ತೀಚೆಗೆ ಅಂಗಡಿಗೆ ಬರುವ ಗ್ರಾಹಕರ ಸಂಖ್ಯೆ ಕಡಿಮೆಯಾಗಿದೆ. ಬರುವವರೊಂದಿಗೆ ನಾವು ಸೌಹಾರ್ದವಾಗಿ ವರ್ತಿಸಬೇಕು. ನಮಗೆ ರಿಯಾಯಿತಿ ನೀಡಲು ಸಾಧ್ಯವಾಗುವುದಿಲ್ಲ. ಆದರೆ, ಅವರಿಂದ ದುಪ್ಪಟ್ಟು ಹಣ ವಸೂಲಿ ಮಾಡಬಾರದು. ಹಾಗಿದ್ದಾಗ ನಮ್ಮ ಗ್ರಾಹಕರು ಕೈತಪ್ಪುವುದಿಲ್ಲ’ ಎಂದು ಹೇಳುತ್ತಾರೆ ರಾಹುಲ್.

‘ಡಿಜಿಟಲ್ ಸೌಲಭ್ಯದ ಬಳಿಕ ಕಿರಾಣಿ ವ್ಯಾಪಾರ ಈ ಮೊದಲಿಗಿಂತ ವೃದ್ಧಿಸಿದೆ. ಗ್ರಾಹಕರು ಫೋನ್ ಮಾಡಿ ತಮಗೆ ಬೇಕಾದ ಉತ್ಪನ್ನಗಳನ್ನು ಹೇಳುತ್ತಾರೆ. ಅಂಗಡಿಯಲ್ಲಿ ಮೂವರು ಕೆಲಸಗಾರರಿದ್ದು, ಅದರಲ್ಲಿ ಇಬ್ಬರು ಗ್ರಾಹಕರ ಮನೆಗೆ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ರಸೀದಿ ತೋರಿಸಿ ಹಣ ಪಡೆದು ಬರುತ್ತಾರೆ. ಕೆಲ ಗ್ರಾಹಕರು ಆನ್‌ಲೈನ್ ಮೂಲಕ ಮೊದಲೇ ಹಣ ಪಾವತಿಸುತ್ತಾರೆ. ಅವರು ಹೇಳಿದಂತೆ ಗುಣಮಟ್ಟದ ಸಾಮಗ್ರಿ ನೀಡುವ ಮೂಲಕ ವಿಶ್ವಾಸ ಉಳಿಸಿಕೊಂಡಿದ್ದೇವೆ’ ಎಂಬುದು ಬೆಳಗಾವಿಯ ನವೀನ ಕತ್ತಿ ಅವರ ವಿವರಣೆ.

**ಗ್ರಾಮೀಣ ಗ್ರಾಹಕರೇ ಆಸ್ತಿ:** ಕೊಪ್ಪಳ ಜಿಲ್ಲೆಯಲ್ಲಿ ಕ್ವಿಕ್ ಕಾಮರ್ಸ್ ಸೇವೆ ಇದ್ದರೂ ಕಿರಾಣಿ ಅಂಗಡಿ ವ್ಯಾಪಾರಿಗಳಿಗೆ ದೊಡ್ಡಮಟ್ಟದಲ್ಲಿ ಧಕ್ಕೆಯಾಗಿಲ್ಲ. ಆನ್‌ಲೈನ್ ವ್ಯಾಪಾರಕ್ಕೆ ಸಣ್ಣ ಜಿಲ್ಲೆಗಳ ಜನರ ಮನಸ್ಥಿತಿ ಇನ್ನೂ ಒಗ್ಗಿಕೊಂಡಿಲ್ಲ ಎಂಬುದು ಕಿರಾಣಿ ಅಂಗಡಿ ಮಾಲೀಕರ ಹೇಳಿಕೆ.

‘ಯಾವುದೇ ಸೇವೆಯು ಎಷ್ಟೇ ಆಧುನೀಕರಣಗೊಂಡರೂ ಗ್ರಾಮೀಣರಿಗೆ ಕಿರಾಣಿ ಅಂಗಡಿಗಳೇ ಬೇಕು. ಜಿಲ್ಲೆಯ ಬಹಳಷ್ಟು ಜನ ವಾರಾಂತ್ಯದಲ್ಲಿ ಸಿಗುವ ಕೂಲಿ ಹಣದಿಂದ ದಿನಸಿ ಸಾಮಗ್ರಿಗಳನ್ನು ತಂದು ಬದುಕು ಸಾಗಿಸುತ್ತಾರೆ. ಅವರಿಗೆ ಕ್ವಿಕ್ ಕಾಮರ್ಸ್‌ನವರು ಉದ್ರಿ ಕೊಡುವುದಿಲ್ಲ. ಕಿರಾಣಿ ಅಂಗಡಿಗಳಲ್ಲಿ ನಿತ್ಯ ಬಳಕೆಗೆ ಅಗತ್ಯ ಸಾಮಗ್ರಿ ಖರೀದಿಸಿ ಪುಸ್ತಕದಲ್ಲಿ ಲೆಕ್ಕ ಬರೆಯಿಸಿ ಹೋಗುತ್ತಾರೆ. ವಾರಾಂತ್ಯದಲ್ಲಿ ಕೂಲಿ ಹಣ ಪಾವತಿಯಾದ ಬಳಿಕ ನಮಗೆ ಹಣ ನೀಡುತ್ತಾರೆ. ಇದರಿಂದ ನಮ್ಮ ವ್ಯಾಪಾರದಲ್ಲಿ ಏನೂ ತೊಂದರೆಯಾಗಿಲ್ಲ ಎಂದು ಕೊಪ್ಪಳದ ಕಿರಾಣಿ ಅಂಗಡಿಯ ವ್ಯಾಪಾರಿ ಬಸವರಾಜ ಅವರು ಹೇಳುತ್ತಾರೆ.

ಬದಲಾಗುತ್ತಿರುವ ಕಾಲಘಟ್ಟದಲ್ಲಿ ಇ ಕಾಮರ್ಸ್, ಕ್ವಿಕ್ ಕಾಮರ್ಸ್, ಆನ್‌ಲೈನ್ ಶಾಪಿಂಗ್‌ನಿಂದ ಸಾಂಪ್ರದಾಯಿಕ ಕಿರಾಣಿ ಅಂಗಡಿಗಳು ಎದಿಸಿರು ಬಿಡುತ್ತಿವೆ. ವಹಿವಾಟಿನಲ್ಲಿ ಬದಲಾವಣೆ ಮಾಡಿಕೊಂಡಿರುವ ಕಿರಾಣಿ ಅಂಗಡಿಗಳು ಇನ್ನೂ ಉಸಿರಾಡುತ್ತಿವೆ.


**ಪರಿಕಲ್ಪನೆ: ಯತೀಶ್‌ಕುಮಾರ್ ಜಿ.ಡಿ.**

**ಪೂರಕ ಮಾಹಿತಿ: ವಿಕ್ರಂ ಕಾಂತಿಕೆರೆ, ವೆಂಕಟೇಶ್ ಜಿ.ಎಚ್., ಎಂ.ಎನ್. ಯೋಗೇಶ್, ಅಮೃತ್ ಕಿರಣ್ ಬಿ.ಎಂ., ಶಿವರಾಯ ಪೂಜಾರಿ, ಮಲ್ಲಿಕಾರ್ಜುನ ನಾಲವಾರ, ಸುಧೀರ್ ಕುಮಾರ್ ಎಚ್.ಕೆ.**


ಮೈಸೂರಿನ ಬಲ್ಲಾಳ್ ವೃತ್ತದಲ್ಲಿನ ಅಶೋಕ ಸ್ಟೋರ್ಸ್‌ನಲ್ಲಿ ದಿನಬಳಕೆಯ ಉತ್ಪನ್ನಗಳನ್ನು ಖರೀದಿಸುತ್ತಿರುವ ಗ್ರಾಹಕರು


ಬೆಂಗಳೂರಿನ ಮಲ್ಲೇಶ್ವರದ ಸಣ್ಣ ಸೂಪರ್ ಮಾರ್ಕೆಟ್

## ಗುಂಡಣ್ಣ




## 25 ವರ್ಷಗಳ ಹಿಂದೆ

ಗುರುವಾರ, 14-9-2000

**• ನೇರ ವಿದೇಶಿ ಹೂಡಿಕೆಗೆ ತಂಡ: ಪ್ರಧಾನಿ ಪ್ರಕಟಣೆ**

**ನ್ಯೂಯಾರ್ಕ್, ಸೆ. 13 (ಯುಎನ್‌ಐ)**– ವಿದೇಶಿ ನೇರ ಹೂಡಿಕೆಯ ಬೃಹತ್ ಯೋಜನೆಗೆ ಸಂಬಂಧಿಸಿದಂತೆ ಎದುರಾಗುವ ಅಡ್ಡಿ ನಿವಾರಣೆಗೆ ತಮ್ಮ ಕಾರ್ಯಾಲಯದಲ್ಲಿ ‘ಕಾರ್ಯತಂತ್ರ ನಿರ್ವಹಣಾ ತಂಡ’ ರಚಿಸಲಾಗುವುದು ಎಂದು ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಪ್ರಕಟಿಸಿದರು.

ಅಮೆರಿಕದ ಉದ್ದಿಮೆದಾರರಿಗೆ ನೀಡಿದ ಉತ್ತೇಜನಕಾರಿ ಸಂದೇಶದಲ್ಲಿ, ಮುಂದಿನ ಹೂಡಿಕೆಯ ಮೂರು ವರ್ಷಗಳಲ್ಲಿ ಅಮೆರಿಕದ ಬಂಡವಾಳ ಹರಿವಿನ ಗುರಿಯನ್ನು 15 ಶತಕೋಟಿ ಡಾಲರ್‌ಗಳಿಗೆ ನಿಗದಿಗೊಳಿಸಿದರು.

## 75 ವರ್ಷಗಳ ಹಿಂದೆ

ಗುರುವಾರ, 14-9-1950

**• ಅಮೆರಿಕದ ರಕ್ಷಣಾ ಕಾರ್ಯದರ್ಶಿ ರಾಜೀನಾಮೆ**

**ವಾಷಿಂಗ್ಟನ್, ಸೆ. 13**– ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲೂಯಿಸ್ ಜಾನ್ಸನ್ ಅವರು ಇಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ಬಳಿಕ ಮಾತನಾಡಿದ ಅವರು, ‘ಸ್ನೇಹಿತರಿಗಿಂತ ಹೆಚ್ಚು ಶತ್ರುಗಳನ್ನು ಹೊಂದಿದ್ದೇನೆ’ ಎಂದು ಹೇಳಿದರು.

ರಾಷ್ಟ್ರಪತಿ ಟ್ರೂಮನ್ ಅವರು ಲೂಯಿಸ್ ಜಾನ್ಸನ್ ಅವರ ರಾಜೀನಾಮೆಯನ್ನು ಸ್ವೀಕರಿಸಿದರು. ಜನರಲ್ ಗ್ರೆಗೋರಿ ಸಿ. ಮಾರ್ಷಲ್ ಅವರು ಜಾನ್ಸನ್ ಅವರ ಜಾಗವನ್ನು ತುಂಬಲಿದ್ದಾರೆ.

ಜಾನ್ಸನ್ ಅವರು 1949ರ ಮಾರ್ಚ್‌ನಿಂದ ರಕ್ಷಣಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**14 ಸೆಪ್ಟೆಂಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಭಾದ್ರಪದ ಕೃಷ್ಣ ಅಷ್ಟಮಿ ಗಂ. 27-07 **ನಕ್ಷತ್ರ:** ರೋಹಿಣಿ ಗಂ. 8-41 **ಯೋಗ:** ವಜ್ರ ಗಂ. 7-35 **ಕರಣ:** ಬಾಲವ ಗಂ. 16-03 ಸಿಂಹ ಮಾಸದ 28 ನೇ ದಿನ. **ಮಳೆ ನಕ್ಷತ್ರ:** ಉತ್ತರ 1 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 06-00, **ಸೂರ್ಯೋದಯ:** 06-23, **ಸೂರ್ಯಾಸ್ತ:** 06-29, **ಮುಸ್ಲಿಂ ದಿನಾಂಕ:** 21 ರಬೀಉಲ್ಲಾವಲ್, **ಅದೃಷ್ಟ ಸಂಖ್ಯೆ:** 4, 8

**ಮೇಷ:** ಹೂವಿನ ಗಿಡ ಮಾರಾಟಗಾರರಿಗೆ ಹೆಚ್ಚಿನ ಆದಾಯವಿದೆ. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಉತ್ತಮ. ಹುಸಿ ಜಾಹೀರಾತುಗಳಿಗೆ ಮಾರುಹೋಗದಿರಿ.

**ವೃಷಭ:** ನಿಮ್ಮ ಹಿಂದಿನ ಸೂತ್ರಧಾರನು ನಡೆಸುತ್ತಿರುವ ಕೈವಾಡವು ನಿಮಗೆ ಕಷ್ಟವಾಗುತ್ತಿದ್ದರು ಸಹ ಏನೂ ಮಾಡದ ಪರಿಸ್ಥಿತಿ ಎದುರಾಗುತ್ತದೆ. ಕುಟುಂಬದಲ್ಲಿನ ಹಿಂದಿನ ಕಲಹಗಳು ರಾಜಿಯಲ್ಲಿ ತೀರ್ಮಾನಗೊಳ್ಳಲಿವೆ.

**ಮಿಥುನ:** ಸ್ನೇಹಿತರೊಂದಿಗಿನ ಮಾತುಕತೆ ಉಪಯುಕ್ತ. ಮಗನಿಗೆ ಓದಿನಲ್ಲಿ ಸಹಾಯ ಮಾಡುವಿರಿ. ಕೆಲಸಗಾರರಲ್ಲಿ ಒಮ್ಮತಾಭಿಪ್ರಾಯ ಮೂಡಿಸುವಲ್ಲಿ ಯಶಸ್ವಿಯಾಗುವಿರಿ. ಆಟಿಕೆ ವಸ್ತುಗಳ ಮಾರಾಟಗಾರರಿಗೆ ಶುಭದಿನ.

**ಕರ್ಕಾಟಕ:** ನೀವು ಭಾಗವಹಿಸುವ ಸಭೆಯಲ್ಲಿ ನಿಮ್ಮ ಪಾಂಡಿತ್ಯಕ್ಕೆ ತಕ್ಕ ಸ್ಥಾನಮಾನ ಸಿಗದಿರಬಹುದು. ನಿಮ್ಮ ಮನಗೆದ್ದ ಸಂಬಂಧ ಮನೆಯವರ ಮನಸ್ಸನ್ನೂ ಮುದಗೊಳಿಸುತ್ತದೆ. ಯಾವುದಕ್ಕೂ ಆತುರಬೇಡ.

**ಸಿಂಹ:** ದೊಡ್ಡ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಯೋಚಿಸಿ ಅಥವಾ ಮಾರ್ಗದರ್ಶಕರ ಸಲಹೆ ಪಡೆದು ಪರಿಹರಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿ. ಶಸ್ತ್ರವೈದ್ಯರಿಗೆ ವೃತ್ತಿಗೆ ಸಂಬಂಧಿಸಿದಂತೆ ಸೌಲಭ್ಯಗಳು ಹೆಚ್ಚಲಿದೆ.

**ಕನ್ಯಾ:** ದೇಹಾಲಸ್ಯದಿಂದ ಹಲವು ದಿನಗಳಿಂದ ತಳ್ಳುತ್ತ ಬಂದಿದ್ದ ಕಾರ್ಯಗಳನ್ನು ಇನ್ನು ಮುಂದೆ ಹಾಕುವುದು ಒಳ್ಳೆಯದಲ್ಲ. ಪೋಷಕರ ಮಾತು ಮೀರಿ ಇಂದು ಪ್ರಯಾಣ ಕೈಗೊಳ್ಳಬೇಡಿ. ಆತ್ಮವಿಶ್ವಾಸದ ಕೊರತೆ ಕಾಣಿಸಬಹುದು.

**ತುಲಾ:** ಪ್ರತಿಯೊಂದು ವಿಷಯವನ್ನು ತುಂಬಾ ಗಹನವಾಗಿ ಚಿಂತಿಸುತ್ತಾ ಕುಳಿತಲ್ಲಿ ಎಲ್ಲಾ ವಿಷಯಗಳಲ್ಲೂ ದೋಷಗಳು ಕಂಡು ಬರುವವು. ಸ್ನೇಹಿತನ ವಿಷಯದಲ್ಲಿ ಈ ದಿನ ಹೆಚ್ಚಿನ ಆಸಕ್ತಿಯನ್ನು ವಹಿಸಲಿದ್ದೀರಿ.

**ವೃಶ್ಚಿಕ:** ಮಧುರವಾದ ನಿಮ್ಮ ಸಾಂತ್ವನ ನುಡಿಗಳು ಬೇಸರಗೊಂಡ ವ್ಯಕ್ತಿಗೆ ಆಸರೆಯಾಗುತ್ತದೆ. ಸಮಾಜ ಸೇವೆಯಲ್ಲಿ ಪುತ್ರರ ಘನತೆ ಗೌರವ ಹೆಚ್ಚಳವಾಗುವುದು. ಉಸಿರಾಟ ಸಂಬಂಧಿ ಸಮಸ್ಯೆಗಳಾಗಬಹುದು, ಜಾಗ್ರತೆ ವಹಿಸಿರಿ.

**ಧನು:** ಮಕ್ಕಳ ಅಗತ್ಯವನ್ನು ಪೂರೈಸುವುದರಲ್ಲಿ ಆಸಕ್ತರಾದ ನೀವು ಸಂಜೆ ಮಕ್ಕಳೊಂದಿಗೆ ತಿರುಗಾಟ ಮಾಡುವಿರಿ. ಕಷ್ಟಗಳಿಂದ ಮುಕ್ತರಾಗುವ ಸಂದರ್ಭ ದೇವತಾನುಗ್ರಹದಿಂದ ತುಂಬಾ ಸನಿಹದಲ್ಲಿದೆ.

**ಮಕರ:** ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಅಥವಾ ಬೇಡಿಕೆಯನ್ನು ಪೂರ್ಣಗೊಳಿಸಿ. ಕಾರ್ಮಿಕರು ಮನಸ್ಸಿನ ಆಲೋಚನೆಯಂತೆ ಮಾತನಾಡಿದಲ್ಲಿ ಬೇಕಾದ ಸೌಲಭ್ಯಗಳು ದೊರೆಯಲಿವೆ.

**ಕುಂಭ:** ಸೋಂಕಿನಿಂದ ನಿಮ್ಮನ್ನು ನೀವು ರಕ್ಷಿಸಿಕೊಂಡರೆ ಉತ್ತಮ. ನಿಮ್ಮನ್ನು ಆಡಿಕೊಳ್ಳಲೆಂದೆ ಜನರಿರುವರು, ನಿಮ್ಮ ಗೌರವವನ್ನು ಕಾಪಾಡಿಕೊಳ್ಳಲು ನಿಮ್ಮ ಸಭ್ಯತೆಯೇ ಮುಖ್ಯ ಕಾರಣವಾಗುವುದು.

**ಮೀನ:** ನಿಮ್ಮ ನಿಯತ್ತಿನ ಮುಂದೆ ಯಾರ ಕುತಂತ್ರಗಳು ನಡೆಯುವುದಿಲ್ಲ. ಯೋಜನೆ ಸರಿಯಾಗಿದ್ದಲ್ಲಿ ಆದಾಯ ಹೆಚ್ಚಾಗಿರುತ್ತದೆ. ಕೇವಲ ಅದೃಷ್ಟವನ್ನೇ ನೆಚ್ಚಬೇಡಿ, ಅದೃಷ್ಟದ ಜೊತೆಯಲ್ಲಿ ಪರಿಶ್ರಮವೂ ಬೇಕಾಗುವುದು.

## ಪದಬಂಧ 6164


ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ನೂಲು ತೆಗೆಯುವ ಸಾಧನ (3)
4.ಕವಿಯನ್ನು ಹೀಗೂ ಕರೆಯುತ್ತಾರೆ (3)
6.ಪ್ರಗತಿಯಲ್ಲಿರುವ ನಕಲು ಕಾಣಿಸಿತೇ? (2)
7.ಅವನ ಕೆಟ್ಟ ಗುಣ! (4)
8.ಅಕ್ಕಮಹಾದೇವಿ ಜನಿಸಿದ ಊರು (4)
9.ಈತ ಕಬ್ಬಿಣದ ಕೆಲಸಗಾರ (3)
11. ಅವನು ಇಳಿಯುವುದು! (4)
13.ದೇವರಿರುವ ಗುಡಿ (4)
14.ಲವನ ಸೋದರ (2)
15.ರಸ ಒಸರುವ ಜಿಹ್ವೆ (3)
16.ವನದ ಹತ್ತಿರವಿರುವ ಸಮುದ್ರ (3)

**ಮೇಲಿಂದ ಕೆಳಕ್ಕೆ**

2.ಕರದಲ್ಲಿರುವ ಚಿನ್ನ! (4)
3.ತರಗತಿಯಲ್ಲಿರುವ ಗುಂಪು ಕಾಣುತ್ತಿದೆಯೇ? (2)
4.ಕರ ಮೊದಲಿಟ್ಟಾಗ ಕಾಣಿಸಿದ್ದು ಕಚ್ಚಾ ಪ್ರತಿ! (3)
5.ಗಡಿಯಲ್ಲಿರುವ ವ್ಯಾಯಾಮ ಶಾಲೆ (3)
6.ಪ್ರೇಮಿಗಳ ಹುಸಿ ಜಗಳ (6)
8.ಲಕ್ನೋ ರಾಜಧಾನಿಯಾಗಿರುವ ರಾಜ್ಯ (6)
10.ಈತ ಶಕ್ತಿ ಇಲ್ಲದವನು (4)
11.ಸುರನ ಹತ್ತಿರವಿರುವ ರಾಕ್ಷಸ (3)
12.ದನ ಇದ್ದಾಗಲೇ ಈ ಪ್ರಲಾಪ! (3)
14.ಕುಟಿಲನ ವಂಶ! (2)



**6163ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:**
1.ಋಗ್ವೇದ 4.ಸಂಭವ 6.ಜವಾಬುದಾರಿ 7.ನಭ 9.ನವ 10.ಶಿಷ್ಯ 11.ಸುತ 13.ಮನೆವಾಳ್ತನ 16.ಮೆದುಳು 17.ನೆನಪು

**ಮೇಲಿಂದ ಕೆಳಕ್ಕೆ:**
1.ಋತುಮಾನ 2.ದನುಜ 3.ಸಬೂಬು 4.ಸಂಚಾರಿ 5.ವಜ್ರೋತ್ಸವ 8.ಭವಿಷ್ಯ 9.ನನಸು 10.ಶಿರೋನಾಮೆ 12.ತಲೆಗಾಪು 13.ಮರಳು 14.ವಾಯುವ್ಯ 15.ನಮೂನೆ

## ಸುಡೊಕು 6548

**ಹೀಗೆ ಆಡಿ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 9 | | 3 | | 6 | | | | 2 |
| 7 | | | | | | | 5 | |
| | 1 | 2 | | 5 | | 6 | | 4 |
| | 8 | | | 1 | | 4 | | |
| 3 | | 4 | 2 | | 7 | | 8 | |
| | 9 | | 4 | | 3 | | | 6 |
| 6 | | 5 | | | | 8 | | |
| | | | | 7 | | | | 1 |
| 1 | | 8 | 9 | | 6 | | 4 | |

**6547 ಸುಡೊಕು**

| | | | | | | | | |
|---|---|---|---|---|---|---|---|---|
| 7 | 8 | 4 | 2 | 5 | 3 | 9 | 6 | 1 |
| 1 | 9 | 2 | 6 | 8 | 4 | 5 | 7 | 3 |
| 6 | 5 | 3 | 1 | 7 | 9 | 8 | 2 | 4 |
| 5 | 3 | 8 | 9 | 2 | 7 | 4 | 1 | 6 |
| 9 | 1 | 6 | 4 | 3 | 8 | 7 | 5 | 2 |
| 4 | 2 | 7 | 5 | 1 | 6 | 3 | 8 | 9 |
| 2 | 4 | 5 | 7 | 9 | 1 | 6 | 3 | 8 |
| 8 | 6 | 1 | 3 | 4 | 5 | 2 | 9 | 7 |
| 3 | 7 | 9 | 8 | 6 | 2 | 1 | 4 | 5 |

| ಮೊಟ್ಟೆ ಧಾರಣೆ (ಎನ್‌ಇಸಿಸಿ) | | ರಾಮನಗರ ರೇಷ್ಮೆಗೂಡು | | ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ) | |
|---|---|---|---|---|---|
| ಬೆಂಗಳೂರು 100 ಕ್ಕೆ | ₹565 | ಮಿಶ್ರತಳಿ(ಸಿ.ಬಿ) | ₹445-655 | ಆರ್‌ಎಸ್‌ಎಸ್-4 | ₹183 |
| ಬೆಂಗಳೂರು 12 ಕ್ಕೆ | ₹75 | ದ್ವಿತಳಿ (ಬಿ.ವಿ) | ₹558-800 | ಆರ್‌ಎಸ್‌ಎಸ್-5 | ₹178 |
| ಮೈಸೂರು: 100 ಕ್ಕೆ | ₹565 | | | ಗುಡ್ ಲಾಟ್ | ₹163 |

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

**ಮುಂಬೈ ಧಾರಣೆ (ಶೇಂಗಾ)**


| 13-09-2025 | |
|---|---|
| ಜಾವಾ 70/80(ಹೊಸ) | 10600-10700 |
| ಜಾವಾ 80/90(ಹೊಸ) | 9900-10000 |
| ದಪ್ಪ ಮಧ್ಯಪ್ರದೇಶ (ಹೊಸ) | 7500-7600 |
| ದಪ್ಪ ಗುಜರಾತ್ (ಹೊಸ) | 8500-8600 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1370 (1370) |
| ಒಂದು ವಾರದ ಡೆಲಿವರಿ | 1365 (1365) |
| ಪಾಮ್ ವಾರದ ಡೆಲಿವರಿ | 1268 (1268) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1340 (1340) |
| **ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,09,300 (1,09,200) |
| ಬೆಳ್ಳಿ ಕೆ.ಜಿಗೆ | 1,28,300 (1,27,800) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ



# ಜಾಗತಿಕ ಮಟ್ಟದ ಬ್ಯಾಂಕ್‌ಗೆ ಒಲವು

## ದೇಶದ ಅತಿದೊಡ್ಡ ಬ್ಯಾಂಕ್ ಎಸ್‌ಬಿಐಗೆ ಜಾಗತಿಕ ಮಟ್ಟದಲ್ಲಿ 43ನೇ ಸ್ಥಾನ



ನವದೆಹಲಿ (ಪಿಟಿಐ): 'ವಿಕಸಿತ ಭಾರತ – 2047'ರ ಭಾಗವಾಗಿ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ನೀಡುವ ಸಾಮರ್ಥ್ಯ ಇರುವ ಎರಡು ಬ್ಯಾಂಕ್‌ಗಳ ರೂಪಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಬ್ಯಾಂಕ್‌ಗಳು ಆಸ್ತಿ ಲೆಕ್ಕದಲ್ಲಿ ಜಾಗತಿಕ ಮಟ್ಟದಲ್ಲಿ 20 ಮುಂಚೂಣಿ ಬ್ಯಾಂಕ್‌ಗಳ ಪೈಕಿ ಒಂದಾಗಬೇಕು ಎಂಬ ಗುರಿಯನ್ನು ಕೂಡ ಹೊಂದಲಾಗಿದೆ ಎಂದು ಅವರು ಹೇಳಿದ್ದಾರೆ.

ಹಣಕಾಸು ಸೇವೆಗಳ ಇಲಾಖೆಯು ನವದೆಹಲಿಯಲ್ಲಿ ಆಯೋಜಿಸಿದ್ದ 'ಪಿಎಸ್‌ಬಿ ಮಂಥನ್ – 2025'ರಲ್ಲಿ ಈ ಕುರಿತಾಗಿ ಚರ್ಚೆ ನಡೆದಿದೆ. ಈಗ ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಎಸ್‌ಬಿಐ ಜಾಗತಿಕ ಮಟ್ಟದಲ್ಲಿ 43ನೇ ಸ್ಥಾನದಲ್ಲಿದೆ. ಖಾಸಗಿ ಸ್ವಾಮ್ಯದ ಎಚ್‌ಡಿಎಫ್‌ಸಿ ಬ್ಯಾಂಕ್ ಜಾಗತಿಕ ಮಟ್ಟದಲ್ಲಿ 73ನೇ ಸ್ಥಾನದಲ್ಲಿದೆ.

ಕನಿಷ್ಠ ಎರಡು ಬ್ಯಾಂಕ್‌ಗಳನ್ನು ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಒಡ್ಡುವಂತೆ ಮಾಡುವುದು ಹೇಗೆ, ಅದರಲ್ಲೂ ಮುಖ್ಯವಾಗಿ ಯಾವುದೇ ಸ್ಥಾಪಿತ ಪ್ರಕ್ರಿಯೆ ಮುಂದಾದ ಬ್ಯಾಂಕ್‌ಗಳನ್ನು ಆ ಮಟ್ಟಕ್ಕೆ ಬೆಳೆಸುವುದು ಹೇಗೆ ಎಂಬ ಬಗ್ಗೆ ಪ್ರಮುಖವಾಗಿ ಚರ್ಚೆಯಾಗಿದೆ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ವಿಲೀನದ ಬಗ್ಗೆ ಚರ್ಚೆ ಆಗಿಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದ್ದಾರೆ. ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ. ನಾಗರಾಜು ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಶೆಟ್ಟಿ ಮತ್ತು ಪಿಎನ್‌ಬಿ ಸಿಇಒ ಅಶೋಕ್ ಚಂದ್ರ ಅವರು ಸಭೆಯಲ್ಲಿ ಇದ್ದರು.

2047ಕ್ಕೆ ಮೊದಲು ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಪರಿವರ್ತಿಸುವ ಗುರಿಯನ್ನು ಗಮನದಲ್ಲಿ ಇರಿಸಿಕೊಂಡು, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳನ್ನು ಮುಂದಿನ ಹಂತದ ಬೆಳವಣಿಗೆಗೆ ಸಜ್ಜುಗೊಳಿಸುವ ಕುರಿತಾಗಿ ಸಭೆಯಲ್ಲಿ ಚರ್ಚೆ ನಡೆದಿದೆ.

2024–25ನೇ ಹಣಕಾಸು ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಒಟ್ಟು ಲಾಭವು ₹1.78 ಲಕ್ಷ ಕೋಟಿಯ ದಾಖಲೆ ಮಟ್ಟಕ್ಕೆ ಏರಿಕೆ ಕಂಡ ಹಿನ್ನೆಲೆಯಲ್ಲಿ ಈ ಸಭೆಯನ್ನು ಆಯೋಜಿಸಲಾಗಿತ್ತು. ಇದು ಹಿಂದಿನ ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಕಂಡಿದ್ದ ಲಾಭಕ್ಕೆ (₹1.41 ಲಕ್ಷ ಕೋಟಿ) ಹೋಲಿಸಿದರೆ ಶೇ 26ರಷ್ಟು ಹೆಚ್ಚು.

ಬ್ಯಾಂಕ್‌ಗಳ ಆಡಳಿತ ಮಂಡಳಿಗಳ ರಚನೆಯಲ್ಲಿ ಇನ್ನಷ್ಟು ಸುಧಾರಣೆ ತಂದು, ಅವು ವಾಣಿಜ್ಯ ತೀರ್ಮಾನ ಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ತೆಗೆದುಕೊಳ್ಳುವಂತೆ ಮಾಡುವ ಬಗ್ಗೆ ಸಭೆ ಯಲ್ಲಿ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ.

**ಮುಖ್ಯಾಂಶಗಳು**
- ಆಸ್ತಿ ಲೆಕ್ಕದಲ್ಲಿ ಟಾಪ್ 20 ಮುಂಚೂಣಿ ಬ್ಯಾಂಕ್ ಪೈಕಿ ಒಂದಾಗಬೇಕೆಂಬ ಗುರಿ
- ಜಾಗತಿಕ ಮಟ್ಟದಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ 73ನೇ ಸ್ಥಾನ
- 2024–25ರಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಲಾಭ ₹1.78 ಲಕ್ಷ ಕೋಟಿ

## 6 ಕೋಟಿ ಐಟಿಆರ್ ಸಲ್ಲಿಕೆ

ನವದೆಹಲಿ (ಪಿಟಿಐ): 2025–26ರ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ 6 ಕೋಟಿಗೂ ಅಧಿಕ ಆದಾಯ ತೆರಿಗೆ ವಿವರಗಳ (ಐಟಿಆರ್) ಸಲ್ಲಿಕೆಯಾಗಿವೆ ಎಂದು ಆದಾಯ ತೆರಿಗೆ ಇಲಾಖೆ ಶನಿವಾರ 'ಎಕ್ಸ್'ನಲ್ಲಿ ತಿಳಿಸಿದೆ.

ದಂಡ ಇಲ್ಲದೆ ಐಟಿಆರ್ ಸಲ್ಲಿಕೆಗೆ ಸೆಪ್ಟೆಂಬರ್ 15 ಕೊನೆಯ ದಿನ. ತೆರಿಗೆ ಪಾವತಿದಾರರು, ತೆರಿಗೆ ವೃತ್ತಿಪರರು 6 ಕೋಟಿ ಐಟಿಆರ್ ಸಲ್ಲಿಕೆ ಆಗಲು ಸಹಾಯ ಮಾಡಿದ್ದಾರೆ. ಇನ್ನೂ ಐಟಿಆರ್ ಸಲ್ಲಿಕೆಯಾಗುತ್ತಿವೆ ಎಂದು ತಿಳಿಸಿದೆ.

ಐಟಿಆರ್ ಸಲ್ಲಿಸುವ ತೆರಿಗೆ ಪಾವತಿದಾರರಿಗೆ ನೆರವು ಮತ್ತು ಸಂಬಂಧಿತ ಸೇವೆ ನೀಡಲು ಇಲಾಖೆಯ ಸಹಾಯವಾಣಿ ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುತ್ತಿರುತ್ತದೆ. ಜೊತೆಗೆ ಇಲಾಖೆಯು ದೂರವಾಣಿ ಕರೆ, ವೆಬ್ ಸೆಷನ್, ಲೈವ್ ಚಾಟ್ ಮೂಲಕ ನೆರವು ನೀಡಲಿದೆ ಎಂದು ತಿಳಿಸಿದೆ.



ಕ್ರೆಡಾಯ್ ಮತ್ತು ಅನರಾಕ್ ಜಂಟಿಯಾಗಿ ಸಿದ್ಧಪಡಿಸಿದ ವರದಿ

# ಆರ್‌ಇಐಟಿ: ಶೇ 7.5ರಷ್ಟು ವರಮಾನ

ಸಿಂಗಪುರ (ಪಿಟಿಐ): ಭಾರತದ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳು (ಆರ್‌ಇಐಟಿ) ಹೂಡಿಕೆದಾರರಿಗೆ ಸರಾಸರಿ ಶೇಕಡ 6ರಿಂದ ಶೇ 7.5ರವರೆಗೆ ಆದಾಯ ತಂದುಕೊಡುತ್ತಿವೆ ಎಂದು ಕ್ರೆಡಾಯ್ ಮತ್ತು ಅನರಾಕ್ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ಈ ಆದಾಯ ಪ್ರಮಾಣವು ಆರ್‌ಇಐಟಿಗಳು ಹೆಚ್ಚು ವ್ಯಾಪಕವಾಗಿರುವ ಇತರ ಹಲವು ಮಾರುಕಟ್ಟೆಗಳಲ್ಲಿ ಸಿಗುವ ಆದಾಯಕ್ಕೆ ಹೋಲಿಸಿದರೆ ಉತ್ತಮವಾಗಿದೆ ಎಂದು ವರದಿಯು ಹೇಳಿದೆ. ಕ್ರೆಡಾಯ್ ಭಾರತದ ರಿಯಲ್ ಎಸ್ಟೇಟ್ ಡೆವಲಪರ್‌ಗಳ ಸಂಘವಾಗಿದೆ. ಅನರಾಕ್ ಸಂಸ್ಥೆಯು ಆಸ್ತಿ ಸಲಹಾ ವಲಯದಲ್ಲಿ ಕೆಲಸ ಮಾಡುತ್ತಿದೆ.



ದೇಶದಲ್ಲಿ ಈಗ ಷೇರುಪೇಟೆಯಲ್ಲಿ ಒಟ್ಟು ಐದು ಆರ್‌ಇಐಟಿಗಳು ನೋಂದಾಯಿತ ಆಗಿವೆ. ಬ್ರೂಕ್‌ಫೀಲ್ಡ್ ಇಂಡಿಯಾ ರಿಯಲ್ ಎಸ್ಟೇಟ್ ಟ್ರಸ್ಟ್, ಎಂಬಸಿ ಆಫೀಸ್ ಪಾರ್ಕ್ಸ್ ಆರ್‌ಇಐಟಿ, ಮೈಂಡ್‌ಸ್ಪೇಸ್ ಬ್ಯುಸಿನೆಸ್ ಪಾರ್ಕ್ಸ್ ಆರ್‌ಇಐಟಿ, ನೆಕ್ಸಸ್ ಸೆಲೆಕ್ಟ್ ಟ್ರಸ್ಟ್ ಮತ್ತು ನಾಲೆಜ್ ರಿಯಾಲ್ಟಿ ಟ್ರಸ್ಟ್ ಆ ಐದು ಆರ್‌ಇಐಟಿಗಳು.

ನೆಕ್ಸಸ್ ಸೆಲೆಕ್ಟ್ ಟ್ರಸ್ಟ್, ಬಾಡಿಗೆ ವರಮಾನ ಬರುವ ರಿಯಲ್ ಎಸ್ಟೇಟ್ (ಶಾಪಿಂಗ್ ಮಾಲ್) ಆಸ್ತಿಗಳನ್ನು ಹೊಂದಿದೆ. ಇನ್ನುಳಿದ ಆರ್‌ಇಐಟಿಗಳು ಕಚೇರಿ ಸ್ಥಳಗಳನ್ನು ಹೊಂದಿವೆ.

'ದೇಶದ ಆರ್‌ಇಐಟಿಗಳು ನೀಡುತ್ತಿರುವ ವರಮಾನದ ಸರಾಸರಿ ಪ್ರಮಾಣವು ಶೇ 6ರಿಂದ ಶೇ 7.5ರಷ್ಟು ಇದೆ. ಇದು ನಿಶ್ಚಿತ ವರಮಾನ ನೀಡುವ ಇತರ ಹೂಡಿಕೆ ಉತ್ಪನ್ನಗಳಿಗೆ ಸ್ಪರ್ಧಾತ್ಮಕವಾಗಿದೆ. ಆದರೆ, ಆರ್‌ಇಐಟಿಗಳಿಗೆ ಬಂಡವಾಳ ಮೌಲ್ಯದ ಹೆಚ್ಚಳ ಸಾಮರ್ಥ್ಯ ಇದೆ' ಎಂದು ವರದಿಯು ಹೇಳಿದೆ.

'ಭಾರತದಲ್ಲಿ ಆರ್‌ಇಐಟಿಗಳ ಆರಂಭವು ತಡವಾಗಿ ಆಗಿದ್ದರೂ, ಅವು ಈಗ ಹೆಚ್ಚು ವರಮಾನ ನೀಡುತ್ತಿವೆ' ಎಂದು ಅನರಾಕ್ ಕ್ಯಾಪಿಟಲ್‌ನ ಸಿಇಒ ಶೋಭಿತ್ ಅಗರ್ವಾಲ್ ಹೇಳಿದ್ದಾರೆ. ಇಲ್ಲಿನ ಆರ್‌ಇಐಟಿಗಳು ನೀಡುತ್ತಿರುವ ವರಮಾನದ ಪ್ರಮಾಣವು ಸಿಂಗಪುರ, ಅಮೆರಿಕದಂತಹ ಪ್ರಬುದ್ಧ ಮಾರುಕಟ್ಟೆಗಳಲ್ಲಿ ಸಿಗುತ್ತಿರುವ ವರಮಾನ ಪ್ರಮಾಣಕ್ಕಿಂತ ಹೆಚ್ಚಿದೆ ಎಂದಿದ್ದಾರೆ.


ಅಮೆರಿಕದ ಆರ್‌ಇಐಟಿಗಳು ನೀಡುವ ವರಮಾನ ಪ್ರಮಾಣವು ಶೇ 2.5–3.5ರಷ್ಟು ಇದೆ. ಸಿಂಗಪುರದಲ್ಲಿ ಇದು ಶೇ 5–6ರಷ್ಟು, ಜಪಾನ್‌ನಲ್ಲಿ ಶೇ 4.5–5.5ರಷ್ಟು ಇದೆ.

## 'ಹಣದುಬ್ಬರ ಇಳಿಕೆ ನಿರೀಕ್ಷೆ'

ಕೋಲ್ಕತ್ತ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ಹಣದುಬ್ಬರ ಪ್ರಮಾಣವು ಶೇಕಡ 3.2 ಆಗಿರಲಿದೆ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ಅಂದಾಜಿಸಿದೆ. ಈ ಮೊದಲು ಅದು ಹಣದುಬ್ಬರ ಪ್ರಮಾಣ ಶೇ 3.5ರಷ್ಟಾಗಲಿದೆ ಎಂದು ಅಂದಾಜಿಸಿತ್ತು.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಶೇ 1.40ರಷ್ಟು ಕಡಿಮೆ ಆಗಲಿದೆ ಎಂದು ತನ್ನ ಇತ್ತೀಚಿನ ವರದಿಯಲ್ಲಿ ತಿಳಿಸಿದೆ.

ಆರ್‌ಬಿಐ ಈ ವರ್ಷ ರೆಪೊ ದರವನ್ನು ಮತ್ತೆ ಶೇ 0.25ರಷ್ಟು ಕಡಿತ ಮಾಡಬಹುದು. ಹಣದುಬ್ಬರ ಇಳಿಕೆ ಮತ್ತು ಬಡ್ಡಿ ದರ ಕಡಿತವು ದೇಶೀಯವಾಗಿ ಬೇಡಿಕೆ ಹೆಚ್ಚಿಸಲಿದೆ ಎಂದು ಹೇಳಿದೆ.




ಮುಂಗಾರು ಹಂಗಾಮಿನಲ್ಲಿ ಸುರಿದ ಅತ್ಯಧಿಕ ಮಳೆಯಿಂದ ಪ್ರಮುಖವಾಗಿ ತೋಟಗಾರಿಕೆ ಬೆಳೆಗಳಿಗೆ ಹಾನಿ ಆಗಿದೆ. ಆಹಾರ ಧಾನ್ಯ ಬೆಳೆಯುವ ಪಂಜಾಬ್‌ನಂತಹ ಪ್ರದೇಶಗಳು ಪ್ರವಾಹಕ್ಕೆ ತುತ್ತಾಗಿವೆ ಎಂದು ತಿಳಿಸಿದೆ.





# ಭಾರತ–ಪಾಕ್ ಕ್ರಿಕೆಟ್‌ಗೆ ಆಕ್ರೋಶ

ಒಂದನೇ ಪುಟದಿಂದ...

'ಗಡಿಯಲ್ಲಿ ಯೋಧರು ಪ್ರಾಣ ಕಳೆದುಕೊಳ್ಳುತ್ತಿರುವಾಗ ನಾವು ಕ್ರಿಕೆಟ್ ಆಟವಾಡಬೇಕೇ? ಪಂದ್ಯ ಆಯೋಜಿಸುವ ಮೂಲಕ ದೇಶದ ಜನರ ಭಾವನೆಗಳಿಗೆ ಗಾಸಿ ಉಂಟು ಮಾಡಲಾಗುತ್ತಿದೆ. ಇದನ್ನು ಖಂಡಿಸಿ ಮಹಾರಾಷ್ಟ್ರದ್ಯಾಂತ ಪಕ್ಷವು 'ಸಿಂಧೂರ' ಹೆಸರಿನಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ತಿಳಿಸಿದೆ.

'ದುಬೈನಲ್ಲಿ ನಡೆಯಲಿರುವ ಪಂದ್ಯವನ್ನು ಬಹಿಷ್ಕರಿಸುವ ಮೂಲಕ ಭಯೋತ್ಪಾದನೆ ವಿರುದ್ಧ ಭಾರತದ ನಿಲುವನ್ನು ಜಗತ್ತಿನ ಮುಂದೆ ತಿಳಿಸಲು ಅವಕಾಶ ಕಲ್ಪಿಸಲಿದೆ' ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು.

ಕೇಂದ್ರ ಸರ್ಕಾರವನ್ನು ಟೀಕಿಸಿದ ಅವರು, 'ಆಪರೇಷನ್ ಸಿಂಧೂರ ನಿಲ್ಲಿಸಲಾಗಿದೆಯೇ ಎನ್ನುವುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯ ಗಾಯ ಇನ್ನೂ ಶಮನವಾಗಿಲ್ಲ. ಭಯೋತ್ಪಾದಕರ ದಾಳಿ ಇನ್ನೂ ಮನಸ್ಸಿನಲ್ಲಿ ಉಳಿದಿರುವಾಗ ದೇಶಭಕ್ತರು ಕ್ರಿಕೆಟ್ ಪಂದ್ಯ ವೀಕ್ಷಿಸಬಾರದು' ಎಂದು ಮನವಿ ಮಾಡಿದರು.

'ಕ್ರಿಕೆಟ್ ಪಂದ್ಯವು ದೇಶಭಕ್ತಿಯ ತಮಾಷೆಯಾಗಿದೆ. ಪಂದ್ಯವನ್ನು ಬಹಿಷ್ಕರಿಸಿದ್ದರೆ, ಪಾಕಿಸ್ತಾನ ಪ್ರೇರಿತ ಭಯೋತ್ಪಾದನೆ ವಿರುದ್ಧ ಕಠಿಣ ಸಂದೇಶ ರವಾನಿಸಿದಂತಾಗುತ್ತಿತ್ತು' ಎಂದು ಹೇಳಿದ್ದಾರೆ.

'ಇದು ಅವಿಭಜಿತ ಶಿವಸೇನಾದ ನಿಲುವು ಕೂಡ ಆಗಿತ್ತು. ರಕ್ತ ಹಾಗೂ ನೀರು ಜೊತೆಯಾಗಿ ಹರಿಯಲು ಸಾಧ್ಯವಿಲ್ಲ. ಹಾಗಿದ್ದ ಮೇಲೆ, ಕ್ರಿಕೆಟ್ ಮತ್ತು ರಕ್ತ ಒಂದಾಗಲು ಹೇಗೆ ಸಾಧ್ಯ? ದೇಶಭಕ್ತಿಯ ಹೆಸರಿನಲ್ಲಿ ನಾವು ವ್ಯಾಪಾರ ಮಾಡುತ್ತಿದ್ದೇವೆ' ಎಂದಿದ್ದಾರೆ.

'ಪಕ್ಷವು ರಾಜ್ಯದಾದ್ಯಂತ ಪಂದ್ಯದ ವಿರುದ್ಧ ಪ್ರತಿಭಟನೆ ನಡೆಸಲಿದೆ. ಪಕ್ಷದ ಮಹಿಳಾ ಕಾರ್ಯಕರ್ತರು ಸಿಂಧೂರವನ್ನು ಸಂಗ್ರಹಿಸಿ, ಪ್ರಧಾನಮಂತ್ರಿ ಕಚೇರಿಗೆ ಕಳುಹಿಸಿಕೊಡಲಿದ್ದಾರೆ' ಎಂದು ತಿಳಿಸಿದ್ದಾರೆ.

'1979ರಲ್ಲಿ ಅಫ್ಗಾನಿಸ್ತಾನದ ಮೇಲೆ ಸೋವಿಯತ್ ಒಕ್ಕೂಟವು ಆಕ್ರಮಣ ಮಾಡಿದ್ದನ್ನು ಖಂಡಿಸಿ ಮಾಸ್ಕೊದಲ್ಲಿ ನಡೆದಿದ್ದ ಬೇಸಿಗೆ ಒಲಿಂಪಿಕ್ಸ್ ಅನ್ನು ಅಮೆರಿಕ ನೇತೃತ್ವದಲ್ಲಿ ಹಲವು ರಾಷ್ಟ್ರಗಳು ಬಹಿಷ್ಕರಿಸಿದ್ದವು. ಕ್ರೀಡಾಕೂಟದಲ್ಲಿ 65 ದೇಶಗಳು ಭಾಗವಹಿಸಲು ನಿರಾಕರಿಸಿದರೆ, 80 ದೇಶಗಳು ಆಟದಲ್ಲಿ ಭಾಗವಹಿಸಲು ಅಥ್ಲೀಟ್ ಗಳನ್ನು ಕಳುಹಿಸಿದ್ದವು' ಎಂದು ಉದ್ಧವ್ ಠಾಕ್ರೆ ನೆನಪಿಸಿಕೊಂಡರು.

### ಆಮ್‌ಆದ್ಮಿ ಪಕ್ಷದಿಂದಲೂ ಪ್ರತಿಭಟನೆ

ನವದೆಹಲಿ (ಪಿಟಿಐ): ಪಾಕಿಸ್ತಾನ ಜತೆಗಿನ ಭಾರತದ ಕ್ರಿಕೆಟ್ ಪಂದ್ಯವಾಡುವುದನ್ನು ವಿರೋಧಿಸಿ ದೆಹಲಿಯಲ್ಲಿ ಆಮ್‌ಆದ್ಮಿ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

'ಪಾಕಿಸ್ತಾನದ ಜೊತೆಗೆ ಕ್ರಿಕೆಟ್ ಪಂದ್ಯವಾಡುವ ಮೂಲಕ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರನ್ನು ಸರ್ಕಾರ ಅವಮಾನಿಸುತ್ತಿದೆ' ಎಂದು ಆಮ್‌ಆದ್ಮಿ ಪಕ್ಷ ದೆಹಲಿ ಘಟಕದ ಅಧ್ಯಕ್ಷ ಸೌರಭ್ ಭಾರದ್ವಾಜ್ ಟೀಕಿಸಿದ್ದಾರೆ.

'ಪಂದ್ಯ ಪ್ರಸಾರ ಮಾಡುವ ಕ್ಲಬ್, ರೆಸ್ಟೋರೆಂಟ್‌ಗಳನ್ನು ಕಾರ್ಯಕರ್ತರು ಬಹಿಷ್ಕರಿಸಲಿದ್ದಾರೆ. ಇಂತಹ ಕೇಂದ್ರಗಳಿಗೆ ತೆರಳುವುದನ್ನೇ ನಿಲ್ಲಿಸಲಿದ್ದಾರೆ' ಎಂದು ಎಚ್ಚರಿಸಿದ್ದಾರೆ.

'ಪಾಕಿಸ್ತಾನದ ಜೊತೆಗೆ ಪಂದ್ಯ ಆಯೋಜಿಸುವ ಅಗತ್ಯವಾದರೂ ಏನಿತ್ತು? ಇಡೀ ದೇಶವೇ ಪಂದ್ಯ ನಡೆಯಬಾರದು ಎಂದು ಬಯಸುತ್ತಿದೆ. ಹೀಗಿದ್ದರೂ ಯಾವ ಕಾರಣಕ್ಕಾಗಿ ಪಂದ್ಯ ಆಯೋಜಿಸಲಾಗಿದೆ' ಎಂದು ಆಮ್‌ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ 'ಎಕ್ಸ್'ನಲ್ಲಿ ಪ್ರಶ್ನಿಸಿದ್ದಾರೆ.

'ಇದು ಕೂಡ ಟ್ರಂಪ್ ಒತ್ತಡದಿಂದಲೇ ನಡೆಸಲಾಗುತ್ತಿದೆಯೇ? ಅವರಿಗಾಗಿ ಎಷ್ಟು ಮಂಡಿಯೂರುತ್ತೀರಿ' ಎಂದು ಇದೇ ವೇಳೆ ಪ್ರಶ್ನಿಸಿದ್ದಾರೆ.

### ಪಂದ್ಯ ರದ್ದುಗೊಳಿಸಿ: ಮನವಿ

ಲಖನೌ: 'ದುಬೈನಲ್ಲಿ ನಡೆಯುತ್ತಿರುವ ಭಾರತ–ಪಾಕಿಸ್ತಾನ ಪಂದ್ಯವನ್ನು ಬಿಸಿಸಿಐ ಕೂಡಲೇ ರದ್ದುಗೊಳಿಸಬೇಕು. ಜನರು ಕೂಡ ಪಂದ್ಯವನ್ನು ಬಹಿಷ್ಕರಿಸಿ, ವೀಕ್ಷಿಸಬಾರದು' ಎಂದು ಪಹಲ್ಗಾಮ್ ಭಯೋತ್ಪಾದಕ ದಾಳಿಯ ಸಂತ್ರಸ್ತೆ ಆಗ್ರಹಿಸಿದ್ದಾರೆ.

ಪಹಲ್ಗಾಮ್‌ನ ಭಯೋತ್ಪಾದಕರ ದಾಳಿಯಲ್ಲಿ ಕಾನ್ಪುರ ಮೂಲದ ಉದ್ಯಮಿ ಶುಭಂ ದ್ವಿವೇದಿ ಕೂಡ ಮೃತಪಟ್ಟಿದ್ದರು.

'ಪಂದ್ಯ ಆಯೋಜಿಸುವ ಮೂಲಕ ಪಹಲ್ಗಾಮ್ ಹುತಾತ್ಮರಿಗೆ ಅಗೌರವ ತೋರಿದಂತಾಗಿದೆ' ಎಂದು ಶುಭಂ ಪತ್ನಿ ಆಶಾನ್ಯ ದ್ವಿವೇದಿ ಕಿಡಿಕಾರಿದ್ದಾರೆ. 'ಸಂತ್ರಸ್ತ ಕುಟುಂಬಗಳ ಗಾಯಕ್ಕೆ ಉಪ್ಪು ಸವರಿದಂತಾಗಿದೆ. ಜನರೇ ಪಂದ್ಯವನ್ನು ಬಹಿಷ್ಕರಿಸಿ, ಪಂದ್ಯ ನೋಡಬಾರದು. ಕ್ರೀಡಾಂಗಣಕ್ಕೂ ತೆರಳಬಾರದು' ಎಂದು ಈ ವೇಳೆ ಆಗ್ರಹಿಸಿದ್ದಾರೆ.

# ಮನೆ ಖರೀದಿದಾರರನ್ನು ಉಳಿಸಿ: ಸುಪ್ರೀಂ

## ಅರ್ಧಕ್ಕೆ ನಿಂತ ಮನೆ ನಿರ್ಮಾಣದಿಂದ ಜನರಿಗೆ ತೊಂದರೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ತಮ್ಮ ತಲೆಯ ಮೇಲೊಂದು ಸೂರು ಇರಬೇಕು ಎನ್ನುವುದು ಎಲ್ಲ ಜನರ ಆಸೆ. ಸಂವಿಧಾನದ 21ನೇ ವಿಧಿ (ಆಶ್ರಯದ ಹಕ್ಕು) ಅನ್ವಯ ಇದು ಜನರ ಮೂಲಭೂತ ಹಕ್ಕು ಕೂಡ ಹೌದು.



ತಮ್ಮ ಕನಸಿನ ಮನೆ ಖರೀದಿಯಾಗಿ ಜನರು ತಮ್ಮ ಜೀವಮಾನದ ಎಲ್ಲ ದುಡಿಮೆಯನ್ನು ಹಾಕಿರುತ್ತಾರೆ. ಈ ಮನೆಗಳು ನಿರ್ಮಾಣವಾಗದೆ ಅರ್ಧಕ್ಕೆ ನಿಂತು ಹೋದರೆ ಹೇಗೆ? ಇದಕ್ಕೆ ಕೇಂದ್ರ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಆವರ್ತ ನಿಧಿಯೊಂದನ್ನು ಸ್ಥಾಪಿಸಿ...

– ಹೀಗೆ ಹೇಳಿದ್ದು ಸುಪ್ರೀಂ ಕೋರ್ಟ್. 'ಹಣ ನೀಡಿದರೂ ಮನೆ ನಿರ್ಮಾಣ ಪೂರ್ಣಗೊಳ್ಳದಿದ್ದಾಗ ಜನರಲ್ಲಿ ಆತಂಕ ಮನೆ ಮಾಡುತ್ತದೆ. ಅದರಿಂದ ಅವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ಅವರ ಕಾರ್ಯಕ್ಷಮತೆ ತಗ್ಗುತ್ತದೆ' ಎಂದು ಕೋರ್ಟ್ ಹೇಳಿದೆ.

ಹಣ ನೀಡಿದ ಬಳಿಕವೂ ಮನೆ ನಿರ್ಮಾಣ ಮಾಡಿ ಕೊಡದ ಕಂಪನಿಗಳ ವಿರುದ್ಧ ಮಾನಸಿ ಬ್ರಾರ್ ಮತ್ತು ಸುನಿತಾ ಅಗರ್ವಾಲ್ ಎಂಬವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಈ ಪ್ರಕರಣದ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹದೇವನ್ ಅವರಿದ್ದ ಪೀಠವು ಶುಕ್ರವಾರ (ಸೆ.12) ತೀರ್ಪು ನೀಡಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಹಲವು ನಿರ್ದೇಶನಗಳನ್ನೂ ನೀಡಿದೆ.

'ರಾಷ್ಟ್ರೀಯ ಆಸ್ತಿ ಮರುನಿರ್ಮಾಣ ಕಂಪನಿ ಲಿಮಿಟೆಡ್ (ಎನ್‌ಎಆರ್‌ಸಿಎಲ್) ರೀತಿಯಲ್ಲಿಯೇ ಮತ್ತೊಂದು ಸಂಸ್ಥೆಯೊಂದನ್ನು ರೂಪಿಸಿ. ಈ ಸಂಸ್ಥೆಗೆ ರಿಯಲ್ ಎಸ್ಟೇಟ್ ಅಥವಾ ನಿರ್ಮಾಣದಲ್ಲಿ ತೊಡಗಿಕೊಂಡಿರುವ ಸರ್ಕಾರಿ ಸಂಸ್ಥೆಗಳು ಸಹಕಾರ ನೀಡಲಿ. ಖಾಸಗಿ-ಸರ್ಕಾರಿ ಸಹಭಾಗಿತ್ವದಲ್ಲಿ ಈ ಸಂಸ್ಥೆ ನಡೆಯಲಿ. ದಿವಾಳಿ ಸಂಹಿತೆ 2026ರ ಅಡಿಯಲ್ಲಿ ಇದು ಕೆಲಸ ಮಾಡಲಿ. ಅರ್ಧಕ್ಕೆ ನಿಂತಿರುವ ಕಾಮಗಾರಿಗಳನ್ನು ಗುರುತಿಸುವುದು, ಅಂಥ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದು ಈ ಸಂಸ್ಥೆಯ ಕಾರ್ಯವಾಗಲಿ' ಎಂದು ಪೀಠ ಹೇಳಿದೆ.

### ಸರ್ಕಾರಗಳಿಗೆ 'ಸುಪ್ರೀಂ' ಸೂಚನೆ

- ರೇರಾ ಅಧಿಕಾರಿಗಳು ಹಲ್ಲು ಕಿತ್ತ ಹುಲಿಗಳಂತಾಗಬಾರದು. ಮಧ್ಯಮವರ್ಗದ ಜನರ ಈ ಸಂಕಷ್ಟಗಳ ಕುರಿತು ಸರ್ಕಾರವು ಮೂಕ ಪ್ರೇಕ್ಷಕನಂತಾಗಬಾರದು
- ಕಂಪನಿಯೊಂದರ ಎಲ್ಲ ಮನೆಗಳು ಮಾರಾಟವಾಗದೇ ಇದ್ದರೆ, ಅಂಥ ಮನೆಗಳನ್ನು ಕೈಗೆಟಕುವ ಮನೆ ನಿರ್ಮಾಣ ಯೋಜನೆಗಳ (ಉದಾ: ಪ್ರಧಾನಮಂತ್ರಿ ಆವಾಸ್ ಯೋಜನೆ) ಅಡಿಯಲ್ಲಿ ಜನರಿಗೆ ನೀಡಬಹುದು. ಅಥವಾ ಅವುಗಳನ್ನು ಸರ್ಕಾರಿ ಕ್ವಾಟರ್ಸ್‌ಗಳಾಗಿ ಮಾಡಬಹುದು
- ಎನ್‌ಎಆರ್‌ಸಿಎಲ್ ಅಡಿಯಲ್ಲಿಯೇ ಪುನಃಶ್ಚೇತನ ನಿಧಿಯನ್ನು ಸ್ಥಾಪಿಸಬಹುದು ಅಥವಾ 'ಕೈಗೆಟಕುವ ಮತ್ತು ಮಧ್ಯಮ ಬೆಲೆಯ ಮನೆಗಾಗಿ ವಿಶೇಷ ಗವಾಕ್ಷಿ ನಿಧಿ'ಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಬಹುದು. ಈ ಮೂಲಕ ಅರ್ಧಕ್ಕೆ ನಿಂತ ಮನೆ ನಿರ್ಮಾಣ ಯೋಜನೆಗಳನ್ನು ಪೂರ್ಣಗೊಳಿಸಬಹುದು
- ರಿಯಲ್ ಎಸ್ಟೇಟ್ ಕ್ಷೇತ್ರದ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಉದ್ದೇಶದಿಂದ ಮೂರು ತಿಂಗಳ ಒಳಗಾಗಿ ಸಮಿತಿಯೊಂದನ್ನು ರಚಿಸಿ. ಇದಕ್ಕೆ ನಿವೃತ್ತ ನ್ಯಾಯಮೂರ್ತಿಯೊಬ್ಬರನ್ನು ಮುಖ್ಯಸ್ಥರನ್ನಾಗಿ ಮಾಡಿ

**ಪಿವಿ ಬ್ರ್ಯಾಂಡ್ ಸ್ಪಾಟ್**

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

## ಮೋದಿ ಎ.ಐ ವಿಡಿಯೊ: ಎಫ್‌ಐಆರ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ತಾಯಿಯನ್ನು ಅವಹೇಳನಕಾರಿಯಾಗಿ ಚಿತ್ರಿಸಿದ ಎ.ಐ ವಿಡಿಯೊವನ್ನು 'ಎಕ್ಸ್'ನಲ್ಲಿ ಬಿತ್ತರಿಸಿದ ಆರೋಪದಡಿ, ದೆಹಲಿ ಪೊಲೀಸರು ಶನಿವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಕೃತಕ ಬುದ್ಧಿಮತ್ತೆಯ (ಎ.ಐ) ಈ ಡೀಪ್‌ಫೇಕ್ ವಿಡಿಯೊವು ಮೋದಿ ಮತ್ತು ಅವರ ದಿವಂಗತ ತಾಯಿಯ ವ್ಯಕ್ತಿತ್ವಕ್ಕೆ ಕಳಂಕ ತಂದಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ದೆಹಲಿ ಬಿಜೆಪಿ ಘಟಕದ ಚುನಾವಣಾ ಕೋಶದ ಸಂಚಾಲಕ ಸಂಕೇತ್ ಗುಪ್ತಾ ಅವರು ನಾರ್ತ್ ಅವೆನ್ಯೂ ಪೊಲೀಸ್ ಠಾಣೆಗೆ ಶುಕ್ರವಾರ ದೂರು ನೀಡಿದ್ದಾರೆ.

ವಿಡಿಯೊದಲ್ಲಿ ಪ್ರಧಾನಿಯ ವ್ಯಕ್ತಿತ್ವವನ್ನು ಕೆಟ್ಟದಾಗಿ ಬಿಂಬಿಸಲಾಗಿದೆ. ಮಹಿಳೆಯ ಘನತೆ, ನೈತಿಕತೆ ಮತ್ತು ಕಾನೂನನ್ನು ಉಲ್ಲಂಘಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಸೆ. 10ರಂದು ಬಿಹಾರ ಕಾಂಗ್ರೆಸ್ ಘಟಕವು ತನ್ನ ಎಕ್ಸ್ ಖಾತೆಯಲ್ಲಿ ಈ ವಿಡಿಯೊವನ್ನು ಅಪ್‌ಲೋಡ್ ಮಾಡಿತ್ತು.

## ರಷ್ಯಾ: ಪ್ರಬಲ ಭೂಕಂಪನ

ಮಾಸ್ಕೊ (ಎಪಿ): ರಷ್ಯಾದ ಪೂರ್ವ ಕರಾವಳಿ ಕಮ್ಚಟ್ಕಾದಲ್ಲಿ 7.4 ತೀವ್ರತೆಯ ಪ್ರಬಲ ಭೂಕಂಪನ ಶನಿವಾರ ಸಂಭವಿಸಿದೆ.

ಯಾವುದೇ ಪ್ರಾಣಹಾನಿ ಮತ್ತು ಆಸ್ತಿ ಹಾನಿ ಸಂಭವಿಸಿಲ್ಲ. ಪೆಟ್ರೊಪಾವಲೊಸ್ಕ್-ಕಮ್ಚಟ್‌ಸ್ಕಿಯಿಂದ ಪೂರ್ವಕ್ಕೆ 117.7 ಕಿ.ಮೀ ದೂರದಲ್ಲಿ ಭೂಕಂಪನದ ಕೇಂದ್ರಬಿಂದು ಇತ್ತು. 39 ಆಳದಲ್ಲಿ ಕಂಪನ ಸಂಭವಿಸಿದೆ ಎಂದು ಯುಎಸ್ ಭೌಗೋಳಿಕ ಸಮೀಕ್ಷೆ ತಿಳಿಸಿದೆ.

ಸಮುದ್ರಮಟ್ಟದಲ್ಲಿ ಬದಲಾವಣೆಗಳಾಗುವ ಬಗ್ಗೆ ಕರಾವಳಿ ಪ್ರದೇಶಕ್ಕೆ ಜಪಾನ್ ಹವಾಮಾನ ಸಂಸ್ಥೆ ಎಚ್ಚರಿಕೆ ನೀಡಿದೆ. ಹಾಗಾಗಿ ಹಾನಿಯ ಪ್ರಮಾಣ ಕಡಿಮೆ ಇದೆ.

## ಫ್ಲಿಪ್‌ಕಾರ್ಟ್‌ಗೆ ನಷ್ಟ?

ನವದೆಹಲಿ (ಪಿಟಿಐ): ವಾಲ್‌ಮಾರ್ಟ್ ಮಾಲೀಕತ್ವದ ಇ-ಕಾಮರ್ಸ್ ಕಂಪನಿ ಫ್ಲಿಪ್‌ಕಾರ್ಟ್ ಇಂಡಿಯಾ 2024–25ರ ಆರ್ಥಿಕ ವರ್ಷದಲ್ಲಿ ₹5,189 ಕೋಟಿ ನಷ್ಟ ಕಂಡಿದೆ ಎಂದು ಬ್ಯುಸಿನೆಸ್ ಇಂಟಲಿಜೆನ್ಸ್ ಸಂಸ್ಥೆ ಟೋಪ್ಲರ್ ತಿಳಿಸಿದೆ.

2023–24ರ ಆರ್ಥಿಕ ವರ್ಷದಲ್ಲಿ ₹4,248 ಕೋಟಿ ನಷ್ಟ ಕಂಡಿತ್ತು ಎಂದು ತಿಳಿಸಿದೆ.

ವರಮಾನದಲ್ಲಿ ಶೇ 17ರಷ್ಟು ಹೆಚ್ಚಳವಾಗಿದ್ದು, ₹82,787 ಕೋಟಿಯಾಗಿದೆ. ಇದರ ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹70,541 ಕೋಟಿಯಾಗಿದೆ. ಕಂಪನಿಯ ಒಟ್ಟು ವೆಚ್ಚವು ₹88,121 ಕೋಟಿಗೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಫ್ಲಿಪ್‌ಕಾರ್ಟ್ ಈ ಕುರಿತು ಕೇಳಿದ ಮಾಹಿತಿಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

## ರಷ್ಯಾದಿಂದ ತೈಲ ಖರೀದಿಸುವ ರಾಷ್ಟ್ರಗಳ ಮೇಲೆ ಸುಂಕ ಹೇರಿ: ಟ್ರಂಪ್

ನ್ಯೂಯಾರ್ಕ್ / ವಾಷಿಂಗ್ಟನ್ (ಪಿಟಿಐ): ರಷ್ಯಾದಿಂದ ಕಚ್ಚಾತೈಲ ಖರೀದಿಸುವ ರಾಷ್ಟ್ರಗಳ ಮೇಲೆ ಸುಂಕ ಹೇರುವಂತೆ ಜಿ7 ರಾಷ್ಟ್ರಗಳನ್ನು ಅಮೆರಿಕ ಒತ್ತಾಯಿಸಿದೆ.

ಸಾಮೂಹಿಕ ಪ್ರಯತ್ನದಿಂದ ಮಾತ್ರ 'ವಿವೇಚನಾರಹಿತ ಹತ್ಯೆಯನ್ನು ನಿಲ್ಲಿಸುವಂತೆ' ರಷ್ಯಾದ ಮೇಲೆ ಒತ್ತಡ ಹೇರಲು ಸಾಧ್ಯ ಎಂದು ಅದು ಹೇಳಿದೆ.

ಅಮೆರಿಕ ರಕ್ಷಣಾ ಖಜಾಂಚಿ ಸ್ಕಾಟ್ ಬೆಸ್ಸೆಟ್ ಮತ್ತು ಅಮೆರಿಕ ವಾಣಿಜ್ಯ ಪ್ರತಿನಿಧಿ ರಾಯಭಾರಿ ಜೇಮಿಸನ್ ಗ್ರೀರ್ ಅವರು ಜಿ7 ಅರ್ಥ ಸಚಿವರೊಂದಿಗೆ ಈ ಸಂಬಂಧ ಮಾತುಕತೆ ನಡೆಸಿದರು.

ಅಮೆರಿಕವು ಯಾವುದೇ ದೇಶದ ಹೆಸರನ್ನು ಪ್ರಸ್ತಾಪಿಸಿಲ್ಲ. ಆದರೂ ಭಾರತ ಮತ್ತು ಚೀನಾ ಪದೇ ಪದೇ ದೂರುತ್ತಿದೆ.

ನಿಷೇಧಾಜ್ಞೆ ತೆರವು, ಮಾರುಕಟ್ಟೆಗಳು ಜನರಿಗೆ ಮುಕ್ತ, ಮಾರ್ಚ್ 5ಕ್ಕೆ ಸಾರ್ವತ್ರಿಕ ಚುನಾವಣೆ

# ಸಹಜ ಸ್ಥಿತಿಯತ್ತ ನೇಪಾಳ: ಇಂದು ಸಂಪುಟ ರಚನೆ

ಕಠ್ಮಂಡು (ಎಎಫ್‌ಪಿ): ನೇಪಾಳದ ರಾಜಧಾನಿಯಲ್ಲಿ ಭ್ರಷ್ಟಾಚಾರ ವಿರೋಧಿ ಪ್ರತಿಭಟನೆಯ ತೀವ್ರತೆ ತಗ್ಗಿದೆ. ನಿಷೇಧಾಜ್ಞೆಯ ತೆರವಿನೊಂದಿಗೆ ಶನಿವಾರ ಜನಜೀವನ ಸಹಜ ಸ್ಥಿತಿಗೆ ತಲುಪಿದೆ.

ಇತ್ತ ಮಧ್ಯಂತರ ಸರ್ಕಾರದ ಪ್ರಧಾನಿಯಾಗಿ ಸುಶೀಲಾ ಕಾರ್ಕಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಪ್ರಮಾಣ ವಚನ ಸ್ವೀಕರಿಸಿದ ನಂತರ ಪ್ರಧಾನಿ ಸುಶೀಲಾ ಕಾರ್ಕಿ ಅವರು ಭ್ರಷ್ಟಾಚಾರ ಮುಕ್ತ ಭವಿಷ್ಯಕ್ಕಾಗಿ ಒತ್ತಾಯಿಸಿದ್ದ ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದರು.

ಶನಿವಾರ ಬೆಳಿಗ್ಗೆ ವೇಳೆಗೆ ಎಲ್ಲ ಬೀದಿಗಳು ಶಾಂತ ಸ್ಥಿತಿಗೆ ಮರಳಿವೆ, ಮಾರುಕಟ್ಟೆಗಳು ಜನರಿಗೆ ತೆರೆದಿವೆ ಮತ್ತು ವಾಹನಗಳು ಎಂದಿನಂತೆ ರಸ್ತೆಯಲ್ಲಿ ಸಂಚರಿಸುತ್ತಿವೆ.

ನೂತನ ಹಂಗಾಮಿ ಪ್ರಧಾನಿ ಆಗಿರುವ ಸುಶೀಲಾ ಕಾರ್ಕಿ ಅವರು ಗೃಹ ಸಚಿವರು, ವಿದೇಶಾಂಗ ಹಾಗೂ ರಕ್ಷಣಾ ಸಚಿವರು ಸೇರಿದಂತೆ ಕೆಲವೇ ಸಚಿವರನ್ನು ಒಳಗೊಂಡ ಸಂಪುಟವನ್ನು ಭಾನುವಾರ ರಚಿಸಲಿದ್ದಾರೆ ಎಂದು ಅಧ್ಯಕ್ಷರ ಕಚೇರಿಯ ಮೂಲಗಳು ತಿಳಿಸಿವೆ.




ಕಠ್ಮಂಡುವಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಾವಿಗೀಡಾದವರ ಸ್ಮರಣಾರ್ಥ ಜನರು ಶನಿವಾರ ಮೇಣದ ಬತ್ತಿ ಬೆಳಗಿಸಿದರು ಪಿಟಿಐ ಚಿತ್ರ

ಅಲ್ಲದೇ, 'ಜೆನ್–ಝಿ' ಪ್ರತಿಭಟನೆ ವೇಳೆ ಪ್ರಧಾನಿ ಕಚೇರಿಯ ಕಟ್ಟಡವೂ ಬೆಂಕಿಗೆ ಆಹುತಿಯಾಗಿರುವ ಕಾರಣ ಸಿಂಗದರ್ಬಾರ್ ಸಂಕೀರ್ಣದಲ್ಲಿ ಗೃಹ ಸಚಿವಾಲಯಕ್ಕಾಗಿ ನೂತನವಾಗಿ ನಿರ್ಮಿಸಿರುವ ಕಚೇರಿಯನ್ನೇ ಪ್ರಧಾನಿ ಕಚೇರಿಯನ್ನಾಗಿ ಮಾರ್ಪಾಡು ಮಾಡಲಾಗುತ್ತಿದೆ ಎಂದೂ ತಿಳಿದುಬಂದಿದೆ.

**ಮಾರ್ಚ್ 5ಕ್ಕೆ ಚುನಾವಣೆ:** ನೇಪಾಳದ ಮುಂದಿನ ಸಾರ್ವತ್ರಿಕ ಚುನಾವಣೆಯು 2026ರ ಮಾರ್ಚ್ 5ರಂದು ನಡೆಯಲಿದೆ ಎಂದು ಅಧ್ಯಕ್ಷ ರಾಮಚಂದ್ರ ಪೌಡೆಲ್ ಅವರ ಕಚೇರಿಯು ಘೋಷಿಸಿದೆ.

ಹಂಗಾಮಿ ಪ್ರಧಾನಿ ಸುಶೀಲಾ ಕಾರ್ಕಿ ಅವರ ಶಿಫಾರಸಿನ ಮೇರೆಗೆ ಶುಕ್ರವಾರ ತಡರಾತ್ರಿಯೇ ಸಂಸತ್ತನ್ನು ಅಧ್ಯಕ್ಷ ಪೌಡೆಲ್ ವಿಸರ್ಜಿಸಿದ್ದರು.

**'ಸಂಸತ್ ವಿಸರ್ಜನೆ ಅಸಾಂವಿಧಾನಿಕ:** ರಾತ್ರೋರಾತ್ರಿ ಸಂಸತ್ತನ್ನು ವಿಸರ್ಜಿಸಿರುವ ನೇಪಾಳದ ಅಧ್ಯಕ್ಷರ ತೀರ್ಮಾನವನ್ನು ಇಲ್ಲಿನ ಪ್ರಮುಖ ರಾಜಕೀಯ ಪಕ್ಷಗಳು ಹಾಗೂ ವಕೀಲರ ಸಂಘಟನೆಗಳು ಖಂಡಿಸಿದ್ದು, ಇದು ಅಸಾಂವಿಧಾನಿಕ ನಡೆ ಹಾಗೂ ನಿರಂಕುಶಾಧಿಕಾರದ ಪ್ರತೀಕ ಎಂದು ಆರೋಪಿಸಿವೆ.

### 'ಸುಪ್ರೀಂ' ಮಹತ್ವದ ದಾಖಲೆಗಳು ನಾಶ

ವಿದ್ಯಾರ್ಥಿಗಳ ನೇತೃತ್ವದ ಸರ್ಕಾರ ವಿರೋಧಿ ಪ್ರತಿಭಟನೆಯ ವೇಳೆ ಮಹತ್ವದ ನ್ಯಾಯಾಂಗ ದಾಖಲೆಗಳು ನಾಶವಾಗಿವೆ ಎಂದು ನೇಪಾಳದ ಸುಪ್ರೀಂ ಕೋರ್ಟ್ ತಿಳಿಸಿದೆ.

### ವಾರಾಣಸಿ ಜೊತೆ ಕಾರ್ಕಿ ನಂಟು

ವಾರಾಣಸಿ (ಪಿಟಿಐ): ನೇಪಾಳದ ಮೊದಲ ಮಹಿಳಾ ಪ್ರಧಾನಿಯಾಗಿರುವ ಸುಶೀಲಾ ಕಾರ್ಕಿ (73) ಅವರು ವಾರಾಣಸಿಯೊಂದಿಗೆ ಅವಿನಾಭಾವ ನಂಟನ್ನು ಹೊಂದಿದ್ದಾರೆ.

ಮಾಧ್ಯಮವೊಂದಕ್ಕೆ ಇತ್ತೀಚೆಗೆ ನೀಡಿದ ಸಂದರ್ಶನದಲ್ಲಿ ಅವರು, 'ಭಾರತದ ಸ್ನೇಹಿತೆ' ಎಂದು ತಮ್ಮನ್ನು ಕರೆದುಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ, ಉತ್ತರಪ್ರದೇಶದ ವಾರಾಣಸಿಯಲ್ಲಿರುವ ಪ್ರತಿಷ್ಠಿತ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ (ಬಿಎಚ್‌ಯು) ಸ್ನಾತಕೋತ್ತರ ಪದವಿ ಪಡೆದಿರುವುದಾಗಿ ಮತ್ತು ಇದೇ ವೇಳೆ ತಮ್ಮ ಜೀವನ ಸಂಗಾತಿಯನ್ನು ಭೇಟಿ ಮಾಡಿದ್ದಾಗಿ ತಿಳಿಸಿದ್ದಾರೆ.

'ಕಾರ್ಕಿ ಅವರು 1975ರಲ್ಲಿ ಬಿಎಚ್‌ಯುನಲ್ಲಿ ರಾಜಕೀಯಶಾಸ್ತ್ರ ಎಂ.ಎ ವ್ಯಾಸಂಗ ಮಾಡುತ್ತಿದ್ದರು. ಅದೇ ಸಂದರ್ಭದಲ್ಲಿ ನೇಪಾಳದ ರಾಜಪ್ರಭುತ್ವ ವಿರೋಧಿ ಪ್ರತಿಭಟನೆಗೆ ವಾರಾಣಸಿ ಕೇಂದ್ರವಾಗಿತ್ತು. ಕಾರ್ಕಿ ಅವರು ಈ ಚಳವಳಿಯಲ್ಲಿ ಭಾಗಿಯಾಗಿದ್ದರು' ಎಂದು ಬಿಎಚ್‌ಯುನ ನಿವೃತ್ತ ಪ್ರಾಧ್ಯಾಪಕ ದೀಪಕ್ ಮಲ್ಲಿಕ್ ಅವರು ತಿಳಿಸಿದರು.

ಚಿಟಿಕೆ ಸುದ್ದಿ

## ‘ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಲು ನಿರ್ಧಾರ’

ಶಿರಸಿ (ಉತ್ತರ ಕನ್ನಡ ಜಿಲ್ಲೆ): ‘ಅರಣ್ಯ ಹಕ್ಕು ಕಾಯಿದೆಯಡಿ ಸಲ್ಲಿಸಿದ್ದ ಅರ್ಜಿಗಳನ್ನು ಪುನರ್ ಪರಿಶೀಲಿಸದೇ ರಾಜ್ಯದಲ್ಲಿ 2.60 ಲಕ್ಷಕ್ಕೂ ಹೆಚ್ಚು ಅರ್ಜಿಗಳನ್ನು ತಿರಸ್ಕರಿಸಿ ಕೇಂದ್ರಕ್ಕೆ ವರದಿ ಸಲ್ಲಿಸಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಲು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ತೀರ್ಮಾನಿಸಿದೆ’ ಎಂದು ಅಧ್ಯಕ್ಷ ರವೀಂದ್ರ ನಾಯ್ಕ ತಿಳಿಸಿದರು.



ರವೀಂದ್ರ ನಾಯ್ಕ

‘ಶನಿವಾರ ನಗರದಲ್ಲಿ ನಡೆದ ಚಿಂತನ ಕೂಟದಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು’ ಎಂದು ಹೇಳಿದರು.

‘ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಕೇಂದ್ರ ಸಚಿವರು ಕರ್ನಾಟಕದಲ್ಲಿ ಅರ್ಜಿ ತಿರಸ್ಕರಿಸಿದ ಉತ್ತರದ ಪ್ರತಿ ನೀಡಿದ್ದಾರೆ. ಅರಣ್ಯ ಹಕ್ಕು ಕಾಯಿದೆ ಅರಣ್ಯವಾಸಿಗಳ ಪರ ಇದ್ದಾಗಲೂ, ಭೂಮಿ ಹಕ್ಕಿನಿಂದ ವಂಚಿತರಾಗುವಂತಾಗಿದ್ದು ಖಂಡನೀಯ. ಇದರ ವಿರುದ್ಧ ಹೋರಾಟಗಾರರ ವೇದಿಕೆ ಹೋರಾಟ ಮುಂದುವರೆಸಲಿದೆ’ ಎಂದು ತಿಳಿಸಿದರು.

# ‘ರಾಜಕೀಯ ಮಾತು ಸದನದಾಚೆಗಿರಲಿ’

### ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತೀಯ ಸಮ್ಮೇಳನದಲ್ಲಿ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗದ್ದಲವಿಲ್ಲದೆ, ಯಾವುದೇ ಅಡೆತಡೆಗಳು ಇಲ್ಲದೆ ಸದನದ ಕಲಾಪಗಳು ನಡೆಯಬೇಕು. ರಾಜಕೀಯಯದ ಮಾತು ಸದನದಾಚೆ ಇರಬೇಕು’ ಎಂಬ ನಿರ್ಣಯದೊಂದಿಗೆ ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತೀಯ ವಿಭಾಗ 11ನೇ ಸಮ್ಮೇಳನಕ್ಕೆ ಶನಿವಾರ ತೆರೆಬಿತ್ತು.

ಇದೇ 12 ಮತ್ತು 13ರಂದು ನಡೆದ ಈ ಸಮ್ಮೇಳನದಲ್ಲಿ ಲೋಕಸಭೆಯ ಸ್ಪೀಕರ್, ರಾಜ್ಯಸಭೆಯ ಉಪಸಭಾಪತಿ, 26 ರಾಜ್ಯಗಳ ವಿಧಾನಸಭೆ ಸಭಾಧ್ಯಕ್ಷರು ಭಾಗಿಯಾಗಿದ್ದರು. ಸಮ್ಮೇಳನದ ಸಮಾರೋಪ ಸಮಾರಂಭದ ನಂತರ ತಮ್ಮ ನೇತೃತ್ವದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ನಿರ್ಣಯಗಳನ್ನು ಮಂಡಿಸಿದರು.

‘ಜನಪರ ಕಾರ್ಯಗಳ ಬಗ್ಗೆ ಚರ್ಚಿಸಲಷ್ಟೇ ಸದನದ ಸಮಯ ಬಳಕೆಯಾಗಬೇಕು. ರಾಜಕೀಯದ ಮಾತು ಸದನದಾಚೆಗೆ ಇರಬೇಕು ಎಂದು ಎಲ್ಲ ಚುನಾಯಿತ ಪ್ರತಿನಿಧಿಗಳಿಗೆ ತಿಳಿಹೇಳಬೇಕೆಂದು ನಿರ್ಧರಿಸಲಾಗಿದೆ. ಲೋಕಸಭೆ, ರಾಜ್ಯಸಭೆ, ರಾಜ್ಯಗಳ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಕಲಾಪವನ್ನು ಹೇಗೆ ನಡೆಸಬೇಕು ಎಂಬುದನ್ನು ಸೂಚಿಸುವ ಕೈಪಿಡಿಯೊಂದನ್ನು ಸಿದ್ಧಪಡಿಸುವ ಬಗ್ಗೆ ನಿರ್ಧರಿಸಲಾಗಿದೆ’ ಎಂದರು.

> **ಭಿನ್ನಾಭಿಪ್ರಾಯ ಪ್ರಜಾಪ್ರಭುತ್ವದ ಆತ್ಮ. ರಾಜಕೀಯ ಭಿನ್ನಾಭಿಪ್ರಾಯವನ್ನು ಪ್ರಬುದ್ಧ ಮತ್ತು ಸಹಿಷ್ಣು ಮನೋಭಾವದಿಂದ ಸ್ವೀಕರಿಸಬೇಕು**
> **ಓಂ ಬಿರ್ಲಾ,** ಲೋಕಸಭೆ ಸ್ಪೀಕರ್

‘ಗದ್ದಲವೇ ಈಗ ಸದನ ಸರಾಗವಾಗಿ ನಡೆಯಲು ಇರುವ ದೊಡ್ಡ ತೊಡಕು. ಗದ್ದಲ, ಧರಣಿಗಳು ಅತ್ಯಮೂಲ್ಯವಾದ ವಿಷಯಗಳ ಮೇಲಿನ ಚರ್ಚೆಯನ್ನು ಹಾದಿತಪ್ಪಿಸುತ್ತವೆ. ಹಣವೂ ವ್ಯರ್ಥವಾಗುತ್ತದೆ. ಇದನ್ನು ಅರ್ಥ ಮಾಡಿಕೊಂಡು ಚುನಾಯಿತ ಪ್ರತಿನಿಧಿಗಳು ಸದನದಲ್ಲಿ ವರ್ತಿಸಬೇಕು’ ಎಂದು ಕರೆ ನೀಡಿದರು.

ರಾಜ್ಯಸಭೆ ಉಪ ಸಭಾಪತಿ ಹರಿವಂಶ್, ‘ಸದನಗಳಲ್ಲಿ ಕಲಾಪಗಳು ನಡೆಯುವುದಿಲ್ಲ ಎಂಬುದನ್ನಷ್ಟೇ ಮಾಧ್ಯಮಗಳು ತೋರಿಸುತ್ತವೆ. ಆದರೆ ಸದನ ಸಮಿತಿಗಳು ಸದಾ ಕೆಲಸ ಮಾಡುತ್ತವೆ. ಸದಸ್ಯರು ಪಕ್ಷಭೇದ ಮರೆತು ಜನರ ಒಳಿತಿಗಾಗಿ ದುಡಿಯುತ್ತಾರೆ. ಆ ಬಗ್ಗೆಯೂ ಜನರಿಗೆ ಸುದ್ದಿ ತಲುಪಿಸಬೇಕು’ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ವಿಧಾನ ಪರಿಷತ್ತಿಗೆ ಒಂದೇ ಕ್ಷೇತ್ರದಿಂದ ಸತತ ಎಂಟು ಬಾರಿ ಆಯ್ಕೆಯಾಗಿರುವ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಬೆಳ್ಳಿಯ ಗದೆ ನೀಡಿ ಸನ್ಮಾನಿಸಿದರು. ರಾಜ್ಯಸಭೆಯ ಉಪ ಸಭಾಪತಿ ಹರಿವಂಶ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಜತೆಯಾದರು

### ನಿರ್ಣಯಗಳೇನು

- ದೇಶದ ಎಲ್ಲ ಸದನಗಳ ಕಲಾಪ, ಚರ್ಚೆ, ಮಸೂದೆಗಳ ವಿವರಗಳನ್ನು ಒಳಗೊಂಡ ಏಕ ದತ್ತಾಂಶಕೋಶ ರೂಪಿಸಬೇಕು. ಯಾವುದಾದರೂ ಒಂದು ವಿಷಯದ ಬಗ್ಗೆ ಎಲ್ಲ ಸದನಗಳಲ್ಲಿ ಇರುವ ಮಾಹಿತಿಯು, ಸದಸ್ಯರಿಗೆ ಒಂದೆಡೆಯೇ ಲಭ್ಯವಾಗಬೇಕು
- ಸದನ ಕಲಾಪಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸಿ, ಸಾರ್ವಜನಿಕರಿಗೆ ದೊರೆಯುವಂತೆ ಮಾಡಬೇಕು. ದೇಶದ ಸಾಂವಿಧಾನಿಕ ಸಂಸ್ಥೆಗಳ ಕಾರ್ಯ ನಿರ್ವಹಣೆಯ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸಬೇಕು
- ಸಾಂವಿಧಾನಿಕ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ದೇಶದ ಯುವಜನರು ಭಾಗಿಯಾಗುವ ಸಾಧ್ಯತೆಗಳನ್ನು ಪರಿಶೀಲಿಸಿ, ಕ್ರಮ ತೆಗೆದುಕೊಳ್ಳಬೇಕು

### ‘ಮಣಿಪುರ: 3 ಬಾರಿ ಚರ್ಚೆ’

ಮಣಿಪುರದಲ್ಲಿ ಗಲಭೆ ನಡೆದು 2 ವರ್ಷಗಳಾಗುತ್ತಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಈಗ ಅಲ್ಲಿಗೆ ಭೇಟಿ ನೀಡಿದ್ದಾರೆ. ಈ ಭೇಟಿಯ ಪ್ರಯೋಜನವೇನು ಎಂಬ ಪ್ರಶ್ನೆಯನ್ನು ಸುದ್ದಿಗಾರರೊಬ್ಬರು ಓಂ ಬಿರ್ಲಾ ಅವರ ಎದುರು ಇರಿಸಿದರು.

ಅದಕ್ಕೆ ಓಂ ಬಿರ್ಲಾ, ‘ಮಣಿಪುರ ಗಲಭೆ ಬಗ್ಗೆ ಚಳಿಗಾಲದ ಅಧಿವೇಶನ, ಬಜೆಟ್ ಅಧಿವೇಶನ. ಮುಂಗಾರು ಅಧಿವೇಶನದಲ್ಲಿ ಚರ್ಚಿಸಿದ್ದೇವೆ. ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿ ಬಗ್ಗೆ ಚರ್ಚಿಸಿದ್ದೇವೆ’ ಎಂದಷ್ಟೇ ಹೇಳಿದರು. ಪ್ರಧಾನಿ ಭೇಟಿ ಬಗ್ಗೆ ಮರುಪ್ರಶ್ನಿಸಿದಾಗ, ಬೇರೆ ಪ್ರಶ್ನೆಯತ್ತ ಗಮನ ನೀಡಿದರು.

ಜನಪರವಾದ ಚರ್ಚೆಗಳು ನಡೆಯಬೇಕು ಎಂದು ಇಲ್ಲಿ ಹೇಳುತ್ತಿದ್ದೀರಿ. ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಸದಸ್ಯರು ಮಾತನಾಡಿದರೆ ಕಲಾಪವನ್ನೇ ಮುಂದೂಡುತ್ತೀರಿ. ನೀವು ಕಲಾಪ ನಡೆಸಿದ್ದಕ್ಕಿಂತ, ಮುಂದೂಡಿದ್ದೇ ಹೆಚ್ಚು. ಈ ಬಗ್ಗೆ ಏನು ಹೇಳುತ್ತೀರಿ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ಓಂ ಬಿರ್ಲಾ ಪ್ರತಿಕ್ರಿಯೆ ನೀಡಲಿಲ್ಲ.

## ಧರ್ಮಸ್ಥಳ ಪ್ರಕರಣ: ಐವರ ವಿಚಾರಣೆ ನಡೆಸಿದ ಎಸ್‌ಐಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಶವಗಳನ್ನು ಹೂಳಲಾಗಿದೆ ಎಂದು ಆರೋಪಿಸಲಾದ ಪ್ರಕರಣ ಸಂಬಂಧ ಎಸ್‌ಐಟಿ ಶನಿವಾರ ಐವರ ವಿಚಾರಣೆ ನಡೆಸಿತು.

ಸಾಕ್ಷಿ ದೂರುದಾರ ಪೊಲೀಸರಿಗೆ ಒಪ್ಪಿಸಿದ್ದ ಬುರುಡೆ ಇದ್ದ ಜಾಗವನ್ನು ಕಾಡಿನಲ್ಲಿ ತೋರಿಸಿದ್ದ ಧರ್ಮಸ್ಥಳ ಗ್ರಾಮದ ಪಾಂಗಳದ ವಿಠಲ ಗೌಡ, ಧರ್ಮಸ್ಥಳ ಗ್ರಾಮದ ಪ್ರದೀಪ್, ಬುರುಡೆ ಹೊರ ತೆಗೆಯುವ ಕುರಿತ ವಿಡಿಯೊ ಪ್ರಸಾರ ಮಾಡಿದ್ದ ‘ಯುನೈಟೆಡ್ ಮೀಡಿಯ’ ಯೂಟ್ಯೂಬ್ ಚಾನೆಲ್‌ನ ಅಭಿಷೇಕ್, ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಜಯಂತ್ ಟಿ. ಹಾಗೂ ಗಿರೀಶ್ ಮಟ್ಟೆಣ್ಣವರ್ ಎಸ್‌ಐಟಿಯ ಬೆಳ್ತಂಗಡಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು. ಎಸ್‌ಐಟಿಯ ಎಸ್ಪಿ ಜಿತೇಂದ್ರ ಕುಮಾರ್ ದಯಾಮ ನೇತೃತ್ವದಲ್ಲಿ ಅಧಿಕಾರಿಗಳು ಅವರ ಹೇಳಿಕೆ ದಾಖಲಿಸಿಕೊಂಡರು.

**17ರಂದು ವಿಶೇಷ ಪ್ರಾರ್ಥನೆ:** ‘ಸೌಜನ್ಯಾ ಪರ ಹೋರಾಟಗಾರರು ಸಂಕ್ರಮಣದ ದಿನದಂದು (ಇದೇ 17ರಂದು) ಮಠ, ಮಂದಿರ, ದೇವಸ್ಥಾನ, ದೈವಸ್ಥಾನಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಿದ್ದಾರೆ. ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ಅಧಿಕಾರಿಗಳಿಗೆ ಸತ್ಯ ಹೊರತರುವ ಶಕ್ತಿ ಸಿಗಲಿ ಎಂದು ಕೋರುವರು’ ಎಂದು ಹಿಂದೂ ಜಾಗರಣ ವೇದಿಕೆ ಅಧ್ಯಕ್ಷ ಮಹೇಶ ಶೆಟ್ಟಿ ತಿಮರೋಡಿ ಹೇಳಿದ್ದಾರೆ.

ಈ ಕುರಿತ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ‘ಎಸ್‌ಐಟಿ ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ತನಿಖೆ ನಡೆಸುತ್ತಿದ್ದಾರೆ. ಆದರೆ ತನಿಖೆ ದುರ್ಬಲಗೊಳಿಸುವ ಯತ್ನವೂ ಇನ್ನೊಂದೆಡೆ ನಡೆಯುತ್ತಿದೆ’ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

> **ಧರ್ಮಸ್ಥಳದ ಪ್ರಕರಣದಲ್ಲಿ ತನಿಖೆ ವಿಳಂಬ ಆಗುತ್ತಿಲ್ಲ. ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ. ಹಾಗೆಂದು ಅನಗತ್ಯವಾಗಿ ವಿಳಂಬ ಮಾಡಲೂಬಾರದು. ನನಗೆ ತಿಳಿದಂತೆ ವಿಳಂಬ ಆಗುತ್ತಿಲ್ಲ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಧರ್ಮಸ್ಥಳ ಪ್ರಕರಣದ ಹಿಂದೆ ಯಾರ್‍ಯಾರು ಇದ್ದಾರೆ ಎಂದು ಸಾಕ್ಷಿ ದೂರುದಾರ 4–5 ಮಂದಿ ಹೆಸರು ಹೇಳಿದ್ದರೂ, ಈವರೆಗೂ ಬಂಧಿಸಿಲ್ಲ. ಇದರ ಹಿಂದೆ ರಾಜ್ಯ ಕಾಂಗ್ರೆಸ್ ಸರ್ಕಾರದ ಷಡ್ಯಂತ್ರವಿದೆ**
> **ಪ್ರಲ್ಹಾದ ಜೋಶಿ,** ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ

### ಎಸ್‌.ಎಂ. ಜಾಮದಾರ ದಾರಿ ತಪ್ಪಿಸುತ್ತಿದ್ದಾರೆ– ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ


# ‘ಧರ್ಮ ಸ್ಥಾಪನೆ ನಾಟಕ ಕಂಪನಿ ನಡೆಸಿದಂತಲ್ಲ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಲಿಂಗಾಯತ ಧರ್ಮ ಸ್ಥಾಪನೆ ನಾಟಕ ಕಂಪನಿ ನಡೆಸಿದಷ್ಟು ಸುಲಭವಲ್ಲ. ‘ಬಸವ ಸಂಸ್ಕೃತಿ ಯಾತ್ರೆ’ ಎಂಬ ನಾಟಕ ಕಂಪನಿಯ ಪಾತ್ರದಾರಿಗಳನ್ನು ಅದರ ಮ್ಯಾನೇಜರ್ ಎಸ್‌.ಎಂ. ಜಾಮದಾರ ದಾರಿ ತಪ್ಪಿಸುತ್ತಿದ್ದಾರೆ’ ಎಂದು ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಆರೋಪಿಸಿದರು.

‘ಮಹಾವೀರ, ಬುದ್ಧನ ರೀತಿ ಬಸವ ಧರ್ಮ ಸ್ಥಾಪನೆ ಮಾಡಬೇಕು. ಅದಕ್ಕೆ ಯಾರ ವಿರೋಧವಿಲ್ಲ. ಆದರೆ, ಬಸವಣ್ಣನವರ ಹೆಸರು ಹೇಳಿಕೊಂಡ ವೀರಶೈವ ಲಿಂಗಾಯತರು, ಅಖಂಡ ಸಮಾಜವನ್ನು ಒಡೆಯಲು ಮುಂದಾಗಿರುವುದು ಸರಿಯಲ್ಲ’ ಎಂದು ಹೇಳಿದರು.

ಅವರು ಇಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದು...



> **2017–18ರಲ್ಲಿ ಎಂಟು ಸಚಿವರು, ವಿವಿಧ ಸ್ವಾಮೀಜಿಗಳಿಂದಲೇ ಪ್ರತ್ಯೇಕ ಲಿಂಗಾಯತ ಧರ್ಮ ಸ್ಥಾಪನೆ ಮಾಡಲು ಸಾಧ್ಯವಾಗಲಿಲ್ಲ. ಈಗ ‘ಚಿಯಾ ಮಿಯಾ’ಗಳಿಂದ ಅದು ಅಸಾಧ್ಯ**
> **ದಿಂಗಾಲೇಶ್ವರ ಸ್ವಾಮೀಜಿ,** ಶಿರಹಟ್ಟಿ

‘ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯರು ಸೇರಿ ಇತರ ಶ್ರೀಗಳು ಇಂಗ್ಲಿಷ್ ಸಂಸ್ಕೃತಿಯ ನಿವೃತ್ತ ಐಎಎಸ್ ಅಧಿಕಾರಿ ಮಾರ್ಗದರ್ಶನದಲ್ಲಿ ಹೋಗಿ ಸಮಾಜ ಸರ್ವನಾಶ ಮಾಡುತ್ತಿದ್ದಾರೆ.

‘ಜಾತ್ಯತೀತ ಧರ್ಮ ಸ್ಥಾಪನೆ ಮಾಡುತ್ತೇವೆ ಎಂದು ಬಸವ ಸಂಸ್ಕೃತಿ ಯಾತ್ರೆಯಲ್ಲಿ ಹೇಳಿದ್ದಾರೆ. ಅದರಲ್ಲಿದ್ದ ಸ್ವಾಮೀಜಿಗಳು ಒಂದೊಂದು ಜಾತಿ ಪ್ರತಿನಿಧಿಸುವ ಮಠಗಳ ಪೀಠಾಧಿಪತಿಗಳು. ಸಾಣೇಹಳ್ಳಿ ಶ್ರೀ ಅವರ ಮಠಕ್ಕೆ ಯಾವ ಜಾತಿ ವಟುವನ್ನು ಉತ್ತರಾಧಿಕಾರಿಯಾಗಿ ಮಾಡಿಕೊಳ್ಳುತ್ತಾರೆ

‘ಪಂಚಪೀಠಗಳು ಬಸವಣ್ಣನನ್ನು ವಿರೋಧಿಸಿದ್ದು ಸತ್ಯ. ಪಂಚಾಚಾರ್ಯರು, ಪಂಚಪೀಠಗಳು ಬದಲಾವಣೆಯಾಗಲು ಈಗ ಕಾಲ ಸನ್ನಿಹಿತವಾಗಿದೆ.

‘ನಾನು ಗೋಸುಂಬೆಯಂತೆ ಬಣ್ಣ ಬದಲಾಯಿಸುತ್ತೇನೆ’ ಎಂದಿರುವ ಪಂಡಿತಾರಾಧ್ಯ ಶಿವಾಚಾರ್ಯರಿಗೆ, ‘ತಾವು ಇಡೀ ಸಮಾಜದ ದಾರಿ ತಪ್ಪಿಸುತ್ತಿದ್ದೇವೆ ಎಂಬುದು ಅರಿವಿಗೆ ಬರಬೇಕು.

‘ಅಖಿಲ ಭಾರತ ವೀರಶೈವ, ಲಿಂಗಾಯತ ಮಹಾಸಭಾ ಒಡೆಯುವ ಹುಚ್ಚು ಸಾಹಸ ಬೇಡ. ಅಲ್ಲಿ ಭೀಷ್ಮನಂತೆ ಶಾಮನೂರು ಶಿವಶಂಕರಪ್ಪ, ಅರ್ಜುನನಂತೆ ಈಶ್ವರ ಖಂಡ್ರೆ, ಭೀಮನಂತಹ ಶಂಕರ ಬಿದರಿ ಸೇರಿ ಅನೇಕ ಸ್ವಾಮೀಜಿಗಳಿದ್ದಾರೆ. ಅವರು ನಿಮ್ಮಂತಹ ಕೌರವರ ಪಾತ್ರಕ್ಕೆ ಅವಕಾಶ ನೀಡುವುದಿಲ್ಲ.

ವೀರಶೈವ ಲಿಂಗಾಯತ ಪ್ರತ್ಯೇಕ ಧರ್ಮವಾದರೂ ನಾವೆಲ್ಲ ಹಿಂದೂ ಧರ್ಮದವರು. ಸೌಲಭ್ಯಗಳಿಗಾಗಿ ಇತ್ತೀಚೆಗೆ ಧರ್ಮಗಳು ಸ್ಥಾಪನೆಯಾಗಿವೆ’ ಎಂದು ಸ್ವಾಮೀಜಿ ಹೇಳಿದರು.

### ವೀರಶೈವ-ಲಿಂಗಾಯತ ಒಂದೇ: ಚರಂತಿಮಠ

ಬಾಗಲಕೋಟೆ: ‘ವೀರಶೈವ-ಲಿಂಗಾಯತ ಎರಡೂ ಒಂದೆ. ಬೇರೆ ಬೇರೆ ಎನ್ನುವವರಿಗೆ ನಾವೇನು ಹೇಳಲಾಗದು’ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು.

ಶನಿವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಸಂದರ್ಭದಲ್ಲಿ ಧರ್ಮ ಹಿಂದೂ ಎಂದು, ಜಾತಿ ವೀರಶೈವ ಲಿಂಗಾಯತ ಎಂದು ಬರೆಸಲಾಗುವುದು’ ಎಂದರು.

‘ಕೆಲ ಸ್ವಾಮೀಜಿಗಳು ಲಿಂಗಾಯತ ಪ್ರತ್ಯೇಕ ಧರ್ಮ, ಸಮೀಕ್ಷೆಯಲ್ಲಿ ಲಿಂಗಾಯತ ಎಂದು ಬರೆಸಲು ಕರೆ ನೀಡಿರುವ ಪ್ರಶ್ನೆಗೆ, ‘ಹೊತ್ತು ಬಂದಾಗೊಂದು ಹೇಳುವವರಿಗೆ ಉತ್ತರ ಕೊಡುವುದು ಅಸಾಧ್ಯ’ ಎಂದರು.

‘ವೀರಶೈವ ಪದಕ್ಕೆ ನೂರಾರು ವರ್ಷದ ಇತಿಹಾಸವಿದೆ. ಗದುಗಿನ ಮಠದಲ್ಲಿ ಹಿಂದೆ ವೀರಶೈವ ಅಧ್ಯಯನ ಸಂಸ್ಥೆ, ವೀರಶೈವ ಪ್ರಗತಿಶೀಲ ಸಂಘ, ವೀರಶೈವ ಪುಣ್ಯವಂತರ ಸಾಹಿತ್ಯ ರತ್ನಮಾಲೆ ಇತ್ತು’ ಎಂದರು.

## ಬಿಸಿಯೂಟಕ್ಕೆ ಪಡಿತರ ಪೂರೈಕೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಕವಿತಾಳ (ರಾಯಚೂರು ಜಿಲ್ಲೆ): ಸಮೀಪದ ಚಿಂಚರಕಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಆಹಾರ ಪದಾರ್ಥ ಪೂರೈಕೆಯಾಗದೇ ಒಂದು ವಾರದಿಂದ ಮಧ್ಯಾಹ್ನದ ಬಿಸಿಯೂಟ ಸ್ಥಗಿತವಾಗಿದೆ.

ಬಿಸಿಯೂಟ ಇಲ್ಲದೆ ಮಕ್ಕಳ ಪರದಾಟ ಗಮನಿಸಿದ ಸ್ಥಳೀಯರು 4 ದಿನದಿಂದ ಅಕ್ಕಿ ಹಾಗೂ ಮತ್ತಿತರ ಅಗತ್ಯ ಸಾಮಗ್ರಿಯನ್ನು ಶಾಲೆಗೆ ನೀಡುತ್ತಿದ್ದು, ಅದರಿಂದಲೇ ಬಿಸಿಯೂಟ ತಯಾರಿಸಲಾಗುತ್ತಿದೆ.

1ರಿಂದ 8ನೇ ತರಗತಿಯವರೆಗೆ 189 ಮಕ್ಕಳು ಶಾಲೆಯಲ್ಲಿದ್ದಾರೆ. ಚಿಂಚಕರಿಯಲ್ಲದೆ, ಸಮೀಪದ ಮದರಕಲ್ ಮತ್ತು ಮಲ್ಲಾಪುರದಿಂದಲೂ ಮಕ್ಕಳೂ ಬರುತ್ತಾರೆ.

ಅಕ್ಷರ ದಾಸೋಹ ಯೋಜನೆಯಡಿ ಅಕ್ಕಿ, ಬೇಳೆ, ಎಣ್ಣೆ, ಖಾರದ ಪುಡಿ, ಉಪ್ಪು, ಬೆಲ್ಲ, ಸಕ್ಕರೆ ಸೇರಿ ಯಾವುದೇ ಪದಾರ್ಥ ಪೂರೈಕೆ ಆಗಿಲ್ಲಎಂದು ಪಾಲಕರಾದ ಮೌನೇಶ, ಅಂಬಣ್ಣ ಆರೋಪಿಸಿದರು.



ರಾಯಚೂರು ಜಿಲ್ಲೆ ಚಿಂಚರಕಿ ಸರ್ಕಾರಿ ಶಾಲೆಯಲ್ಲಿ ಸ್ಥಳೀಯರು ನೀಡಿದ ಆಹಾರ ಪದಾರ್ಥಗಳಿಂದ ತಯಾರಿಸಿದ ಬಿಸಿಯೂಟ ಸೇವಿಸಿದ ಮಕ್ಕಳು

ಸ್ಥಳೀಯ ಮಕ್ಕಳು ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗುತ್ತಾರೆ. ಬೇರೆ ಊರುಗಳಿಂದ ಬರುವ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತಿದೆ. ನಾಲ್ಕು ದಿನಗಳಿಂದ ಸ್ಥಳೀಯರು ಅಕ್ಕಿ, ಬೇಳೆ ಹಾಗೂ ಮತ್ತಿತರ ಸಾಮಗ್ರಿ ನೀಡುತ್ತಿದ್ದು, ಬಿಸಿಯೂಟ ನೀಡಲಾಗುತ್ತಿದೆ. ಆಹಾರ ಪಧಾರ್ಥ ಪೂರೈಕೆಗೆ ಅಧಿಕಾರಿಗಳು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಎಸ್‌ಡಿಎಂಸಿ ಅಧ್ಯಕ್ಷ ಮುದೆಪ್ಪ ಒತ್ತಾಯಿಸಿದರು.

ಆಹಾರ ಪದಾರ್ಥ ಖಾಲಿಯಾದ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಪೂರೈಕೆ ಮಾಡುವ ಭರವಸೆ ನೀಡಿದ್ದಾರೆ ಎಂದು ಪ್ರಭಾರ ಮುಖ್ಯ ಶಿಕ್ಷಕಿ ಜುಬೇದಾ ಬೇಗಂ ತಿಳಿಸಿದರು.

## ನಟ ವಿಜಯ್‌ಗೆ ಅದ್ದೂರಿ ಸ್ವಾಗತ

ತಿರುಚಿರಾಪಳ್ಳಿ (ತಮಿಳುನಾಡು) (ಪಿಟಿಐ): 2026ರ ವಿಧಾನಸಭಾ ಚುನಾವಣಾ ಪ್ರಚಾರ ಆರಂಭಿಸುವುದಕ್ಕೂ ಮುನ್ನವೇ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಸಂಸ್ಥಾಪಕ, ನಟ ವಿಜಯ್ ಅವರಿಗೆ ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಶನಿವಾರ ಇಲ್ಲಿ ಅದ್ದೂರಿ ಸ್ವಾಗತ ನೀಡಿದರು.

ವಿಜಯ್ ಚೆನ್ನೈನಿಂದ ವಿಶೇಷ ವಿಮಾನದಲ್ಲಿ ಇಲ್ಲಿನ ವಿಮಾನ ನಿಲ್ದಾಣಕ್ಕೆ ಬಂದ ತಕ್ಷಣ, ಪಕ್ಷದ ಧ್ವಜಗಳನ್ನು ಹಿಡಿದು ನಿಂತಿದ್ದ ಕಾರ್ಯಕರ್ತರು ಅಲ್ಲಿನ ಬ್ಯಾರಿಕೇಡ್‌ಗಳನ್ನು ತಳ್ಳಿ ತಮ್ಮ ನೆಚ್ಚಿನ ನಾಯಕನನ್ನು ನೋಡಲು ಮುಗಿಬಿದ್ದರು.

ಜನಸಂದಣಿಯಿಂದಾಗಿ ವಿಜಯ್ ಅವರು ವಿಮಾನ ನಿಲ್ದಾಣದ ಆವರಣದಿಂದ ಹೊರ ಬರಲು ಒಂದು ಗಂಟೆ ತೆಗೆದುಕೊಂಡಿತು. ಅಲ್ಲಿಂದ ಆರು ಕಿ.ಮೀ. ದೂರವಿರುವ ಎಂಜಿಆರ್ ಪಾಯಿಂಟ್‌ಗೆ ತಲುಪಲು ನಾಲ್ಕು ಗಂಟೆ ಬೇಕಾಯಿತು. ರ್‍ಯಾಲಿಯಿಂದಾಗಿ ಸಂಚಾರ ದಟ್ಟಣೆ ಉಂಟಾಯಿತು.

**ಮೂರ್ಛೆ ಹೋದ ಕಾರ್ಯಕರ್ತರು:** ವಿಜಯ್ ಭಾಷಣವನ್ನು ಕೇಳಲು ಮಣಪ್ಪರೈ ಸೇರಿದಂತೆ ಸುತ್ತಲಿನ ಸ್ಥಳಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದರು. ಕೆಲವರು ಆಯಾಸ ಗೊಂಡು ಮೂರ್ಛೆ ಹೋಗಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಲಾಯಿತು.



ರ್‍ಯಾಲಿಯಲ್ಲಿ ನಟ ವಿಜಯ್ ಮಾತನಾಡಿದರು –ಪಿಟಿಐ ಚಿತ್ರ

**ಧ್ವನಿವರ್ಧಕ ಸಮಸ್ಯೆ:** ವಿಜಯ್ ಅವರು ಪ್ರಚಾರ ವಾಹನದಲ್ಲಿ ಭಾಷಣ ಮಾಡುವ ವೇಳೆ ಧ್ವನಿವರ್ಧಕ ಸಮಸ್ಯೆಯಾಯಿತು. 20 ನಿಮಿಷಗಳ ಭಾಷಣದಲ್ಲಿ ಒಂದು ಅಥವಾ ಎರಡು ನಿಮಿಷ ಮಾತ್ರ ಧ್ವನಿ ಸ್ಪಷ್ಟವಾಗಿ ಕೇಳಿಬಂದಿದೆ.

# ತಣಿಗೆಬೈಲಿನಲ್ಲಿ ‘ಆನೆ ವಿಹಾರಧಾಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆನೆ- ಮಾನವ ಸಂಘರ್ಷ ತಡೆಗಟ್ಟಲು ‘ಆನೆ ವಿಹಾರಧಾಮ’ (ಎಲಿಫೆಂಟ್ ಸಾಫ್ಟ್ ರಿಲೀಸ್ ಸೆಂಟರ್) ಸೂಕ್ತವೆಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆನೆ ವಿಹಾರಧಾಮ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ವನ್ಯಜೀವಿ- ಮಾನವ ಸಂಘರ್ಷ ಹಾಗೂ ರೈಲ್ವೆ ಬ್ಯಾರಿಕೇಡ್ ಯೋಜನೆಗಳನ್ನು ಅಂತಿಮಗೊಳಿಸುವ ಕುರಿತಂತೆ ಅಧಿಕಾರಿಗಳ ಜೊತೆ ಅವರು ಶನಿವಾರ ವಿಡಿಯೊ ಸಂವಾದ ನಡೆಸಿದರು.

‘ಆನೆ ವಿಹಾರಧಾಮ ಸ್ಥಾಪಿಸಲು ಚಿಕ್ಕಮಗಳೂರಿನ ಮುತ್ತೋಡಿಗಿಂತಲೂ ತಣಿಗೆಬೈಲು ಸೂಕ್ತ ಪ್ರದೇಶ ಎಂದು ತಜ್ಞರು ವರದಿ ನೀಡಿದ್ದಾರೆ. ಈ ಕುರಿತಂತೆ ಸ್ಥಳೀಯರ ಜೊತೆ ಚರ್ಚಿಸಲಾಗುವುದು’ ಎಂದು ಖಂಡ್ರೆ ಹೇಳಿದ್ದಾರೆ.

‘ಆನೆಗಳ ಸಮಸ್ಯೆ ಯಾವ ವಲಯದಲ್ಲಿ ಹೆಚ್ಚಾಗಿದೆ. ಆನೆಗಳ ದಾಳಿ ನಡೆಯುವ ಸಮಯ, ಕಾರಣ ಕುರಿತಂತೆ ಅಧ್ಯಯನ ನಡೆಸಿ, ಸ್ಥಳೀಯರಿಗೆ ಮುನ್ನೆಚ್ಚರಿಕೆ ನೀಡಬೇಕು’ ಎಂದು ಖಂಡ್ರೆ ಸೂಚಿಸಿದರು.

‘ಮುಂದಿನ ವಾರ ದೆಹಲಿಯಲ್ಲಿ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವರನ್ನು ಭೇಟಿ ಮಾಡುತ್ತಿದ್ದು, ಆ ಸಂದರ್ಭದಲ್ಲಿ ಆನೆ ವಿಹಾರಧಾಮ ಕುರಿತಂತೆ ಚರ್ಚಿಸಲಾಗುವುದು. ಜೊತೆಗೆ, ಕಾಂಪಾ (ಅರಣ್ಯೀಕರಣ ಪರಿಹಾರ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ) ಹಣ ಬಿಡುಗಡೆ ಮಾಡುವಂತೆ ಕೋರಲಾಗುವುದು’ ಎಂದಿದ್ದಾರೆ.

**ಕಮಾಂಡ್ ಕೇಂದ್ರ:** ವನ್ಯಜೀವಿ–ಮಾನವ ಸಂಘರ್ಷ ತಡೆಗೆ ಸಮಗ್ರ ಕಮಾಂಡ್ ಸೆಂಟರ್ ಸ್ಥಾಪಿಸಲು ಸೂಚನೆ ನೀಡಿದ್ದರೂ ವಿಳಂಬವಾಗುತ್ತಿದೆ. ಕೂಡಲೇ ಈ ಬಗ್ಗೆ ಕಾರ್ಯಯೋಜನೆ ರೂಪಿಸಬೇಕು. ಆನೆ ಸೇರಿದಂತೆ ವನ್ಯಜೀವಿಗಳ ಸಂಚಾರದ ಬಗ್ಗೆ ನಿಗಾ ಇಡಬೇಕು. ಅಲ್ಲದೆ, ಸ್ಥಳೀಯರಿಗೆ ಕಾಲ ಕಾಲಕ್ಕೆ ಮುನ್ನೆಚ್ಚರಿಕೆ ನೀಡಲು ಮತ್ತು ವನ್ಯಮೃಗಗಳು ನಾಡಿಗೆ ಬಂದಿರುವ ಬಗ್ಗೆ ಸ್ವೀಕರಿಸುವ ದೂರಿಗೆ ತಕ್ಷಣವೇ ಸ್ಪಂದಿಸಲಾಗಿದೆಯೇ ಎಂಬುದನ್ನು ಕೇಂದ್ರ ಸ್ಥಾನದಲ್ಲಿ ಕುಳಿತು ಮೇಲ್ವಿಚಾರಣೆ ನಡೆಸುವ ವ್ಯವಸ್ಥೆ ರೂಪಿಸಬೇಕು’ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

‘ಸನ್ನಾ ಮತ್ತು ಲಂಟಾನ ಕಳೆಗಳು ವಿಪರೀತವಾಗಿ ಕಾಡನ್ನು ಆವರಿಸುತ್ತಿವೆ. ತಮಿಳುನಾಡು ಮತ್ತು ಕೇರಳದಲ್ಲಿ ಇದನ್ನು ಹೇಗೆ ನಿರ್ವಹಿಸಲಾಗಿದೆ ಎಂಬ ಮಾಹಿತಿ ಪಡೆದು, ಈ ಕಳೆ ನಾಶಕ್ಕೆ ಕ್ರಮ ಕೈಗೊಳ್ಳಬೇಕು’ ಎಂದೂ ಸೂಚಿಸಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಮೀನಾಕ್ಷಿ ನೇಗಿ ಮತ್ತು ಪಿ.ಸಿ. ರೇ, ಆನೆ ಸಂಘರ್ಷ ಇರುವ ವಲಯಗಳ ಉನ್ನತಾಧಿಕಾರಿಗಳು ವಿಡಿಯೊ ಸಂವಾದದಲ್ಲಿ ಇದ್ದರು.

### ‘ಹೊರಗುತ್ತಿಗೆ ಸಿಬ್ಬಂದಿ ಮಾಹಿತಿ ಕೊಡಿ’

ಮಲೆ ಮಹದೇಶ್ವರ ಬೆಟ್ಟದಲ್ಲಿ ಐದು ಹುಲಿಗಳ ಸಾವಿನ ನಂತರ ಹೊರಗುತ್ತಿಗೆ ಸಿಬ್ಬಂದಿಗೆ ಸಕಾಲದಲ್ಲಿ ವೇತನ ಪಾವತಿ ಆಗುತ್ತಿಲ್ಲ. ನೌಕರರ ಭವಿಷ್ಯ ನಿಧಿ ಹಣ ಸಂದಾಯ ಮಾಡುತ್ತಿಲ್ಲ ಎಂಬ ದೂರುಗಳು ಬಂದಿದೆ. ರಾಜ್ಯದಲ್ಲಿ ಎಷ್ಟು ಹೊರಗುತ್ತಿಗೆ ಸಿಬ್ಬಂದಿ ಇದ್ದಾರೆ, ಅವರಿಗೆ ವೇತನ, ಭತ್ಯೆ ಎಷ್ಟು ತಿಂಗಳಿನಿಂದ ಪಾವತಿ ಆಗಿಲ್ಲ. ವಿಳಂಬಕ್ಕೆ ಕಾರಣ ಏನು, ಗುತ್ತಿಗೆದಾರ ಸಂಸ್ಥೆ ಇಪಿಎಫ್ ಪಾವತಿಸಿದೆಯೇ ಮತ್ತಿತರ ಅಂಶಗಳ ವರದಿಯನ್ನು ವಿಳಂಬ ಮಾಡದೆ ಸಲ್ಲಿಸಬೇಕು ಎಂದು ಈಶ್ವರ ಖಂಡ್ರೆ ಸೂಚಿಸಿದರು.

### ‘ಇನ್ನಷ್ಟು ಪಿಯು ಕಾಲೇಜು: ಚಿಂತನೆ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ರಾಜ್ಯದಲ್ಲಿ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಪಿಯು ಕಾಲೇಜು ಆರಂಭಿಸುವ ಚಿಂತನೆ ಇದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಶನಿವಾರ ತಿಳಿಸಿದರು.



ಮಧು ಬಂಗಾರಪ್ಪ

ಇಲ್ಲಿನ ಬಿಐಇಟಿ ಕಾಲೇಜು ಆವರಣದಲ್ಲಿ ಕರ್ನಾಟಕ ಅನುದಾನ ರಹಿತ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿಗಳ ಸಂಘ (ಕುಪ್ಮಾ) ದಿಂದ ನಡೆದ ರಾಜ್ಯಮಟ್ಟದ ಪದವಿಪೂರ್ವ ಶಿಕ್ಷಣ ಸಮಾವೇಶದ 2ನೇ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ರಾಜ್ಯದಲ್ಲಿ 800 ಕೆಪಿಎಸ್ ಶಾಲೆ ಆರಂಭಿಸಲು ₹3,500 ಕೋಟಿ ಅನುದಾನ ನೀಡಲಾಗುತ್ತಿದೆ. 25ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ 13 ಸಾವಿರ ಶಾಲೆಗಳು ರಾಜ್ಯದಲ್ಲಿವೆ’ ಎಂದು ತಿಳಿಸಿದರು.

‘ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಕೊಡುಗೆಯನ್ನು ಕಡೆಗಣಿಸುವಂತಿಲ್ಲ. ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಬದ್ಧ’ ಎಂದು ಭರವಸೆ ನೀಡಿದರು.

ಎರಡು ದಿನಗಳ ಸಮಾವೇಶ ದಲ್ಲಿ ರಾಜ್ಯದ ವಿವಿಧ ಪಿಯು ಕಾಲೇಜುಗಳ ಪ್ರಾಂಶುಪಾಲರು, ಆಡಳಿತ ಮಂಡಳಿ ಸದಸ್ಯರು ಸೇರಿ ನೂರಾರು ಜನ ಭಾಗವಹಿಸಿದ್ದರು.

ಸಂಘಟನೆ ಬಲಪಡಿಸುವುದು, ಗುಣಮಟ್ಟದ ಶಿಕ್ಷಣ, ಖಾಸಗಿ ಕಾಲೇಜುಗಳ ಎದುರು ಇರುವ ಸವಾಲುಗಳು, ತಂತ್ರಜ್ಞಾನ ಮತ್ತು ಎಐ ಬಳಕೆ ಬಗ್ಗೆ ಸಮಾವೇಶದಲ್ಲಿ ಚರ್ಚೆ ನಡೆಸಲಾಯಿತು.

# ಶಾಂತಿ, ಸಮೃದ್ಧಿಗೆ ಪ್ರಧಾನಿ ಪಣ

ಒಂದನೇ ಪುಟದಿಂದ...

**ಅಭಿವೃದ್ಧಿಗೆ ಶಾಂತಿ ಅಗತ್ಯ:** ‘ಎಲ್ಲಿಯಾದರೂ ಅಭಿವೃದ್ಧಿ, ಪ್ರಗತಿ ಮತ್ತು ಸಮೃದ್ಧಿ ಬೇರೂರಲು ಶಾಂತಿಯುತ ವಾತಾವರಣ ಇರಬೇಕು. 11 ವರ್ಷಗಳಲ್ಲಿ ಈಶಾನ್ಯ ಭಾಗದಲ್ಲಿ ಅನೇಕ ಸಂಘರ್ಷ, ವಿವಾದಗಳನ್ನು ಪರಿಹರಿಸಲಾಗಿದೆ. ಈ ಮೂಲಕ ಜನರು ಶಾಂತಿ ಪಥವನ್ನು ಆಯ್ದುಕೊಂಡಿದ್ದು, ಅಭಿವೃದ್ಧಿಗೆ ಒತ್ತು ನೀಡಿದ್ದಾರೆ’ ಎಂದರು.

ಮಣಿಪುರದಲ್ಲಿ ವಿವಿಧ ಸಂಘಟನೆಗಳ ಜತೆ ಒಪ್ಪಂದಗಳಿಗಾಗಿ ಮಾತುಕತೆಗಳು ನಡೆದಿವೆ. ಈ ದಿಸೆಯಲ್ಲಿ ವಿವಿಧ ಹಂತಗಳಲ್ಲಿ ಕೇಂದ್ರ ಸರ್ಕಾರ ನಡೆಸಿದ ಪ್ರಯತ್ನಗಳು ಈಗ ಫಲ ನೀಡುತ್ತಿವೆ ಎಂದು ಅವರು ಹೇಳಿದರು.

ಪ್ರತಿಕೂಲ ಹವಾಮಾನದ ಕಾರಣ ಮೋದಿ ಅವರು ಚುರಚಾಂದಪುರದಿಂದ ಇಂಫಾಲ್‌ಗೆ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಲಿಲ್ಲ. ಬದಲಿಗೆ ರಸ್ತೆ ಮಾರ್ಗದಲ್ಲಿ ಸಂಚರಿಸಿದರು. ರಸ್ತೆಯ ಎರಡೂ ಬದಿಗಳಲ್ಲಿ ಜನರು ತ್ರಿವರ್ಣ ಧ್ವಜಗಳನ್ನು ಹಿಡಿದು ಅವರನ್ನು ಸ್ವಾಗತಿಸಿದರು.

> **ಯಾರೇ ಪ್ರಧಾನಿಯಾಗಲಿ ಹಾನಿ ಸಂಭವಿಸಿದಾಗ ಅಲ್ಲಿಗೆ ಭೇಟಿ ನೀಡುವುದು ಸಂಪ್ರದಾಯ. ಆದರೆ ಮೋದಿ 2 ವರ್ಷಗಳ ಬಳಿಕ ಈ ಕಾರ್ಯವನ್ನು ಮಾಡಿದ್ದಾರೆ**
> **ಪ್ರಿಯಾಂಕಾ ಗಾಂಧಿ,** ಕಾಂಗ್ರೆಸ್ ಸಂಸದೆ

### ಮೋದಿ ಭಾಷಣದ ಪ್ರಮುಖಾಂಶಗಳು

- ಹಿಂಸಾಚಾರದಿಂದ ಸ್ಥಳಾಂತರಗೊಂಡ ಸಂತ್ರಸ್ತರ ಕುಟುಂಬಗಳಿಗೆ 7,000 ಹೊಸ ಮನೆಗಳನ್ನು ನಿರ್ಮಿಸಲು ನೆರವು ನೀಡಲಾಗುವುದು
- ಇತ್ತೀಚೆಗೆ ₹3,000 ಕೋಟಿ ವಿಶೇಷ ಪ್ಯಾಕೇಜ್ ಅನುಮೋದಿಸಲಾಗಿದೆ. ಸಂತ್ರಸ್ತರ ನೆರವಿಗೆ ನಿರ್ದಿಷ್ಟವಾಗಿ ₹500 ಕೋಟಿ ನಿಗದಿಪಡಿಸಲಾಗಿದೆ
- ಹಿಂದೆ ದೆಹಲಿಯಲ್ಲಿ ಸರ್ಕಾರ ತೆಗೆದುಕೊಂಡ ನಿರ್ಧಾರಗಳು ಮಣಿಪುರಕ್ಕೆ ತಲುಪಲು ದಶಕಗಳೇ ಬೇಕಾಗುತ್ತಿತ್ತು. ಆದರೆ, ಈಗ ತ್ವರಿತವಾಗಿ ತಲುಪುತ್ತಿವೆ. ಇದರ ಪರಿಣಾಮ ದೇಶದ ಇತರ ಭಾಗಗಳಂತೆ ಮಣಿಪುರ ಸಹ ಪ್ರಗತಿ ಪಥದತ್ತ ಸಾಗಿದೆ
- ಹಿಂದೆ ಇಲ್ಲಿನ ಬೆಟ್ಟ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಉತ್ತಮ ಶಾಲೆ, ಆಸ್ಪತ್ರೆಗಳು ಕನಸಾಗಿದ್ದವು. ಈಗ ಪರಿಸ್ಥಿತಿ ಬದಲಾಗಿದೆ. ಚುರಚಾಂದಪುರದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಲಾಗಿದೆ
- ರಾಜ್ಯದಲ್ಲಿ ಎಂಟು ವರ್ಷಗಳ ಹಿಂದೆ ಕೊಳವೆ ನೀರಿನ ಸಂಪರ್ಕವನ್ನು ಕೇವಲ 30,000 ಮನೆಗಳು ಪಡೆದಿದ್ದವು. ಈಗ 3.5 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಈ ಸೌಲಭ್ಯ ಕಲ್ಪಿಸಲಾಗಿದೆ.
- ಮಣಿಪುರದ ಹೆಸರಿನಲ್ಲಿ ‘ಮಣಿ’ ಇದೆ. ಕೇಂದ್ರ ಸರ್ಕಾರ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಫಲವಾಗಿ ಇದು ಮುಂದಿನ ದಿನಗಳಲ್ಲಿ ಹೊಳೆಯುವ ‘ರತ್ನ’ವಾಗಲಿದೆ

### ‘ಪ್ರಹಸನ, ಕಾಟಾಚಾರ’

ಒಂದನೇ ಪುಟದಿಂದ...

‘1,500 ಮಂದಿ ಗಾಯಗೊಂಡಿದ್ದಾರೆ. 60 ಸಾವಿರಕ್ಕೂ ಅಧಿಕ ಮಂದಿಯನ್ನು ಸ್ಥಳಾಂತರಿಸಲಾಗಿದೆ. 2023ರ ಮೇ ತಿಂಗಳಲ್ಲಿ ಹಿಂಸಾಚಾರ ಆರಂಭಗೊಂಡ ಬಳಿಕ ಮೋದಿ ಅವರು 43 ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಆದರೆ, ತನ್ನದೇ ಜನರಿಗೆ ಅನುಕಂಪ ವ್ಯಕ್ತಪಡಿಸಿ, ಎರಡು ಮಾತನಾಡಲು ಮಣಿಪುರಕ್ಕೆ ಭೇಟಿ ನೀಡಿರಲಿಲ್ಲ’ ಎಂದು ಅವರು ಟೀಕಿಸಿದ್ದಾರೆ.

‘ನಿಮ್ಮ ಮೂರು ತಾಸುಗಳ ಮಣಿಪುರ ಪ್ರಯಾಣವು ಅಲ್ಲಿನ ಜನರಿಗೆ ನೀಡುವ ಸಹಾನುಭೂತಿ ಅಲ್ಲ; ಕಾಟಾಚಾರದ ಪ್ರವಾಸವು ಗಾಯಗೊಂಡ ಜನರಿಗೆ ಮಾಡುವ ಅವಮಾನವಾಗಿದೆ’ ಎಂದು ಖರ್ಗೆ ಹೇಳಿದ್ದಾರೆ.

### ಈಶಾನ್ಯ ರಾಜ್ಯಗಳು ಪ್ರಗತಿಯ ‘ಎಂಜಿನ್’

ಐಜ್ವಾಲ್ (ಪಿಟಿಐ): ಈ ಹಿಂದೆ ‘ವೋಟ್ ಬ್ಯಾಂಕ್’ ರಾಜಕೀಯದಿಂದ ತೀವ್ರವಾಗಿ ನರಳಿದ್ದ ಈಶಾನ್ಯ ರಾಜ್ಯಗಳು ಈಗ ದೇಶದ ಪ್ರಗತಿಯ ಎಂಜಿನ್ ಆಗಿ ಪರಿವರ್ತನೆ ಆಗಿವೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ಶ್ರಮದಿಂದ ಇದು ಸಾಧ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಪ್ರಧಾನಿ ಆದ ಬಳಿಕ ಮಿಜೋರಾಂಗೆ ಎರಡನೇ ಬಾರಿ ಭೇಟಿ ನೀಡಿದ ಮೋದಿ ಅವರು, ಅಂದಾಜು ₹9,000 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದರು.

ಭಾರಿ ಮಳೆಯಿಂದಾಗಿ ಲಮ್ಮುವಲ್ ಮೈದಾನಕ್ಕೆ ತಲುಪಲು ಸಾಧ್ಯವಾಗದ ಕಾರಣ ಅವರು, ಐಜ್ವಾಲ್ ಬಳಿಯ ಲೆಂಗ್‌ಪುಯಿ ವಿಮಾನ ನಿಲ್ದಾಣದಿಂದ ವರ್ಚುವಲ್ ಆಗಿ ಸಾರ್ವಜನಿಕ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಐಜ್ವಾಲ್– ದೆಹಲಿ ನಡುವಿನ ಮೊದಲ ರಾಜಧಾನಿ ಎಕ್ಸ್‌ಪ್ರೆಸ್ ಮತ್ತು ವಿವಿಧ ರೈಲು, ಹೆದ್ದಾರಿ ಮಾರ್ಗಗಳು, ಇಂಧನ ಮತ್ತು ಕ್ರೀಡಾ ಮೂಲಸೌಕರ್ಯ ಯೋಜನೆಗಳಿಗೆ ಮೋದಿ ಹಸಿರು ನಿಶಾನೆ ತೋರಿದರು.

### ಸಂತ್ರಸ್ತರ ಮಾತು ಆಲಿಸಿದ ಮೋದಿ

ಇಂಫಾಲ್/ಚುರಚಾಂದಪುರ (ಪಿಟಿಐ): ಜನಾಂಗೀಯ ಹಿಂಸಾಚಾರದಿಂದ ಸ್ಥಳಾಂತರಗೊಂಡ ಕುಕಿ ಬುಡಕಟ್ಟು ಸಮುದಾಯ ಮತ್ತು ಮೈತೇಯಿ ಸಮುದಾಯದ ಸಂತ್ರಸ್ತರ ಜತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಸಂವಾದ ನಡೆಸಿದರು.

ಇಂಫಾಲ್‌ನ ಐತಿಹಾಸಿಕ ಕಾಂಗ್ಲಾ ಕೋಟೆ ಸಂಕೀರ್ಣ ಮತ್ತು ಚುರಚಾಂದಪುರದ ಶಾಂತಿ ಮೈದಾನದಲ್ಲಿ ಮೋದಿ ಅವರು ಸಂತ್ರಸ್ತರ ಕುಟುಂಬದವರ ನೋವು ಆಲಿಸಿದರು.

ಮಣಿಪುರದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಪುನರ್‌ಸ್ಥಾಪನೆಗೆ ಅಗತ್ಯ ಕಾರ್ಯಗಳನ್ನು ಮಾಡಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂಬ ಭರವಸೆಯನ್ನು ಪ್ರಧಾನಿ ನೀಡಿದರು ಎಂದು ಅಧಿಕಾರಿಗಳು ಹೇಳಿದರು.

ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರದಿಂದ ಒಟ್ಟು 60,000 ಜನರು ತಮ್ಮ ನೆಲೆಗಳನ್ನು ಕಳೆದುಕೊಂಡು, ಸರ್ಕಾರದ ಪರಿಹಾರ ಶಿಬಿರಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ಪೈಕಿ ಸುಮಾರು 40,000 ಜನರು ಕುಕಿ ಜೊ ಸಮುದಾಯಕ್ಕೆ ಸೇರಿದವರಾಗಿದ್ದರೆ, 20,000 ಜನರು ಮೈತೇಯಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

2023ರ ಮೇ ತಿಂಗಳಲ್ಲಿ ಭುಗಿಲೆದ್ದ ಜನಾಂಗೀಯ ಹಿಂಸಾಚಾರದಲ್ಲಿ ರಾಜ್ಯದ 260ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ.

## ‘ಮದ್ಯ ಅಕ್ರಮ ತಡೆಗೆ ಕ್ರಿಯಾಯೋಜನೆ ಸಿದ್ಧ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಗೋವಾದಿಂದ ಅಕ್ರಮವಾಗಿ ಮದ್ಯ ಸಾಗಣೆ ಮಾಡುವುದನ್ನು ಕಟ್ಟುನಿಟ್ಟಾಗಿ ತಡೆಯಲು ಕ್ರಿಯಾ ಯೋಜನೆ ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಸಲಾಗಿದೆ. ಪರಿಣಾಮಕಾರಿ ಜಾರಿಗೆ ಅನುದಾನ ಕೋರಲಾಗಿದೆ’ ಎಂದು ಅಬಕಾರಿ ಇಲಾಖೆ ಆಯುಕ್ತ ಆರ್. ವೆಂಕಟೇಶಕುಮಾರ್ ತಿಳಿಸಿದ್ದಾರೆ.

ಆ.24ರ ‘ಪ್ರಜಾವಾಣಿ’ ಸಂಚಿಕೆಯ ‘ಒಳನೋಟ’ ಅಂಕಣದಲ್ಲಿ ಪ್ರಕಟವಾದ ವರದಿಗೆ ಸ್ಪಂದಿಸಿರುವ ಅವರು, ‘ಅಬಕಾರಿ ಇಲಾಖೆ, ಪೊಲೀಸ್, ಸಾರಿಗೆ, ವಾಣಿಜ್ಯ ತೆರಿಗೆ, ಕಂದಾಯ ಇಲಾಖೆಯ ವಿಭಾಗೀಯ ಆಯುಕ್ತರೂ ಸೇರಿ ಸಮಿತಿ ರಚಿಸಲಾಗಿದೆ. ನೆರೆ– ಹೊರೆಯ ರಾಜ್ಯಗಳ ಅಧಿಕಾರಿಗಳ ಸಮನ್ವಯದಲ್ಲಿ ಮದ್ಯ ಹಾಗೂ ಸ್ಪಿರಿಟ್ ಅಕ್ರಮ ಸಾಗಣೆ ತಡೆಗೆ ಕ್ರಮವಹಿಸಲಾಗುವುದು’ ಎಂದಿದ್ದಾರೆ.

‘ಕ್ರಿಯಾ ಯೋಜನೆ ಅನುಷ್ಠಾನಕ್ಕೆ ಬೇಕಾಗುವ ಹೆಚ್ಚುವರಿ ಸಿಬ್ಬಂದಿ ಹಾಗೂ ಅನುದಾನದ ವಿವರ ಸಲ್ಲಿಸುವಂತೆ ಸೂಚಿಸಲಾಗಿದೆ. ಇದಕ್ಕೆ ಇಲಾಖಾ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದ್ದು, ಶೀಘ್ರವೇ ಪರಿಶೀಲಿಸಿ ವರದಿ ಸಲ್ಲಿಸಲಾಗುವುದು’ ಎಂದು ವಿವರಿಸಿದ್ದಾರೆ.

‘2 ವರ್ಷಗಳಲ್ಲಿ ರಾಜ್ಯದಲ್ಲಿ 799 ಪ್ರಕರಣ ದಾಖಲಿಸಿದ್ದು 1.06 ಲಕ್ಷ ಲೀಟರ್ ಮದ್ಯ ಜಪ್ತಿ ಮಾಡಲಾಗಿದೆ. ಬೆಳಗಾವಿ, ಉತ್ತರ ಕನ್ನಡ, ಹಾಸನ, ಮಂಡ್ಯ, ಚಿಕ್ಕಮಗಳೂರು, ಬೆಂಗಳೂರು ಜಿಲ್ಲೆಗಳಲ್ಲಿ 530 ಪ್ರಕರಣ ದಾಖಲಿಸಿ, 52,798 ಲೀಟರ್ ಮದ್ಯ ಜಪ್ತಿ ಮಾಡಲಾಗಿದೆ’ ಎಂದು ಹೇಳಿದ್ದಾರೆ.

‘ಬೆಳಗಾವಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ 4 ಚೆಕ್‌ಪೋಸ್ಟ್ ನಿರ್ಮಿಸಲಾಗಿದೆ. ಕರ್ನಾಟಕದಿಂದ ಗೋವಾಗೆ ಅಕ್ರಮವಾಗಿ ಸರಬರಾಜು ಆಗುವ 18.19 ಲಕ್ಷ ಲೀಟರ್ ಸ್ಪಿರಿಟ್ ಕೂಡ ವಶಕ್ಕೆ ಪಡೆಯಲಾಗಿದೆ’ ಎಂದಿದ್ದಾರೆ.

## ಸಬಲಾ ಪುರಸ್ಕಾರ ಅರ್ಜಿ ಆಹ್ವಾನ


ಪ್ರಜಾವಾಣಿ ವಾರ್ತೆ

ವಿಜಯಪುರ: ಮಹಿಳೆಯರ ಸಬಲೀಕರಣ, ಹಕ್ಕುಗಳಿಗಾಗಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ಉತ್ತೇಜನ ನೀಡಲು ಇಲ್ಲಿನ ಸಬಲಾ ಸಂಸ್ಥೆ ‘ಸಬಲಾ ಪುರಸ್ಕಾರ’ ನೀಡಲಿದ್ದು,2025ನೇ ಸಾಲಿಗೆ ಅರ್ಜಿ ಆಹ್ವಾನಿಸಿದೆ.


ಮಹಿಳಾ ಹೋರಾಟಗಾರು ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 30 ಕಡೆಯ ದಿನ. ವಿವರಗಳಿಗೆ ‘ಮಲ್ಲಮ್ಮ ಯಾಳವಾರ, ಸಬಲಾ ಕ್ಯಾಂಪಸ್, ಬೆಂಗಳೂರು –ಸೋಲಾಪುರ ರಾಷ್ಟ್ರೀಯ ಹೆದ್ದಾರಿ, ಟೊಯೋಟಾ ಶೋರೂಂ ಹತ್ತಿರ, ವಿಜಯಪುರ’ ವಿಳಾಸ ಸಂಪರ್ಕಿಸಿ.

## ಶಿಲಾಯುಗದ ಸಂಸ್ಕೃತಿಯ ಕುರುಹು

ಹಿರೇಬೆಣಕಲ್‌ನಲ್ಲಿ ಬೃಹದಾಕಾರದ ಕಲ್ಲಿನ ಚಪ್ಪಡಿಯ ನೂರಾರು ಗೋರಿಗಳಷ್ಟೇ ಅಲ್ಲ ವಿಶಿಷ್ಟವಾದ ಕಲ್ಲಾಸರೆಯ ವರ್ಣಚಿತ್ರಗಳೂ ಇವೆ



11



ಚಿತ್ರ: ಈಶ್ವರ ಬಡಿಗೇರ

# ಬುದ್ಧ ಬದುಕಿದ್ದಾನೆ!

**ಕೆಲವರು ಸಾವಿನ ನಂತರವೂ ಬದುಕುತ್ತಾರೆ; ತಮ್ಮ ಜೀವನ, ಸಂದೇಶ ಮತ್ತು ಬೋಧನೆಗಳ ಮೂಲಕ. ನಮ್ಮ ನೆಲದ ಗೌತಮ ಬುದ್ಧ, ಮಹಾತ್ಮಾ ಗಾಂಧಿ ಅವರಲ್ಲಿ ಸೇರಿದ್ದಾರೆ. ಇವರಿಬ್ಬರ ಸಾರವನ್ನು ಹೀರಿಕೊಂಡಂತೆ ಟಿಬೆಟನ್ನರ ಧರ್ಮಗುರು ದಲೈಲಾಮಾ ಬದುಕಿದ್ದಾರೆ.**

• ರವೀಂದ್ರ ಭಟ್ಟ


ಅಹಿಂಸಾ ಪರಮೋಧರ್ಮ ಎಂದು ಸಾರಿದ ಭಗವಾನ್ ಬುದ್ಧ ಇನ್ನೂ ಬದುಕಿದ್ದಾನೆ!. ಜೊತೆಗೆ ಮಹಾತ್ಮಾ ಗಾಂಧಿಯೂ ಇದ್ದಾರೆ. ನಿಮಗೆ ಈ ಬಗ್ಗೆ ಕೊಂಚವಾದರೂ ಅನುಮಾನವಿದ್ದರೆ ಹಿಮಾಚಲಪ್ರದೇಶದ ಧರ್ಮಶಾಲಾಕ್ಕೆ ಹೋಗಿ ಬನ್ನಿ. ಅದು ದೂರವಾಯ್ತು ಎಂದರೆ ಮೈಸೂರು ಜಿಲ್ಲೆಯ ಬೈಲುಕುಪ್ಪೆಗೆ ಹೋದರೂ ಆದೀತು. ಕೊಳ್ಳೇಗಾಲ, ಹುಣಸೂರು, ಮುಂಡಗೋಡು ಅಥವಾ ಭಾರತದಲ್ಲಿ ಇರುವ ಯಾವುದೇ ಟಿಬೆಟ್ ನಿರಾಶ್ರಿತರ ಶಿಬಿರಕ್ಕೆ ಹೋದರೂ ನಿಮಗೆ ಬುದ್ಧ ಸಿಗುತ್ತಾನೆ. ಜೊತೆಗೆ ಗಾಂಧಿ ಕೂಡ. ಯಾಕೆಂದರೆ ಅಲ್ಲಿ ದಲೈಲಾಮಾ ಭಾವಚಿತ್ರದ ಜೊತೆಗೆ ಗಾಂಧೀಜಿ ಭಾವಚಿತ್ರವೂ ಇವೆ. ಧರ್ಮಶಾಲಾಕ್ಕೆ ಯಾಕೆ ಹೋಗಬೇಕು ಎಂದರೆ ನಿರಾಶ್ರಿತ ಟಿಬೆಟನ್ ಸರ್ಕಾರ ಇರುವುದು ಅಲ್ಲಿ. ಅಲ್ಲೇ ಪಕ್ಕದಲ್ಲಿ ಮೆಕ್ಲಾಡ್ ಗಂಜ್ ಎಂಬ ಪುಟ್ಟ ಪಟ್ಟಣವಿದೆ. ಅಲ್ಲಿ ಟಿಬೆಟನ್ ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ. ಅಲ್ಲಿರುವ ಪ್ರತಿಯೊಬ್ಬ ಟಿಬೆಟನ್ ಹೃದಯದಲ್ಲಿಯೂ ಬುದ್ಧ ಬದುಕಿದ್ದಾನೆ.

1959ರಲ್ಲಿ ದೇಶಭ್ರಷ್ಟರಾಗಿ ಇಲ್ಲಿಗೆ ಬಂದ ಟಿಬೆಟನ್ನರು ಇನ್ನೂ ಶಾಂತಿಯುತ ಹೋರಾಟವನ್ನೇ ನೆಚ್ಚಿಕೊಂಡಿದ್ದಾರೆ. ಮೆಕ್ಲಾಡ್ ಗಂಜ್ ಅನತಿ ದೂರದಲ್ಲಿಯೇ ಕಾಶ್ಮೀರವಿದೆ. ಅಲ್ಲಿ ನಿರಂತರ ಭಯೋತ್ಪಾದನಾ ಚಟುವಟಿಕೆಗಳು ನಡೆಯುತ್ತಿವೆ. ಭಾರತದ ಈಶಾನ್ಯ-ಭಾಗದಲ್ಲಿ ಸಾಕಷ್ಟು ಉಗ್ರಗಾಮಿ ಚಟುವಟಿಕೆಗಳೂ ನಡೆಯುತ್ತಿವೆ. ಹಿಮಾಚಲಪ್ರದೇಶದ ಸುತ್ತಮುತ್ತ ಬೇಕಾದಷ್ಟು ಭಯೋತ್ಪಾದಕ ಕೃತ್ಯಗಳಿಗೆ ಕಡಿಮೆ ಏನಿಲ್ಲ. ಸಶಸ್ತ್ರ ನಕ್ಸಲೀಯ ಚಟುವಟಿಕೆಗಳಿಗೂ ನಮ್ಮ ದೇಶದಲ್ಲಿ ಕೊರತೆ ಇಲ್ಲ. ಮಾವೋವಾದಿಗಳೂ ಸಕ್ರಿಯರಾಗಿದ್ದಾರೆ. ದೇಶದ ವಿವಿಧ ಭಾಗಗಳಲ್ಲಿ ಕೋಮುಘರ್ಷಣೆಗಳೂ ನಡೆಯುತ್ತಿವೆ. ಆಪರೇಷನ್ ಸಿಂಧೂರ ಹೆಸರಿನಲ್ಲಿ ಪಾಕಿಸ್ತಾನದ ವಿರುದ್ಧ ನಾವು ಯುದ್ಧ ಸಾರಿಯೂ ಆಗಿದೆ. ರಷ್ಯಾ ಉಕ್ರೇನ್ ಯುದ್ಧ ನಡೆಯುತ್ತಲೇ ಇದೆ. ಗಾಜಾದ ಮೇಲೆ ದಾಳಿ ಇನ್ನೂ ನಿಂತಿಲ್ಲ. ಪಕ್ಕದ ನೇಪಾಳದಲ್ಲಿ ಸಂಘರ್ಷಕ್ಕೆ ಸರ್ಕಾರವೇ ಪತನವಾಗಿದೆ. ಶ್ರೀಲಂಕಾದಲ್ಲಿಯೂ ಹೀಗೆಯೇ ಆಗಿದೆ. ಆದರೆ ಧರ್ಮಶಾಲಾ ಮತ್ತು ಭಾರತದ ಇತರ ಭಾಗಗಳಲ್ಲಿ ನೆಲೆ ನಿಂತಿರುವ ಟಿಬೆಟನ್ನರ ಹೃದಯದಲ್ಲಿ ಇನ್ನೂ ಹಿಂಸೆಯ ಕಿಚ್ಚು ಹತ್ತಿಲ್ಲ. ಕಳೆದ 65 ವರ್ಷಗಳಿಂದಲೂ ಅವರು ಸ್ವಾತಂತ್ರ್ಯಕ್ಕಾಗಿ ಶಾಂತಿಯುತ ಹೋರಾಟವನ್ನೇ ನಡೆಸಿದ್ದಾರೆ.

ಟಿಬೆಟ್ ದೇಶವನ್ನು ಚೀನಾ ಆಕ್ರಮಿಸಿಕೊಂಡ ನಂತರ ಒಂದು ಅಂದಾಜಿನ ಪ್ರಕಾರ ಅಲ್ಲಿ 12 ಲಕ್ಷಕ್ಕೂ ಅಧಿಕ ಟಿಬೆಟನ್ನರು ಹತರಾಗಿದ್ದಾರೆ. 6 ಸಾವಿರಕ್ಕೂ ಹೆಚ್ಚು ಬೌದ್ಧ ದೇವಾಲಯಗಳನ್ನು ನಾಶ ಮಾಡಲಾಗಿದೆ. ತಮ್ಮ ಮೂಲಭೂತ ಹಕ್ಕುಗಳನ್ನು ಚಲಾಯಿಸಿದ್ದಕ್ಕೆ ಸಾವಿರಾರು ಟಿಬೆಟನ್ನರು ಸೆರೆವಾಸದಲ್ಲಿದ್ದಾರೆ. ಟಿಬೆಟ್ ಪ್ರದೇಶ ಈಗ ಚೀನಾದ ಸೇನಾ ನೆಲೆಯಾಗಿ ಬದಲಾಗಿದೆ. ಟಿಬೆಟ್ ಪ್ರದೇಶದಲ್ಲಿ ಟಿಬೆಟನ್ನರಿಗಿಂತ ಚೀನಿಯರೇ ಹೆಚ್ಚಾಗಿದ್ದಾರೆ. ಟಿಬೆಟ್ ಸಂಸ್ಕೃತಿ, ಸಂಪ್ರದಾಯ ಪಾಲನೆಗೆ ನಿರ್ಬಂಧ ಹೇರಲಾಗಿದೆ. ಟಿಬೆಟ್ ಭಾಷೆ ಕಲಿಯುವುದಕ್ಕೂ ಅಲ್ಲಿ ಅವಕಾಶ ನೀಡುತ್ತಿಲ್ಲ. ಶಿಕ್ಷಣವೆಲ್ಲ ಚೀನಿ ಭಾಷೆಯಲ್ಲಿಯೇ ನಡೆಯುತ್ತಿದೆ. ಪ್ರತಿ ದಿನ ಅಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ತಮ್ಮ ಸಂಬಂಧಿಗಳು ಸೆರೆವಾಸಿಗಳಾಗುತ್ತಿರುವುದರ ಬಗ್ಗೆ ಮತ್ತು ಹತ್ಯೆಯಾಗುತ್ತಿರುವುದರ ಬಗ್ಗೆ ಭಾರತದಲ್ಲಿ ನಿರಾಶ್ರಿತರಾಗಿರುವ ಟಿಬೆಟನ್ನರು ಪ್ರತಿದಿನ ಕೇಳುತ್ತಲೇ ಇದ್ದಾರೆ. ಲಾಮಾಗಳು ನಾಪತ್ತೆಯಾಗುತ್ತಿದ್ದಾರೆ. ಮಾಂಕ್‌ಗಳು ಆತ್ಮಾಹುತಿ ಮಾಡಿಕೊಳ್ಳುತ್ತಿದ್ದಾರೆ. ಬೌದ್ಧ ಧರ್ಮದ ಪ್ರಕಾರ ಆತ್ಮಾಹುತಿ ಅತ್ಯಂತ ಪ್ರಬಲ ಅಸ್ತ್ರ. ಅದನ್ನು ಪ್ರಯೋಗಿಸಿ ನೂರಾರು ಸನ್ಯಾಸಿಗಳು ಹುತಾತ್ಮರಾಗಿದ್ದಾರೆ. ಆದರೂ ಇಲ್ಲಿನ ಟಿಬೆಟನ್ನರ ಹೃದಯದಲ್ಲಿ ಇನ್ನೂ ಅಹಿಂಸೆಯ ಜಲವೇ ಒಸರುತ್ತಿದೆ. ಅದರ ಮೂಲಸೆಲೆ ಬುದ್ಧನಲ್ಲದೆ ಬೇರೆ ಯಾರೂ ಅಲ್ಲ.

‘ಅಹಿಂಸಾ ಮಾರ್ಗದಲ್ಲಿ ನೀವು ನಡೆಯುತ್ತಿರುವ ಹಿಂದಿನ ಶಕ್ತಿ ಯಾವುದು?’ ಎಂದು ಟಿಬೆಟ್ ಯೂತ್ ಕಾಂಗ್ರೆಸ್‌ನ ಜಂಟಿ ಕಾರ್ಯದರ್ಶಿ ತ್ಸೆರಿಂಗ್ ಚಾಂಫೆಲ್ ಅವರನ್ನು ಕೇಳಿದರೆ ಅವರು ‘ನಮ್ಮ ಅಹಿಂಸಾ ಹೋರಾಟದ ಹಿಂದಿನ ಶಕ್ತಿ ಬುದ್ಧ, ದಲೈಲಾಮಾ ಮತ್ತು ಗಾಂಧೀಜಿ’ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ‘ಅಹಿಂಸಾ ಮಾರ್ಗದಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿರುವಾಗ ನಮಗೆ ಸಿಗುವುದಿಲ್ಲ ಎಂಬ ಅಪನಂಬಿಕೆ ಯಾಕೆ? ಸ್ವಾತಂತ್ರ್ಯ ಹೋರಾಟ ಆರಂಭವಾಗಿ ಸುಮಾರು 90 ವರ್ಷದ ನಂತರ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ನಮ್ಮ ಹೋರಾಟ ಆರಂಭವಾಗಿ ಈಗ 65 ವರ್ಷಗಳಾಗಿವೆ. ನಮ್ಮ ಹೋರಾಟದಲ್ಲಿ ನಾವು ಗೆದ್ದೇ ಗೆಲ್ಲುತ್ತೇವೆ’ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸುತ್ತಾರೆ.

ಇದೇ ಅಭಿಪ್ರಾಯವನ್ನು ನಿರಾಶ್ರಿತ ಸರ್ಕಾರದ ಅಧ್ಯಕ್ಷ, ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್ ಕೂಡಾ ಅನುಮೋದಿಸುತ್ತಾರೆ. ‘ಚೀನಾದ ಮೇಲೆ ರಾಜತಾಂತ್ರಿಕ ಒತ್ತಡ ಹೇರುವುದು, ಅಂತರರಾಷ್ಟ್ರೀಯ ಮಟ್ಟದಲ್ಲಿ




ಧರ್ಮಶಾಲಾದ ವಿಹಂಗಮ ನೋಟ

ಇನ್ನಷ್ಟು ಅರಿವು ಮೂಡಿಸುವುದು ಹಾಗೂ ಆ ಮೂಲಕ ಸಂಪೂರ್ಣ ಸ್ವರಾಜ್ಯ ಪಡೆಯುವುದು ನಮ್ಮ ಗುರಿ’ ಎಂದು ಅವರು ಹೇಳುತ್ತಾರೆ.

ಭಾರತದಲ್ಲಿ ಸುಮಾರು 1.20 ಲಕ್ಷ ಟಿಬೆಟನ್ನರಿದ್ದಾರೆ. ಅದರಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಕರ್ನಾಟಕದಲ್ಲಿಯೇ ಇದ್ದಾರೆ. ಇಲ್ಲಿರುವ ಎಲ್ಲ ಟಿಬೆಟನ್ನರ ಯೋಗಕ್ಷೇಮವನ್ನೂ ಮೆಕ್ಲಾಡ್ ಗಂಜ್‌ನಲ್ಲಿರುವ ನಿರಾಶ್ರಿತರ ಸರ್ಕಾರವೇ ನೋಡಿಕೊಳ್ಳುತ್ತಿದೆ. 5 ವರ್ಷಕ್ಕೊಮ್ಮೆ ಚುನಾವಣೆ ನಡೆದು ಅಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತದೆ. ಅಧ್ಯಕ್ಷರಾಗಿ ಆಯ್ಕೆಯಾದವರು ತಮ್ಮ ಸಚಿವ ಸಂಪುಟವನ್ನು ನೇಮಕ ಮಾಡುತ್ತಾರೆ. ಈಗ ಅಧ್ಯಕ್ಷರಾದವರು ಕರ್ನಾಟಕದವರು. ನಿರಾಶ್ರಿತ ಟಿಬೆಟನ್ ಸರ್ಕಾರದ ಶಿಕ್ಷಣ ಸಚಿವರು, ಮಾಹಿತಿ ಸಚಿವರು, ಶಾಸಕಾಂಗದ ಉಪ ಸಭಾಪತಿಗಳು ಎಲ್ಲರೂ ಕರ್ನಾಟಕದಿಂದ ಹೋದವರೇ ಆಗಿದ್ದಾರೆ. ಈಗಿನ ಅಧ್ಯಕ್ಷರನ್ನು ಭೇಟಿ ಮಾಡಿದ ತಕ್ಷಣವೇ ಅವರು ‘ನಾನು ಕನ್ನಡ ನಾಡಿನ ಮಣ್ಣಿನ ಮಗ’ ಎಂದೇ ಸ್ವಾಗತಿಸಿದರು.

ನವದೆಹಲಿ, ಕಠ್ಮಂಡು, ಲಂಡನ್, ಜಿನಿವಾ, ನ್ಯೂಯಾರ್ಕ್, ಮಾಸ್ಕೊ, ಬ್ರಸೆಲ್ಸ್, ಕ್ಯಾನ್ಬೆರಾ, ಟೋಕಿಯೋ, ಪ್ರಿಟೋರಿಯಾ, ತೈಪೆ ಮುಂತಾದ ಕಡೆ ರಾಜತಾಂತ್ರಿಕ ಕಚೇರಿಗಳನ್ನು ಹೊಂದಿರುವ ಟಿಬೆಟನ್ನರು ಟಿಬೆಟ್ ಸ್ವಾತಂತ್ರ್ಯಕ್ಕಾಗಿ ಪ್ರಯತ್ನವನ್ನು ಎಲ್ಲ ಕಡೆಯಿಂದಲೂ ನಡೆಸುತ್ತಿದ್ದಾರೆ. ಒಂದು ಕಾಲದಲ್ಲಿ ಸ್ವಾಯತ್ತ ರಾಷ್ಟ್ರವಾಗಿದ್ದ ಟಿಬೆಟ್ ನೆರೆಯ ರಾಷ್ಟ್ರಗಳೊಂದಿಗೆ ಸೌಹಾರ್ದ ಸಂಬಂಧವನ್ನು ಇಟ್ಟುಕೊಂಡಿತ್ತು. ಆದರೆ 1950ರ ದಶಕದಲ್ಲಿ ಟಿಬೆಟ್ ವಿರುದ್ಧ ಆಕ್ರಮಣ ಆರಂಭಿಸಿದ ಚೀನಾ 1959ರಲ್ಲಿ ಇಡೀ ಟಿಬೆಟ್ ಪ್ರದೇಶವನ್ನು ತನ್ನ ಗಡಿಗೆ ಸೇರಿಸಿಕೊಂಡಿತು. ಆಗ ಟಿಬೆಟ್ ಧಾರ್ಮಿಕ ಗುರು ದಲೈಲಾಮಾ ಸೇರಿದಂತೆ ಲಕ್ಷಾಂತರ ಟಿಬೆಟನ್ನರು ನಿರಾಶ್ರಿತರಾಗಿ ಭಾರತವನ್ನು ಪ್ರವೇಶಿಸಿದರು.

ಟಿಬೆಟನ್ನರು ನಿರಾಶ್ರಿತರಾಗಿ ಭಾರತಕ್ಕೆ ಬಂದು 65 ವರ್ಷಗಳೇ ಕಳೆದು ಹೋಗಿದ್ದರೂ ಭಾರತ ಇನ್ನೂ ಅವರಿಗೆ ನಿರಾಶ್ರಿತರ ಸ್ಥಾನಮಾನ ನೀಡಿಲ್ಲ. ಇಲ್ಲಿಯೂ ಅವರ ಬದುಕು ಅತಂತ್ರವೇ ಆಗಿದೆ. ಅವರು ಇಲ್ಲಿ ಆಸ್ತಿ ಹೊಂದುವಂತಿಲ್ಲ. ಬ್ಯಾಂಕ್ ಸಾಲ ದೊರೆಯುವುದು ಕಷ್ಟ. ಭಾರತದ ಯಾವುದೇ ಸರ್ಕಾರಿ ನೌಕರಿ ಸಿಗುವುದಿಲ್ಲ. ಖಾಸಗಿ ಸಂಸ್ಥೆಗಳಲ್ಲಿಯೂ ಕೆಲಸ ಸಿಗುವುದು ಕಷ್ಟ. ಅವರಿಗೆ ಭಾರತದ ಪೌರತ್ವ ಸಿಗುವುದಿಲ್ಲ. ಬಹುತೇಕ ಟಿಬೆಟನ್ ಮಕ್ಕಳು ಟಿಬೆಟನ್ ಶಾಲೆಯಲ್ಲಿಯೇ ಆರಂಭಿಕ ಶಿಕ್ಷಣ ಪೂರೈಸುತ್ತಾರೆ. ಉನ್ನತ ಶಿಕ್ಷಣಕ್ಕೆ ಪರದಾಡಬೇಕಾದ ಸ್ಥಿತಿ ಇದೆ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯುವಾಗ ಅವರನ್ನು ವಿದೇಶಿಗರು ಎಂದೇ ಪರಿಗಣಿಸಲಾಗುತ್ತದೆ. ಇದರಿಂದಾಗಿ ಉನ್ನತ ಮತ್ತು ವೃತ್ತಿಪರ ಶಿಕ್ಷಣವೂ ಅವರಿಗೆ ಗಗನ ಕುಸುಮವಾಗಿದೆ. ಭಾರತದಲ್ಲಿ ಇರುವ ಟಿಬೆಟನ್ನರು ಕರಕುಶಲ ವ್ಯಾಪಾರ ಮತ್ತು ಕೃಷಿಯನ್ನೇ ಜೀವನಾಧಾರ ಮಾಡಿಕೊಂಡಿದ್ದಾರೆ. ಇಲ್ಲಿರುವ ಟಿಬೆಟನ್ನರಿಗೆ ತಮ್ಮದು ಒಂದು ದೇಶ ಇಲ್ಲ.



ಮೆಕ್ಲಾಡ್ ಗಂಜ್‌ನಲ್ಲಿರುವ ಗ್ಯುಟೊ ಬುದ್ಧ ವಿಹಾರ

9ನೇ ಪುಟಕ್ಕೆ...



ಈ ಜಾಗದಲ್ಲಿ ಮೀನು ಸಿಗ್ತವೆ ಕನ್ಲಾ...

# ಎಳೆಯ ಹುಡುಗರ ಮೀನು ಶಿಕಾರಿ!

**ಮಳೆಗಾಲದಲ್ಲಿ ಗ್ರಾಮೀಣ ಭಾಗದ ಮಕ್ಕಳು ಸಿಗುವುದು ಒಂದೋ ಕೆರೆ ದಂಡೆಯಲ್ಲಿ ಅಥವಾ ಹಳ್ಳದ ಹರಿವಿಗೆ ಅಡ್ಡಲಾಗಿ ಕಟ್ಟಿದ ಸಣ್ಣ ಅಣೆಕಟ್ಟುಗಳ ಮೇಲೆ. ಇವರಿಗೆ ಅಲ್ಲೇನು ಕೆಲಸ ಎಂದು ಪ್ರಶ್ನಿಸಿದರೆ ಸಿಗುವ ಉತ್ತರ ‘ಮೀನು ಶಿಕಾರಿ’.**

• ಚಿತ್ರ–ಲೇಖನ: ಸ್ವರೂಪ್ ಕೊಟ್ಟೂರು

**ಇತ್ತೀಚೆಗಷ್ಟೆ** ವಿಜಯನಗರ ಜಿಲ್ಲೆಯ ಕೂಡ್ಲಿಗಿ ಕೆರೆಗೆ ಕೋಡಿ ಬಿದ್ದಿದ್ದರಿಂದ ಅಲ್ಲಿ ನೀರ ಹರಿವು ತುಸು ಹೆಚ್ಚೇ ಇತ್ತು. ಒಂದು ಇಳಿ ಸಂಜೆ ಮಕ್ಕಳ ದಂಡು ಕೊಟ್ಟೂರು ರಸ್ತೆಯಲ್ಲಿರುವ ಹಳ್ಳದ ದಂಡೆಯಲ್ಲಿದ್ದ ಬಳ್ಳಾರಿ ಜಾಲಿಯ ಪೊದೆಯೊಳಗೆ ಕೈ ಹಾಕಿ ದಾರ ಸುತ್ತಿದ ಕೋಲುಗಳನ್ನು ಮೆಲ್ಲಗೆ ಹೊರ ತೆಗೆದರು. ಮತ್ತೊಂದಿಷ್ಟು ಹುಡುಗರು ಅಲ್ಲೇ ಇದ್ದ ತಿಪ್ಪೆಯನ್ನು ಕೋಳಿ ಕೆದರಿದಂತೆ ಗೇಣು ಉದ್ದದ ಕೋಲಿನಿಂದ ಕೆದರಲು ಶುರು ಮಾಡಿದರು. ಇವರೇನು ಮಾಡುತ್ತಿದ್ದಾರೆ ಎನ್ನುವುದನ್ನು ತಿಳಿಯದೇ ಗೊಂದಲಕ್ಕೆ ಬಿದ್ದೆ.

ಬಾಲಕನೊಬ್ಬ ಹರಿಯುವ ನೀರಿನೆಡೆಗೆ ದೃಷ್ಟಿ ಮೊನಚು ಮಾಡಿ ‘ಭರ್ಜರಿ ಮೀನುಗಳು ಇದಾವೆ ಬರ್ರೋ ಬೇಗ...’ ಎಂಬ ಸುಳಿವನ್ನು ಜೊತೆಗಾರರಿಗೆ ನೀಡಿದ. ತಕ್ಷಣ ಗಾಳವನ್ನು ಥೇಟ್ ಬಿಲ್ಲು ಎತ್ತಿದಂತೆ ಎತ್ತಿಕೊಂಡ ಒಂದಿಷ್ಟು ಹುಡುಗರು ತಿಪ್ಪೆ ಬಳಿ ಹೋದರು. ಅಷ್ಟರಲ್ಲಾಗಲೇ ಅಲ್ಲಿಯ ತಂಡ ಹೇರಳವಾಗಿ ಸಿಕ್ಕ ಎರೆಹುಳುಗಳನ್ನು ಪುಟ್ಟ ಕೈ ಚೀಲದಲ್ಲಿ ತುಂಬಿದ್ದರು. ಅವರಿಂದ ಒಂದಿಷ್ಟು ಎರೆಹುಳುಗಳನ್ನು ತೆಗೆದುಕೊಂಡು ಗಾಳಕ್ಕೆ ನಯವಾಗಿ ಪೋಣಿಸಿದರು. ಹೀಗೆ ಮೀನಿನ ಶಿಕಾರಿಗೆ ಸರ್ವ ಸನ್ನದ್ಧರಾಗಿ ನೀರಿಗಿಳಿದರು ಆ ಹುಡುಗರು.

## ಮೀನಿನ ಗುಂಗಲ್ಲೇ ಮಕ್ಕಳು..

ಮಳೆಗಾಲದ ದಿನಗಳಲ್ಲಿ ಗ್ರಾಮೀಣ ಭಾಗದಲ್ಲಿ ಮಕ್ಕಳು ಶಾಲೆ ಬಿಟ್ಟರೆ ಸಿಗುವುದು ಹಳ್ಳ–ಕೊಳ್ಳ ಸೇರಿದಂತೆ ನೀರಿನ ಮೂಲಗಳ ಬಳಿಯಲ್ಲೇ. ಅದೆಷ್ಟೋ ಸಾರಿ ಶಾಲೆಗೆ ಚಕ್ಕರ್ ಹಾಕಿ ಮೀನು ಶಿಕಾರಿಗಾಗಿಯೇ ನೀರ ಹರಿವಿನ ಆಸುಪಾಸಿನಲ್ಲಿ ಸುಳಿದಾಡುತ್ತಿರುತ್ತಾರೆ. ಶಾಲೆಗೆ ರಜೆ ಇದ್ದರಂತೂ ಮುಗಿದೇ ಹೋಯಿತು. ಬೆಳ್ಳಂಬೆಳಗ್ಗೆ ಮೀನು ಹಿಡಿಯಲು ಬಂದವರು ಕತ್ತಲಾಗುವವರೆಗೆ ಧ್ಯಾನಸ್ಥ ಸ್ಥಿತಿಯಲ್ಲೇ ಇರುತ್ತಾರೆ! ತಮ್ಮ ತಮ್ಮಲ್ಲೇ ಪೈಪೋಟಿಗೆ ಬಿದ್ದು ಮೀನುಗಳನ್ನು ಹಿಡಿಯುವ ಉಮೇದಿನಲ್ಲಿ ಮನೆ, ಮಠ, ಓದು, ನಿದ್ದೆ, ಹಸಿವು, ನೀರಡಿಕೆ.. ಇದ್ಯಾವುದನ್ನು ಲೆಕ್ಕಿಸುವುದೇ ಇಲ್ಲ. ಹೀಗೆ ಮಳೆಗಾಲದ ಬಹುತೇಕ ದಿನಗಳು ಮೀನಿನ ಗುಂಗಿನಲ್ಲೇ ಇರುವ ಮಕ್ಕಳಿಗೆ ಕನಸು, ಮನಸಲ್ಲೂ ಮೀನುಗಳೇ ಬರುತ್ತಿರುತ್ತವೆ.

ಜಿಲೇಬಿ, ಮೊಟ್ಟು, ಉಲುಚಿ ಅಥವಾ ಮಳಲಿ.. ಇದೇ ಜಾತಿಯ ಮೀನುಗಳು ಈಗ ಹೇರಳವಾಗಿ ಸಿಗುತ್ತವೆ. ಮಕ್ಕಳು ತಮ್ಮ ತಮ್ಮಲ್ಲೇ ಈ ಮೀನುಗಳನ್ನು ಪಾಲು ಮಾಡಿಕೊಂಡು, ಕೈಚೀಲದಲ್ಲಿ ತುಂಬಿಕೊಂಡು ಮನೆ ಕಡೆ ಒಂದೇ ಉಸಿರಿನಲ್ಲಿ ಓಟ ಕೀಳುತ್ತಾರೆ. ‘ಅಮ್ಮಾ, ಮೀನು ಸಿಕ್ಕವು..!’ ಎಂದು ದೂರದಿಂದಲೇ ಹಿಗ್ಗಿನಿಂದಲೇ ಕೂಗುತ್ತಾರೆ. ಆ ತಾಯಿಯೂ ಅಷ್ಟೇ ಕುತೂಹಲ, ಅತ್ಯುತ್ಸಾಹದಿಂದ ಕೈಚೀಲ ಪಡೆದು ‘ಒಳ್ಳೆಯ ಮೀನುಗಳು ಸಿಕ್ಕಾವೆ...’ ಎಂದು ಮೆಚ್ಚುಗೆ ಸೂಚಿಸಿದಾಗ ಮಕ್ಕಳ ಕಾಲು ನೆಲದ ಮೇಲೆಯೇ ಇರುವುದಿಲ್ಲ. ಮೀನು ತಂದು ತಮ್ಮ ಆಸೆಯಂತೆ ಅಡುಗೆ ಸಾಗಿದರಂತೂ ಹುಚ್ಚೆದ್ದು ಕುಣಿಯುತ್ತವೆ. ಪುನಃ ಹುಡುಗರು ಮೀನು ಹಿಡಿಯಲು ಹೊರಟು ನಿಂತರೆ ‘ಹುಷಾರು, ಜಾಸ್ತಿ ತೊಂದರೆ ತಗೋ ಬೇಡಿ. ಬೇಗ ಮರಳಿ ಮನೆಗೆ ಬನ್ನಿ...’ ಎಂದು ಆ ತಾಯಿ ಹರಸಿದರೆ ಆ ಹುಡುಗರಲ್ಲಿಯ ಹುರುಪು, ಆತ್ಮವಿಶ್ವಾಸವನ್ನು ಅಂದಾಜಿಸಲೂ ಆಗದು.



ಇವತ್ತಿಂದ ಭರ್ಜರಿ ಬೇಟೆ...

## ನೈಪುಣ್ಯ ಬೇಕು...

ಗಾಳ ಹಾಕಿ ಮೀನು ಹಿಡಿಯುವ ಹುಡುಗರ ನೈಪುಣ್ಯ ಅಥವಾ ಕಲೆಗೆ ಜೋಳಿಗೆ ತುಂಬಾ ಮೀನು. ಯಾಕೆಂದರೆ ಒಮ್ಮೊಮ್ಮೆ ನೀರಿನಲ್ಲಿ ಗಾಳ ಹಾಕಿ ಗಂಟೆಗಟ್ಟಲೆ ಕಾದರೂ ಒಂದೂ ಮೀನು ಬೀಳುವುದಿಲ್ಲ. ಬಿದ್ದಾಗ ಸಕಾಲದಲ್ಲಿ ಗಾಳವನ್ನು ಮೇಲೆತ್ತದೇ ಹೋದರೆ ಮೀನು ಎರೆಹುಳವನ್ನು ತಿಂದು ನಾಜೂಕಾಗಿ ಜಾರಿ ಹೋಗುತ್ತದೆ. ಈ ಕಾರಣಕ್ಕೆ ಅನೇಕರು ಗಾಳ ಹಾಕುವ ಸಾಹಸ ಮಾಡದೇ ನುರಿತವರ ಕೈಗೆ ಗಾಳ ಕೊಟ್ಟು ಸಹಾಯಕರಾಗುತ್ತಾರೆ. ಅದೂ ಇಲ್ಲದಿದ್ದರೆ ಗಾಳದ ಬದಲಾಗಿ ಮಾಸಿದ ಸೀರೆ, ಸೊಳ್ಳೆ ಪರದೆ, ಕುಳೇವುಗಳನ್ನು ಬಳಸಿ ಮೀನು ಹಿಡಿಯುತ್ತಾರೆ.



ಅಜ್ಜಿಯ ಹಳೆ ಸೀರೆ ಸಿಕ್ಕಿದ್ರೆ ಹಿಂಗೂ ಮೀನು ಹಿಡಿಬೋದು...

ಪುಕ್ಕಟೆಯಾಗಿ ಮೀನು ಸಿಗುವುದು ಮಳೆಗಾಲದಲ್ಲೇ. ಅದರಲ್ಲೂ ಹಳ್ಳ–ಕೊಳ್ಳಗಳು ತುಂಬಿ ಹರಿದು, ಕೆರೆ–ಕಟ್ಟೆಗಳು ಕೋಡಿ ಬಿದ್ದರೆ, ಒಡೆದರೆ ಬಡ ವರ್ಗದವರಲ್ಲಿ ಮೀನೂಟದ ಆಸೆಯೂ ಚಿಗುರುತ್ತದೆ, ತೀರುತ್ತದೆ. ನೀರ ಹರಿವಿನ ಸೌಂದರ್ಯವನ್ನು ಕಣ್ಣು ತುಂಬಿಕೊಳ್ಳಲು, ನೀರಾಟದಲ್ಲಿ ಕಳೆದು ಹೋಗಲು ಹಲವರು ಧಾವಿಸಿದರೆ ಕೆಲವು ವರ್ಗದ ಮಕ್ಕಳು ಮಾತ್ರ ಮೀನು ಸಿಗುವ ಆಸೆಯೊಂದಿಗೆ ಇಂತಹ ಸ್ಥಳಗಳಿಗೆ ದೌಡಾಯಿಸುತ್ತಾರೆ. ಕೋಡಿ ಬಾಯಲ್ಲಿ, ನೀರು ಹರಿಯುವ ಜಾಡಿನಲ್ಲಿ ಹಾಗೆ ಹರಿಯುವ ನೀರಿಗೆ ಮೀನು ಎದುರು ಈಜುವ ಜಾಗಗಳನ್ನು ಶಿಕಾರಿಗಾಗಿ ಹುಡುಕಿಕೊಳ್ಳುತ್ತಾರೆ.

## ಮೂರೊತ್ತೂ ಮೀನೂಟ

ದೊಡ್ಡವರಿಗೆ ನಿತ್ಯವೂ ಮೀನಿನ ಬೇಟೆ ಹೋಗಲು ಸಮಯ ಇರುವುದಿಲ್ಲ. ಅವರಿಗೆಲ್ಲ ದುಡಿಮೆಯೇ ಮುಖ್ಯ. ಹೀಗಾಗಿ ಈ ವರ್ಗದ ಮಕ್ಕಳು ಮೀನಿನ ಶಿಕಾರಿಯಲ್ಲಿ ಮುಂಚೂಣಿಯಲ್ಲಿರುತ್ತಾರೆ. ₹5-₹10 ಕೊಟ್ಟು ಗಾಳ ಕೊಂಡುಕೊಳ್ಳುತ್ತಾರೆ. ಒಮ್ಮೆ ಖರೀದಿಸಿದರೆ ಸಾಕು. ಹಳ್ಳದಲ್ಲಿ ನೀರ ಹರಿವು ನಿಲ್ಲುವವರೆಗೆ, ಗುಂಡಿಗಳಲ್ಲಿ ನೀರು ಇಂಗುವವರೆಗೆ ಮೀನುಗಳಿಗೆ ಬರವಿಲ್ಲ. ಹೀಗಾಗಿ ಮಕ್ಕಳ ಈ ಹೆಚ್ಚುವರಿ, ಸ್ವಯಂ ಪ್ರೇರಿತ ಮೀನು ಶಿಕಾರಿಯಿಂದ ಇವರ ಮನೆಗಳಲ್ಲಿ ನಿತ್ಯವೂ ಮೂರೊತ್ತೂ ಮೀನೂಟವೇ. ಸಣ್ಣ ಅಥವಾ ಮರಿ ಮೀನುಗಳು ಭರ್ಜರಿ ಆಗಿ ಸಿಕ್ಕರಂತೂ ಅವುಗಳಲ್ಲಿ ಒಂದಿಷ್ಟನ್ನು ತಮ್ಮ ಸುಪರ್ದಿಯಲ್ಲಿರುವ ನೀರಿನ ಮೂಲಗಳಲ್ಲಿ ಬಿಟ್ಟುಕೊಂಡು ಸಾಕುತ್ತಾರೆ. ಮಿಕ್ಕಿದ್ದನ್ನು ಒಣಗಿಸಿ ಸಂರಕ್ಷಿಸಿಕೊಳ್ಳುತ್ತಾರೆ. ಹೀಗೆ ಮಳೆಗಾಲದ ಈ ಮೀನು ಶಿಕಾರಿಯಿಂದ ವರ್ಷವಿಡೀ ಮೀನೂಟ ಸವಿಯುತ್ತಾರೆ.

ಮೊದಲೇ ಹೇಳಿದಂತೆ ಎಲ್ಲರಿಗೂ ಮೀನು ಹಿಡಿಯಲು ಬರುವುದಿಲ್ಲ. ಇದಕ್ಕೆ ಜಾಣ್ಮೆ ಬೇಕು. ವ್ಯವಧಾನ ಇರಬೇಕು. ಅಂದಹಾಗೆ ಮಕ್ಕಳು ಮೀನನ್ನು ಕೇವಲ ಊಟಕ್ಕಾಗಿ ಹಿಡಿಯುವುದಿಲ್ಲ. ಮೋಜಿಗಾಗಿ ಹಿಡಿಯುವುದೂ ಇದೆ. ಇದರಿಂದ ಅಪಾರ ಮೀನುಗಳು ಸಿಗುತ್ತವೆ. ಇದನ್ನೇ ಕಾದುಕೊಂಡಿದ್ದ ಕೆಲವರು ಇಂತಹ ಮಕ್ಕಳಿಗೆ ತಮ್ಮ ಮನಸ್ಸಿಗೆ ತೋಚಿದಷ್ಟು ಹಣ ಕೊಟ್ಟು ಮೀನುಗಳನ್ನು ಒಯ್ಯುತ್ತಾರೆ. ಹೀಗೆ ಮಕ್ಕಳಿಗೆ ಭಕ್ಷೀಸು ರೂಪದಲ್ಲಿ ಸಿಗುವ ಹಣ ಅವರ ಮನೆ, ಓದಿನ ಖರ್ಚಿಗೂ ಆಸರೆ ಆಗುತ್ತದೆ.

ಜಿಲೇಬಿ, ಮೊಟ್ಟು, ಮಳಲಿ ... ಇವುಗಳೆಲ್ಲ ಮೀನೂಟ ಪ್ರೀಯರಿಗೆ ಬಲು ಅಚ್ಚುಮೆಚ್ಚು. ಈ ಮೀನುಗಳಿಂದ ಮಾಡಿದ ಬಗೆ ಬಗೆಯ ಖಾದ್ಯಗಳಂತೂ ಸ್ವಾದಿಷ್ಟಕರ. ಇಂತಹ ಜಾತಿಗಳ ಮೀನೂಟವೆಂದರೆ ಮೀನು ಪ್ರಿಯರಿಗೆ ಎರಡು ಹೊಟ್ಟೆ ಆಗಿ ಬಿಡುತ್ತದೆ. ಹೀಗಾಗಿ ಮನೆಯವರಷ್ಟೇ ಅಲ್ಲ ತಮ್ಮ ಬಂಧು-ಬಳಗವನ್ನೆಲ್ಲ ಆಹ್ವಾನಿಸಿ ಮೀನೂಟ ಮಾಡಿ ಬಡಿಸುತ್ತಾರೆ.

ಮಳೆಗಾಲ ಮುಗಿಯುವವರೆಗೂ ಇಂತಹ ದೃಶ್ಯಗಳು ಈ ಭಾಗದಲ್ಲಿ ಸಾಮಾನ್ಯ. ಆದರೆ, ಯಾರೂ ಕೂಡ ಮಕ್ಕಳಿಗೆ ಬೈಯುವುದಿಲ್ಲ. ಏಕೆಂದರೆ, ಮೀನು ಶಿಕಾರಿ ಮಕ್ಕಳಲ್ಲಿ ಏಕಾಗ್ರತೆ, ಜಾಗ್ರತೆ, ತಾಳ್ಮೆ, ಪರಸ್ಪರರಲ್ಲಿ ಹೊಂದಾಣಿಕೆ, ಹಂಚಿಕೊಳ್ಳುವ ಗುಣ, ಸಹಕಾರ, ಸಹಬಾಳ್ವೆ ಹಾಗೆ ಪರಿಶ್ರಮ, ಸಮಯದ ನಿರ್ವಹಣೆ.. ಹೀಗೆ ಪರೋಕ್ಷವಾಗಿ ಒಂದಿಷ್ಟು ಪಾಠಗಳನ್ನು ಕಲಿಸುತ್ತಿರುತ್ತದೆ.



ಪಿಕಲ್‌ಬಾಲ್ ಆಟದ ಗಮ್ಮತ್ತು...

ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್.

# ಪಿಕಲ್‌ಬಾಲ್ ಕಮಾಲ್...

• ಗಿರೀಶ ದೊಡ್ಡಮನಿ

**ಚೀನಾದಲ್ಲಿ** ಹಂದಿ ಮಾಂಸದ ಖಾದ್ಯಗಳ ಸೇವನೆ ಹೆಚ್ಚಿದ ಹಿನ್ನೆಲೆಯಲ್ಲಿ ಬಾತುಕೋಳಿ ಸಾಕಣೆ ಕಡಿಮೆಯಾಗಿದೆ. ಅದಕ್ಕಾಗಿ ಬ್ಯಾಡ್ಮಿಂಟನ್ ಶಟಲ್ ಕಾಕ್‌ಗಳ ತಯಾರಿಕೆಗೆ ಕೋಳಿ ಪುಕ್ಕಗಳ ಕೊರತೆ ಕಾಡುತ್ತಿದೆ ಎಂಬ ಸಂಗತಿ ಇತ್ತೀಚೆಗೆ ಭಾರೀ ಸುದ್ದಿ ಮಾಡಿತ್ತು. ಪ್ರಾಣಿ, ಪಕ್ಷಿಗಳು ಮತ್ತು ಕ್ರೀಡೆಯ ನಂಟಿಗೆ ಇದೊಂದು ಉದಾಹರಣೆಯಷ್ಟೇ. ಆದರೆ ಒಂದು ಆಟಕ್ಕೆ ಸಾಕುನಾಯಿಯೊಂದರ ಹೆಸರಿಟ್ಟಿರುವ ಸ್ವಾರಸ್ಯವೂ ಇದೆ!

ಹೌದು; ಕಳೆದೊಂದು ದಶಕದಲ್ಲಿ ಭಾರತದಲ್ಲಿ ಜನಪ್ರಿಯವಾಗುತ್ತಿರುವ ‘ಪಿಕಲ್‌ಬಾಲ್’ ಎಂಬುದು ಸಾಕುನಾಯಿಯೊಂದರ ಹೆಸರು. ಕರ್ನಾಟಕದಲ್ಲಿಯೂ ಕಳೆದ ಕೆಲವು ವರ್ಷಗಳಿಂದ ಈ ಆಟವು ಸರ್ಕಾರದ ಯಾವುದೇ ಮಾನ್ಯತೆ, ಅನುದಾನಗಳಿಲ್ಲದಿದ್ದರೂ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಿರುವುದು ವಿಶೇಷ. ಅದಕ್ಕೆ ಕಾರಣ ಇದರಲ್ಲಿರುವ ‘ಫನ್, ಫಿಟ್‌ನೆಸ್ ಮತ್ತು ಕಾಂಪಿಟೇಷನ್’ ಅಂಶಗಳು. 12 ವರ್ಷದವರಿಂದ 80 ವರ್ಷದವರೆಗಿನವರೂ ಆಡುವಂತಹ ಆಟ ಇದು. ಒಂದು ರೀತಿಯಲ್ಲಿ ‘ಅಪ್ಪಟ ಕೌಟುಂಬಿಕ ಮನರಂಜನೆ’ಯ ಆಟ ಎಂದು ಕರ್ನಾಟಕ ಪಿಕಲ್‌ಬಾಲ್ ಸಂಸ್ಥೆಯ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ರಜತ್ ಕಂಕರ್ ಹೇಳುತ್ತಾರೆ.



ಬೆಂಗಳೂರಿನ ನಾಗರಬಾವಿಯ ಪಾಪರೆಡ್ಡಿ ಪಾಳ್ಯದಲ್ಲಿರುವ ಸಂಸ್ಥೆಯ ಪಿಕಲ್‌ಬಾಲ್ ಕೋರ್ಟ್‌ನಲ್ಲಿ ಅಭ್ಯಾಸ ಮಾಡುವ ಆಸಕ್ತರನ್ನು ತೋರಿಸುತ್ತ ಈ ಕ್ರೀಡೆಯ ಹುಟ್ಟು, ಬೆಳವಣಿಗೆ ಮತ್ತು ಕರ್ನಾಟಕಕ್ಕೆ ಬಂದ ಬಗೆಯನ್ನೂ ವಿವರಿಸಿದರು. ಅವರ ಮಾತುಗಳ ಹಿನ್ನೆಲೆಯಲ್ಲಿ ಪ್ಯಾಡಲ್‌ಗೆ ಚೆಂಡು ಬಡಿಯುವ ವಿಶಿಷ್ಟ ಸದ್ದು ಪ್ರತಿಧ್ವನಿಸುತ್ತಿತ್ತು.

ಈ ಆಟ ಜನಿಸಿದ್ದೇ ಕುಟುಂಬವೊಂದರ ಮನರಂಜನೆಗಾಗಿ. 1967ರಲ್ಲಿ ವಾಷಿಂಗ್ಟನ್‌ನ ಬೇನ್‌ಬ್ರಿಜ್ ಐಲ್ಯಾಂಡ್‌ನ ನಿವಾಸಿ ಜೊಯೆಲ್ ಪ್ರಿಚರ್ಡ್ ಮತ್ತು ಅವರ ಇಬ್ಬರು ಸ್ನೇಹಿತರಾದ ಬಾರ್ನಿ ಮೆಕ್ಲಂ ಮತ್ತು ಬಿಲ್ ಬೆಲ್ ಅವರು ಪಿಕಲ್‌ಬಾಲ್ ಆಟವನ್ನು ರೂಪುಗೊಳಿಸಿದವರು.

ಪ್ರಿಚರ್ಡ್ ಅವರ ಮಕ್ಕಳು ಬೇಸಿಗೆ ರಜೆಯಲ್ಲಿ ಕಾಲ ಕಳೆಯಲು ಯಾವುದಾದರೂ ಆಟ ಆಡಬೇಕು ಎಂದು ಹಟ ಹಿಡಿಯುತ್ತಾರೆ. ಅದಕ್ಕಾಗಿ ಪ್ರಿಚರ್ಡ್ ಅವರು ಬ್ಯಾಡ್ಮಿಂಟನ್ ಆಡಿಸಲು ಪ್ರಯತ್ನಿಸಿದರು. ಆದರೆ ಮನೆಯಂಗಳದಲ್ಲಿ (ಹೊರಾಂಗಣ) ಆಡಲು ವಿಪರೀತ ಗಾಳಿ ಇದ್ದ ಕಾರಣ ಆಡಲು ಸಾಧ್ಯವಾಗಲಿಲ್ಲ. ಟೆನಿಸ್ ಆಡಲು ಕೂಡ ಜಾಗ ಸಾಲಲಿಲ್ಲ. ಅದಕ್ಕಾಗಿ ಅವರು ಒಂದು ಉಪಾಯ ಮಾಡಿದರು. ಇದ್ದ ಜಾಗದಲ್ಲಿಯೇ ಲಾನ್ ಟೆನಿಸ್ ರೀತಿಯಲ್ಲಿ ಅಂಕಣ ನಿರ್ಮಿಸಿದರು. ನೆಟ್ ಕೂಡ ಟೆನಿಸ್ ರೀತಿಯಲ್ಲಿಯೇ ಕಟ್ಟಿದರು. ಪ್ಲಾಸ್ಟಿಕ್ ಬಾಲ್ ತಂದರು. ಟೇಬಲ್ ಟೆನಿಸ್ ರ್‍ಯಾಕೆಟ್‌ಗಳಲ್ಲಿ ಆಡತೊಡಗಿದರು. ರ್‍ಯಾಕೆಟ್ ದೊಡ್ಡದಿದ್ದರೆ ಚೆಂದ ಎಂದು ಅವರಿಗೆ ಅನಿಸಿತು. ತಾವೇ ಪ್ಲೈವುಡ್‌ನಲ್ಲಿ ಟಿಟಿ ಬ್ಯಾಟ್‌ಗಿಂತ ದೊಡ್ಡದನ್ನು ಸಿದ್ಧಗೊಳಿಸಿದರು. ಅದಕ್ಕೆ ಪ್ಯಾಡಲ್ ಎಂದು ಕರೆದರು. ಆದ್ದರಿಂದ ಇದನ್ನು ಪ್ಯಾಡಲ್ ಬಾಲ್ ಎಂದೂ ಕರೆಯುತ್ತಾರೆ. ಅಂಕಣದಿಂದ ಚೆಂಡು ಹೊರಬಿದ್ದಾಗ ಪ್ರಿಚರ್ಡ್ ಅವರ ಸಾಕುನಾಯಿ ತನ್ನ ಬಾಯಲ್ಲಿ ಕಚ್ಚಿಕೊಂಡು ಬಂದು ಕೊಡುತ್ತಿತ್ತು. ಅದರ ಹೆಸರು ಪಿಕಲ್. ಪ್ರಿಚರ್ಡ್ ದಂಪತಿಯು ಈ ಆಟಕ್ಕೆ ತಮ್ಮ ಮುದ್ದಿನ ನಾಯಿಯ ಹೆಸರನ್ನೇ ಇಟ್ಟರಂತೆ. ನಂತರ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಪಿಕಲ್‌ಬಾಲ್ ಬೆಳೆಯತೊಡಗಿತು.

9ನೇ ಪುಟಕ್ಕೆ...

# ಶಿಕ್ಷಣ ಕ್ಷೇತ್ರದ ದಿಗಂತ ವಿಸ್ತರಿಸಿದ ಡಾ.ರಾಮದಾಸ್ ಪೈ

• ಡಾ.ಶರತ್ ರಾವ್

ವೃತ್ತಿಪರ ವೈದ್ಯ, ವಿದ್ಯಾರ್ಥಿಯಾಗಿ ಜಗತ್ತಿನಾದ್ಯಂತ ಓಡಾಡಿ, ಅತ್ಯುತ್ತಮ ದೂರದರ್ಶಕಗಳನ್ನು (Telescope), ಅತ್ಯುತ್ಕೃಷ್ಟವಾದ ಸೂಕ್ಷ್ಮದರ್ಶಕಗಳನ್ನು (Microscope) ಕಂಡಿದ್ದೇನೆ. ಜ್ಞಾನಾರ್ಜನೆ ಮಾಡಿಕೊಂಡಿದ್ದೇನೆ. ಆದರೆ, ದೂರದರ್ಶಕ ಹಾಗೂ ಸೂಕ್ಷ್ಮದರ್ಶಕಗಳೆರಡನ್ನೂ ಒಂದೇ ಮಾಪಕದಲ್ಲಿ ರೂಪಿಸುವುದು ಬಹು ಕಷ್ಟ ಸಾಧ್ಯ. ಅದು ಸಾಧ್ಯವಾದಲ್ಲಿ ಅದೇ 'ದರ್ಶನ'. ಅಂಥ ಅತ್ಯಪರೂಪವನ್ನು ಕಂಡು, ಒಡನಾಡುವ ಅವಕಾಶ ದೊರಕಿದ್ದು ಮಾತ್ರ ಮಣಿಪಾಲದಲ್ಲಿಯೇ. ಅಂದಹಾಗೆ ಅದು ವಸ್ತುವಲ್ಲ, ವ್ಯಕ್ತಿ ಹಾಗೂ ವ್ಯಕ್ತಿತ್ವ ಡಾ.ರಾಮದಾಸ್ ಮಾಧವ ಪೈಗಳದ್ದು.

ಅವರನ್ನು ಬಾಲಕನಾಗಿ, ವಿದ್ಯಾರ್ಥಿಯಾಗಿ, ಯುವ ಅಧ್ಯಾಪಕನಾಗಿ, ವಿಭಾಗದ ಪ್ರಭಾರಿಯಾಗಿ, ವೈದ್ಯಕೀಯ ಕಾಲೇಜಿನ ಮುಖ್ಯಸ್ಥನಾಗಿ ಹಾಗೂ ಈಗ ಅವರು ರೂಪಿಸಿದ ಸಂಸ್ಥೆಯ ನಾಯಕನಾಗಿ ವಿವಿಧ ಹಂತಗಳಲ್ಲಿ ಅವರೊಂದಿಗೆ ಒಡನಾಡಿದ್ದೇನೆ. ಪ್ರತಿ ಬಾರಿ ಅವರನ್ನು ಭೇಟಿಯಾದಾಗ, ಮಾತ್ರವಲ್ಲ ಆ ಭೇಟಿಗಳನ್ನು ನೆನಪಿಸಿಕೊಂಡಾಗಲೂ ಹೊಸದೊಂದು ಹೊಳಪು, ಸಮಸ್ಯೆ ಪರಿಹಾರಕ್ಕೊಂದು ಸುಳಿವು ಸಿಗುತ್ತದೆ.


ರಾಮದಾಸ್ ಪೈ

ಸುಮಾರು ವರ್ಷಗಳ ಹಿಂದೆ, ಅವರ ಭೇಟಿಗಾಗಿ ವರಾಂಡಾದಲ್ಲಿ ಕಾಯುತ್ತಿದೆ. ಅಷ್ಟರಲ್ಲಿ ಸಂಸ್ಥೆಯ ಹಿರಿಯ ನೌಕರರೊಬ್ಬರು ಬಂದು ಅವರಿಗೆ ನಮಸ್ಕರಿಸಿದರು. ಅಂದು ಭೇಟಿ ಮಾಡಿದವರು ಸಂಸ್ಥೆಯ ಲಿಪಿಕ ವರ್ಗದಲ್ಲಿ ದುಡಿದು ನಿವೃತ್ತಿಯ ಅಂಚಿಗೆ ಬಂದು ನಿಂತವರು. ಅವರು ಕುಲಾಧಿಪತಿಗೆ ಹತ್ತಿರದವರೋ ಅಥವಾ ಅವರ ಸುತ್ತಮುತ್ತಣ ಊರಿನವರೂ ಇದ್ದಿರಬೇಕು. ಹಾಗಾಗಿ ಕೆಲವೇ ಮಾತುಗಳಲ್ಲಿ ನಿವೃತ್ತಿಯಾಚೆಗೂ ಸೇವಾ ವಿಸ್ತರಣೆಯ ಬಯಕೆಯನ್ನು ಸೂಕ್ಷ್ಮವಾಗಿ ವ್ಯಕ್ತಪಡಿಸಿದರು. ಅದರೆ, ಕುಲಾಧಿಪತಿ ಡಾ.ರಾಮದಾಸ ಪೈ ಅವರು ಕ್ಷಣಕಾಲ ಮೌನ ತಾಳಿದರು. ಬಂದವರ ಕುಟುಂಬ, ಅದರ ವಿಸ್ತರಣೆ, ಮಕ್ಕಳು, ಅವರ ವಿದ್ಯಾಭ್ಯಾಸ, ಹಿರಿಯ ಮಗನ ಉದ್ಯೋಗ ಕುರಿತು ವಿಚಾರಿಸಿದರು. ಆ ಉದ್ಯೋಗಿ, ಬಾಲ್ಯದಲ್ಲಿ ತಮ್ಮ ಹಳ್ಳಿಯ ಬದುಕು ಎಷ್ಟು ಕಠೋರವಾಗಿತ್ತು ಎಂಬುದನ್ನೂ ಸಾದ್ಯಂತವಾಗಿ ವಿವರಿಸಿದರು. ಮದುವೆಯಾಗಿ, ಮನೆ ಕಟ್ಟಿಸಿ, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ, ಅವರೊಲ್ಲಬ್ಬನಿಗೆ ಉದ್ಯೋಗ ದೊರಕಿರುವುದನ್ನೂ ತಿಳಿಸಿದರು. ಮಗಳಿಗೆ ಮದುವೆಯಾಗಿದ್ದೂ ಹೇಳಿದರು. ಕಡು ಕಷ್ಟದ ಹಿನ್ನೆಲೆಯಿಂದ ಬಂದವರು ಇಷ್ಟೆಲ್ಲಾ ಸಾಧಿಸಿದ್ದು ತಮ್ಮ ಸಂಸ್ಥೆ ಸೇರಿದ ಮೇಲಲ್ಲವೇ ಎಂದು ಖಚಿತ ಪಡಿಸಿಕೊಂಡು ಸಂತೃಪ್ತಿಯ ನಗೆ ಬೀರಿದರು. 'ನಿಮಗೆ ಸಮೃದ್ಧಿ ಬಂದಿರುವುದು ಸಂತಸವಾಗಿದೆ. ಇಂಥದೇ ಸಮೃದ್ಧಿ ಸಾಧಿಸುವ ಅವಕಾಶ ಮತ್ತೊಬ್ಬ ಕಡುಕಷ್ಟದ ಹಿನ್ನೆಲೆಯವನಿಗೂ ದೊರಕಬೇಕಲ್ಲವೇ' ಎಂದಾಗ, ಅಲ್ಲಿದ್ದು ಕೇಳಿಸಿಕೊಳ್ಳುತ್ತಿದ್ದ ಎಲ್ಲರೂ ಈ ತರ್ಕಕ್ಕೆ ತಲೆದೂಗಲೇ ಬೇಕಾಯಿತು. ಆಗುತ್ತದೆ ಅಥವಾ ಇಲ್ಲ ಎಂದು ಒಂದೇ ಶಬ್ದದಲ್ಲಿ ಹೇಳಿ ಬಿಡಬಹುದಿತ್ತು. ಹಾಗೆ ಹೇಳಿದ್ದರೆ, ಅದನ್ನು ಪ್ರಶ್ನಿಸುವವರು ಯಾರೂ ಇರಲಿಲ್ಲ. ಆದರೆ, ಆ ವ್ಯಕ್ತಿ ಹೇಳಿದ್ದನ್ನು ಸಾವಧಾನದಿಂದ ಕೇಳಿ, ತಮ್ಮ ಅಭಿಪ್ರಾಯವನ್ನು ಕೆಲವೇ ಮಾತುಗಳಲ್ಲಿ ಅರ್ಥಪೂರ್ಣವಾಗಿ ಹೇಳುವ ಮೂಲಕ ತಮ್ಮ ಸಾಮಾಜಿಕ ಬದ್ಧತೆಯನ್ನು ಮೆರೆದರು. ಸಾವಧಾನದ ಕೇಳ್ಮೆಯೂ ಅವರ ದೊಡ್ಡ ಗುಣವಾಗಿತ್ತು. ವ್ಯಕ್ತಿ ಕಾಳಜಿಯ ಜೊತೆಗೆ ಸಮಷ್ಟಿ ಪ್ರಜ್ಞೆಯನ್ನು ರೂಪಿಸುವುದಕ್ಕೆ ಉದಾಹರಣೆ ಇದಕ್ಕಿಂತ ಬೇರೇನು ಬೇಕು.

ಹಾಗೆಯೇ ಅವರನ್ನು ಹಲವು ಸಂಸ್ಥೆಗಳ ರೂವಾರಿ ಎಂದು ಹೊಗಳಲಾಗುತ್ತದೆ. ಆದರೆ, ಅವರ ಸಾಧನೆ ಸಂಸ್ಥೆಗಳ ಸ್ಥಾಪನೆಗಿಂತಲೂ ಮಿಗಿಲು. ಅವರು ರೂಪಿಸಿದ್ದು ಸಂಸ್ಥೆಗಳನ್ನು ಮಾತ್ರವಲ್ಲ, ಅವರು ಹಟ ಹಿಡಿದು ಸಾಧಿಸಿದ್ದು ಹೋರಾಡಿದ್ದು ಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕಿನ ಬಗ್ಗೆ. ಅವರು ಪರಿಚಯಿಸಿದ್ದು ಶಿಕ್ಷಣ ಸಂಸ್ಥೆಗಳು ಹಾಗೂ ಅವುಗಳ ಸ್ಥಾಪನೆಗೆ ಅಗತ್ಯವಿದ್ದ ವಾತಾರವಣವನ್ನು. ಅವರು ಕೈಗೆತ್ತಿಕೊಂಡ ಕಾನೂನು ಹೋರಾಟದ ಫಲವಾಗಿಯೇ ಇಂದು ಭಾರತದಲ್ಲಿ ವಿಶ್ವದರ್ಜೆಯ ವಿಶ್ವವಿದ್ಯಾಲಯಗಳು ತಲೆಯೆತ್ತಲು ಸಾಧ್ಯವಾಗಿದೆ. ಇವರ ಆಲೋಚನಾ ಕ್ರಮದ ಕುರಿತು ಆಗ ಅನೇಕರಿಗೆ ಅಸಮಾಧಾನವಿದ್ದದ್ದು ನಿಜವಾದರೂ, ಅವರ ನಿಲುವೇ ಸಮರ್ಪಕವಾದ್ದದ್ದು ಎಂದು ಕಾಲವೇ ಹೇಳುತ್ತದೆ. ಈಗ ಅಂದರೆ, 2025ರಲ್ಲಿ ದೇಶದಾಚೆಗೂ ಭಾರತದ ಶಿಕ್ಷಣ ಸಂಸ್ಥೆಗಳಿರಬೇಕು ಎಂಬ ಆಶಯವಿನ್ನೂ ದೊಡ್ಡ ಪ್ರಮಾಣದಲ್ಲಿ ಕಾರ್ಯರೂಪಕ್ಕಿಳಿಯಬೇಕಿದೆ. ಆದರೆ, 25 ವರ್ಷಗಳಿಗಿಂತಲೂ ಹಿಂದೆಯೇ ಅಂದರೆ 1999ರ ಸುಮಾರಿನಲ್ಲಿಯೇ ಕಾರ್ಯಸಾಧು ಮಾಡಿ ತೋರಿಸಿದ್ದರು. ದುಬೈ, ಆಂಟಿಗುವಾ, ನೇಪಾಳ ಹಾಗೂ ಮಲೇಷಿಯಾಗಳಲ್ಲಿ ಕಾಲೇಜುಗಳನ್ನು ಹಾಗೂ ವಿಶ್ವವಿದ್ಯಾಲಯಗಳನ್ನು ಕಟ್ಟಿದ ಕೀರ್ತಿ ಇವರಿಗೇ ಸಲ್ಲಬೇಕು. ದುಬೈನಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಿದವರಲ್ಲಿ ಮೊದಲಿಗರು ಇವರು! ಹಾಗೆಯೇ ಮಲೇಷಿಯಾದಲ್ಲೂ. ಆ ದೇಶದಲ್ಲಿರುವ ವೈದ್ಯರಲ್ಲಿ ಬಹುತೇಕರು ಮಣಿಪಾಲದ ಸಂಸ್ಥೆಗಳಲ್ಲಿ ಓದಿದವರೇ.

ಡಾ.ರಾಮದಾಸ ಪೈ ಹಾಗೂ ಅವರ ಆಲೋಚನಾ ಕ್ರಮ, ಅವರಿದ್ದ ಕಾಲಕ್ಕಿಂತಲೂ ತುಂಬ ಮುಂದಿತ್ತು. ಏಕಕಾಲಕ್ಕೆ ಅಪ್ರತಿಮ ಪ್ರತಿಭಾವಂತರಿಗೂ ಹಾಗೂ ಸಾಧಾರಣರಿಗೂ, ಬಡವ-ಬಲ್ಲಿದರಿಗೂ, ದೇಶಿಯರು-ವಿದೇಶಿಯರಿಗೂ ಅವಕಾಶ ಕೊಡಲು ಖಾಸಗಿ ಶಿಕ್ಷಣ ಸಂಸ್ಥೆಗಳು ಮುಂದಾಗಬೇಕು ಎಂಬುದು ಅವರ ನಿಯಮವಾಗಿತ್ತು. ಈ ಸಮತೋಲನ ಕಾಯ್ದುಕೊಳ್ಳುವುದು ಅತಿ ಮಹತ್ವದ ವಿಚಾರವಾಗಿತ್ತು. ಇದನ್ನು ತಮ್ಮ ಜೀವನ ಬಹುದೊಡ್ಡ ತತ್ವ ಎಂದೇ ಭಾವಿಸಿದ್ದರು. ಈ ಸಮತೋಲದ ಸೂತ್ರದಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಆರ್ಥಿಕವಾಗಿ ಸಬಲವಾಗುತ್ತವೆ, ಆಗ ಮಾತ್ರ ಸಾಮಾಜಿಕ ಬದ್ಧತೆಯನ್ನು ಕಾರ್ಯರೂಪಕ್ಕಿಳಿಸಬಹುದು ಎಂಬ ಅವರ ನಂಬಿಕೆ ಈಗಲೂ ಸತ್ಯವಾಗಿದೆ. ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವ ಆಲೋಚನೆ ಟಿಸಿಲೊಡೆದಿದ್ದು ಮಣಿಪಾಲದ ಸಂಸ್ಥೆಗಳಲ್ಲಿಯೇ. ಆಗಿನ ಪದವಿಪೂರ್ವ ಕೋರ್ಸುಗಳಲ್ಲಿ ಒಂದಷ್ಟು ವಿದ್ಯಾರ್ಥಿಗಳು ವಿದೇಶಿ ಮೂಲದವರಾಗಿರುತ್ತಿದ್ದರು. ಅವರಲ್ಲಿ ಬಹುತೇಕರು ಭಾರತೀಯ ಸಂಜಾತರಾದರೆ, ಇನ್ನೂ ಕೆಲ ವಿದೇಶಿಯರು ತಮ್ಮ ನೆಲದಲ್ಲಿ ಇಂಥ ಅತ್ಯುತ್ತಮ ಶಿಕ್ಷಣಾವಕಾಶ ಇಲ್ಲದಿದ್ದರಿಂದ ಬಂದವರು. ಇಂಥ ಸನ್ನಿವೇಶದಲ್ಲಿ ಹೊಳೆದಿದ್ದೇ ವಿದ್ಯೆಯನ್ನು ಅವರವರ ಮನೆ ಬಾಗಿಲಿಗೆ ತಲುಪಿಸುವ ಸಾಧ್ಯತೆಗಳನ್ನು ಯೋಚಿಸಿ, ಕಾರ್ಯಗತಗೊಳಿಸಿದರು. ಇದಕ್ಕಾಗಿ ಅವರು ಬಹುದೊಡ್ಡ ಕಾನೂನು ಹೋರಾಟವನ್ನೇ ಮಾಡಬೇಕಾಯಿತು. ಒಬ್ಬ ವ್ಯಕ್ತಿಯ ಹೋರಾಟದ ಹಾದಿ, ಕಾಲಾಂತರದಲ್ಲಿ ಹೆದ್ದಾರಿಯಾಗಿ ಬದಲಾಯಿತು. ಒಬ್ಬರ ಆಲೋಚನಾ ಕ್ರಮ ಸಮಾಜದ ಮುಖ್ಯವಾಹಿಯಾಗಿ ಪ್ರವಹಿಸತೊಡಗಿತು. ಹೋರಾಟದಲ್ಲಿ ಬರುವ ಅಡೆತಡೆಗಳು, ಸೋಲಿನ ಭೀತಿಗಳಾಚೆಗೇ ಗೆಲುವಿದೆ ಎಂಬ ನಂಬಿಕೆ ಅವರಲ್ಲಿ ಗಾಢವಾಗಿತ್ತು. ತಮ್ಮ ತಂದೆ ಡಾ. ಟಿಎಂಎ ಪೈ ಅವರ ವಿಶ್ವವಿದ್ಯಾಲಯವೊಂದನ್ನು ಕಟ್ಟಬೇಕು ಎಂಬ ಕನಸನ್ನು ನನಸು ಮಾಡುವ ಹೊಣೆ ಹೊತ್ತರು. ತಮ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಡಾ.ರಾಮದಾಸ ಪೈ ಅವರು ಕಟ್ಟಿದ್ದು ಐದು ವಿಶ್ವವಿದ್ಯಾಲಯಗಳು, ಹತ್ತು ಕ್ಯಾಂಪಸ್ಸುಗಳು. ಬರೀ ದೇಶದಲ್ಲಲ್ಲ, ವಿದೇಶಗಳಲ್ಲೂ. ಇವುಗಳಲ್ಲಿ ಸುಮಾರು 2 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು 20 ಸಾವಿರಕ್ಕೂ ಹೆಚ್ಚು ಬೋಧಕರು ಹಾಗೂ ಸುಮಾರು 3 ಲಕ್ಷಕ್ಕೂ ಅಧಿಕ ಹಳೆಯ ವಿದ್ಯಾರ್ಥಿಗಳಿದ್ದಾರೆ. ಅವರು ಆರಂಭಿಸಿದ ಮಣಿಪಾಲ ಆಸ್ಪತ್ರೆ ಈಗ ದೇಶದ ಮಹತ್ವದ ಆರೋಗ್ಯ ಸಂಸ್ಥೆಯಾಗಿ ಹೊರಹೊಮ್ಮಿದೆ. 38 ಆಸ್ಪತ್ರೆಗಳ ಈ ಸಮೂಹ ವರ್ಷಕ್ಕೆ 70 ಲಕ್ಷಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದೆ. ಈ ಕಾರಣಕ್ಕಾಗಿಯೇ ಭಾರತ ಸರ್ಕಾರ 2011ರಲ್ಲಿ ಪದ್ಮಭೂಷಣ ನೀಡಿತು. ❖



# ರತನ್ ಥಿಯಮ್ ಎಂಬ ಧೇನಸ್ಥ ರಂಗ ತಪಸ್ವಿ


• ಬಿ.ಜಯಶ್ರೀ

**ಹಿರಿಯ ರಂಗಕರ್ಮಿ ರತನ್ ಥಿಯಮ್ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಕಲಿತ ಬಳಿಕ ಮಣಿಪುರಕ್ಕೆ ತೆರಳಿ ಮೈಥಿ ಸ್ವತಂತ್ರ ನೆಲೆಯ ರಂಗತಂಡ ಕಟ್ಟಿದರು. ರಂಗಭೂಮಿಯನ್ನು ಎಂದೂ 'ಮನರಂಜನೆ' ಯಾಗಿ ನೋಡದ ಅವರ ಜತೆಗಿನ ಒಡನಾಟವನ್ನು ಲೇಖಕಿ ಇಲ್ಲಿ ನೆನಪು ಮಾಡಿಕೊಂಡಿದ್ದಾರೆ.**

**ಇತ್ತೀಚೆಗೆ ನಮ್ಮನ್ನೆಲ್ಲಾ** ಅಗಲಿದ ಭಾರತೀಯ ರಂಗಭೂಮಿಯ ಅನರ್ಘ್ಯ ರತ್ನ, ರತನ್ ಥಿಯಮ್ ಅವರದ್ದು ಸಾರ್ಥಕ ರಂಗ ಜೀವನ. 1948 ರಲ್ಲಿ ಮಣಿಪುರದಲ್ಲಿ ಥಿಯಮ್ ತರುಣ್ ಕುಮಾರ್ ಮತ್ತು ಬಿಲಾಸಿನಿ ದೇವಿ ಎಂಬ ಶಾಸ್ತ್ರೀಯ ನೃತ್ಯಪಟು ದಂಪತಿಗೆ ಮಗನಾಗಿ ಜನಿಸಿದ ರತನ್ ದೈನಂದಿನ ಜೀವನದ ಭಾಗವಾಗಿ ಲಯ, ಚಲನೆ ಮತ್ತು ಕಥೆ ಹೇಳುವ ಕಲೆಯನ್ನು ಜನ್ಮದತ್ತವಾಗಿ ಹಾಗೂ ಪರಿಸರದಿಂದ ಪಡೆದರು.

ಅವರ ಹುಡುಕಾಟದ ರಂಗಭೂಮಿಯೂ ಅವರಷ್ಟೇ ಅಪರೂಪದ ಆಯಾಮವುಳ್ಳದ್ದು. ನಮ್ಮ ದೇಶದ ರಂಗಭೂಮಿ ಸತತ ತಪಸ್ಸು ಮಾಡಿ ಗಳಿಸಿದ ಫಲವೇ ಈ ರತನ್ ಎಂಬ ನಿರ್ದೇಶಕರೇನೋ ಅನ್ನುವ ಹಾಗೆ ಅವರು ಹೋದಲ್ಲೆಲ್ಲಾ ರಂಗಭೂಮಿಯ ಆಳ-ಆಯಾಮಗಳನ್ನು ಮರುಶೋಧಿಸದೆ, ಹೊಸತೊಂದು ಸೃಷ್ಟಿ ಮಾಡದೆ ಯಾವ ಪ್ರೊಡಕ್ಷನ್ ಅನ್ನೂ ಸಂಪನ್ನಗೊಳಿಸುತ್ತಿರಲಿಲ್ಲ. ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ನನ್ನ ನಂತರದ ಬ್ಯಾಚ್ ನಲ್ಲಿ ರಂಗಾಭ್ಯಾಸ ಮಾಡಿದವರು ಅವರು. ಎನ್.ಎಸ್.ಡಿ ಮುಗಿಸಿ ಹೊರಟ ಅವರು ಅಲ್ಲಿಂದ ನೇರವಾಗಿ ತನ್ನ ನೆಲವಾದ ಮಣಿಪುರಕ್ಕೆ ಬಂದ ಈ ದಿಟ್ಟ ಮೈಥಿ ಸ್ವತಂತ್ರ ನೆಲೆಯ ರಂಗಭೂಮಿ ಕಟ್ಟಿದರು. ಸಾಂಪ್ರದಾಯಿಕ ಚೌಕಟ್ಟುಗಳಲ್ಲಿ ಕಥೆ ಹೇಳುವಾಗಲೂ ಹೊಸ ಕಾಣ್ಕೆಗಳ ಗುಚ್ಛಗಳನ್ನೇ ಕಟ್ಟಿ ಪ್ರೇಕ್ಷಕರ ಮುಂದೆ ಇಡುತ್ತಿದ್ದರು.

ಅವರೊಬ್ಬ ಅದ್ಭುತ ರಂಗನಿರ್ದೇಶಕ, ಬರಹಗಾರ, ಚಿತ್ರ ಕಲಾವಿದ, ತನ್ನನ್ನೂ ಸೇರಿಸಿ ನಾವೆಲ್ಲರೂ ಓದಿದ ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ನಿರ್ದೇಶಕ ಹಾಗೂ ಚೇರ್ಮನ್ ಪದವಿಯನ್ನು ಅಲಂಕರಿಸಿ ಅವಕ್ಕೆ ಘನತೆ ತಂದು ಕೊಟ್ಟವರು. ಅಂತೆಯೇ ಅವರಿಗೆ ಸಂದ ಗೌರವಗಳೂ ಹಲವಾರು. ಒಮ್ಮೊಮ್ಮೆ ಗಾಢವಾದ ಅಭ್ಯಾಸಿ ಅಂದರೆ ಸ್ಕಾಲರ್ ಥರವೂ ಮತ್ತೊಮ್ಮೆ ಆಳವಾದ ಅರಿವಿನ ಬಾಗಿಲಲ್ಲಿ ನಿಂತ ಫಿಲಾಸಫರ್ ಅಥವಾ ವೇದಾಂತಿಯ ಹಾಗೂ ಭಾಸವಾಗುತ್ತಿದ್ದ ಥಿಯಮ್ ತಮ್ಮ ನಾಟಕಗಳಿಂದಾಗಿ ಭಾರತದಲ್ಲಿ ಅಷ್ಟೇ ಅಲ್ಲ, ಹೊರ ದೇಶಗಳಗಳಲ್ಲೂ ಕೂಡ ಹೆಸರು ಮಾಡಿದವರು. ಅವರೊಳಗಿನ ಗಾಂಭೀರ್ಯ ಹಾಗೂ ರಂಗಜ್ಞಾನದ ಹೊಸ ಹುಡುಕಾಟವನ್ನು ಕಂಡರೆ ನನಗೆ ಹಿಂದಿನ ದಿನಗಳಲ್ಲಿ ಜನ ನ್ಯಾಯ ಕೇಳಲಿಕ್ಕೆಂದು ಬಂದು ಬಾರಿಸುತ್ತಿದ್ದ ನ್ಯಾಯದ ಗಂಟೆ ಅಥವಾ ಹಳೆಯ ಚರ್ಚುಗಳ ಮೇಲೆ ಕಟ್ಟಿರುತ್ತಿದ್ದ ಬೃಹತ್ ಗಂಟೆ ನೆನಪಾಗುತ್ತಿತ್ತು. ಆ ಗಂಟೆಗಳನ್ನು ಯಾರಾದರೂ ಅಲ್ಲಾಡಿಸಿದಾಗಲೆಲ್ಲಾ ಅವು ಅತ್ಯಂತ ಗಾಢವಾದ ಶಬ್ದ ಹೊರಡಿಸುತ್ತಿದ್ದವು, ಅದು ದೂರದೂರಕ್ಕೂ ಸಾವಧಾನವಾಗಿ ಅಲೆಅಲೆಯಾಗಿ ಕೇಳಿಸುತ್ತಿತ್ತು. ಆ ಶಬ್ದದ ಅರ್ಥ ಇಲ್ಲೇನೋ ಗಹನವಾದ ವಿಷಯ ಇದೆ, ಅದನ್ನು ನಾವು ಗಮನಿಸಬೇಕು ಎಂಬ ಹಾಗೆ ಭಾಸವಾಗುತ್ತಿತ್ತು. ರತನ್ ಅವರನ್ನ ನೋಡಿದರೂ ಅದೇ ಭಾವ ಹುಟ್ಟುತ್ತಿತ್ತು ನನಗೆ.


ರತನ್ ಥಿಯಮ್

ರಾಷ್ಟ್ರೀಯ ನಾಟಕ ಶಾಲೆ ದೆಹಲಿ - ಇಲ್ಲಿ ನಾನು ಎಪ್ಪತ್ತರ ದಶಕದಲ್ಲಿ 2ನೇ ವರ್ಷಕ್ಕೆ ಕಾಲಿಟ್ಟಾಗ ರತನ್ ಥಿಯಮ್ ಆಗಷ್ಟೇ ಎನ್.ಎಸ್.ಡಿಗೆ ಸೇರಿದರು. ನನಗಂತೂ ನನ್ನ ಹುಟ್ಟು, ಬೆಳವಣಿಗೆ, ವಿದ್ಯಾಭ್ಯಾಸ, ಅರಿವು, ಭಾವನೆಗಳು ಎಲ್ಲವೂ ನನಗೆ ನನ್ನ ತಾಯಿ ಮತ್ತು ಕಂಪನಿ ಆಗಿತ್ತು. ಒಂದು ರೀತಿ ಅಮ್ಮನ ಸೆರಗಿನಲ್ಲೇ ಬೆಚ್ಚಗೆ ಇದ್ದವಳು – ಕಂಪನಿಯನ್ನು ಹೊರತುಪಡಿಸಿ ನನಗೆ ಬೇರೆ ಜಗತ್ತೇ ಇರಲಿಲ್ಲ. ಎನ್.ಎಸ್.ಡಿಗೆ ಬಂದ ನಿಧಾನಕ್ಕೆ ಒಂದು ಹೊಸ ಜಗತ್ತು ತೆರೆದುಕೊಳ್ಳತೊಡಗಿತು. ಈ ಜಾಗ ನಮ್ಮ ಗುಬ್ಬಿ ಕಂಪನಿಗಿಂತ ಹೇಗೆ ಭಿನ್ನ ಎಂಬ ಹುಡುಕಾಟ ಗಾಢವಾಗಿ ಬೆಳೆಯತೊಡಗಿತು.

ಆಗ ಬಂದು ಸೇರಿದ್ದ ರತನ್ ಕೂಡ ಮಿತಭಾಷಿ, ತುಂಬಾ ಶಾಂತಚಿತ್ತ, ನಿಧಾನಿ, ಆತನ ಕಣ್ಣುಗಳಂತೂ ಬಹಳ ಸೂಕ್ಷ್ಮವಾಗಿ ಎಲ್ಲವನ್ನೂ ಗ್ರಹಿಸುತ್ತಿದ್ದವು. ಮುಂದೆ ಒಮ್ಮೆ ಸಂಗೀತ ನಾಟಕ ಅಕಾಡೆಮಿ (ಎಸ್.ಎನ್.ಎ) ನಮಗೆ ಒಂದು ಪ್ರಾಜೆಕ್ಟ್ ಕೊಟ್ಟಿತು. ಆಗಲೇ ಕರ್ನಾಟಕದಿಂದ ನಾನು ಅಂದರೆ ನಮ್ಮ ಸ್ಪಂದನ ತಂಡ, ಮಣಿಪುರದಿಂದ ರತನ್ ಅವರ ಕೋರಸ್ ರೆಪರ್ಟರಿ ಥಿಯೇಟರ್, ಮಹಾರಾಷ್ಟ್ರದಿಂದ ವಾಮನ ಕೇಂದ್ರೆ ಅವರ ರಂಗಪೀಠ, ಕಾಶ್ಮೀರದಿಂದ ಬಲವಂತ ಠಾಕೂರ್ ಅವರ ನಟರಂಗ್ ಮತ್ತು ಜೈಪುರದಿಂದ ಭಾನುಭಾರತಿ ಅವರ ತಂಡ ಆಜ್ ರಂಗಮಂಡಲ್ ಹೀಗೆ ಎಲ್ಲಾ ಬಂದಿದ್ದೆವು.

ಸ್ಥಳೀಯ ಜಾನಪದ ಬಳಸಿಕೊಂಡು ಮೂಲ ಪ್ರಕಾರಕ್ಕೆ ಚ್ಯುತಿ ಬಾರದಂತೆ ಹೊಸ ನಾಟಕವೊಂದನ್ನು ತಯಾರು ಮಾಡಬೇಕು, ಅದರ ಮೊದಲ ಪ್ರದರ್ಶನ ನಾವೇ ಆಯೋಜಿಸುತ್ತೇವೆ ಎಂದು ಸಂಗೀತ ನಾಟಕ ಅಕಾಡೆಮಿ ಹೇಳಿತ್ತು. ಆಗ ತಯಾರಾದದ್ದೇ ನಮ್ಮ ತಂಡದ ಲಕ್ಷಾಪತಿರಾಜನ ಕಥೆ, ಥಿಯಮ್ ಅವರ ಚಕ್ರವ್ಯೂಹ, ವಾಮನ ಕೇಂದ್ರೆ ಅವರ ಜುಲ್ವ ಇತ್ಯಾದಿ. ಆಗ ಬಂದ ಎಲ್ಲಾ ನಾಟಕಗಳೂ ಈಗಲೂ ಜನಮಾನಸದಲ್ಲಿ ಉಳಿದು ಕಾಲಾತೀತ ಮಾಸ್ಟರ್ ಪೀಸ್ ಎನಿಸಿಕೊಂಡವು!

ರತನ್ ಕಟ್ಟಿದ ನಾಟಕ ನೋಡುತ್ತಿದ್ದರೆ-ಚಿತ್ರಕಲೆಯೋ ಫೋಟೋಗ್ರಫಿಯೋ ಎಂದು ಅಚ್ಚರಿಯಾಗುತ್ತಿತ್ತು. ಮುಂದೊಮ್ಮೆ ಭೇಟಿ ಆದಾಗ 'ರತನ್, ಈ ಕಲ್ಪನಾ ವಾಸ್ತವವನ್ನು ಹೇಗೆ ಸಾಧಿಸಿದಿರಿ?' ಎಂದು ಕೇಳಿದೆ. ಅದಕ್ಕೆ ಉತ್ತರವಾಗಿ ಅವರು ಮುಗುಳನಕ್ಕು, 'ನಾನು ನಾಟಕದ ದೃಶ್ಯಗಳನ್ನು ರಂಗದ ಮೇಲೆ ಪೇಂಟ್ ಮಾಡುತ್ತೇನೆ. ಬಣ್ಣ- ಅಥವಾ ಬ್ರಶ್ ನಿಂದ ಅಲ್ಲ, ಕಲಾವಿದರು ಮತ್ತು ಲೈಟುಗಳಿಂದ' ಅಂದಿದ್ದರು.

ರತನ್ ಮೊದಲು ಚಿತ್ರಕಲೆ, ಕಾವ್ಯ ಮತ್ತು ಕಾದಂಬರಿಯನ್ನು ಅನ್ವೇಷಿಸಿದರೂ, ರಂಗಭೂಮಿ ಅವರ ಆತ್ಯಂತಿಕ ಆಯ್ಕೆಯಾಗಿತ್ತು. ಇದರಿಂದ ಈಶಾನ್ಯ ರಂಗಭೂಮಿಗೆ ಪ್ರಾತಿನಿಧ್ಯ ದೊರೆತು ಶ್ರೀಮಂತವೇ ಆಯಿತು. ನಾಟ್ಯ ಸಂಕೀರ್ತನೆ, ತಂಗ್-ತಾ, ರಾಸ ಲೀಲಾ ಮತ್ತು ಅವರ ಮಣಿಪುರಿ ಪರಂಪರೆಯಿಂದ ಪ್ರಭಾವಿತರಾಗಿದ್ದ ಅವರು, ಗಟ್ಟಿ ಬೇರಿನ ಸಾರ್ವತ್ರಿಕ ಚಳವಳಿಯ ರಂಗಭೂಮಿಯನ್ನು ರೂಪಿಸಿದರು. ಥಿಯಮ್ ಅವರಲ್ಲಿ ಮೌನ ಪ್ರತಿಭಟನೆಯಾಯಿತು, ಪುರಾಣ ರೂಪಕವಾಯಿತು, ಮತ್ತು ಆ ವೇದಿಕೆ ಸಮಾಜದ ಗಾಯಗಳಿಗೆ ಹಿಡಿದ ಕನ್ನಡಿಯಾಯಿತು. ಚಕ್ರವ್ಯೂಹ, ಉತ್ತರ ಪ್ರಿಯದರ್ಶಿ ಮತ್ತು ನೈನ್ ಹಿಲ್ಸ್ ಒನ್ ವ್ಯಾಲಿಯಂತಹ ಕೃತಿಗಳಲ್ಲಿ, ಅವರು ಪುರಾಣವನ್ನು ಆಧುನಿಕ ಸ್ಮರಣೆಯಾಗಿ ಪರಿವರ್ತಿಸಿದರು. ಈಚೆಗೆ ತಮ್ಮ 77 ನೇ ವಯಸ್ಸಿನಲ್ಲಿ ರತನ್ ಥಿಯಮ್ ಈ ಪ್ರಪಂಚದಿಂದ ನಿರ್ಗಮಿಸಿದಾಗ ಕವಿದ ಶೂನ್ಯದ ನಡುವೆಯೂ ನಾವು ಮುಖ್ಯವಾಗಿ ನೆನಪಿಟ್ಟುಕೊಳ್ಳಬೇಕಿರುವುದು ರತನ್ ರಂಗಭೂಮಿಯನ್ನು ಎಂದೂ 'ಮನರಂಜನೆ' ಯಾಗಿ ನೋಡಲಿಲ್ಲ, ಬದಲಿಗೆ ಅದು ಅವರಿಗೆ ಒಂದು ಗಟ್ಟಿ ಧ್ವನಿಯ ಸ್ವರೂಪ, ತನ್ನೊಳಗಿನ ಒಂದು ಆಪ್ತ ಮುಖಾಮುಖಿ ಮತ್ತು ಆತ್ಮದೀಪದ ಹಾಗೆ ಬೆಳಗುವ ಅರಿವಿನ ಜಾಗೃತ ಸ್ಥಿತಿಯಾಗಿತ್ತು. ಆ ಬೆಳಕನ್ನು ಮತ್ತಷ್ಟು ಪಸರಿಸುವಂತೆ ಮಾಡುವುದು ಮುಂದಿನ ಪೀಳಿಗೆಗಳ ಜವಾಬ್ದಾರಿಯಾಗಿದೆ.

(ನಿರೂಪಣೆ: ಪ್ರೀತಿ ನಾಗರಾಜ್)

# ಪಿಕಲ್‌ಬಾಲ್ ಕಮಾಲ್...

8ನೇ ಪುಟದಿಂದ...

ವಿಶೇಷವಾಗಿ ಅಮೆರಿಕ, ಯುರೋಪ್ ದೇಶಗಳಲ್ಲಿ ಕೌಟುಂಬಿಕ ಮನರಂಜನೆ ಮತ್ತು ಫಿಟ್‌ನೆಸ್ ಕ್ರೀಡೆಯಾಗಿ ಜನಪ್ರಿಯವಾಗಿದೆ.

'ನಾನು ವಾಲಿಬಾಲ್ ಆಟಗಾರ. ರಾಜ್ಯ, ರಾಷ್ಟ್ರ ತಂಡದೊಂದಿಗೆ ಪ್ರವಾಸಮಾಡಿರುವೆ. ಆ ಸಂದರ್ಭದಲ್ಲಿ ಅಮೆರಿಕದಲ್ಲಿ ನೋಡಿದೆ. ವಾಲಿಬಾಲ್ ಆಟದೊಳಗಿನ ರಾಜಕೀಯ, ಅವ್ಯವಸ್ಥೆಗಳನ್ನು ನೋಡಿ ದೂರ ಸರಿದೆ. ಆದರೆ ಹೊಸದೊಂದು ಆಟವನ್ನು ನಮ್ಮ ಸ್ನೇಹಿತರ ಬಳಗಕ್ಕೆ ಪರಿಚಯಿಸುವ ಹಂಬಲ ಇತ್ತು. ಲೆಗ್ ಕ್ರಿಕೆಟ್ ಸೇರಿದಂತೆ ಹಲವು ಆಟಗಳನ್ನು ಪರೀಕ್ಷಿಸಿದೆವು. ಕೊನೆಗೆ ಗಟ್ಟಿಯಾಗಿ ಸೆಳೆದಿದ್ದು ಮಾತ್ರ ಪಿಕಲ್‌ಬಾಲ್' ಎಂದು ರಜತ್ ಹೇಳಿದರು.

'ಈ ಆಟವನ್ನು ನಾವು ಇಲ್ಲಿ ಆರಂಭಿಸಿದಾಗ ಗೇಲಿ ಮಾಡಿದವರೇ ಹೆಚ್ಚು. ಇದೆಂತಹ ಆಟ ಎಂದು ಅಪಹಾಸ್ಯ ಮಾಡಿದ್ದರು. ಆದರೆ ಇವತ್ತು ಬೆಂಗಳೂರಿನ ಬೇರೆ ಬೇರೆ ಪ್ರದೇಶಗಳಲ್ಲಿ 29 ಅಕಾಡೆಮಿಗಳಿವೆ. 400ಕ್ಕೂ ಹೆಚ್ಚು ಕೋರ್ಟ್‌ಗಳಿವೆ. ರಾಜ್ಯದ್ಯಂತ ಐದು ಸಾವಿರ ಜನ ಆಡುತ್ತಿದ್ದಾರೆ. ಮೈಸೂರು, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಕೋಲಾರ, ರಾಮನಗರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ಎಂಟು ಜಿಲ್ಲಾ ಸಂಸ್ಥೆಗಳು ಇವೆ. ಬೆಂಗಳೂರಿನಲ್ಲಿ ಪ್ರತಿ ವಾರವೂ ಒಂದಿಲ್ಲೊಂದು ಕಡೆ ಸ್ಪರ್ಧೆಗಳು ಇರುತ್ತವೆ. ಒಂದು ಲಕ್ಷ ರೂಪಾಯಿಯಷ್ಟು ನಗದು ಬಹುಮಾನಗಳೂ ಇರುವುದು ವಿಶೇಷ. ನಮ್ಮಲ್ಲಿ ಹೊಟೇಲ್ ಉದ್ಯಮಿಯೊಬ್ಬರು ಪತ್ನಿ ಹಾಗೂ ಮಕ್ಕಳು ಜೊತೆಯಾಗಿ ಆಡುತ್ತಾರೆ. 64 ವರ್ಷದವರೊಬ್ಬರು ಪ್ರತಿನಿತ್ಯ ಒಂದೆರಡು ಗಂಟೆ ಇಲ್ಲಿ ಆಡುತ್ತಾರೆ. ಅವರ ಫಿಟ್‌ನೆಸ್, ಚಾಕಚಕ್ಯತೆ ನಮಗೆಲ್ಲ ಸ್ಫೂರ್ತಿ' ಎಂದು ಅವರು ಹೇಳಿದರು.

ಸದ್ಯ ಬೆಂಗಳೂರಿನ ಕೆಎಸ್‌ಪಿಎನಲ್ಲಿ 19 ವರ್ಷದವರಿಂದ ಆರಂಭವಾಗಿ 64 ವರ್ಷದೊಳಗಿನ ಆಟಗಾರರು ಇದ್ದಾರೆ. ಈ ಆಟಕ್ಕೆ ಬೇಕಾದ ಸಾಮಗ್ರಿಗಳಾದ ಪ್ಯಾಡಲ್ (ಬ್ಯಾಟ್), ರಂಧ್ರಗಳಿರುವ ಸಿಂಥೆಟಿಕ್ ಮಿಶ್ರಿತ ಪ್ಲಾಸ್ಟಿಕ್ ಚೆಂಡುಗಳು ತಯಾರಾಗುವುದು ಚೀನಾದಲ್ಲಿ. ಆದರೆ ಮಾರಾಟವನ್ನು ಅಮೆರಿಕದ ಕಂಪನಿಗಳು ಮಾಡುತ್ತವೆ. ದಶಕದ ಹಿಂದೆ ಅಲ್ಲಿಂದ ತರಿಸಿ ಇಲ್ಲಿಯ ಆಸಕ್ತರಿಗೆ ಉಚಿತವಾಗಿ ನೀಡಿ ಆಡುವಂತೆ ಮಾಡಿದ್ದು ಈ ಸಂಘಟನೆಯ ಪದಾಧಿಕಾರಿಗಳು. ಈಗ ಭಾರತದಲ್ಲಿ ಸಲಕರಣೆಗಳು ಸಿಗುತ್ತಿವೆ. ಆದರೆ ಉತ್ಪಾದನೆ ಇನ್ನೂ ಉತ್ಕೃಷ್ಟ ಗುಣಮಟ್ಟ ಮುಟ್ಟಿಲ್ಲ. ಒಂದು ಪ್ಯಾಡಲ್‌ಗೆ 2,500 ರೂಪಾಯಿಂದ ಆರಂಭವಾಗಿ 20 ಸಾವಿರದವರೆಗೂ ಇವೆ. ಒಂದು ಚೆಂಡಿಗೆ 200 ರೂಪಾಯಿವರೆಗೂ ಇದೆ. ಸದ್ಯ ರಾಜ್ಯ ಸಂಸ್ಥೆಗೆ ಎ.ಜಿ. ಶಿವಕುಮಾರ್ ಅಧ್ಯಕ್ಷರಾಗಿದ್ದಾರೆ.



'ನಾವೆಲ್ಲ ಒಂದೇ ಪ್ರದೇಶದ ನಿವಾಸಿಗಳು. ಪ್ರತಿದಿನ ಎರಡು ತಾಸು ಪಿಕಲ್‌ಬಾಲ್ ಆಡದೇ ಹೋದರೆ ಸಮಾಧಾನವೇ ಇಲ್ಲ. ವ್ಯಾಯಾಮಕ್ಕೆ ವ್ಯಾಯಾಮ, ಮನಸ್ಸಿಗೆ ನೆಮ್ಮದಿ ಮತ್ತು ಈ ವಯಸ್ಸಿನಲ್ಲಿಯೂ ಫಿಟ್ ಆಗಿದ್ದೇನೆ' ಎಂದು ಸುರೇಶ್ ಬಾಬು ಸಂತಸದಿಂದ ಹೇಳುತ್ತಾರೆ.

ಅವರಷ್ಟೇ ಅಲ್ಲ; ಕಲಬುರಗಿಯಲ್ಲಿ ಕ್ರಿಕೆಟ್ ಆಡುತ್ತಿದ್ದ ವರುಣ್ ಬೆಂಗಳೂರಿಗೆ ಉದ್ಯೋಗಕ್ಕಾಗಿ ಬಂದವರು. ಅವರು ಕೂಡ ಪಿಕಲ್‌ಬಾಲ್‌ಗೆ ಮಾರುಹೋಗಿದ್ದಾರೆ. 21 ವರ್ಷದೊಳಗಿನ ವಿಭಾಗದಲ್ಲಿ ಆಡುವ ಹರಿಪ್ರಿಯಾ, ಜೂನಿಯರ್ ಆಟಗಾರ ಅನಿಲ್ ಕುಮಾರ್, 53 ವರ್ಷದ ನಾಗೇಂದ್ರ ಅವರಂತಹ ಉತ್ಸಾಹಿಗಳೂ ಇಲ್ಲಿದ್ದಾರೆ.

'ಕೆಲವು ಖಾಸಗಿ ಅಕಾಡೆಮಿಗಳು ಪ್ರತಿ ಗಂಟೆಗೆ ₹500 ರಿಂದ ₹ 1,200ವರೆಗೂ ಶುಲ್ಕ ಪಡೆಯುತ್ತಿವೆ. ಇದರಿಂದಾಗಿ ಈ ಆಟವು ಕೇವಲ ಉಳ್ಳವರಿಗಾಗಿ ಎನ್ನುವಂತಾಗುತ್ತಿದೆ. ಆದರೆ ಮಧ್ಯಮ ವರ್ಗದವರು ಹೆಚ್ಚು ಭಾಗವಹಿಸುವಂತಾಗಬೇಕು. ಅದಕ್ಕಾಗಿ ಅಧಿಕ ಶುಲ್ಕಕ್ಕೆ ಕಡಿವಾಣ ಹಾಕುವತ್ತ ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಕೈಗೆಟಕುವ ಶುಲ್ಕ ನಿಗದಿಪಡಿಸುವುದು ಮತ್ತು ನಮ್ಮದೇ ಸಂಸ್ಥೆಯಿಂದ ಬೇರೆ ಬೇರೆ ಪ್ರದೇಶಗಳಲ್ಲಿ ಕೋರ್ಟ್‌ಗಳನ್ನು ನಿರ್ಮಿಸಿ ಕೊಡುವ ಉದ್ದೇಶವಿದೆ' ಎಂದೂ ರಜತ್ ಹೇಳುತ್ತಾರೆ. ❖

# ಬುದ್ಧ ಬದುಕಿದ್ದಾನೆ!

8ನೇ ಪುಟದಿಂದ...

ನಿರ್ದಿಷ್ಟ ಉದ್ಯೋಗ ಇಲ್ಲ. ಆರ್ಥಿಕ ಸ್ವಾತಂತ್ರ್ಯ ಇಲ್ಲ. 'ಅಲ್ಲಿದೆ ನಮ್ಮನೆ, ಇಲ್ಲಿರುವೆ ಸುಮ್ಮನೆ' ಎಂಬ ಭಾವ ನಿರಂತರ. ಟಿಬೆಟನ್ನರಿಗೆ ಸಾವಿರಾರು ವರ್ಷಗಳ ಸಂಸ್ಕೃತಿ, ಸಂಪ್ರದಾಯ ಇದೆ. ಸ್ವತಂತ್ರ ಭಾಷೆ ಇದೆ. ಶಿಕ್ಷಣ ಪದ್ಧತಿ ಇದೆ. ವೈದ್ಯಕೀಯ ಪದ್ಧತಿ ಇದೆ. ಸಂಗೀತ, ನೃತ್ಯ ಪ್ರಕಾರಗಳಿವೆ. ಧರ್ಮಶಾಲಾದಲ್ಲಿ ಟಿಬೆಟ್ ವಸ್ತು-ಸಂಗ್ರಹಾಲಯ ಇದೆ. ಸಂಗೀತ, ನೃತ್ಯ, ಭಾಷಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವಿದೆ. ಆದರೂ ಸ್ವಾತಂತ್ರ್ಯ ಇಲ್ಲದೇ ಇರುವುದರಿಂದ ಯಾವುದನ್ನೂ ಅನುಭವಿಸಲು ಸಾಧ್ಯವಾಗುತ್ತಿಲ್ಲ. ಭಾರತದ ಔದಾರ್ಯದಿಂದ ಇಲ್ಲಿರುವ ಟಿಬೆಟನ್ನರು ಕೊಂಚ ಮಟ್ಟಿಗೆ ಸಮಾಧಾನದಿಂದ ಇದ್ದಾರೆ. ಆದರೆ ಇಲ್ಲಿರುವ ಎಲ್ಲರ ಮನದಲ್ಲಿಯೂ ಸ್ವತಂತ್ರ ಟಿಬೆಟನ್ ಕನಸಿದೆ. ಆ ಕನಸಿನ ನನಸಿಗಾಗಿ ಅವರು ಅನುಸರಿಸುತ್ತಿರುವುದು ಅಹಿಂಸಾ ಮಾರ್ಗ.

ಇನ್ನೊಂದು ಕಾರಣಕ್ಕಾಗಿಯೂ ನಾವು ಟಿಬೆಟನ್ನರ ಕಾಲೋನಿಗೆ ಭೇಟಿ ನೀಡಬೇಕು. 1947ರ ನಂತರ ದೇಶದಲ್ಲಿ ಹುಟ್ಟಿದ ಯಾರಿಗೂ ಕೂಡ ಸ್ವಾತಂತ್ರ್ಯ ಹೋರಾಟದ ಅನುಭವ ಇಲ್ಲ. ಸ್ವಾತಂತ್ರ್ಯದ ಹಸಿವು ಹೇಗಿರುತ್ತದೆ ಎನ್ನುವುದನ್ನು ತಿಳಿಯುವುದಕ್ಕಾದರೂ ನಾವು ಟಿಬೆಟನ್ನರ ಕಾಲೋನಿಗೆ ಹೋಗಬೇಕು. ನೀವೂ ಹೋಗಿ ಬನ್ನಿ. ಜೊತೆಗೆ ಮಕ್ಕಳನ್ನೂ ಕರೆದುಕೊಂಡು ಹೋಗಿ.

(ಇಂಡಿಯಾ ಟಿಬೆಟ್ ಸಮನ್ವಯ ಸಮಿತಿಯ ಆಹ್ವಾನದ ಮೇರೆಗೆ ಲೇಖಕರು ಧರ್ಮಶಾಲಾದಲ್ಲಿ ನಡೆದ ಟಿಬೆಟ್ ಪ್ರಜಾಪ್ರಭುತ್ವ 65ನೇ ದಿನಾಚರಣೆಯಲ್ಲಿ ಭಾಗಿಯಾಗಿದ್ದರು.) ❖

## ಮುನ್ನೋಟ 14-09-2025 ರಿಂದ 20-09-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1
ಮನಸ್ಸಿನಲ್ಲಿ ಕೆಲಸ ಮಾಡುವ ಹುಮ್ಮಸ್ಸು ತುಂಬಿರುತ್ತದೆ. ಆದಾಯವು ಸ್ವಲ್ಪ ಉತ್ತಮಗೊಳ್ಳುತ್ತದೆ. ಹಿರಿಯರನ್ನು ಒಲಿಸಿಕೊಂಡು ಈಗ ನಿಮ್ಮ ಕೆಲಸ ಕಾರ್ಯಗಳನ್ನು ಸಾಧಿಸುವಿರಿ. ಸ್ಥಿರಾಸ್ತಿಯನ್ನು ಕೊಳ್ಳಲು ಬೇಕಾದ ಹಣದ ಮಾರ್ಗವು ಗೋಚರಿಸುತ್ತದೆ. ಭೂಮಿಯ ವ್ಯವಹಾರವನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಾರದ ಆರಂಭ ಅತ್ಯಂತ ಆನಂದದಾಯಕವಾಗಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ನೀವು ಸಹೋದರಿಯರ ಸಹಕಾರ ನಿರೀಕ್ಷಿಸಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಕಾಲ. ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬೇಕಾದವರಿಗೆ ಔಷಧಿಯಿಂದ ಪರಿಹಾರ ದೊರೆಯಬಹುದು. ಸಂಗಾತಿ ಕಡೆಯವರಿಂದ ನಿಮಗೆ ನಿರೀಕ್ಷಿತ ಸಹಕಾರ ದೊರೆಯುವುದಿಲ್ಲ. ಆದಾಯದಲ್ಲಿ ಅನಿರೀಕ್ಷಿತ ಏರುಪೇರುಗಳಾಗಬಹುದು.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಅಧ್ಯಾಪಕರಿಗೆ ಸಮಾಜದಿಂದ ಉತ್ತಮ ಗೌರವ ದೊರೆಯುತ್ತದೆ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಬಂಧುಗಳಲ್ಲಿ ಕೆಲವರು ನಿಮ್ಮ ಕೆಲಸ ಕಾರ್ಯಗಳಿಗೆ ಬೆಂಬಲ ನೀಡುವರು. ಸರ್ಕಾರಿ ಭೂಮಿ ವ್ಯವಹಾರ ಮಾಡುವವರಿಗೆ ಆದಾಯವು ಹೆಚ್ಚುತ್ತದೆ. ಆಯುಧಗಳನ್ನು ತಯಾರು ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಯ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು. ಕೆಲವರಿಗೆ ದೂರ ಪ್ರಯಾಣದ ಯೋಗವಿರುತ್ತದೆ.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ
ಒಡವೆಗಳ ಬಗ್ಗೆ ಹೆಚ್ಚು ಚಿಂತನೆ ಮಾಡುವಿರಿ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಭಾಷಣಕಾರರಿಗೆ ಉತ್ತಮ ವೇದಿಕೆ ದೊರೆಯುತ್ತದೆ. ಜನರೊಡನೆ ಬುದ್ಧಿವಂತಿಕೆಯಿಂದ ವ್ಯವಹರಿಸುವುದನ್ನು ಕಲಿಯುವಿರಿ. ಆಸ್ತಿ ವ್ಯವಹಾರ ಮಾಡುವವರಿಗೆ ಅವರ ಆಸೆ ಈಡೇರುತ್ತದೆ. ವಿದ್ಯಾರ್ಥಿಗಳಿಗೆ ಸ್ವಲ್ಪ ಗಲಿಬಿಲಿಯಾಗಿ ಫಲಿತಾಂಶ ಕಡಿಮೆಯಾಗಬಹುದು. ಆಯುರ್ವೇದ ವೈದ್ಯರಿಗೆ ಬೇಡಿಕೆ ಹೆಚ್ಚಾಗುತ್ತದೆ.

**ಸಿಂಹ** — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಬುದ್ಧಿವಂತಿಕೆಯಿಂದ ಗೌರವವನ್ನು ಸಂಪಾದನೆ ಮಾಡಿಕೊಳ್ಳುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸಕಾರ್ಯಗಳಿಗೆ ಬಂಧುಗಳಿಂದ ಸ್ವಲ್ಪ ಮಟ್ಟಿನ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಕಾಲ. ಕೆಲವರಿಗೆ ತಲೆನೋವು ಕಾಣಿಸಿಕೊಳ್ಳಬಹುದು. ಸಂಗಾತಿಯು ಕೇಳುವ ಪ್ರಶ್ನೆಗಳಿಗೆ ನಿಮ್ಮಲ್ಲಿ ಉತ್ತರವಿರುವುದಿಲ್ಲ. ಕಾನೂನಿನ ತೊಡಕುಗಳು ಎದುರಾಗುವ ಸಂದರ್ಭಗಳಿವೆ. ರಾಜಕಾರಣಗಳಿಗೆ ಸ್ವಲ್ಪ ಹಿನ್ನಡೆಯಾಗುತ್ತದೆ.

**ಕನ್ಯಾ** — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು. ಒರಟು ಮಾತಿನಿಂದ ಯಾವುದೇ ಪ್ರಯೋಜನವಿರುವುದಿಲ್ಲ. ಬಂಧುಗಳಿಂದ ಸ್ವಲ್ಪ ಆರ್ಥಿಕ ಸಹಾಯ ದೊರೆಯುತ್ತದೆ. ಸಂಸಾರದಲ್ಲಿ ಶಾಂತಿ ಮೂಡುತ್ತದೆ. ವಿದ್ಯಾರ್ಥಿಗಳಿಗೆ ಫಲಿತಾಂಶದಲ್ಲಿ ಹಿನ್ನಡೆಯಾಗಬಹುದು.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಮುನ್ನುಗ್ಗುವ ಹುಮ್ಮಸ್ಸು ನಿಮ್ಮಲ್ಲಿ ಇರುತ್ತದೆ. ವೃತ್ತಿಯಲ್ಲಿ ಹೆಚ್ಚು ಆದಾಯವನ್ನು ಗಳಿಸುವ ಸಾಧ್ಯತೆಗಳಿವೆ. ಮಹಿಳೆಯರ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು. ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸಬಹುದು. ವಿದೇಶದಲ್ಲಿ ಓದಬೇಕೆನ್ನುವರ ಆಸೆ ಈಗ ಕೈಗೂಡುತ್ತದೆ. ಸಂಗಾತಿಯು ನಿಮ್ಮೊಡನೆ ಬಹಳ ಹೊಂದಿಕೊಳ್ಳುವರು. ತಂದೆಯಿಂದ ಸಲಹೆಗಳ ಜತೆಗೆ ಆರ್ಥಿಕ ಸಹಾಯವನ್ನು ನಿರೀಕ್ಷೆ ಮಾಡಬಹುದು. ವೃತ್ತಿಯಲ್ಲಿ ಹೆಚ್ಚು ಅನುಕೂಲವಿರುತ್ತದೆ.

**ವೃಶ್ಚಿಕ** — ವಿಶಾಖಾ 4 ಅನೂರಾಧ, ಜ್ಯೇಷ್ಠ
ಮನಸ್ಸಿನಲ್ಲಿ ಒಂದು ರೀತಿ ಶಕ್ತಿ ಕುಂದಿದಂತೆ ಭಾಸವಾಗುವುದು. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳ ಸಹಕಾರ ನಿರೀಕ್ಷಿತ ಮಟ್ಟದಲ್ಲಿ ದೊರೆಯುವುದಿಲ್ಲ. ವಿದ್ಯಾರ್ಥಿಗಳ ಅಪೇಕ್ಷಿತ ಫಲಿತಾಂಶ ದೊರೆಯುವುದು ಕಷ್ಟ. ಕೃಷಿ ಸಂಶೋಧಕರಿಗೆ ಬಹಳ ಗೌರವ ಸಿಗುತ್ತದೆ. ಶಸ್ತ್ರಚಿಕಿತ್ಸಕರಿಗೆ ಬೇಡಿಕೆ ಹೆಚ್ಚುತ್ತದೆ. ಪ್ರೀತಿ ಪ್ರೇಮದಲ್ಲಿರುವವರು ಯಶಸ್ಸನ್ನು ಕಾಣಬಹುದು. ನಿಮ್ಮ ಮಾನಸಿಕ ಶಾಂತಿಗಾಗಿ ದೈವ ಕಾರ್ಯಗಳನ್ನು ಮಾಡುವಿರಿ.


**ಧನುಸ್ಸು** — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ವಿದೇಶಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದೇಶಗಳಲ್ಲಿ ಮನೆಪಾಠ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಶತ್ರುಗಳ ಬಗ್ಗೆ ಸಾಕಷ್ಟು ಎಚ್ಚರ ವಹಿಸುವಿರಿ. ಕೃಷಿ ಭೂಮಿಯ ವ್ಯಾಪಾರ ಮಾಡುವವರಿಗೆ ಲಾಭವಿರುತ್ತದೆ. ಕೃಷಿಯನ್ನು ಅಧ್ಯಯನ ಮಾಡುತ್ತಿರುವವರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ಸಂಗಾತಿಯ ಸಂಪಾದನೆಯಲ್ಲಿ ಏರಿಕೆಯನ್ನು ಕಾಣಬಹುದು.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವಾರದ ಆರಂಭದಲ್ಲಿ ಸ್ವಲ್ಪ ಜಡತ್ವ ಇರುತ್ತದೆ. ವಿದೇಶಿ ವ್ಯವಹಾರಗಳಿಂದ ಹೆಚ್ಚು ಲಾಭವನ್ನು ಗಳಿಸಬಹುದು. ರಾಜಕಾರಣಿಗಳು ಮಾತನಾಡುವಾಗ ಎಚ್ಚರಿಕೆ ಇರಲಿ. ನಿಮ್ಮ ವಿರುದ್ಧ ಕೆಲಸ ಮಾಡುತ್ತಿರುವ ಹಿತ ಶತ್ರುಗಳು ಬಗ್ಗೆ ತಿಳಿಯುತ್ತದೆ. ನಿಮ್ಮ ಕುಟುಂಬದಲ್ಲಿ ಒಮ್ಮತ ಮೂಡುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಉದ್ಯೋಗದಲ್ಲಿ ಅಭಿವೃದ್ಧಿ ಇರುತ್ತದೆ.

**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಕೆಲವರಿಗೆ ವಿದೇಶ ವ್ಯಾಮೋಹ ಜಾಸ್ತಿಯಾಗುತ್ತದೆ. ಆದಾಯವು ಕಡಿಮೆ ಇರುತ್ತದೆ. ಭೂಮಿ ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಆಸ್ತಿ ಕೊಳ್ಳುವ ಯೋಗ ನಿಮಗಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸುತ್ತದೆ. ಸಂಗಾತಿಯ ಸಹಕಾರದಿಂದ ಸರ್ಕಾರಿ ವ್ಯವಹಾರಗಳಲ್ಲಿ ಅನುಕೂಲವಾಗುತ್ತದೆ. ಸರ್ಕಾರಿ ವ್ಯವಹಾರಗಳಿಂದ ಆದಾಯ ಹೆಚ್ಚುತ್ತದೆ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಒಂದು ರೀತಿಯ ಕೀಳರಿಮೆ ನಿಮ್ಮನ್ನು ಕಾಡಬಹುದು. ಕೃಷಿಯಿಂದ ಆದಾಯವಿರುತ್ತದೆ. ಒಡಹುಟ್ಟಿದವರ ಸಹಕಾರ ನಿಮಗೆ ದೊರೆಯುತ್ತದೆ. ಸ್ಥಿರಾಸ್ತಿ ಕೊಳ್ಳುವ ವಿಚಾರದಲ್ಲಿ ಈಗ ಮುಂದುವರೆಯಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ. ತಲೆನೋವು ಕೆಲವರನ್ನು ಕಾಡಬಹುದು.

## ಪದಬಂಧ 2909



**ಮೇಲಿನಿಂದ ಕೆಳಕ್ಕೆ**

| | | |
|---|---|---|
| 1. | ವಸುಧೆ ಹೊರುವವಳು, ಕೊಡುವವಳು | 2 |
| 2. | ನಲ್ಲನ ಒಳ್ಳೆಯ ಮಾತು | 3 |
| 3. | ಜನಪ್ರಿಯವಾಗಿರುವ ಸಾರು | 2 |
| 4. | ಇಲ್ಲ ಎಂದು ಹೇಳುವ ಅಲ್ಪಖಾರ | 3 |
| 6. | ಲಯವಾಗಬಹುದಾದ ಮನೆ | 3 |
| 7. | ಮನೆಮನೆಗೂ ಇರಬೇಕಾದ ವೃಕ್ಷ | 2 |
| 8. | ಕರಕ್ಕೆ ಬರುವ ಎಕ್ಕಡ | 2 |
| 10. | ಪ್ರಪಂಚಕ್ಕೇ ಜನ್ಮಕೊಟ್ಟ ಮಾತೆ | 5 |
| 11. | ಭುವಿ ಭಾನು ಸೇರಿದ ದಿಕ್ಕಿನ ಅನಂತತೆಯಲ್ಲಿ ಕಾಣುವ ಅಂತರ | 5 |
| 13. | ಸಣ್ಣದಾದ ಈ ಮತ್ಸ್ಯಕ್ಕೆ ಬೇಡಿಕೆ ಹೆಚ್ಚು | 5 |
| 14. | ಮನಸ್ಸಿಗೆ ಹಿತವೆನಿಸುವ ನೋಟದ ಭಾಗ್ಯ ಕೊಡುವವಳು | 5 |
| 16. | ಮಲಗುವ ಈ ಮೆತ್ತೆ ಕಾಲುಚಾಚುವಷ್ಟಿದ್ದರೆ ಸಾಕು | 3 |
| 17. | ಘಟನೆಯ ಸ್ವಾರಸ್ಯಕರ ನಿರೂಪಕ | 2 |
| 18. | ದುಃಖವನ್ನು ಹೊರಹಾಕುವ ಕಣ್ಣೀರು | 2 |
| 19. | ಒಳ್ಳೆಯತನಕ್ಕೆ ಸಿಕ್ಕ ಗೆಲುವು | 3 |
| 21. | ತೇರಿನ ಭಾಗವೇ ಇದು | 3 |
| 23. | ದೀರ್ಘವಾದ ಬಿಡುವು | 2 |
| 24. | ಈ ವಿವೇಕ ಸೇರಿದರೆ ಹೆಣ್ಣಿನ ಹೆಸರಾಗುತ್ತದೆ | 2 |

**ಎಡದಿಂದ ಬಲಕ್ಕೆ**

| | | |
|---|---|---|
| 1. | ಒಂದೇ ಸಮನೆ ಭೋರ್ಗರೆವ ಭೋಜ ಪಟ್ಟಣ | 5 |
| 4. | ದೇವಿ ಆರಾಧನೆಯ ಒಂಭತ್ತು ಇರುಳು | 4 |
| 5. | ಹನುಮನೆತ್ತಿದ ಜೀವ ಕೊಡುವ ಪರ್ವತ | 4 |
| 7. | ಮಡಚಿದ ವಸ್ತ್ರದ ಪದರದಿಂದ ಮೂಡಿದ ಗೆರೆ | 3 |
| 9. | ಸೂರ್ಯನೊಡನೆ ವಿರಳವಾದ ಶಶಿಯ ಸಮಾಗಮ | 5 |
| 12. | ರಸವನ್ನು ಆಸ್ವಾದಿಸುವವರಿಗೆ ಇಷ್ಟವಾದ ರಾಗ | 5 |
| 15. | ಪರಿಮಳಯುಕ್ತ ನುಡಿಯ ಚಂದನದ ದೇಗುಲ ನಮ್ಮ ನಾಡು | 5 |
| 16. | ನಷ್ಟವನ್ನು ಮತ್ತು ಅಪಾಯವನ್ನು ಉಂಟುಮಾಡುವಂತದ್ದು | 5 |
| 18. | ಸಂಶಯ ಪಡು | 5 |
| 20. | ಹೊರಡು, ವಾಪಸ್ಸಾಗು | 3 |
| 22. | ಜಾನಪದದ ಗೆಳೆಯ, ಹೆಣ್ಣಿನ ಪ್ರಿಯಕರ | 4 |
| 24. | ಆಶ್ವಯುಜದ ದೊಡ್ಡ ಅಮಾವಾಸ್ಯೆ | 4 |
| 25. | ಕುಲವನ್ನು ಲೆಕ್ಕಹಾಕುವ ಸರ್ಕಾರಿ ಪ್ರಕ್ರಿಯೆ | 5 |

### ಪದಬಂಧ ಉತ್ತರ -2908

**ಮೇಲಿಂದ ಕೆಳಕ್ಕೆ**


1.ನಿರ್ವಾಚ 2.ರಜಕ 3.ಜಯಹೇ 4.ರವಿಕೆ 7.ಲಹರಿ 9.ಸಂಹಾರ 10.ಸಿಡುಕು 11.ವರಸೆ 12.ಯಶೋದಾ 13.ಅಟವೀ 14.ಸುಧೀರ 16.ಮೀಸಲು 18.ಶೂದ್ರಕ 20.ಸರಸ 21.ತುರಗ 22.ಹಿಡಿಕೆ 23.ರಬ್ಬರು

**ಎಡದಿಂದ ಬಲಕ್ಕೆ**

1.ನಿರಾಕಾರ 3.ಜರಾಸಂಧ 5.ಜವರಾಯ 6.ಚಲದಂಕ 8.ಹೇಮಸಂಕಲೆ 10.ಸಿರಿಭೂವಲಯ 13.ಅರಕಾಸು 15.ಕುಡಿಮೀಸೆ 17.ದಾನವೀರಶೂರ 19.ಅಸಲುಮಾತು 22.ಹಿತಕರ 24.ರನ್ನವಾಡಿ 25.ಸರ್ವಸಂಗ 26.ಕೆಲವಾರು

# ‘ನನ್ನದು ಚಳವಳಿಯಲ್ಲ, ಪ್ರಯೋಗ’

• ಸಂದರ್ಶನ: ಸುದೇಶ ದೊಡ್ಡಪಾಳ್ಯ



ನಾಗತಿಹಳ್ಳಿ ಚಂದ್ರಶೇಖರ

**ನಾಗತಿಹಳ್ಳಿ ಚಂದ್ರಶೇಖರ**–ಸಾಹಿತಿ, ಸಿನಿಮಾ ನಿರ್ದೇಶಕ, ನಿರ್ಮಾಪಕ, ಪ್ರವಾಸಿ ಹಾಗೂ ಗ್ರಾಮಮುಖಿ. ಇವರು ತಮ್ಮ ಬರಹಗಳಲ್ಲಿ ರೆಕ್ಕೆ ಮತ್ತು ಬೇರುಗಳನ್ನು ರೂಪಕವಾಗಿ ಹೆಚ್ಚು ಬಳಕೆ ಮಾಡುತ್ತಾರೆ. ಇದನ್ನು ತಮ್ಮ ಬದುಕಿನಲ್ಲೂ ಅಳವಡಿಸಿಕೊಂಡಿದ್ದಾರೆ. ಊರು–ಕೇರಿ, ದೇಶ–ವಿದೇಶಗಳನ್ನು ಸುತ್ತುತ್ತಾ, ಜಗಲಿಯಿಂದ ಜಗತ್ತಿನವರೆಗೂ ನೋಟ ಬೀರಿದ್ದಾರೆ.

ಇವರು ನಲವತ್ತು ವರ್ಷಗಳ ಹಿಂದೆ ಆರಂಭಿಸಿದ ‘ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ’ಯು ಸಮಾಜಮುಖಿಯಾಗಿದೆ. ಕಳೆದ ಹಲವು ವರ್ಷಗಳಿಂದ ಗ್ರಾಮಮುಖಿಯಾಗಿದೆ. ಈ ವೇದಿಕೆದಿಂದ ನಾಗತಿಹಳ್ಳಿ ತಮ್ಮೂರಲ್ಲಿ ಹತ್ತಾರು ರಚನಾತ್ಮಕ ಕೆಲಸಗಳನ್ನು ಮಾಡುತ್ತಿದ್ದಾರೆ. ಇದು ಅಲ್ಲಿನ ಜನರ ಬದುಕನ್ನು ಹಸನುಗೊಳಿಸುತ್ತಿದೆ. ಇದೊಂದು ಚಳವಳಿಯಲ್ಲ, ಯಾರು ಬೇಕಾದರೂ ಮಾಡಬಹುದಾದ ಪ್ರಯೋಗ ಎನ್ನುತ್ತಾರೆ.

**• ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ ಹುಟ್ಟಿದ್ದು ಹೇಗೆ?**

ಅದು ರೈತ ಚಳವಳಿ ಮತ್ತು ಪರಿಸರ ಚಳವಳಿಗಳು ಆರಂಭಿಕ ಸ್ಥಿತಿಯಲ್ಲಿದ್ದ ಕಾಲಘಟ್ಟ. ಅವೆರಡರಲ್ಲೂ ನಾನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದೆ. ಆಗಷ್ಟೇ ಕನ್ನಡ ಎಂಎ ಮುಗಿಸಿದ್ದೆ. ಮೇಲ್ನೋಟಕ್ಕೆ ಪುಸ್ತಕ ಪ್ರಕಟಣೆಗೆ ಒಂದು ವೇದಿಕೆ ಬೇಕಿತ್ತು. ಆದರೆ ಅದರಾಚೆಯ ನೂರಾರು ಕನಸುಗಳಿದ್ದವು. ವೇದಿಕೆಯನ್ನು ಮೈಸೂರಿನಲ್ಲಿ ಆಗಸ್ಟ್ 15,1985ರಂದು ಕೆ.ರಾಮದಾಸ್, ಪೋಲಂಕಿ ರಾಮಮೂರ್ತಿ, ಬಿ.ವಿ.ವೈಕುಂಠರಾಜು ಉದ್ಘಾಟಿಸಿದರು. ನಲವತ್ತು ವಸಂತಗಳು ಹೇಗೆ ಕಳೆದವು ಎಂದು ಈಗ ಅಚ್ಚರಿಯಾಗುತ್ತಿದೆ.

**• ಸಾಹಿತ್ಯ ಮತ್ತು ಸಾಂಸ್ಕೃತಿಕವಾಗಿ ‘ಅಭಿವ್ಯಕ್ತಿ’- ವಿವರಿಸುವಿರಾ?**

ಮೊದಲ ಇಪ್ಪತ್ತು ವರ್ಷ ಪುಸ್ತಕ ಪ್ರಕಟಣೆಯಿಂದಾಚೆ ಜಿಗಿದು ವೈಚಾರಿಕ ತಳಹದಿಯ ಮೇಲೆ ಸರಳ, ಅಂತರ ಜಾತಿ ಮತ್ತು ಅಂತರ ಧರ್ಮೀಯ ಮದುವೆಗಳನ್ನು ಏರ್ಪಡಿಸಿದೆ. ಎಲ್ಲಕ್ಕೂ ಮೊದಲು ಆಗಸ್ಟ್ 15, 1986 ರಂದು ಪುಸ್ತಕ ಬಿಡುಗಡೆಯ ಮೂಲಕ ನಾನೇ ಸರಳ ಅಂತರ ಜಾತಿ ವಿವಾಹ ಮಾಡಿಕೊಂಡೆ. ಮಾಡಿಸಿದವರು ದಲಿತ ಕವಿ ಸಿದ್ದಲಿಂಗಯ್ಯ, ಇಂದೂಧರ ಹೊನ್ನಾಪುರ ಮುಂತಾದವರು. ನನ್ನ ಅಭಿವ್ಯಕ್ತಿ ಕ್ರಮೇಣ ಎಲ್ಲರ ಅಭಿವ್ಯಕ್ತಿಯಾಗತೊಡಗಿತು. ವೈಚಾರಿಕ ವೇದಿಕೆಯಾಯಿತು.

**• ಅಭಿವ್ಯಕ್ತಿಗೆ ನಲವತ್ತರ ಪ್ರಾಯ. ಹಿಂದಿರುಗಿ ನೋಡಿದರೆ ಅದು ಒಂದು ಚಳವಳಿ ಎನಿಸುತ್ತಿದೆಯೆ?**

ಇಲ್ಲ. ಅದರ ಬದಲು ಎಲ್ಲರೂ ಮಾಡಬಹುದಾದ ಒಂದು ‘ಪ್ರಯೋಗ’ ಅನ್ನಿಸುತ್ತೆ. ಕಾರಣ ಚಳವಳಿ ಪದದ ಅರ್ಥ, ಅಪಾರ್ಥವಾಗಿದೆ. ಅನೇಕ ನಾಯಕರು-ಬರಹಗಾರರೂ ಕೂಡಾ-ಪ್ರಭುತ್ವವನ್ನು ಟೀಕಿಸುತ್ತಲೇ ಹಿಂಬಾಗಿಲಿನಿಂದ ವಿಧಾನಸೌಧವನ್ನು ಪ್ರವೇಶಿಸಿ ಸ್ಥಾನಮಾನಗಳ ಸ್ವಲಾಭಕ್ಕೆ ಚಳವಳಿಯನ್ನು ಖಾಯಂ ಅಡವಿಟ್ಟು ತಾವು ಫಲಾನುಭವಿಗಳಾಗಿದ್ದಾರೆ. ಇಂಥ ‘ಚಳವಳಿ’ಗಳು ಮತ್ತು ನಾಯಕರು ನಿರುಪಯುಕ್ತ ಮತ್ತು ಅಪಾಯಕರ. ಇದರಿಂದ ನಾನು ಚಳವಳಿಗಳಿಂದ ದೂರ ಸರಿದೆ. ಅಭಿವ್ಯಕ್ತಿ ಚಳವಳಿ ಅಲ್ಲ. ಅದು ಪ್ರಯೋಗಾಲಯ. ನಮ್ಮ ಪ್ರಯೋಗಕ್ಕೆ ನಮ್ಮ ಹಳ್ಳಿಯೇ ನಮಗೆ ಪ್ರಯೋಗಾಲಯವಾಯಿತು. ನನ್ನ ಚಳವಳಿಯ ಪಯಣದ ಕೊನೆಯ ಬಿಂದು ನಾಗತಿಹಳ್ಳಿ. ನಮ್ಮ ಅಭಿವ್ಯಕ್ತಿಯಲ್ಲಿ ಇದುವರೆಗೂ ಅಧ್ಯಕ್ಷ , ಕಾರ್ಯದರ್ಶಿ, ಖಜಾಂಚಿ ಎಂದಿಲ್ಲ. ಎಲ್ಲ ಕೂಡಿ ಎಲ್ಲ ಕೆಲಸ ಮಾಡುವುದು ನಮ್ಮ ಕ್ರಮ. ಪಕ್ಷಾತೀತವಾಗಿದ್ದೇವೆ. ಇದುವರೆಗೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಧನಸಹಾಯವನ್ನು ನಾವು ಪಡೆದಿಲ್ಲ ಮತ್ತು ಪಡೆಯುವುದಿಲ್ಲ. ಕಳೆದ ಇಪ್ಪತ್ತು ವರ್ಷಗಳಿಂದ ಅದು ಈಗ ನಿಚ್ಚಳವಾಗಿ ಗ್ರಾಮಮುಖಿಯಾಗಿದೆ. ರಂಗಭೂಮಿ, ಶಿಕ್ಷಣ, ವೈದ್ಯಕೀಯ, ಕೃಷಿ, ಕೌಶಲ್ಯ ಮುಂತಾದ ನಿಯತಕಾಲಿಕ ಚಟುವಟಿಕೆಗಳೊಂದಿಗೆ ಪ್ರತಿ ಯುಗಾದಿಯಲ್ಲಿ ‘ನಾಗತಿಹಳ್ಳಿ ಸಂಸ್ಕೃತಿ ಹಬ್ಬ’ ನಡೆಸುತ್ತೇವೆ. ಎಲ್ಲ ಕ್ಷೇತ್ರದ ಎಲ್ಲ ಗಣ್ಯರು ಈ ಹಬ್ಬಕ್ಕೆ ಸಾಕ್ಷಿಯಾಗಿದ್ದಾರೆ.

**• ಹಳ್ಳಿಯತ್ತ ಮುಖ ಮಾಡಿದ್ದೀರಿ...**

ವ್ಯಕ್ತಿ ತನ್ನ ಹೆಸರಿನ ಜತೆ ಊರಿನ ಹೆಸರಿಟ್ಟುಕೊಳ್ಳುವುದು ಅಭಿಮಾನದ ಸಂಕೇತ. ಆದರೆ ಅದಷ್ಟರಿಂದಲೇ ಹಳ್ಳಿಗಳ ಉದ್ಧಾರ ಆಗದು. ನಾನು ಪ್ರಜ್ಞಾಪೂರ್ವಕವಾಗಿ ನನ್ನ ಹಳ್ಳಿಗೆ ಅಂಟಿಕೊಂಡೆ. ಇದು ಬರಿಯ ಭಾವನಾತ್ಮಕ ನಂಟು ಅಲ್ಲ. ಭಾವನಾತ್ಮಕವಾದರೆ ಅದು ಅಲ್ಪ-ಕಾಲೀನವಾಗುತ್ತದೆ. ನನ್ನದು ದೀರ್ಘಕಾಲೀನ ನಂಟು ಮಾತ್ರವಲ್ಲ; ಕೊನೆ ಇರದ, ದಣಿವಿರದ ಪಯಣ. ಅಭಿವ್ಯಕ್ತಿ ಟಿಸಿಲೊಡೆದು ಯುವಕರ, ಯುವತಿಯರ ಸಂಘಟನೆಯಾಗಿ ಬೆಳೆದಿದೆ.

**• ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಯಶಸ್ಸಿನ ಬಗ್ಗೆ ಹೇಳಿ.**


ಇದು ನನಗೆ ಅಪಾರ ನೆಮ್ಮದಿ ಕೊಟ್ಟಿರುವ ಸಂಗತಿ. ಮೊದಲು ರಂಗಮಂದಿರ ಆಯಿತು. ಗ್ರಂಥಾಲಯ ಆಯಿತು. ಕಂಪ್ಯೂಟರ್ ಸೆಂಟರ್ ಆಯಿತು. ಈ ಮೂರು ಕೇಂದ್ರಗಳ ಉದ್ದೇಶ ಕಲೆ, ಶಿಕ್ಷಣ, ವಿಜ್ಞಾನಗಳ ಅರಿವು ಮೂಡಿಸುವುದು. ಆದರೆ ಇವು ತತ್‌ಕ್ಷಣದ ಹಸಿವು ನೀಗಿಸಲಾರವು. ಹಳ್ಳಿಯ ಹೆಣ್ಣುಮಕ್ಕಳ ಆರ್ಥಿಕ ಸಬಲೀಕರಣ ಮಾತ್ರ ಇದಕ್ಕೆ ಮದ್ದು. ಆಗ ಹೊಳೆದದ್ದು ‘ಅಭಿವ್ಯಕ್ತಿ ಹಾಲು ಉತ್ಪಾದಕರ ಮಹಿಳಾ ಸಂಘ’. ಮೈಸೂರು ಡೇರಿಯ ನನ್ನ ದಿನಗೂಲಿಯ ಪೂರ್ವಾಶ್ರಮದ ಅನುಭವ ಇತ್ತಲ್ಲ? ಬಯಲು ಸೀಮೆ ಮತ್ತು ಬರಪೀಡಿತ ಪ್ರದೇಶಗಳಲ್ಲಿ ಇದು ಯಶಸ್ವಿ ಆಗಲಾರದು ಎಂದು ಕೆಲವರು ಊಹಿಸಿದ್ದರು. ಆದರೆ ನನಗೆ ನಂಬಿಕೆ ಇತ್ತು. ವಿವಿಧ ರಾಜ್ಯಗಳಿಗೆ ಕರೆದುಕೊಂಡು ಹೋಗಿ ಅಲ್ಲಿನ ಯಶಸ್ವೀ ಡೇರಿ ಉದ್ಯಮ ತೋರಿಸಿದೆ. ದೈನಂದಿನ ನಲವತ್ತು ಲೀಟರಿನಿಂದ ಆರಂಭವಾದದ್ದು ಈಗ ಸಾವಿರ ಲೀಟರ್ ದಾಟಿದೆ. ವಾರಕ್ಕೊಮ್ಮೆ ಮನೆ ಬಾಗಿಲಿಗೆ ಹಣ ಬರುತ್ತಿದೆ. ಹಣ ಉಳಿತಾಯಕ್ಕೆ ನಮ್ಮ ಗ್ರಾಮದಲ್ಲೇ ಬ್ಯಾಂಕ್ ಆರಂಭಿಸಿದೆ. ಗ್ರಾಮ ಸ್ವರಾಜ್ಯ ಮತ್ತು ವಿಕೇಂದ್ರೀಕರಣದತ್ತ ಒಂದು ಪುಟ್ಟ ಹೆಜ್ಜೆ. ಇದನ್ನು ಚಳವಳಿ ಎನ್ನುವುದಕ್ಕಿಂತ ಎಲ್ಲರೂ ಮಾಡಬಹುದಾದ ಪ್ರಯೋಗ ಅನ್ನಬಹುದು.

**• ಅಭಿವ್ಯಕ್ತಿಯ ಮುಂದಿನ ಹೆಜ್ಜೆಗಳು...**

ಹಾಲಿನ ಉತ್ಪಾದನೆ ಹೆಚ್ಚು ಮಾಡಿ ನಮ್ಮ ಗ್ರಾಮದಲ್ಲೇ ಶೀತಲೀಕರಣ ಕೇಂದ್ರ ತೆರೆಯಬೇಕು. ಹೊಳೆ, ಕೆರೆ ಇಲ್ಲದ ನಮ್ಮ ಊರಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಿದೆ. ಮತ್ತು ಇಡೀ ಹಳ್ಳಿಗೆ ಸೌರಶಕ್ತಿ ವ್ಯಾಪಿಸಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಸರ್ಕಾರೀ ಶಾಲೆಗೆ ಈಗಷ್ಟೇ ಶತಮಾನೋತ್ಸವ ತುಂಬಿದೆ. ಅಲ್ಲಿ ಕೊಠಡಿಗಳ ಕೊರತೆ ಇದೆ. ಮಕ್ಕಳ ಓದಿನತ್ತ ಹೆಚ್ಚಿನ ಗಮನ ಕೊಡಲು ನಿರ್ಧರಿಸಿದ್ದೇನೆ. ಪ್ರತಿ ತಿಂಗಳು ಅವರ ಪಠ್ಯಕ್ಕೆ ಪೂರಕವಾದ ವಿಶೇಷ ತರಗತಿಗಳನ್ನು ಐದು, ಆರು ಮತ್ತು ಏಳನೆ ತರಗತಿಯ ಮಕ್ಕಳಿಗೆ ಪಿಪಿಟಿ ಬಳಸಿ ತೆಗೆದುಕೊಳ್ಳುತ್ತಿದ್ದೇನೆ. ಇವೆಲ್ಲ ತತ್‌ಕ್ಷಣಕ್ಕೇ ಫಲಕೊಡದಿದ್ದರೂ ನಿಧಾನವಾಗಿ ನಾಳೆಗಳಲ್ಲಿ ಫಲ ಕೊಡಲಿವೆ. ಕೃಷಿ ಅಧ್ಯಯನ ಪ್ರವಾಸವನ್ನು ವಿದೇಶಗಳಿಗೂ ವಿಸ್ತರಿಸಬೇಕಿದೆ. ಬಹಳ ಮುಖ್ಯವಾದ ಸಮಾಧಾನಕರ ಸಂಗತಿ ಎಂದರೆ ಹಳ್ಳಿಯ ನನ್ನ ಸೋದರ ಸೋದರಿಯರು ಜವಾಬ್ದಾರಿ ತೆಗೆದುಕೊಳ್ಳುತ್ತಿದ್ದಾರೆ. ನಾನು ಸಾವಕಾಶವಾಗಿ ಬ್ಯಾಕ್ ಸೀಟ್ ಪ್ರೇಕ್ಷಕನಾಗುತ್ತಿದ್ದೇನೆ. ಇದೆಲ್ಲವೂ ವ್ಯಕ್ತಿ ಕೇಂದ್ರಿತವಾಗದೆ ತತ್ತ್ವ ಕೇಂದ್ರಿತವಾಗಬೇಕು ಎಂಬುದು ನನ್ನ ಆಶಯ. ❖

# ವಸಂತ, ಹೇಮಂತಗಳ ಸಹಜೀವನ-ಸಹಗಮನ

• ಎಚ್.ಎಸ್.ರಾಘವೇಂದ್ರ ರಾವ್





**ಸಂಗಮ ಕಥೆಗಳು**
ಲೇ: ರಾಜಲಕ್ಷ್ಮೀ ಎನ್.ರಾವ್
ಸಂ: ಚಂದನ್ ಗೌಡ
ಪ್ರ: ಸಂಕಥನ
ಸಂ: 9019529494

ಪುಟ: 320 ₹320

**ಎಪ್ಪತ್ತೈದು** ವರ್ಷಗಳ ಹಿಂದೆ, ವೀಣಾ ಶಾಂತೇಶ್ವರ, ವೈದೇಹಿಯರು ಹತ್ತು ವರ್ಷದ ಹುಡುಗಿಯರು. ಅಡಿಗ, ರಾಮಚಂದ್ರ ಶರ್ಮ, ಅನಂತಮೂರ್ತಿ ಮುಂತಾದವರ ರಾಜ್ಯಭಾರ ಮೊದಲಾಗಿತ್ತು. ಆಗ, ಹತ್ತೊಂಬತ್ತರ ತರುಣಿ. ಸಂವೇದನಶೀಲ ಇಂದ್ರಿಯಗಳು, ಮನಸ್ಸು, ಹೃದಯ ಪಡೆದವಳು. ಹಲವು ನಗರಗಳಲ್ಲಿ ಬೆಳೆದು ಕರ್ನಾಟಕದಲ್ಲಿ ಅಪರೂಪವಾದ ಸಮಾಜ, ಸಂಸ್ಕೃತಿಗಳಿಗೆ ತೆರೆದುಕೊಂಡವಳು. ಬಿ.ಎಂ.ಶ್ರೀ.ಯವರ ಮೊಮ್ಮಗಳು. ಕೇವಲ ಮೂರು ವರ್ಷದಲ್ಲಿ ಹತ್ತೋ ಹನ್ನೆರಡೋ ಕಥೆ ಬರೆದಳು. ಹೆಣ್ಣು-ಗಂಡುಗಳ ಚಲನಶೀಲ ಅಂತರಂಗಕ್ಕೆ ಭಾಷೆ-ಕನ್ನಡಿ ಹಿಡಿದಳು. ಅರಳುವ ಹೂವು, ಮತ್ತು ಅದನ್ನು ನಲುಗಿಸುವ ಹುಳ ಎರಡರ ಬಗ್ಗೆಯೂ ಬರೆದಳು. ಹೂವಿನ ಎರಡೂ ಸ್ಥಿತಿಗಳನ್ನು ಅನುಭವಿಸಿದಳು. ಅವಳ ಹೃದಯ, ಅನುರಕ್ತಿ-ವಿರಕ್ತಿಗಳ ‘ಸಂಗಮ’. ಪುರುಷ ಪ್ರಧಾನ ಸಮಾಜದಲ್ಲಿ ನಲುಗಿದ ಈ ಹೆಣ್ಣು ಒಟ್ಟು ‘ಮನುಷ್ಯ ಸನ್ನಿವೇಶ’ದ ಅರ್ಥವನ್ನು ಅರಸುತ್ತಾ ಬರವಣಿಗೆಗೆ, ಅಷ್ಟೇಕೆ ‘ಈ’ ಜೀವನಕ್ಕೆ ವಿದಾಯ ಹೇಳಿ ಬುದ್ಧನಂತೆ ಕಣ್ಮರೆಯಾದರು. ಆ ಕೆಲವು ಕಥೆಗಳು ಅಂದಿನ, ಇಂದಿನ, ಎಂದಿನ ಕಲಾವಿದರಿಗೆ ಮಾದರಿಯಾಗಿ ಉಳಿದಿವೆ.

ಆ ಹುಡುಗಿ ಈಗ ತೊಂಬತ್ತೊಂದರ ಹರೆಯದ, ಕಣ್ಣಲ್ಲಿ ತಿಳಿವಳಿಕೆ ಮಿನುಗುತ್ತಿರುವ ಚುರುಕು-ಚುಟುಕು ಮಾತುಗಳ ಹಿರಿಯರು. ‘ವಯಸ್ಸಾಗಿರುವ ದೇಹವೂ ನಾನಲ್ಲ, ಮನಸ್ಸೂ ನಾನಲ್ಲ,’ ನಾನು ಬೇರೆ ಎನ್ನಬಲ್ಲವರು. ಆ ಕಾಲದ ನೆನಪುಗಳಿನ್ನೂ ಮಸುಳಿಸಿಲ್ಲ. ಇವರು ರಾಜಲಕ್ಷ್ಮಿ ಎನ್. ರಾವ್. ಮಚಲೀಪಟ್ಟಣ-ಉತ್ತರಕಾಶಿಗಳ ಆಶ್ರಮಜೀವನವನ್ನು ಮೈಸೂರಿನಲ್ಲಿ ಮುಂದುವರಿಸಿದ್ದಾರೆ. ನಾವು-ನೀವು, ಅವರನ್ನು ಓದಬೇಕು. ಲೋಕವನ್ನು-ಭಾಷೆಯನ್ನು ಕಾಣುವ, ಒಳಗೊಳ್ಳುವ, ಬರೆಹದಲ್ಲಿ ಕಟ್ಟುವ ಬಗೆಗಳನ್ನು ಕಾಣಬೇಕು.

ಈ ಪುಸ್ತಕದಲ್ಲಿ ‘ಸಂಗಮ’(1956) ಸಂಕಲನದಲ್ಲಿದ್ದ ಹನ್ನೆರಡು ಮತ್ತು ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ಐದು ಕಥೆಗಳು, ಬಹುಮಟ್ಟಿಗೆ ‘ಡೆಕ್ಕನ್ ಹೆರಾಲ್ಡ್’ನಲ್ಲಿ ಬಂದ ಹನ್ನೆರಡು ಇಂಗ್ಲಿಷ್ ಕಥೆಗಳು, ಎರಡು ಮುಖ್ಯವಾದ ‘ಬೆಳಕಿಂಡಿ’ ಲೇಖನಗಳು ಇಷ್ಟೇ ಅವರ ಬರವಣಿಗೆ. ಆದರೆ ಅದೇ ಒಂದು ಜಗತ್ತು. ಸಂಪಾದಕರಾದ ಚಂದನ್ ಗೌಡ ಮೂರು ಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ದೀರ್ಘವಾದ ವಿಮರ್ಶೆಗೆ ಎಡೆಯಿಲ್ಲ. ಕೆಲವು ಅನಿಸಿಕೆಗಳು: ಹೆಣ್ಣು-ಗಂಡು, ಮನುಷ್ಯ-ಲೋಕ-ಪ್ರಕೃತಿ ಸಂಬಂಧದ ‘ಹೊರಗು’ ಮತ್ತು ‘ಘಟನೆ’ಗಳಿಗಿಂತ, ಅಂತರಂಗದ ಒಳ-ಚಲನೆಗಳು ಹಾಗೂ ಆ ಚಲನೆಗೆ ಕಾರಣವಾಗುವ ಒತ್ತಾಯಗಳು ಇಲ್ಲಿ ಮುಖ್ಯ. ಇವು ನಿರೂಪಿತ ‘ಕಥೆ’ಗಳಲ್ಲ. ಬದಲಾಗಿ ಒಂದು ಇನ್ನೊಂದನ್ನು ಬೆಳೆಸುವ ಚಿತ್ರಸಮುದಾಯ. ಖಚಿತವಾದ ‘ಫೆಮಿನಿಸ್ಟ್’ ತಿಳಿವಳಿಕೆಯು ಹೆಣ್ಣುಗಂಡುಗಳನ್ನು ದ್ವೇಷವಿರದೆ ಗ್ರಹಿಸುತ್ತದೆ. ಈ ಕೆಲಸದಲ್ಲಿ ಹೃದಯ, ಬುದ್ಧಿ ಮತ್ತು ವಿವೇಕ ಮೂರೂ ಇವೆ. ಕೇವಲ ಅನುಭವಗಳಲ್ಲ, ಅವುಗಳನ್ನು ಕುರಿತ ‘ಒಳಸರಿದ’ ರೂಪಕನಿಷ್ಠ ಚಿಂತನೆಯಿದೆ. ಇಲ್ಲಿನ ಜಾಣೆಯರಿಗೆ ತಮ್ಮ ಹಂಬಲ, ಶಕ್ತಿ, ಪ್ರೇಮ-ಕಾಮಗಳು ಗೊತ್ತು. ಅವನ್ನು ಬಳಸಿಕೊಳ್ಳುವ ಗಂಡುಹುನ್ನಾರಗಳು ಗೊತ್ತು. ಇದೇ ಉಪಾಯಗಳು, ತಮ್ಮ ‘ಸರ್ವೈವಲ್’ ಸಾಧನಗಳೆಂದೂ ಗೊತ್ತು. ಇಲ್ಲಿ ನಡೆಯುವುದು ‘ವೈಯಕ್ತಿಕ ನರಕ’ಗಳ ಮುಖಾಮುಖಿ. ಇಲ್ಲಿ ಸಾಮಾಜಿಕ ಒತ್ತಡಗಳಿಗೆ, ಶರಣಾಗುವ, ಎದುರಾಗುವ, ಪಲಾಯನ ಮಾಡುವ ಮನುಷ್ಯರು ಇಡಿಕಿರಿದಿದ್ದಾರೆ. ‘ಆವೇ ಮರಿಯಾ’, ಸಂಬಂಧಗಳನ್ನು ಬಿಡಿಸುವ-ಹಿಡಿಸುವ, ಕನಸು-ನನಸು-ಆಧ್ಯಾತ್ಮ-ಸಂಗೀತಗಳ ಸಂಕೀರ್ಣ ಕೂಡು ಬಿಂದು. ಟೋನಿ ಮಾಡಿದ ಆಯ್ಕೆ ಅಂತಹ ಅನೇಕರ ಆಯ್ಕೆ ಆಗುವುದಿಲ್ಲ. ‘ಫೀಡ್ರ’ದಂತಹ ಹಲವು ಕಥೆಗಳ ಅಪರಾಧೀಭಾವದ ಉರುಳು ಗೊತ್ತಾಗುವುದು ಕೊರಗಾಗಿ, ವಾದವಾಗಿ ಅಲ್ಲ, ಕಲಾತ್ಮಕ ಕಟ್ಟೋಣಗಳಾಗಿ. ಈ ಕಥೆಗಳು ಸ್ತ್ರೀವಾದವು ‘ಒಳಜಲ’ವಾಗಿ ಹರಿಯುವ ಅತ್ಯುತ್ತಮ ಮೂಲಮಾದರಿಗಳು. ನವ್ಯರಲ್ಲಿ ಸಹಜವಾಗಿದ್ದ ಸ್ವಾತಂತ್ರ್ಯಾನಂತರದ ನಿರಾಶೆಯನ್ನು ವರ್ಗವ್ಯತ್ಯಾಸಗಳಲ್ಲಿ ಗ್ರಹಿಸುವ ಒಳ್ಳೆಯ ಕಥೆಗಳು ರಾಜಲಕ್ಷ್ಮಿಯವರ ಪ್ರಧಾನ ಆಸಕ್ತಿಯಲ್ಲ. ಮಧ್ಯಮವರ್ಗದ ವಿದ್ಯಾವಂತರ ಜೀವನದ ಮೂಲಕವೇ ಎಲ್ಲರಿಗೂ ಮುಖ್ಯವೆನಿಸುವ ಶಕ್ತಿ ಈ ಕಥೆಗಳಿಗಿದೆ.

ಈ ಕಥೆಗಳ ವಿಶಿಷ್ಟತೆ ಅವುಗಳ ಕಲೆಗಾರಿಕೆ ಮತ್ತು ನಿರೂಪಣೆಯಲ್ಲಿದೆ. ಇವರದು ಸೂಕ್ಷ್ಮವಾದ ಇಂದ್ರಿಯಗ್ರಹಿಕೆ ಹಾಗೂ ಕಲ್ಪನಾಶಕ್ತಿಗಳ ‘ಸಂಗಮ’. ವಸ್ತುಗಳನ್ನು, ವಸ್ತುಲೋಕದ ಸಂಯೋಜನೆಗಳನ್ನು ನಿಶಿತ-ಖಚಿತವಾದ ಭಾಷೆಯ ಮೂಲಕ ಗ್ರಹಿಸುತ್ತಾರೆ. ಕತ್ತಲು-ಬೆಳಕು-ಕಪ್ಪು-ಕೆಂಪು-ಕಡಲು-ಮುಗಿಲು-‘ವಸ್ತು’ಗಳ ಮೂಲಕ ಮನೋವ್ಯಾಪಾರಗಳ ತಳಮಳಗಳನ್ನು ಬಿಡಿಸಿಡುವ ವ್ಯವಧಾನ ಅಸಮಾನವಾದುದು. ಯಾರೋ ಕುಡಿದ ‘ಟೀ ಕಪ್’ ತಳದಲ್ಲಿ ಇರುವ ಚರಟದ ವಿನ್ಯಾಸದಲ್ಲಿ ಒಂದು ಹೆಣ್ಣು ಪಾತ್ರವು ಹೃದಯ, ಭ್ರೂಣ, ಮತ್ತು ರಕ್ತಕಣಗಳನ್ನು ಕಾಣುತ್ತದೆ. ಕಪ್ಪನ್ನು ಅಲ್ಲಾಡಿಸಿದಾಗ ಒಂದು ಹನಿ ಚಹಾ ಇದೆಲ್ಲವನ್ನೂ ಮುಳುಗಿಸಿ ಬಿಡುತ್ತದೆ. ಈ ಕತೆಗಳಲ್ಲಿ ಇಂತಹ ನೂರಾರು ವಸ್ತುಪ್ರತಿರೂಪಗಳಿವೆ. ಇನ್ನೊಂದು ನಿದರ್ಶನ: ‘ಅವನನ್ನು ಮೊದಲ ಸಲ ಭೇಟಿಯಾದಾಗ ನನಗೆ ಹದಿನೆಂಟು ವರ್ಷ. ಅವನಿಂದ ದೂರವಾದಾಗ ಸರಿಯಾಗಿ ನೂರ ಹದಿನೆಂಟು ವರ್ಷ.’

ಇವರ ಹಿರಿಯ ಬಂಧುಗಳಾದ ತ್ರಿವೇಣಿಯವರ ಬರೆಹಗಳಿಗೆ ಹೋಲಿಸಿದರೆ ಎಷ್ಟೊಂದು ವ್ಯತ್ಯಾಸ!

ಅಖಿಲ-ಭಾರತ ಸಂದರ್ಭದಲ್ಲಿಯೂ ಪಥಪ್ರವರ್ತಕವಾದ, ಮುಖ್ಯವಾದ ಈ ಇಂಗ್ಲಿಷ್ ಕಥೆಗಳ ಪ್ರತ್ಯೇಕ ಓದಿನ ಅಗತ್ಯವಿದೆ. ಅವು ಮಹಿಳೆಯರ ಮನಃಪಟಲದ ತಲ್ಲಣ-ಬಿಡುಗಡೆಗಳ ದ್ವಿಭಾಷಿಕ, ಕಲಾತ್ಮಕ ಹೆಜ್ಜೆಗುರುತುಗಳು. ಸಾಹಿತ್ಯಲೋಕವು ಇಂತಹ ಲೇಖಕಿಯನ್ನು ಮರೆತುಬಿಟ್ಟಿತ್ತು. ‘ಔಟ್ ಆಫ್ ಮೈಂಡ್’ ಆಗಲು ‘ಔಟ್ ಆಫ್ ಸೈಟ್’ ಆಗುವ ಅಗತ್ಯವೇನೂ ಇಲ್ಲ.

ಬೇರೊಂದು ಅಧ್ಯಯನಕ್ಷೇತ್ರದಲ್ಲಿ ಪರಿಣಿತರಾದ ಚಂದನ್ ಗೌಡರು, ಲೇಖಕಿಯನ್ನು ಹುಡುಕಿ, ಸಂದರ್ಶನ ಮಾಡಿ, ಹೊಸ ಕಥೆಗಳನ್ನು ಅರಸಿ, ಅಚ್ಚುಕಟ್ಟಾಗಿ ಸಂಪಾದನೆ ಮಾಡಿ ಹೊರತಂದಿದ್ದಾರೆ. ಇಲ್ಲಿ, ಸಾಹಿತ್ಯ ಸಂಶೋಧನೆ, ಸಾಹಿತ್ಯ ವಿಮರ್ಶೆ ಮತ್ತು ಗ್ರಂಥಸಂಪಾದನೆಗಳು ಒಗ್ಗೂಡಿವೆ. ಅವರ ಕಾಳಜಿ-ಶ್ರಮಗಳಿಗೆ ಕನ್ನಡಲೋಕ ಕೃತಜ್ಞವಾಗಿರಬೇಕು. ❖

# ಕಲಾತ್ಮಕ ಕೆರೆ ತೂಬುಗಳು

• ಜಿ.ಎಂ.ಬೊಮ್ನಳ್ಳಿ

**ರಾಜ್ಯದ ಹಲವಾರು** ಪುರಾತನ ಕೆರೆಗಳಲ್ಲಿ, ಆ ಕಾಲದಲ್ಲೇ ನಿರ್ಮಾಣಗೊಂಡ ವ್ಯವಸ್ಥಿತವಾದ ಶಿಲಾಗೇಟುಗಳು ಕಾಣಿಸುತ್ತವೆ. ಇವುಗಳನ್ನು ಸ್ಥಳೀಯವಾಗಿ ಕೆರೆತೂಬು ಎನ್ನುತ್ತಾರೆ. ಉದಾಹರಣೆಗೆ, ಶಿರಸಿಯಿಂದ ಹುಬ್ಬಳ್ಳಿಗೆ ಹೋಗುವ ರಸ್ತೆಯಲ್ಲಿ, ನಗರದಿಂದ ಕೇವಲ ಆರು ಕಿಲೋಮೀಟರ್ ದೂರದಲ್ಲಿರುವ ಇಸಳೂರಿನ ಪುರಾತನ ‘ಧರ್ಮಾ’ ಕೆರೆಯಲ್ಲಿ ರಾಜರ ಕಾಲದ ಶಿಲಾಗೇಟು ಇದೆ.

ಕೆರೆಯಿಂದ ಕಾಲುವೆ ಮೂಲಕ ಹೊರಗೆ ಹರಿದು ಹೋಗುವ ನೀರನ್ನು ನಿಯಂತ್ರಿಸುವ ಸಲುವಾಗಿ ಆ ಕಾಲದಲ್ಲಿ ವ್ಯವಸ್ಥಿತವಾಗಿ ನಿರ್ಮಿಸುತ್ತಿದ್ದ ಗೇಟುಗಳಿವು. ಇವನ್ನು ಅಲ್ಲಿಯ ಜನರು ‘ಒನಕೆ ತೂಬು’ ಎಂದೂ ಕರೆಯುತ್ತಾರೆ. ದೊಡ್ಡ ಒನಕೆ ಗಾತ್ರದ, ನೇರವಾದ ಮರದಕಂಬವೊಂದನ್ನು ಶಿಲಾಕಂಬದ ರಂಧ್ರದೊಳಗೆ ಹಾಕಿದರೆ ಕೆರೆಯಿಂದ ಹೊರ ಹೋಗುವ ನೀರನ್ನು ತಡೆದು ನಿಲ್ಲಿಸಬಹುದು. ಅದೇ ಒನಕೆಯನ್ನು ರಂಧ್ರದಿಂದ ಹೊರತೆಗೆದಾಗ ಕೆರೆಯಲ್ಲಿನ ನೀರು ಕಾಲುವೆ ಮೂಲಕ ಕೆಳಭಾಗದ ಗದ್ದೆ ತೋಟಗಳಿಗೆ ಹರಿಯುತ್ತದೆ. ಇಸಳೂರಿನ ಕೆರೆಯಲ್ಲಿ ರಾಜರ ಕಾಲದಲ್ಲೇ ಮಾಡಲಾದ ಈ ನೀರಾವರಿ ವ್ಯವಸ್ಥೆ ಇದೆ. ವರ್ಷದ ಎಲ್ಲಾ ಕಾಲದಲ್ಲೂ ಸಮೃದ್ಧ ನೀರನ್ನು ಹೊಂದಿರುವ ಈ ಕೆರೆ, ಕೆಳಭಾಗದಲ್ಲಿನ ನೂರಾರು ಎಕರೆ ಕೃಷಿ ಜಮೀನಿಗೆ ನೀರು ಒದಗಿಸುತ್ತದೆ.

ಇದೇ ರೀತಿ, ಶಿರಸಿ ತಾಲ್ಲೂಕಿನ ಸೋದೆ ಭಾಗದಲ್ಲಿ ‘ಮುಂಡಿಗೆ ಕೆರೆ’ ಇದೆ. ಸೋದೆ ಅರಸರ ಕಾಲದಲ್ಲಿ ನಿರ್ಮಾಣಗೊಂಡ ಈ ಕೆರೆಯು ಈಗ ಬೆಳ್ಳಕ್ಕಿಗಳ ಪಕ್ಷಿಧಾಮವಾಗಿ ಪ್ರಸಿದ್ಧಿಯಾಗಿದೆ. ಈ ಕೆರೆಯ ಒಂದು ದಂಡೆಯ ಅಂಚಿನಲ್ಲಿ ಶಿಲಾಗೇಟು ಇದೆ. ಸುಮಾರು ಹನ್ನೊಂದು ಅಡಿ ಎತ್ತರದ ಈ ಶಿಲಾಕಂಬಕ್ಕೆ ನೀರು ಹೊರಗೆ ಹೋಗಲು ರಂಧ್ರವಿದೆ. ಸಾಗರ ತಾಲ್ಲೂಕಿನ ಐತಿಹಾಸಿಕ ಸ್ಥಳ ಇಕ್ಕೇರಿ. ಹಲವು ಪ್ರಾಚೀನ ಶಿಲಾದೇಗುಲಗಳ ಈ ಪ್ರದೇಶದಲ್ಲಿ ಅಂದಿನ ರಾಜರುಗಳಿಂದ ನಿರ್ಮಾಣಗೊಂಡ ಹಲವಾರು ನೀರಾವರಿ ಕೆರೆಗಳಿದ್ದು, ಈಗಲೂ ಹೆಚ್ಚಿನ ಕೆರೆಗಳು ಸುಸ್ಥಿಯಲ್ಲಿದ್ದು, ಗಮನ ಸೆಳೆಯುತ್ತವೆ.

ವಿಶೇಷವೆಂದರೆ, ನೂರಾರು ವರ್ಷಗಳ ಹಿಂದೆ ನಿರ್ಮಾಣಗೊಂಡ ಇಲ್ಲಿನ ವಿಶಾಲ ಕೆರೆಗಳಲ್ಲಿ, ನೀರನ್ನು ಸಂಗ್ರಹಿಸಿ, ಮಳೆಗಾಲದಲ್ಲಿ ಹೆಚ್ಚಾಗುವ ನೀರನ್ನು ಹೊರಕ್ಕೆ ಬಿಡುವ ಮತ್ತು ಬೇಸಿಗೆಯಲ್ಲಿ ನೀರನ್ನು ಹಿಡಿದಿಡುವ ಮೂಲಕ ಕೆರೆಯನ್ನು ಸುರಕ್ಷಿತವಾಗಿಡುವ ಅಂದಿನ ವಿಶಿಷ್ಟ ತಂತ್ರಜ್ಞಾನದ ‘ಶಿಲಾ ಬಾಗಿಲು’ ಅಥವಾ ಸ್ಥಳೀಯವಾಗಿ ಕರೆಯುವ ‘ಕೆರೆ ತೂಬು’ ಕಲಾತ್ಮಕವಾಗಿದ್ದು, ಈಗಲೂ ಸುಸ್ಥಿತಿಯಲ್ಲಿವೆ.

ಅಂದಿನ ರಾಜರ ನೀರಾವರಿ ಕೆರೆಗಳ ಬಗೆಗಿನ ಕಾಳಜಿ, ಗೇಟು ನಿರ್ಮಾಣದಲ್ಲಿನ ಕಲೆ ಕೌಶಲ್ಯ ಮೆಚ್ಚುವಂತಿದೆ. ನೂರಿನ್ನೂರು ವರ್ಷ ಕಳೆದರೂ ಅಂದಿನ ಕಲ್ಲಿನ ಗೇಟುಗಳು ನೀರಲ್ಲಿ ಭದ್ರವಾಗಿದ್ದು, ಈಗಲೂ ತನ್ನ ಕಾರ್ಯ ನಿರ್ವಹಿಸಲು ಸಮರ್ಥವಿವೆ. ❖



ಇಕ್ಕೇರಿ ಕೆರೆ ಗೇಟು



ಇಸಳೂರಿನ ‘ಧರ್ಮಾ’ ಕೆರೆ ಶಿಲಾಗೇಟು



## ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

### ಮಾತಿಲಿ

ಮಾತಿಲಿ (ನಾ). ನುಡಿಯದೆ ಸುಮ್ಮನಿರುವ ವ್ಯಕ್ತಿ; ಮೌನಿ

ಬಭ್ರುವಾಹನನು ಧರ್ಮರಾಜನ ಯಜ್ಞ ಕುದುರೆಯ ಪಟ್ಟಲಿಖಿತ ಓದಿ ಉತ್ಸಾಹಗೊಂಡು ಯುದ್ಧ ಮಾಡಲು ನಿಶ್ಚಯಿಸುವನು. ತಾಯಿ ಚಿತ್ರಾಂಗದೆಯ ಬಳಿಗೆ ಬಂದು ರಾಜಕಾರ್ಯವನ್ನು ತಿಳಿಸಿ ಆಶೀರ್ವಾದವನ್ನು ಬೇಡುವನು. ಆಗಿನ ಅವಳ ಮನಸ್ಥಿತಿಯನ್ನು ಚಿತ್ರಿಸುವಾಗ ಕುವೆಂಪು ಅವರು ‘ಮಾತಿಲಿ’ ಪದವನ್ನು ಹೀಗೆ ಪ್ರಯೋಗಿಸಿದ್ದಾರೆ:

**‘ಹಮ್ಮೈಸಿ ಕುಳಿತಾ ಮಾತೆ**
**ಕಂಬನಿಯ ಕರೆದು ಮಾತಿಲಿಯಾಗಿ ರೋದಿಸಿರೆ,**
**ಬೆರಗು ಹೊಡೆದಂತಿರ್ದನಾ ಬಭ್ರುವಾಹನಂ.’**

### ಕಾವ್ಯಕೈತವ

ಕಾವ್ಯಕೈತವ (ನಾ). ಕಾವ್ಯವಂಚನೆ

ಈ ಪದ ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಿ ಬರುವ poetic injustice ಎಂಬ ಪರಿಕಲ್ಪನೆಯಿಂದ ಪ್ರೇರಿತವಾದುದು. ಈ ಪದವನ್ನು ಮೊದಲು ಥಾಮಸ್ ರೈಮರ್ ಎಂಬ ವಿಮರ್ಶಕ ಬಳಸಿದ್ದ. ಕಾವ್ಯ ನಾಟಕಗಳಲ್ಲಿ ಬರುವ ದುರಂತ ಪಾತ್ರಗಳ ಕುರಿತು ಅವನು ‘poetic injustice’ ಎನ್ನುತ್ತಾನೆ. ಇದನ್ನೆ ಕುವೆಂಪು ಅನುವಾದಿಸಿರಬಹುದು. ಏಕೆಂದರೆ ಮೇಘನಾದನಿಗೆ ರಾಮಾಯಣದಲ್ಲಿ ಮೋಸವಾಗುತ್ತದೆ, ಅನ್ಯಾಯವಾಗುತ್ತದೆ.

ಕವಿ ಹಿರಣ್ಯಕೇಶಿಯ ಮಾತು ಆದ ನಂತರ ಮೇಘನಾದನು ತನ್ನ ಅಭಿಪ್ರಾಯ ಹೇಳುವನು. ಕುವೆಂಪು ಅವರು ಅವನಾಡುವ ನುಡಿಯಲ್ಲಿ ‘ಕಾವ್ಯಕೈತವ’ ಪದವನ್ನು ಹೀಗೆ ಪ್ರಯೋಗಿಸಿದ್ದಾರೆ:

**‘ಬುದ್ಧಿಯನ್**
**ಮಲಗಿಸಲ್ ಮೊದಲು ಜೋಗುಳವುಲಿದು, ತರ್ವಾಯ**
**ಭಾವಕೇನೊರೆದಡೇನಹಿತಮಪ್ಪುದೆ? ಕವಿಯ**
**ಕಾವ್ಯಕೈತವಮಂತುಟೆವಲಂ ಅಬೋಧಪೂರ್ವಂ**
**ಹೃದಯ ವಿಜಯಿ!’**

### ವಿಪಿನರತಿ

ವಿಪಿನರತಿ (ನಾ). ಕಾಡಿನ ರತಿ

ರಾವಣೇಶ್ವರನು ಯುದ್ಧವನ್ನು ಕುರಿತು ಕರೆದ ಸಭೆಯಲ್ಲಿ ಜನಪ್ರತಿನಿಧಿಯಾದ ಕವಿ ಹಿರಣ್ಯಕೇಶಿ ಲಂಕೆಯ ಪ್ರಾಕೃತಿಕ ಸೊಬಗನ್ನು ವರ್ಣಿಸಿ, ಅದನ್ನು ಯುದ್ಧದಿಂದ ನಾಶಪಡಿಸಬೇಡಿ ಎಂದು ಕೇಳಿಕೊಳ್ಳುವಾಗ ಅಶೋಕಪುಷ್ಪಗಳ ಬಗ್ಗೆ ಹೀಗೆ ಹೇಳುವನು:

‘ಬೆಂಕಿಯ ಗೊಂಚಲಾಗಿರುವ; ಹೂವಿನ ಓಕುಳಿಯ ಜೀರ್ಕೊವಿ (ಪಿಚಕಾರಿ)ಯಿಂದ ವಿಪಿನ ರತಿಯು ವಸಂತರಾಜ (ಮಧುನೃಪ)ನಿಗೆ ಸಂತೋಷವನ್ನುಂಟು ಮಾಡಲು ರಚಿಸಿದ ಹಾಗಿರುವ ಪುಷ್ಪಗಳನ್ನು ಕಂಡೆ.’

ಕುವೆಂಪು ಅವರ ಕುಪ್ಪಳಿಯ ಬಳಿ ಸಹಜವಾಗಿ ಬೆಳೆದಿರುವ ಅಶೋಕವನವಿದೆ. ಆ ಕಡುಕೆಂಪು ಅಶೋಕಪುಷ್ಪ ಲಕ್ಷಣ ಅವರ ಬೌದ್ಧಿಕ ಸೌಂದರ್ಯದಲ್ಲಿ ಪ್ರೇಮಕಂಪನ್ನು ಹೀಗೆ ಹರಿಸಿದೆ:

**‘ಕಿಚ್ಚು**
**ಕುಚ್ಚಾಯ್ತೊ, ಹೂವಿನೋಕುಳಿಯ ಜೀರ್ಕೋವಿಯಿಂ**
**ವಿಪಿನರತಿ ಮಧುನೃಪಂಗೊಸಗೆಯಂ ರಚಿಪೊದು**
**ಮಾಳ್ಕೆಯಚ್ಚಾಯ್ತೊ ಎನೆ, ಕಣ್ ಸೋತು ಶರಣಾಗೆ,**
**ಪೂತೆಸೆದುವಸುಗೆಗಳ್’** ❖

## ಮೊದಲ ಓದು

### ಮನೋವಿಶ್ಲೇಷಣೆಯ ಅಪರೂಪದ ‘ಸಮ್ಮತಿ’





**ಸಮ್ಮತಿ**
ಲೇ: ನಿಲೋಫರ್ ಕೌಲ್
ಅನು: ರಾಜಲಕ್ಷ್ಮಿ ಎನ್.ಕೆ.
ಪ್ರ: ಅಹರ್ನಿಶಿ
ಸಂ: 9449174662


**ನಾವು** ಇಂದು ಏನಾಗಿದ್ದೇವೆಯೋ ಅದಕ್ಕೆ ನಮ್ಮ ಗತಕಾಲವೂ ಕಾರಣವಾಗಿರುತ್ತದೆ. ಅಂತೆಯೇ ಮನುಷ್ಯ ಬೆಳೆದು ಬಂದ ಪರಿಸರ, ಆತನ ಅನುಭವ, ನೆನಪುಗಳ ಆಧಾರದಲ್ಲೇ ವರ್ತಮಾನವು ರೂಪುಗೊಳ್ಳುತ್ತದೆ ಎಂಬುದು ಮನೋವಿಜ್ಞಾನಿಗಳ ನಿಲುವು. ಈ ನಿಲುವನ್ನು ವೈಜ್ಞಾನಿಕ ತಳಹದಿಯಲ್ಲಿ ‘ಸಮ್ಮತಿ’ ಕೃತಿ ವಿವರಿಸಲು ಯತ್ನಿಸುತ್ತದೆ.

ನಿಲೋಫರ್ ಕೌಲ್ ಅವರ ‘Consent-Fearful Asymmetry’ ಕೃತಿಯನ್ನು ಕನ್ನಡಕ್ಕೆ ಲೇಖಕಿ ರಾಜಲಕ್ಷ್ಮಿ ಎನ್.ಕೆ. ಅನುವಾದಿಸಿದ್ದಾರೆ. ಕೃತಿಯ ಶೀರ್ಷಿಕೆ ಸೂಚಿಸುವಂತೆ ಮನುಷ್ಯ ಸಂಬಂಧಗಳಲ್ಲಿ ‘ಒಪ್ಪಿಗೆ’ ಎಂಬುದು ಎಷ್ಟು ಮುಖ್ಯ ಅನ್ನುವುದನ್ನು ಮನೋವಿಶ್ಲೇಷಣಾತ್ಮಕ ನೆಲೆಯಲ್ಲಿ ಚರ್ಚಿಸಲಾಗಿದೆ. ವಯಸ್ಕರು ಮತ್ತು ಮಕ್ಕಳ ಸುಪ್ತ ಮನಸ್ಸಿನ ಮೇಲೆ ಲೈಂಗಿಕತೆ, ಪರಿಸರ ಬೀರುವ ಪ್ರಭಾವದ ಚಿತ್ರಣದ ಜತೆಗೇ ಲೈಂಗಿಕ ಶೋಷಣೆಯಲ್ಲಿ ಸುಪ್ತಾವಸ್ಥೆಯ ಪಾತ್ರವನ್ನು ಮನಃಶಾಸ್ತ್ರಜ್ಞ ಸಿಗ್ಮಂಡ್ ಫ್ರಾಯ್ಡ್‌ನ ಸಿದ್ಧಾಂತದ ಹಿನ್ನೆಲೆಯಲ್ಲಿ ಕಟ್ಟಿಕೊಡಲಾಗಿದೆ.

ಹೆಣ್ಣು–ಗಂಡೆಂಬ ಲಿಂಗಾಧಾರಿತ ಪಾತ್ರಗಳನ್ನು ರೂಪಿಸುವಲ್ಲಿ ಲಿಂಗತ್ವ ವಿಭಜನೆಯು ವಹಿಸಿರುವ ಪಾತ್ರವು, ಮಗುವಿನ ಮನಸ್ಸಿನ ಮೇಲೆ ಪ್ರಭಾವ ಬೀರಿ ಮುಂದೆ ಅದು ಸಾಮಾಜಿಕವಾಗಿ ಹೇಗೆ ಪ್ರತಿಫಲನಗೊಳ್ಳುತ್ತದೆ ಎಂಬುದನ್ನು ‘ಫ್ಯಾಂಟಸಿ’ ಲೇಖನವು ಸೊಗಸಾಗಿ ಕಟ್ಟಿಕೊಡುತ್ತದೆ. ಹುಸಿಯಾದ ಪುರುಷತ್ವದ ಎಳೆಗಳು ಹೇಗೆ ಲೈಂಗಿಕ ಶೋಷಣೆ, ಅತ್ಯಾಚಾರ, ಹಿಂಸೆಯಂಥ ಅವಗುಣಗಳನ್ನು ರೂಢಿಸಿಕೊಳ್ಳುತ್ತವೆ, ಹೆಣ್ಣನ್ನು ಪ್ರಲೋಭನೆಯೊಡ್ಡುವ ಸ್ಥಾನದಲ್ಲಿಟ್ಟು ಹೇಗೆ ನೋಡಬಲ್ಲವು ಎನ್ನುವ ವಿಶ್ಲೇಷಣೆಯೂ ಇಲ್ಲಿದೆ. ಒಟ್ಟಾರೆ ಲಿಂಗತ್ವದ ವಿಭಜನೆಯ ಹಿಂದಿರುವ ಮಾನಸಿಕ ನೆಲೆಗಳು ಯಾವುವು? ಮನುಷ್ಯ ಸಂಬಂಧಗಳ ನಡುವಿನ ‘ಸಮ್ಮತಿ’ ಎನ್ನುವುದು ಒಂದು ನೆಲೆಯಲ್ಲಿ ಮೇಲ್ನೋಟಕ್ಕೆ ಸರಿ ಎನಿಸಬಹುದಾದರೂ, ಮತ್ತೊಂದು ನೆಲೆಯಲ್ಲಿ ಅದು ಅಸಮಾನತೆಯ ನೆಲೆಯಾಗಿ ನಮ್ಮ ತಿಳಿವಳಿಕೆಯನ್ನೂ ಮೀರಿ ಬೆಳೆದುನಿಂತಿರುವ ಬಗೆಯನ್ನು ಕೃತಿ ವೈಜ್ಞಾನಿಕವಾಗಿ ಬಿಡಿಸಿಡುತ್ತಾ ಹೋಗುತ್ತದೆ. ಅನುವಾದ ಮತ್ತಷ್ಟು ಸರಳವಾಗಿದ್ದರೆ ಎಲ್ಲ ವರ್ಗದ ಓದುಗರನ್ನು ತಲುಪಬಹುದಿತ್ತು. ಮನೋವಿಶ್ಲೇಷಣೆಗೆ ಸಂಬಂಧಿಸಿದ ಪುಸ್ತಕಗಳು ಕನ್ನಡದಲ್ಲಿ ಅಪರೂಪವಾಗಿದ್ದು, ‘ಸಮ್ಮತಿ’ ಆ ಕೊರತೆಯನ್ನು ತುಸುವಾದರೂ ನೀಗಿಸಲು ಪ್ರಯತ್ನಿಸಿದೆ.

ಪುಟ: 76 ₹95

### ಸಿನಿಮಾ ಅನುಭವ ನೆನಪುಗಳ ಬುತ್ತಿ





**ಚಿಕ್ಕಮಗಳೂರಿನಲ್ಲಿ ಬಂಗಾರದ ಮನುಷ್ಯ ಡಾ.ರಾಜ್**
ಲೇ: ದೊಡ್ಡಮನೆ ಆನಂದ್
ಪ್ರ: ಅಭಿರುಚಿ
ಸಂ: 9980560013

**ಆ ಕಾಲದ**ಲ್ಲಿ ವರನಟ ರಾಜ್‌ಕುಮಾರ್ ಎಂದರೆ ಎಲ್ಲರಿಗೂ ಒಂದು ರೀತಿ ಪುಳಕ. ಬದುಕಿನಲ್ಲೊಮ್ಮೆಯಾದರೂ ಅವರನ್ನು ಭೇಟಿಯಾಗಬೇಕೆಂಬ ಹಂಬಲ. ರಾಜ್‌ಕುಮಾರ್ ಅವರನ್ನು ಭೇಟಿಯಾದ ಅನುಭವ ಸೇರಿದಂತೆ ಚಿತ್ರರಂಗದ ಕುರಿತಾಗಿನ ತಮ್ಮ ನೆನಪು, ಅನುಭವಗಳನ್ನೇ ಕೃತಿಯಾಗಿಸಿದ್ದಾರೆ ಲೇಖಕ ದೊಡ್ಡಮನೆ ಆನಂದ್. ಒಟ್ಟು ಹತ್ತು ಲೇಖನಗಳಿರುವ ಪುಟ್ಟ ಕೃತಿಯಿದು. ಎಲ್ಲವೂ ಸಿನಿಮಾ ರಂಗಕ್ಕೆ ಸೇರಿದ ಬರಹಗಳು.

ಕೆಲವು ಬರಹಗಳು ಅನುಭವ ಕಥನಗಳಾದರೆ, ಇನ್ನು ಕೆಲವು ವಿಮರ್ಶೆಯಂತಿವೆ. ಬದುಕಿನ ಯೌವ್ವನದ ದಿನಗಳಲ್ಲಿ ಚಿತ್ರ ನಿರ್ದೇಶಕನಾಗಬೇಕೆಂದು ಕನಸು ಕಂಡಿದ್ದ ಲೇಖಕ ಆ ನಿಟ್ಟಿನಲ್ಲಿ ಮಾಡಿದ ಯತ್ನಗಳು, ಸಿನಿಮಾ ಮೇಲೆ ತಮಗಿದ್ದ ಆಸಕ್ತಿ ಕುರಿತು ಪ್ರತಿ ಲೇಖನದಲ್ಲಿಯೂ ಒಂದಷ್ಟು ವಿವರ ದಾಖಲಿಸಿದ್ದಾರೆ.

‘ನಾನು ಆರಾಧನಾ ಸಿನಿಮಾ ನೋಡಿದ್ದು’ ಎಂಬ ಲೇಖನ 1970ರ ದಶಕದಲ್ಲಿ ಸಿನಿಮಾ ಸಂಸ್ಕೃತಿ ಹೇಗಿತ್ತು, ಅಂದಿನ ಹುಡುಗರು ಒಂದು ಚಿತ್ರವನ್ನು ವೀಕ್ಷಿಸಲು ಎಷ್ಟೆಲ್ಲ ಸಾಹಸ ಮಾಡಬೇಕಿತ್ತು ಎಂಬ ಚಿತ್ರವಣವನ್ನು ಕಟ್ಟಿಕೊಡುತ್ತದೆ. ಪುಸ್ತಕದ ಶೀರ್ಷಿಕೆಯಾಗಿರುವ ‘ಚಿಕ್ಕಮಗಳೂರಿನಲ್ಲಿ ಬಂಗಾರದ ಮನುಷ್ಯ ಡಾ.ರಾಜ್’ ಬರಹ ಆ ದಿನಗಳಲ್ಲಿ ರಾಜ್‌ಕುಮಾರ್ ಅವರ ಕ್ರೇಜ್ ಹೇಗಿತ್ತು ಎಂಬುದನ್ನು ತೋರಿಸಿಕೊಡುತ್ತದೆ.

ಸಾಕಷ್ಟು ಕಡೆ ಬದುಕಿನ ಅನುಭವ ಕಥನಗಳೊಂದಿಗೆ ನಿರೂಪಣೆ ಸರಳವಾಗಿದೆ. ಲೇಖಕ ತಾವು ಮಾಡಿದ ಕಾರ್ಯಗಳನ್ನು, ತೆಗೆದುಕೊಂಡ ನಿರ್ಧಾರಗಳನ್ನು ಪದೇ ಪದೇ ಹೊಗಳಿಕೊಳ್ಳುವುದು ಕೆಲವೆಡೆ ಓದಿನ ಓಘಕ್ಕೆ ಅಡ್ಡಿಯೆನಿಸುತ್ತದೆ.

ಪುಟ: 104 ₹120

### ಬದುಕಿನ ‘ಜಂಕ್ಷನ್ ಪಾಯಿಂಟ್’ನಲ್ಲಿ...





**ಜಂಕ್ಷನ್ ಪಾಯಿಂಟ್ (ಅನುಭವ ಕಥನ)**
ಲೇ: ದಾದಾಪೀರ್ ಜೈಮನ್
ಪ್ರ: ಹರಿವು ಬುಕ್ಸ್
ಸಂ: 8088822171

**ಯುವ ಬರಹಗಾರ** ದಾದಾಪೀರ್ ಜೈಮನ್ ಅವರ ನಾಲ್ಕನೇ ಪುಸ್ತಕ ‘ಜಂಕ್ಷನ್ ಪಾಯಿಂಟ್’. ಲೇಖಕ ಬರೆದ ಅಂಕಣ ಬರಹಗಳು ಪುಸ್ತಕವಾಗಿ ಹೊರಬಂದಿದೆ. ಹೀಗಾಗಿ ಅವರ ಜೀವನದಲ್ಲಿ ಜರುಗಿದ ನೈಜ ಘಟನೆಗಳೇ ಇಲ್ಲಿನ ಬಹುತೇಕ ಕಥನಕಗಳು.

ಬೆಂಗಳೂರಿನ ಅದರಲ್ಲೂ ‘ಪೀಜಿ’ಯ ಘಟನೆಗಳು ಪುಸ್ತಕದ ತುಂಬಾ ಇವೆ. ಲೇಖಕ ನೋಡಿದ, ಪೀಜಿಯಲ್ಲಿ ಜೊತೆಗೆ ವಾಸ ಮಾಡಿದ ಸಾಮಾನ್ಯ ಜನರೇ ಇಲ್ಲಿನ ಅಂಕಣಗಳ ಹೀರೊಗಳಾಗಿದ್ದಾರೆ.

ನಮ್ಮ ಸುತ್ತಮುತ್ತಲೇ ಇರುವವರೊಳಗಿನ ಮತ್ತೊಂದು ಮುಖ, ಅವರು ಹೇಳಿಕೊಳ್ಳದ, ಹೇಳಿಕೊಂಡ ಕಥೆಗಳು ಇಲ್ಲಿವೆ. ಅವರ ಕಷ್ಟ, ಸುಖ, ಕನಸು, ಬದುಕು, ಭವಿಷ್ಯ ಎಲ್ಲವೂ ಕೂಡ ಯಾವುದೇ ಮುಚ್ಚುಮರೆಯಿಲ್ಲದೆ ಅಕ್ಷರ ರೂಪಕ್ಕಿಳಿದಿದೆ. ಇಲ್ಲಿನ ಇಮ್ಮು, ಕಡೆಪಾನ್ ಬಸ್ಯಾ, ಸೋಮ, ಕ್ಷಮಾ ಮತ್ತಿತರರು ನಮ್ಮ ಸುತ್ತಮುತ್ತಲೇ ಜೀವಿಸುತ್ತಿದ್ದಾರೆ ಎನಿಸುವಷ್ಟು ಆಪ್ತತೆ ಈ ಬರಹಗಳಲ್ಲಿವೆ.

ಪ್ರೀತಿ, ಪ್ರೇಮ, ಬದುಕು, ಸಂಪ್ರದಾಯ, ಊರು ಬಿಟ್ಟು ಬಂದವರ ನೆನಪುಗಳು, ಮಹಾನಗರದ ಜೀವನ ಎಲ್ಲವೂ ಬಂದು ಹೋಗುತ್ತವೆ. ಇಲ್ಲಿ ಕೇವಲ ಗೆದ್ದವರ ಕಥೆಗಳಷ್ಟೇ ಇಲ್ಲ, ಸೋತವರ ಕಥೆಗಳೂ ಇವೆ. ಬದುಕಿನ ಗುರಿ ಕಂಡುಕೊಳ್ಳಲು ಓಡುತ್ತಲೇ ಇರುವವರ ಜೀವನದ ತುಣುಕು ಕೂಡ ಕಾಣಸಿಗುತ್ತವೆ.

ಇಲ್ಲಿನ ಕಥನಕಗಳು ಸರಳವಾಗಿ ಓದಿಸಿಕೊಂಡು ಹೋಗುತ್ತವೆ. ಓದುಗನಿಗೆ ಬರಹಗಾರನ ಆತ್ಮಕಥೆಯಾಗಿ, ಅನುಭವ ಕಥನವಾಗಿ, ಕೆಲವೊಮ್ಮೆ ಒಂದೊಳ್ಳೆ ಕಥೆಯಾಗಿ, ಮತ್ತೊಮ್ಮೆ ತಮ್ಮ ಸುತ್ತಲಿರುವವರ ಜೀವನವಾಗಿ, ಮಗದೊಮ್ಮೆ ತಮ್ಮದೇ ಬದುಕಾಗಿರುವಂತೆ ಭಾಸವಾಗುತ್ತದೆ. ಇಲ್ಲಿನ ಬರಹಗಳಲ್ಲಿ ಓದುಗನ ಅಂತರಂಗವನ್ನು ಶೋಧಿಸುವ ಶಕ್ತಿಯಿದೆ.

ಪುಟ: 145 ₹180



ಬೃಹದಾಕಾರದ ಕಲ್ಲಿನ ಚಪ್ಪಡಿಯ ನೂರಾರು ಗೋರಿಗಳು

# ಪೂರ್ವಜರ ಹೆಜ್ಜೆ ಗುರುತು ಹುಡುಕುತ್ತ

**ಶಿಲಾಯುಗದ ಸಂಸ್ಕೃತಿಯ ಕುರುಹುಗಳನ್ನು ಹೊತ್ತ ಹಿರೇಬೆಣಕಲ್‌ನ ಚಿತ್ರಗಳು ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿರುವ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿತವಾಗುತ್ತಿವೆ. ಇದನ್ನು ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯೋಜಿಸಿದ್ದು ಸೆಪ್ಟೆಂಬರ್ ಕೊನೆಯವರೆಗೂ ನೋಡಲು ಲಭ್ಯವಿದೆ.**

• ದಿನೇಶ್ ಹೆಗಡೆ ಮಾನೀರ್

ಸಹಯೋಗ ಸೃಷ್ಟಿ ಎನ್ನುವ ಜಗತ್ತು ಕಲಾವಿದರಿಗೆ ಹೊಸ ಸಾಹಸಗಳಿಗೆ ಕೈ ಹಾಕಲು ಪ್ರೋತ್ಸಾಹ ನೀಡುತ್ತಿದೆ. ನಮ್ಮಲ್ಲಿ ಛಾಯಾಚಿತ್ರಗ್ರಹಣ ವಿಭಾಗದಲ್ಲಿ ಸ್ವಲ್ಪ ವಿರಳವೇ ಆದರೂ ಅಂತ-ರರಾಷ್ಟ್ರೀಯ ಮಟ್ಟದಲ್ಲಿ ಅದ್ಭುತ ಕಾರ್ಯಗಳು ನಡೆದು ಉತ್ತಮ ಗುಣಮಟ್ಟದ ಫಲಿತಾಂಶಗಳು ಕಾಣಸಿಗುತ್ತಿವೆ. ಕಳೆದೆರಡು ವರ್ಷಗಳಿಂದ 'ಪ್ರಾಗೈತಿಹಾಸ' ಮತ್ತು ಛಾಯಾಚಿತ್ರಗ್ರಹಣವನ್ನು ಒಟ್ಟಿಗೆ ಸೇರಿಸುವ ಪ್ರಯೋಗದಲ್ಲಿ ಅಭ್ಯಾಸ ಮಾಡುತ್ತಿದ್ದ ನನಗೆ ಹಿರೇಬೆಣಕಲ್ ಮೇಲೆ ಛಾಯಾಚಿತ್ರ ಪ್ರದರ್ಶನಕ್ಕೆ ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕೇಳಿದಾಗ ಬಹಳ ಸಂತೋಷದಿಂದಲೇ ಒಪ್ಪಿಕೊಂಡೆ.


ವಿಶ್ವ ಪಾರಂಪರಿಕ ತಾತ್ಕಾಲಿಕ ಪಟ್ಟಿಯಲ್ಲಿ ಸ್ಥಾನ ಪಡೆದಿರುವ, ಕರ್ನಾಟಕದ ಏಳು ಅದ್ಭುತಗಳಲ್ಲಿ ಒಂದು ಎಂದು ಪ್ರಸಿದ್ಧಿಗೊಂಡ ಹಿರೇಬೆಣಕಲ್ ಗಂಗಾವತಿಗೆ ಹತ್ತು ಕಿಲೋಮೀಟರ್ ದೂರದಲ್ಲಿದೆ. ದೇಶದಲ್ಲಿಯೇ ಅತಿ ಹೆಚ್ಚು ಬೃಹತ್ ಶಿಲಾಯುಗ ಸಂಸ್ಕೃತಿಯ ಕುರುಹುಗಳನ್ನು ಇನ್ನೂ ಉಳಿಸಿಕೊಂಡಿರುವ ಅತಿ ವಿಶಿಷ್ಟ ಜಾಗ ಇದು. ಇಲ್ಲಿ ಸೂಕ್ಷ್ಮ ಶಿಲಾಯುಗದಿಂದ ಅಂದರೆ 6000 -8000 ವರ್ಷಗಳ ಹಿಂದಿನಿಂದ, ಆದಿ ಇತಿಹಾಸದವರೆಗಿನ ಅಂದರೆ 2000 ವರ್ಷಗಳ ಹಿಂದಿನ ಕುರುಹುಗಳನ್ನು ಇತಿಹಾಸ ವಿದ್ವಾಂಸರು ಪತ್ತೆ ಹಚ್ಚಿದ್ದಾರೆ. ಇಂದಿಗೂ ಗುಡ್ಡದ ತುಂಬಾ ಆಗ ಬಳಸಿದ ಮಡಿಕೆ ಚೂರುಗಳು, ಕಲ್ಲಿನ ಉಪಕರಣಗಳು, ಸಂಗೀತ ಕಲ್ಲುಗಳು, ವಾಸ್ತವ್ಯದ ಕುರುಹುಗಳು ಕಾಣಸಿಗುತ್ತವೆ. ಆದರೆ ನಮಗೆ ಇಲ್ಲಿಯವರೆಗೆ ಹೆಚ್ಚಿನ ಪರಿಚಯವಿದ್ದದ್ದು ಅಲ್ಲಿರುವ ಬೃಹದಾಕಾರದ ಕಲ್ಲಿನ ಚಪ್ಪಡಿಯ ನೂರಾರು ಗೋರಿಗಳಷ್ಟೇ. ಸೋಷಿಯಲ್ ಮೀಡಿಯಾಗಳಲ್ಲಂತೂ ಇಲ್ಲ ಸಲ್ಲದ ಸುದ್ದಿಗಳೆಲ್ಲ ಅದರ ಬಗ್ಗೆ ಹರಿದಾಡುತ್ತಿದ್ದು ಸರಿಯಾದ ಮಾಹಿತಿ ಶಾಸ್ತ್ರೀಯವಾದ ಪರಿಚಯ ಇಲ್ಲ. ಅಲ್ಲಿನ ಅತಿ ವಿಶಿಷ್ಟವಾದ ಕಲ್ಲಾಸರೆಯ ವರ್ಣಚಿತ್ರಗಳು ಸಾಮಾನ್ಯ ಜನರಿಗೆ ಪರಿಚಯವೂ ಇಲ್ಲ ಮತ್ತು ಇಪ್ಪತ್ತಕ್ಕೂ ಹೆಚ್ಚಿನ ಕಲ್ಲಾಸರೆಗಳಲ್ಲಿ ಚಿತ್ರಗಳಿರುವ ಹಿರೇ-ಬೆಣಕಲ್ಲಿನ ಬೆಟ್ಟವನ್ನು ಸರಿಯಾಗಿ ನೋಡಲು ಕನಿಷ್ಠ ಒಂದೆರಡು ವಾರವಾದರೂ ಬೇಕು. ನನ್ನ ಹೆಚ್ಚಿನ ಆಸಕ್ತಿ ಇದ್ದುದ್ದು ಈ ಚಿತ್ರಗಳಲ್ಲಿ.

ಕೇವಲ 3-4 ದಿನಗಳಲ್ಲಿ ಒಂದು ಉತ್ತಮ ಗುಣಮಟ್ಟದ ಛಾಯಾಚಿತ್ರ ಪ್ರದರ್ಶನಕ್ಕೆ ಛಾಯಾಗ್ರಹಣ ಮಾಡುವುದು ಸುಲಭದ ಕೆಲಸವಲ್ಲ. ಮೊದಲು ಅಲ್ಲಿನ ಭೂಭಾಗದ ಅಧ್ಯಯನ ಮಾಡಿ, ಇತಿಹಾಸದ ಪರಿಚಯ ಮಾಡಿಕೊಳ್ಳಬೇಕು. ಚಿತ್ರಗಳು ಅದರ ಕಥೆಗೆ ಅರ್ಥಪೂರ್ಣವಾಗಿ ಬರಬೇಕು. ಹವಾಮಾನದ ಅಧ್ಯಯನ ಮಾಡಿ ಚಿತ್ರಗ್ರಹಣದ ದಿನಗಳನ್ನು ಗೊತ್ತು ಮಾಡಬೇಕು. ನಿಗದಿಪಡಿಸುವ ದಿನಕ್ಕೆ ಅಗತ್ಯವಾದ ಅನುಮತಿ ಪತ್ರ, ನುರಿತ ಗೈಡುಗಳು, ಛಾಯಾಗ್ರಹಣದ ಉಪಕರಣಗಳು ಇವೆಲ್ಲವುಗಳ ಪೂರ್ವ ತಯಾರಿ ಬೇಕೇ ಬೇಕು. ಇನ್ನು ನಿಗದಿಪಡಿಸಿದ ದಿನಗಳಲ್ಲಿ ಹವಾಮಾನ ಕೈಕೊಡದೆ ಛಾಯಾಗ್ರಹಣ ಮಾಡುವುದು ಮತ್ತೊಂದು ಸಾಹಸ.



ಕಲ್ಲುಗಳ ಮೇಲೆ ವರ್ಣಚಿತ್ರಗಳು

ಹಿರೇಬೆಣಕಲ್ಲಿನ ಆಕರ್ಷಣಾ ಕೇಂದ್ರವಾದ ಶಿಲಾಗೋರಿಗಳ ಚಿತ್ರ ಅತಿ ಸುಲಭದಲ್ಲಿ ಆಯಿತು. ನಾನಂದುಕೊಂಡಂತೆ ಮಳೆ ಬಂದು ಆಕಾಶದಲ್ಲಿ ಅದ್ಭುತವಾದ ಮೋಡಗಳ ಅಲಂಕಾರ ತೆಗೆಯುವ ಚಿತ್ರದ ಅಮೋಘತೆಯನ್ನು ವೃದ್ಧಿಸಿದವು. ಆದರೆ ಕಲ್ಲಾಸರೆ ಗಳನ್ನು ಶೋಧಿಸುವುದು ಮತ್ತು ಅಲ್ಲಿನ ವರ್ಣ ಚಿತ್ರಗಳನ್ನು ಸೆರೆಹಿಡಿಯುವುದು ಸವಾಲಿನ ಕೆಲಸವಾಯಿತು. ನಮ್ಮ ಭಾರವಾದ ಕ್ಯಾಮೆರಾ ಉಪಕರಣಗಳನ್ನು ಹೊತ್ತು ಪ್ರತಿದಿನ ಅತಿ ಕಿರಿದಾದ ಮುಳ್ಳಿನಿಂದ ಕೂಡಿದ ಗುಡ್ಡದ ದಾರಿಗಳಲ್ಲಿ ನಡೆದೆವು. ಅದೆಷ್ಟೋ ಇತಿಹಾಸಕಾರರ ಶೋಧನೆಗಳ ವಿವರಗಳು ನಮ್ಮ ಸಹಾಯಕ್ಕೆ ಬಂದಿದ್ದವು. ಅಲ್ಲೇ ಗವಿಗಳಲ್ಲೋ, ಮರದ ಕೆಳಗೋ ಸ್ವಲ್ಪ ವಿಶ್ರಾಂತಿ, ಅಲ್ಲೇ ಊಟ. ನೀರನ್ನೂ ಕೊಂಡೊಯ್ಯಬೇಕಿತ್ತು. ನಮ್ಮ ತಂಡದ ಎಲ್ಲರಿಗೂ ಒಂದೊಂದು ಜವಾಬ್ದಾರಿ ಇತ್ತು. ಮುಂದಿನ ನಾಲ್ಕು ದಿನಗಳಲ್ಲಿ ಒಟ್ಟು ಹದಿನೈದು- ಹದಿನಾರು ಕಲ್ಲಾಸರೆಗಳನ್ನು ಶೋಧಿಸಿ ಚಿತ್ರಗಳನ್ನು ತೆಗೆದೆವು. ಹಿಂದಿರುಗಿದ ಮೇಲೆ ಚಿತ್ರಗಳನ್ನು ಆರಿಸುವುದು, ಪೋಸ್ಟ್ ಪ್ರೊಸೆಸಿಂಗ್ ಮಾಡುವುದು, ಅದಕ್ಕೆ ಸರಿಯಾದ ಶೀರ್ಷಿಕೆಗಳನ್ನು ಬರೆದು ಮುದ್ರಣ ಮಾಡಿ ವಿಧಾನಸೌಧ-ದಲ್ಲಿ ನಿಲ್ಲಿಸಿದ್ದು ಮುಂದಿನ ಸಾಹಸಗಳಾದವು.



ಇಲ್ಲಿರುವ ಕಲ್ಲಾಸರೆಗಳಲ್ಲಿ ಬರೆದ ಈ ಉರುಮಂಜಿನ ಚಿತ್ರಗಳು 2000-5000 ಸಾವಿರ ವರ್ಷಗಳ ಹಿಂದಿನದ್ದು. ಇವುಗಳನ್ನು ಮಳೆ ಬಿಸಿಲು ಅಷ್ಟಾಗಿ ಪರಿಣಾಮ ಮಾಡದ ಸಮತಟ್ಟಾದ ಕಲ್ಲಿನ ಮೇಲ್ಮೈ ಅಥವಾ ಗವಿಗಳ ಒಳಮೈಯಲ್ಲಿ ರಚಿಸಿದ್ದು ಇವುಗಳ ಫೋಟೊ ತೆಗೆದಾಗ ಸಹಜವಾಗಿಯೇ ಬೆಳಕಿನ ಅಭಾವದ ಕಾರಣ ಕೆಂಪು ವರ್ಣದ ಛಾಯೆಗಳಲ್ಲಿ ಮೂಡಿಬರುತ್ತವೆ. ಆದರೆ ಸರಿಯಾದ ಬೆಳಕಿನ ವ್ಯವಸ್ಥೆ ಮಾಡಿಕೊಂಡು ತೆಗೆದಾಗ ಅವುಗಳ ನಿಜ ವರ್ಣಗಳು ಹೊರಬಂದು ಈ ಶಿಲಾ ವರ್ಣಚಿತ್ರಗಳ ಬಣ್ಣಗಳು ಪ್ರಖರವಾಗಿ ಕಾಣುತ್ತವೆ. ಇನ್ನು ಈ ವರ್ಣಗಳಿಗೆ ಪೋಸ್ಟ್ ಪ್ರೊಸೆಸಿಂಗ್‌ನಲ್ಲಿ ಸ್ವಲ್ಪ ಹೆಚ್ಚಿನ ಶಕ್ತಿ ತುಂಬಿದಾಗ ಛಾಯಾಚಿತ್ರವು ಒಂದು ಅಮೂರ್ತ ಕಲಾಕೃತಿಯ ರೂಪ ತಳೆದು ಅತಿ ಆಕರ್ಷಕವಾಗಿ ಕಂಡುಬಂದು ಒಂದು ವಿಶಿಷ್ಟ ಅನುಭವವನ್ನು ಕೊಡುತ್ತವೆ. ಇನ್ನು ಸಾವಿರಾರು ವರ್ಷಗಳ ಹಿಂದಿನ ಆದಿಮಾನವ ರಚಿಸಿದ ಸಂಸ್ಕೃತಿಯ ಕಲೆಯು ಈ ತಂತ್ರಗಾರಿಕೆಯಲ್ಲಿ ಕಲಾಕೃತಿ ರೂಪ ತಳೆದಾಗ ಅದೊಂದು ವಿಶಿಷ್ಟವಾದ ಕಲೆ ಮತ್ತು 'ಪ್ರಾಗೈತಿಹಾಸ'ದ ಸಮಾಗಮ.

# ಅಕ್ಕಿ ಮುಡಿಯ ಕಂಡಿರಾ?



ಅಕ್ಕಿಮುಡಿ ಕಟ್ಟುವುದು ಹೀಗೆ ನೋಡಿ...

• ಸುರೇಂದ್ರ ಪೈ

**ಸುಗ್ಗಿ** ಹಬ್ಬ ಮುಗಿಯುತ್ತಿದ್ದ ಹಾಗೇ ರೈತರು ಭತ್ತ, ದವಸ ಧಾನ್ಯಗಳನ್ನು ತಮ್ಮ ಅವಶ್ಯಕತೆಗೆ ಬೇಕಾದಷ್ಟು ಸಂಗ್ರಹಿಸಿಟ್ಟು-ಕೊಂಡು, ಇನ್ನುಳಿದಿದ್ದನ್ನು ಮಾರಾಟ ಮಾಡುವುದು ವಾಡಿಕೆ. ಇನ್ನು ಮಳೆಗಾಲಕ್ಕೂ ಮುನ್ನ ಒಂದು ವರ್ಷಕ್ಕೆ ಬೇಕಾಗುವಷ್ಟು ಭತ್ತ ಇತ್ಯಾದಿ ಕಾಳುಗಳನ್ನು ಭದ್ರವಾಗಿ ಹಾಳಾಗದಂತೆ ಸಂರಕ್ಷಿಸಿ ಇಡುವುದು ಒಂದು ಸವಾಲಿನ ಕೆಲಸ.

ಇತ್ತೀಚಿನ ಕೆಲವು ದಶಕಗಳಿಂದ ಬೆಳೆ ಕಾಳುಗಳನ್ನು ಸಂಗ್ರಹಸಿಡುವ ಹಲವಾರು ಡಬ್ಬಗಳು, ಸ್ಟೀಲ್, ಪ್ಲಾಸ್ಟಿಕ್ ಪಾತ್ರೆಗಳು ಸುಲಭವಾಗಿ ಸಿಗುತ್ತಿವೆ. ಆದರೆ ಈ ಮೊದಲು ಒಮ್ಮೆ ಬೆಳೆದ ಬೆಳೆಗಳನ್ನು ಹಲವಾರು ವರ್ಷಗಳು ಕೆಡದಂತೆ ಇಡುವ ಹಲವಾರು ವಿಧಾನಗಳು ಕೃಷಿಕರಿಗೆ ತಿಳಿದಿತ್ತು.

ಅಜ್ಜ-ಅಜ್ಜಿಯರು ಹೇಳುತ್ತಿದ್ದಂತೆ ಬ್ರಿಟಿಷರ ಕಾಲದಲ್ಲಿ ರೇಷನಿಂಗ್ ಎನ್ನುವ ಬರಗಾಲದ ಸಮಯದಲ್ಲಿ ಜನರು ಅಕ್ಕಿಯನ್ನು ಕೆಡದಂತೆ ಸಂಗ್ರಹಿಸಿ ಇಡುತ್ತಿದ್ದ ವಿಧಾನವೇ ಮುಡಿಕಟ್ಟುವುದು, ಕಣಜ ನಿರ್ಮಾಣ ಇತ್ಯಾದಿ.

ಕರಾವಳಿ ಭಾಗದಲ್ಲಿ ಹಿಂದಿನಿಂದಲೂ ಅಕ್ಕಿಯನ್ನು ಕೆಡದಂತೆ ಶೇಖರಿಸಿಡಲು ಒಣ ಹುಲ್ಲಿನಿಂದ ಕಟ್ಟಿಡುವ ಪದ್ಧತಿ ಚಾಲ್ತಿಯಿತ್ತು. ಅದನ್ನೇ ಅಕ್ಕಿ ಮುಡಿ ಎಂದು ಕರೆಯುತ್ತಾರೆ. ಅಕ್ಕಿ ಮುಡಿಯನ್ನು ಕಟ್ಟುವುದು ಒಂದು ನೈಪುಣ್ಯತೆ ಹಾಗೂ ಕೈಚಳಕದ ಕಲೆಯಾಗಿದೆ.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಭಾಗದಲ್ಲಿ ಅಕ್ಕಿಮುಡಿ ಹೆಚ್ಚು ಬಳಕೆಯಲ್ಲಿತ್ತು. ಕರಾವಳಿ ಭಾಗದ ಜನರು ನಿತ್ಯದ ಆಹಾರಕ್ಕಾಗಿ ಅನ್ನವನ್ನೇ ಹೆಚ್ಚು ಅವಲಂಬಿಸಿರುವುದರಿಂದ ಹಾಗೂ ಭತ್ತವನ್ನೇ ಹೆಚ್ಚಾಗಿ ಕೃಷಿ ಮಾಡುವುದರಿಂದ ಭತ್ತದ ಗದ್ದೆಗಳು ಹೆಚ್ಚಾಗಿ ಕಾಣಸಿಗುತ್ತವೆ.

ಹಿಂದೆ ಇಂದಿನ ಹಾಗೇ ಆಧುನಿಕ ಸಂಗ್ರಹಣ ಸಾಧನಗಳು ಇರಲಿಲ್ಲ. ಮಣ್ಣಿನ ಮಡಿಕೆಗಳು, ಮರದ ಡಬ್ಬಗಳು ಹಾಗೂ ಹುಲ್ಲಿನಿಂದ ತಯಾರಿಸಲ್ಪಟ್ಟ ಮುಡಿಗಳೇ ಹೆಚ್ಚು ಬಳಕೆಯಾಗುತ್ತಿ-ದ್ದವು. ಅಕ್ಕಿಯ ಮುಡಿಗಳನ್ನು ಒಂದು ಕೋಣೆಯ ಒಳಗೆ ಭತ್ತದ ಹೊಟ್ಟಿನ ಒಳಗೆ ಇರಿಸುತ್ತಿದ್ದರು. ಗದ್ದೆಗಳಲ್ಲಿ ಬೆಳೆ ಬೆಳೆದು ಅದನ್ನು ಹಡಿ ಮಂಚಕ್ಕೆ ಹೊಡೆದು ಬಿದ್ದ ಭತ್ತವನ್ನು ರಾಶಿ ಮಾಡಿಟ್ಟು ಬೈಹುಲ್ಲನ್ನು ಅಂಗಳದಲ್ಲೇ ಶೇಖರಿಸಿ ಅಕ್ಕಿ ಮುಡಿ ಕಟ್ಟಲಾಗುತ್ತಿತ್ತು.

ಮುಡಿ ಕಟ್ಟುವುದಕ್ಕೆ ಮುಖ್ಯವಾಗಿ ಬೇಕಾಗುವ ಮೂಲ ವಸ್ತು ಬೈಹುಲ್ಲು. ಬೈಹುಲ್ಲಿನಿಂದ ನೇಯ್ದ ಹಗ್ಗ, ಉದ್ದನೆಯ ಬೈಹುಲ್ಲು, ಪುಡಿ ಬೈಹುಲ್ಲುಗಳು ಮುಡಿ ಕಟ್ಟುವುದಕ್ಕೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಪುಣ್ಕೆ ಅಥವಾ ಹುಣಿಸೆಮರದ ಕಲ್ಲೆ



ಸಿದ್ಧವಾಯಿತು ಅಕ್ಕಿಮುಡಿ

ಅಥವಾ ಕುದಂಟಿ. ಅಂತಹ ಮರದ ತುಂಡಿನ ಹೊಡೆತ ಎಲ್ಲ ಸುತ್ತಲಿಂದ ಬಿದ್ದಾಗಲೇ ಬೈಹುಲ್ಲು ಎಡೆ ರಹಿತವಾಗಿ ಒತ್ತಾಗಿ ಸೇರಿ ನಿರ್ವಾತವನ್ನು ಉಂಟುಮಾಡುತ್ತದೆ. ಹಾಗೂ ಒಳಗಿನ ಅಕ್ಕಿ, ಭತ್ತ ಹಾಳಾಗದಂತೆ ವರ್ಷಾನುಗಟ್ಟಲೆ ರಕ್ಷಿಸಲ್ಪಡುತ್ತದೆ.

ಶೇಖರಿಸಿಟ್ಟ ಬೈಹುಲ್ಲಿನಲ್ಲಿ ಸಾಕಷ್ಟು ಹಗ್ಗ ಹೊಸೆದ ತರುವಾಯ ಬಹಳ ಉದ್ದದ ಬೈಹುಲ್ಲಿನ ಒಂದು ಸೂಡಿ ತೆಗೆದುಕೊಂಡು ಅದರ ತಲೆಗೆ ಚಿಕ್ಕ ಬೈಹುಲ್ಲಿನ ಹಗ್ಗದಿಂದ ಕಟ್ಟಿ ಬಹಳ ಸುಂದರವಾಗಿ ವೃತ್ತಾಕಾರದಲ್ಲಿ ನೆಲದಲ್ಲಿ ಬಿಡಿಸಿಟ್ಟು, ಕಟ್ಟಿದ ತಲೆಯನ್ನು, ಒಳಕ್ಕೆ ಬರುವಂತೆ ನೆಲದ ಮೇಲಿಟ್ಟು ತುಳಿದು ಪುಡಿ ಬೈಹುಲ್ಲನ್ನು ಬೇಕಾದಷ್ಟು ಪ್ರಮಾಣದಲ್ಲಿ ವೃತ್ತದ ಒಳಗೆ ಬಿಡಿಸಿಟ್ಟು ಒಂದೊಂದೇ ಕಳಸದ ಅಕ್ಕಿಯನ್ನು ಒಳಕ್ಕೆ ಸುರುವ ಬೇಕು. ಅಕ್ಕಿಯನ್ನು ಸುರುವು-ತ್ತಿದ್ದಂತೆಯೇ ಸ್ವಲ್ಪ ಸ್ವಲ್ಪವೇ ಒಂದೊಂದೇ ಗಂಟು ಹಾಕಿ ಇರಿಸಿದ್ದ ಬೈಹುಲ್ಲಿನ ಹಗ್ಗವನ್ನು ಎತ್ತರಿಸುತ್ತಾ ಮೂರು ಕಳಸಿಗೆ ಅಕ್ಕಿ ಅಥವಾ ಭತ್ತವನ್ನು ತುಂಬಿಸಬೇಕು.

ಒಂದು ಕಳಸ ಎಂದರೆ 14 ಸೇರು. ಹೀಗೆ 42 ಸೇರು ಅಕ್ಕಿ ಮುಡಿಯಲ್ಲಿ ಹಾಕುವಾಗ ಮೂರು ಬೈಹುಲ್ಲಿನ ಹಗ್ಗದ ವೃತ್ತ ಮುಡಿಯ ಮಧ್ಯದಲ್ಲಿ ಕಟ್ಟಲ್ಪಟ್ಟಿರುತ್ತದೆ. ತರುವಾಯ ಮತ್ತೆ ಮೇಲ್ಗಡೆ ಸ್ವಲ್ಪ ಪುಡಿ ಬೈಹುಲ್ಲನ್ನು ಇಟ್ಟು ಕೆಳಗಿನಿಂದ ಮೇಲಕ್ಕೆ ಇಪ್ಪತ್ತಮೂರುವರೆ ಕೋನದಲ್ಲಿ ಬೈಹುಲ್ಲಿನ ಹಗ್ಗವನ್ನು ಸುಮಾರು ಹದಿನಾರು ಎಳೆಯಲ್ಲಿ ಎಳೆದು ಕಟ್ಟಿಕೊಂಡು ಬರುತ್ತಾ ಕುದಂಟಿಯಿಂದ ಹೊಡೆದು ಸರಿಗೊಳಿಸಿ, ಹದಗೊಳಿಸಿ ಮುಡಿಕಟ್ಟುವ ದೃಶ್ಯ ನಿಜಕ್ಕೂ ಅತ್ಯದ್ಭುತ ಕಲೆಯ ದರ್ಶನ. ಇದು ಸಾಮಾನ್ಯರಿಗೆ ಬರುವ ಕಲೆಯಲ್ಲ. ಇದರಲ್ಲಿ ಎಷ್ಟು ಜಾಣ್ಮೆ ಇದೆಯೋ ಅಷ್ಟೇ ಚಾಕಚಕ್ಯತೆ, ಶ್ರಮ, ತೋಳ್ಬಳವೂ ಅತ್ಯಗತ್ಯ.

ಮುಡಿ ಕಟ್ಟಿ ಸಂಪೂರ್ಣ ಆದ ಬಳಿಕ ಎಲ್ಲೂ ಒಂದೇ ಒಂದು ಬೈಹುಲ್ಲಿನ ತುದಿ ಹೊರಕ್ಕೆ ಬರದಿದ್ದರೆ ಅಂತಹ ಮುಡಿ ಕಟ್ಟಿದಾತ ಅತ್ಯಂತ ನಿಪುಣ ಎಂದೇ ಪರಿಗಣಿಸಲಾಗುತ್ತಿತ್ತು. 'ಹಿಂದೆಲ್ಲಾ ಮನೆಯ ಎದುರಲ್ಲಿರುವ ಕಣಜವನ್ನು ನೋಡಿಯೇ ಆ ಮನೆಯ, ಮನೆಯವರ ಶ್ರೀಮಂತಿಕೆಯನ್ನು ಅಳೆಯಲಾಗುತ್ತಿತ್ತು' ಎಂದು ದ್ಯಾವಯ್ಯ ಹಳೆಯ ನೆನಪನ್ನು ಹಂಚಿಕೊಳ್ಳುತ್ತಾರೆ.

ಇಂದಿಗೂ ಉಡುಪಿ ಕೃಷ್ಣಮಠಕ್ಕೆ ಜಾತ್ರೆ, ಪರ್ಯಾಯದ ಸಮಯದಲ್ಲಿ ಭಕ್ತರು ಹೊರೆ ಕಾಣಿಕೆಯಾಗಿ ಅಕ್ಕಿ ಮುಡಿಯನ್ನೇ ದೇವರಿಗೆ ಅರ್ಪಿಸುವುದನ್ನು ಕಾಣಬಹುದು. ಅಷ್ಟೇ ಅಲ್ಲದೇ ಕರಾವಳಿಯ ಬಹುತೇಕ ದೇವಸ್ಥಾನದ ಬ್ರಹ್ಮಕಲಶೋತ್ಸವದ ಧಾರ್ಮಿಕ ಆಚರಣೆಯಲ್ಲಿ ಭಕ್ತರು ಅಕ್ಕಿ ಮುಡಿಯನ್ನು ಸಮರ್ಪಿ-ಸುತ್ತಾರೆ.

ಇಂತಹ ಮುಡಿಕಟ್ಟುವ, ಕಣಜ ರಚಿಸುವ ಸುಂದರ ಕಲೆ ಇತ್ತೀಚೆಗೆ ನಶಿಸಿ ಹೋಗುತ್ತಿದೆ. ವಿಭಕ್ತ ಚಿಕ್ಕ ಕುಟುಂಬಗಳ ಕಾರಣ, ಗೋಣಿಚೀಲ ಹಾಗೂ ಪ್ಲಾಸ್ಟಿಕ್ ಚೀಲಗಳ ಉಪಯೋಗದ ಕಾರಣ, ನುರಿತ ಕೈಗಳಿಗೆ ದೊರಕದ ಕೆಲಸದ ಕಾರಣ ಅಂತಹ ನಿಷ್ಣಾತ ಮುಡಿಕಟ್ಟುವವರು ಕೆಲಸವಿಲ್ಲದೆ ಬೇರೆ ಉದ್ಯೋಗದ ಮೊರೆಹೋಗುತ್ತಿದ್ದಾರೆ.

ಎಲ್ಲವೂ ಪ್ಲಾಸ್ಟಿಕ್ ಮಯವಾಗಿರುವ ಇಂದಿನ ದಿನಗಳಲ್ಲಿ ಪ್ರಕೃತಿಗೆ ಪೂರಕವಾದ ಬೈಹುಲ್ಲು, ಮುಡಿಕಟ್ಟುವಿಕೆ, ಕಣಜ ರಚನೆಗಳಂತಹ ಅದ್ಭುತ ದೇಸೀ ಕಲೆ ಅಪರೂಪವಾಗುತ್ತಿದೆ. ಇಂತಹ ಅಪರೂಪದ ಕಲೆಯನ್ನು ಕಲಿಯುವ ಉತ್ಸಾಹವನ್ನು ಯಾರೊಬ್ಬರೂ ತೋರುತ್ತಿಲ್ಲ. ಹಾಗಾಗಿ ಇಂದು ಅಕ್ಕಿ ಮುಡಿಕಟ್ಟುವ ಕಲೆ ನಿಧಾನವಾಗಿ ನಶಿಸಿ ಹೋಗುತ್ತಿದೆ ಎಂಬ ವಿಷಾದ ಕಾಡುತ್ತದೆ.

# ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

## ಗಣಿತದಲ್ಲಿ ಗರ್ದಿ ಗಮ್ಮತ್ತು

ಸ್ವಾರಸ್ಯಕರ ಸಂಖ್ಯಾಗೋಪುರ

| | | | | | |
|---|---|---|---|---|---|
| 1 | X | 9 | -1 | = | 08 |
| 21 | X | 9 | -1 | = | 188 |
| 321 | X | 9 | -1 | = | 2888 |
| 4321 | X | 9 | -1 | = | 38888 |
| 54321 | X | 9 | -1 | = | 488888 |
| 654321 | X | 9 | -1 | = | 5888888 |
| 7654321 | X | 9 | -1 | = | 68888888 |
| 87654321 | X | 9 | -1 | = | 788888888 |
| 987654321 | X | 9 | -1 | = | 8888888888 |


ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಡಣ್ಣ ಚಿಕ್ಕು

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

## ಸಿಲುಕಿದ್ದು ಮೀನಲ್ಲ ಹಾವು!

ಗುಂಡ ಒಂದು ದಿನ ನದಿ ದಂಡೆಯಲ್ಲಿ ಕುಳಿತು ಮೀನು ಹಿಡಿಯಲು ಗಾಳ ಬೀಸಿದ. ಹೀಗೆ ಕುಳಿತು ಅರ್ಧ ಗಂಟೆಯಾದರೂ ಮೀನು ಬೀಳುವ ಲಕ್ಷಣವೇ ಕಾಣಿಸಲಿಲ್ಲ. ಇನ್ನೇನು ಎದ್ದು ಹೊರಡಬೇಕು ಎನ್ನುವಷ್ಟರಲ್ಲಿ ಗಾಳಕ್ಕೆ ಕಟ್ಟಿದ್ದ ಹಗ್ಗ ಅಲುಗಾಡಿತು. ಮೀನು ಸಿಕ್ಕಿತು ಎನ್ನುವ ಖುಷಿಯಿಂದ ಗಾಳವನ್ನು ತಕ್ಷಣದಲ್ಲೇ ಎಳೆದ. ಆದರೆ ಮೀನಿನ ಬದಲು ದೊಡ್ಡ ಹಾವೊಂದು ಗಾಳದಲ್ಲಿ ಸಿಲುಕಿದ್ದನ್ನು ಕಂಡು ಗುಂಡ ಬೆಚ್ಚಿಬಿದ್ದ.




## ಜಾಣಪದ ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಎರಡೂ ಪದಗಳ ಅಕ್ಷರಗಳನ್ನು ಕೂಡಿಸಿ ನಾಲ್ಕಕ್ಷರದ ಒಂದೇ ಪದ ಮಾಡಿ

| | | | | |
|---|---|---|---|---|
| 1 | ನವ | + | ಅತಿ | |
| 2 | ಗಡ | + | ಸರ | |
| 3 | ರಮಾ | + | ವನ | |
| 4 | ದಾರ | + | ಹರಿ | |
| 5 | ಲವ | + | ಕರ | |
| 6 | ಪಾದ | + | ಆನೆ | |
| 7 | ಕಣಿ | + | ಮರಿ | |
| 8 | ಸ್ವರ | + | ಸತಿ | |
| 9 | ಲವ | + | ನತ್ತು | |
| 10 | ಹರಿ | + | ಮಾಟ | |

## ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

| | | | | | | | |
|---|---|---|---|---|---|---|---|
| 1 | ಕಾಗೆ | + | ಗುಡಿ | + | ಹೋ | = | |
| 2 | ಮಂತ್ರಿ | + | ಗಾಯ | + | ತ್ರ | = | |
| 3 | ಗೊನೆ | + | ಮಲ್ಲ | + | ರ | = | |
| 4 | ಗಲ್ಲು | + | ಕರ | + | ನಾ | = | |
| 5 | ಮಾವ | + | ಸಂತ | + | ಸ | = | |

## ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

## ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ವೈಷ್ಣವಿ ನಾ. ಗೊಂದಿ
ಹುಬ್ಬಳ್ಳಿ



ಹರ್ಷವರ್ಧನ ಎಚ್.ಎಂ.
ಹಿರಿಯೂರು



ಪ್ರದ್ಯುಮ್ನ ಪಿ.ಎಸ್.
ಧಾರವಾಡ



ಲಕ್ಷ ಎಂ.ವಿ.
ಗುಬ್ಬಿ



ತನುಶ್ರೀ ಅರಗಿನಶೆಟ್ಟಿ
ಬಾದಾಮಿ



ಧೃತಿ ಎಚ್.
ಮೈಸೂರು

## ಕೊಂಚತಂತ್ರ

ಅಮರಶಿಲ್ಪಿ ಜಕಣಾಚಾರಿಯ ಅತ್ಯಂತ ಅದ್ಭುತ ಶಿಲ್ಪಕಲೆಯನ್ನು ಕಾಣಬಹುದಾದ ಮೂರು ಸ್ಥಳಗಳ ಹೆಸರುಗಳನ್ನು KHB(ಕರ್ನಾಟಕ ಹೌಸಿಂಗ್ ಬೋರ್ಡ್) ಎಂಬ ಸಂಕ್ಷಿಪ್ತಾಕ್ಷರಗಳನ್ನು ನೆನಪಿಡುವ ಮೂಲಕ ಗುರುತಿಸಬಹುದು.

K=ಕೈದಾಳ
H=ಹಳೇಬೀಡು
B=ಬೇಲೂರು

## ಮೋGನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಪದಗಳ ನಡುವೆ ಅಕ್ಷರ ಪಟ್ಟಿಯಿಂದ ಆಯ್ದು ಇನ್ನೊಂದು ಅಕ್ಷರ ಸೇರಿಸಿ ಹೊಸಪದ ಮಾಡಿ

ಅಕ್ಷರ ಪಟ್ಟಿ

| | | | | |
|---|---|---|---|---|
| L | A | L | L | O |
| W | L | I | O | N |

| | | | |
|---|---|---|---|
| 1 | MAN | | |
| 2 | WORD | | |
| 3 | BANK | | |
| 4 | BACK | | |
| 5 | CAT | | |
| 6 | BAT | | |
| 7 | GOD | | |
| 8 | BET | | |
| 9 | TIN | | |
| 10 | MAY | | |

## ಅದಲು-ಬದಲು

ಇಲ್ಲಿ ಕೆಲವು ಸೂಚನೆಗಳ ಅಕ್ಷರಗಳು ಸ್ಥಾನಪಲ್ಲಟವಾಗಿವೆ. ನೀವು ಪುನಃ ಅವುಗಳನ್ನು ಜೋಡಿಸಿ ಸರಿಪಡಿಸಿ.

1.ಬೇಮುರಿಗಿಗಶ್ರಾಂತಿವಿಸಿ:

2.ನದುತಾಲ್ಲಿಟಿಕೈಳೆತುಯರಬಾ:

3.ಬಗಿರಿಸಾನ್ನಿಲಾ:



## ಕಳೆದ ಸಂಚಿಕೆಯ ಸರಿ ಉತ್ತರಗಳು

**ಪದಸಂಕಲನ:**
1.ತೆರಿಗೆ ನಷ್ಟ 2.ಮಾವನಕೋಟು
3.ಕೋತಿಯಬಾಲ 4.ಮಾಸಿಕಕಂತು
5.ರಾಗಿಅಂಬಲಿ
**ಜಾಣಪದ ಆಟ:**
1.ರಸಮಂಜರಿ 2.ಶರಪಂಜರ
3.ಕರಿಕಂಬಳಿ 4.ಜನಸಂದಣಿ
5.ರಾಗಿಅಂಬಲಿ 6.ಸುಖಸಂಸಾರ
7.ಬನಶಂಕರಿ 8.ಪುಷ್ಪಮಂದಾರ
9.ಸೋವಿಅಂಗಡಿ 10.ಪದಸಂಪದ
**ಮೋಜಿನ ಇಂಗ್ಲಿಷ್:**
1.White 2.Bonus 3.Money
4.Shine 5.Sweet
**ಹೊಂದಿಸು ಆನಂದಿಸು:**
1.1948 2.1956 3.1964
4.1976 5.1991

# ಬಲಿಷ್ಠ ಭಾರತದೆದುರು ಪಾಕ್‌ಗೆ ‘ಸತ್ವಪರೀಕ್ಷೆ’


## ಸೂರ್ಯಕುಮಾರ್ ಪಡೆಗೆ ಇಂದು ಸತತ ಎರಡನೇ ಗೆಲುವಿನ ನಿರೀಕ್ಷೆ
## • ಸಲ್ಮಾನ್ ಆಘಾ ಬಳಗಕ್ಕೆ ಹೊಸಮುಖಗಳ ಮೇಲೆ ಭರವಸೆ

• ಆರ್.ಕೌಶಿಕ್

**ದುಬೈ:** ಪಂದ್ಯ ಏಕಪಕ್ಷೀಯವಾಗಲಿ ಅಥವಾ ಹೋರಾಟದಿಂದ ಕೂಡಿರಲಿ, ಅತಿಯಾದ ಪ್ರಚಾರ ಇರಲಿ, ಇಲ್ಲದಿರಲಿ ಈ ಕಟ್ಟಾ ಎದುರಾಳಿಗಳ ಪಂದ್ಯ ಕುತೂಹಲಕ್ಕೆ ಕಾರಣವಾಗುತ್ತದೆ. ಹಿಂದೊಂದು ಕಾಲದಲ್ಲಿ ಇದ್ದಂತೆ ಈಗ ಎರಡೂ ತಂಡಗಳ ಶಕ್ತಿ ಒಂದೇ ಸಮ ಇಲ್ಲದಿರಬಹುದು, ಆದರೆ ಭಾರತ–ಪಾಕಿಸ್ತಾನ ನಡುವಣ ಸೆಣಸಾಟ ಪ್ರತಿ ಸಲ ಕ್ರಿಕೆಟ್ ಆಸಕ್ತರ ಗಮನ ಸೆಳೆಯುತ್ತದೆ.

ಶಾರ್ಜಾದ ಮರಳುಗಾಡು, ಈ ಎರಡು ತಂಡಗಳ ನಡುವಣ 1984ರ ಏಷ್ಯಾ ಕಪ್‌ನಿಂದ ಆರಂಭವಾಗಿ ಹಲವು ರೋಚಕ ಸೆಣಸಾಟಗಳಿಗೆ ಸಾಕ್ಷಿಯಾಗಿದೆ. ಕಿಕ್ಕಿರಿದ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಪಂದ್ಯಗಳು ಸಂಚಲನ ಮೂಡಿಸುತ್ತಿದ್ದವು. ಎದೆಬಡಿತ ಹೆಚ್ಚಿಸುವಂತೆ ಅಲ್ಪ ಅಂತರದಲ್ಲಿ ಫಲಿತಾಂಶಗಳು ನಿರ್ಧಾರವಾಗುತ್ತಿದ್ದವು. ಜಾವೆದ್ ಮಿಯಾಂದಾದ್ 1986ರ ಆಸ್ಟ್ರೇಲೇಷ್ಯಾ ಕಪ್‌ನಲ್ಲಿ ಚೇತನ್ ಶರ್ಮಾ ಅವರ ಕೊನೆಯ ಎಸೆತವನ್ನು ಸಿಕ್ಸರ್‌ಗಟ್ಟಿ ಪಾಕಿಸ್ತಾನಕ್ಕೆ ಜಯತಂದು ಕೊಟ್ಟಿದ್ದು ಅಚ್ಚಳಿಯದೇ ನೆನಪಿನಲ್ಲುಳಿಯುವ ಪಂದ್ಯ.

ಭಾರತ ತಂಡವು ಭಾನುವಾರ ಏಷ್ಯಾ ಕಪ್ ‘ಎ’ ಗುಂಪಿನಲ್ಲಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ. ಹಾಲಿ ಟಿ20 ವಿಶ್ವ ಚಾಂಪಿಯನ್ ಭಾರತ ಸಾಕಷ್ಟು ಮುಂದೆ ಸಾಗಿದೆ. 2009ರ ವಿಶ್ವ ಚಾಂಪಿಯನ್ ಪಾಕ್ ತಂಡ ಇದಕ್ಕೆ ಪ್ರತಿಕ್ರಿಯೆ ನೀಡಲು ಸಮಯ ತೆಗೆದುಕೊಂಡಿತು. ನ್ಯೂಜಿಲೆಂಡ್‌ನ ಮೈಕ್ ಹೆಸ್ಸನ್ ಹೆಡ್ ಕೋಚ್ ಆಗಿ ಹೊಣೆ ವಹಿಸಿಕೊಂಡ ಬಳಿಕ ಚುಟುಕು ಕ್ರಿಕೆಟ್‌ನ


ಪಾಕ್ ತಂಡದ ನಾಯಕ ಸಲ್ಮಾನ್ ಆಘಾ

ದೃಷ್ಟಿಕೋನ ಬದಲಾಯಿಸಿದ್ದು, ತಂಡದಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ.

ಬಹು ತಂಡಗಳು ಪಾಲ್ಗೊಳ್ಳುವ ಯಾವುದೇ ಕ್ರಿಕೆಟ್ ಮೇಳವಿರಲಿ, ಭಾರತ–ಪಾಕಿಸ್ತಾನ ನಡುವಣ ಮುಖಾಮುಖಿ ಎಂದೆಂದೂ ಕುತೂಹಲದಿಂದ ನಿರೀಕ್ಷಿಸುವ ಪಂದ್ಯ ಎನಿಸುತ್ತದೆ. ಭಾನುವಾರದ ಸೆಣಸಾಟವೂ ಇದಕ್ಕೆ ಹೊರತಾಗಿಲ್ಲ.

**ಟೀಕಾಪ್ರಹಾರ:** ಏಪ್ರಿಲ್ 22ರ ಪಹಲ್ಗಾಮ್ ಹತ್ಯಾಕಾಂಡದ ನಂತರ ಮೊದಲ ಬಾರಿ ಈ ಎರಡು ತಂಡಗಳು ಎದುರಾಗಿವೆ. ಪಾಕಿಸ್ತಾನ ವಿರುದ್ಧ ಪಂದ್ಯ ಬಹಿಷ್ಕರಿಸದ ಕಾರಣ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ವಿವಿಧ ವಲಯಗಳಿಂದ ಟೀಕಾಪ್ರಹಾರಗಳನ್ನು ಎದುರಿಸುತ್ತಿದೆ. ಈ ನಿಟ್ಟಿನಲ್ಲಿ ಬಿಸಿಸಿಐ, ಸರ್ಕಾರದ ನೀತಿಯನ್ನು ಅನುಸರಿಸಿದೆ. ಖಂಡ ಮತ್ತು ಐಸಿಸಿ ಕೂಟಗಳಲ್ಲಿ ಪಾಕಿಸ್ತಾನ ವಿರುದ್ಧ ಆಡಲು ಕೇಂದ್ರ ಹಸಿರು ನಿಶಾನೆ ತೋರಿದ್ದು, ದ್ವಿಪಕ್ಷೀಯ ಸರಣಿಗಳಿಗೆ ನಿಷೇಧ ಹೇರಿದೆ.

14 ತಿಂಗಳ ಹಿಂದೆ–ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಚುಟುಕು ಮಾದರಿಗೆ ವಿದಾಯ ಹೇಳಿದಾಗಲೇ ಭಾರತ ಟಿ20 ತಂಡದಲ್ಲಿ ಪರಿವರ್ತನೆಯ ಯುಗ ಆರಂಭವಾಗಿತ್ತು. ಪಾಕಿಸ್ತಾನ ಈಗ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ. ಮಾಜಿ ನಾಯಕರು ಹಾಗೂ ಪ್ರಮುಖ ಬ್ಯಾಟರ್‌ಗಳಾದ ಬಾಬರ್ ಆಜಂ ಮತ್ತು ಮೊಹಮ್ಮದ್ ರಿಜ್ವಾನ್ ಅವರನ್ನು ಹೊರಗಿಟ್ಟು ಸಲ್ಮಾನ್ ಆಘಾ ಅವರಿಗೆ ಕಪ್ತಾನ ಪಟ್ಟ ವಹಿಸಿದೆ. ಭರವಸೆಯ ಯುವಮುಖಗಳಿಗೆ ಮಣೆಹಾಕಿದೆ. ಭಾರತ ವಿರುದ್ಧದ 13 ಟಿ20 ಪಂದ್ಯಗಳಲ್ಲಿ 10 ಪಂದ್ಯಗಳನ್ನು ಸೋತಿದ್ದ ತಂಡದ ಆಟಗಾರರಲ್ಲಿ ಬಹುತೇಕರು ಈಗ ಹೊರಗಿದ್ದಾರೆ.

ಪಾಕಿಸ್ತಾನ ತಂಡದ ಬಹುತೇಕ ಮಂದಿ ಇನ್ನೂ ಬೇರೂರುವ ಹಂತದಲ್ಲಿದ್ದಾರೆ. ಹೀಗಾಗಿ ಆ ತಂಡದ ಸಾಮರ್ಥ್ಯ ನಿಗೂಢವಾಗಿದೆ. ಆದರೆ ಭಾರತ ತಂಡವು ತನ್ನ ಆಟಗಾರರ ಸಾಮರ್ಥ್ಯದ ಮೇಲೆ ವಿಶ್ವಾಸ ಇಟ್ಟುಕೊಂಡಿದೆ. ಎದುರಾಳಿಗಳ ಬಗ್ಗೆ ಚಿತ್ತಹರಿಸುವ ಬದಲು ತಮ್ಮಿಂದೇನು ಮಾಡಬಹುದು ಎಂಬುದರ ಕಡೆಗಷ್ಟೇ ಅವರು ಗಮನವಿಡುತ್ತಿದ್ದಾರೆ. ಭಾರತ ತನ್ನ ಪೂರ್ಣ ಸಾಮರ್ಥ್ಯದ ಸಮೀಪ ಆಡಿದರೂ, ಆ ತಂಡವನ್ನು ತಡೆದು ನಿಲ್ಲಿಸುವುದು ಪಾಕಿಸ್ತಾನಕ್ಕೆ ವಾಸ್ತವದಲ್ಲಿ ಅಸಾಧ್ಯ. ಹೀಗಾಗಿ ನಿರೀಕ್ಷೆಯ ಭಾರದ ಕಡೆಯಿಂದ ಹೊರಬಂದು ಆಟದ ಕಡೆಗಷ್ಟೇ ಭಾರತ ಗಮನಹರಿಸಬೇಕಾಗಿದೆ.

ಉಭಯ ತಂಡಗಳು ‘ಎ’ ಗುಂಪಿನ ತಮ್ಮ ಮೊದಲ ಪಂದ್ಯಗಳಲ್ಲಿ ಸುಲಭ ಜಯ ಸಾಧಿಸಿವೆ. ಭಾರತ 9 ವಿಕೆಟ್‌ಗಳಿಂದ ಯುಎಇ ತಂಡವನ್ನು ಮಣಿಸಿದರೆ, ಪಾಕಿಸ್ತಾನ ತಂಡ ಶುಕ್ರವಾರ ಒಮಾನ್ ತಂಡವನ್ನು 93 ರನ್‌ಗಳಿಂದ ಸೋಲಿಸಿದೆ. ಎರಡೂ ತಂಡಗಳಿಗೆ ಸತ್ವಪರೀಕ್ಷೆ ಎದುರಾಗಿಲ್ಲ.

### ತಂಡಗಳು

**ಭಾರತ:** ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್, ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ಶಿವಂ ದುಬೆ, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಸಂಜು ಸ್ಯಾಮ್ಸನ್, ರಿಂಕು ಸಿಂಗ್.

**ಪಾಕಿಸ್ತಾನ:** ಫಖರ್ ಜಮಾನ್, ಹಸನ್ ನವಾಝ್, ಖುಷ್‌ದಿಲ್ ಶಾ, ಸಯಿಮ್ ಅಯೂಬ್, ಸಲ್ಮಾನ್ ಆಘಾ (ನಾಯಕ), ಹುಸೇನ್ ತಲತ್, ಫಾಹೀಮ್ ಅಶ್ರಫ್, ಮೊಹಮ್ಮದ್ ನವಾಜ್, ಮೊಹಮ್ಮದ್ ಹ್ಯಾರಿಸ್, ಸಾಹಿಬ್‌ಝಾದಾ ಫರ್ಹಾನ್, ಅಬ್ರಾರ್ ಅಹ್ಮದ್, ಹ್ಯಾರಿಸ್ ರವೂಫ್, ಹಸನ್ ಅಲಿ, ಸಲ್ಮಾನ್ ಮಿರ್ಜಾ, ಶಾಹಿನ್ ಅಫ್ರೀದಿ, ಸೂಫಿಯಾನ್ ಮುಖೀಮ್, ಮೊಹಮ್ಮದ್ ವಾಸಿಂ ಜೂ.

**ಪಂದ್ಯ ಆರಂಭ: ರಾತ್ರಿ 8**
**ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್**

ಪಾಕಿಸ್ತಾನಕ್ಕೆ ಹೆಚ್ಚು ತಾಲೀಮು ಸಿಕ್ಕಿದೆ. ಸ್ಪಿನ್‌ಸ್ನೇಹಿ ಶಾರ್ಜಾದ ಪಿಚ್‌ನಲ್ಲಿ ಪಾಕಿಸ್ತಾನ ತಂಡ ತ್ರಿಕೋನ ಸರಣಿಯ ಫೈನಲ್‌ನಲ್ಲಿ ಅಫ್ಗಾನಿಸ್ತಾನ ತಂಡವನ್ನು ಸೋಲಿಸಿತ್ತು.

ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದ ತಾಜಾ ಪಿಚ್ ತಂಡಗಳನ್ನು ಸ್ವಾಗತಿಸಿದೆ. ಇಲ್ಲಿ ಪಾಕಿಸ್ತಾನ, ಭಾರತ ವಿರುದ್ಧ ಆಡಿದ ಕೊನೆಯ ಮೂರು ಟಿ20 ಪಂದ್ಯಗಳಲ್ಲಿ ಎರಡರಲ್ಲಿ ಜಯಿಸಿದೆ. ಭಾನುವಾರದ ಪಂದ್ಯ ಕುತೂಹಲ ಮೂಡಿಸಿದೆ.


ಅಭ್ಯಾಸ ನಡೆಸಿದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಉಪನಾಯಕ ಶುಭಮನ್ ಗಿಲ್ –ಎಎಫ್‌ಪಿ ಚಿತ್ರ

# ಲಂಕಾಗೆ ಮಣಿದ ಬಾಂಗ್ಲಾ

**ಅಬುಧಾಬಿ (ಪಿಟಿಐ):** ಪಥುಮ್ ನಿಸಾಂಕ (50;34ಎ) ಮತ್ತು ಕಮಿಲ್ ಮಿಶಾರ (ಔಟಾಗದೇ 46;32ಎ) ಅವರ ಬ್ಯಾಟಿಂಗ್ ಬಲದಿಂದ ಶ್ರೀಲಂಕಾ ತಂಡವು ಶನಿವಾರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ‘ಬಿ’ ಗುಂಪಿನ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿ, ಶುಭಾರಂಭ ಮಾಡಿತು.

ಅನುಭವಿ ಸ್ಪಿನ್ನರ್ ವನಿಂದು ಹಸರಂಗ (25ಕ್ಕೆ 2) ನೇತೃತ್ವದಲ್ಲಿ ಶ್ರೀಲಂಕಾದ ಬೌಲರ್‌ಗಳು, ಬಾಂಗ್ಲಾದೇಶ ತಂಡವನ್ನು 5 ವಿಕೆಟ್‌ಗೆ 139 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು. ಈ ಗುರಿಯನ್ನು ಬೆನ್ನಟ್ಟಿದ ಲಂಕಾ ತಂಡವು ಇನ್ನೂ 32 ಎಸೆತಗಳು ಬಾಕಿ ಇರುವಂತೆ 4 ವಿಕೆಟ್‌ಗೆ 140 ರನ್ ಗಳಿಸಿ ಸಂಭ್ರಮಿಸಿತು.

ಆರಂಭಿಕ ಆಟಗಾರ ಕುಶಾಲ್ ಮೆಂಡಿಸ್ (3) ಬೇಗನೇ ಔಟಾದರು. ನಂತರದಲ್ಲಿ ಪಥುಮ್ ಮತ್ತು ಕಮಿಲ್ ಎರಡನೇ ವಿಕೆಟ್ ಜೊತೆಯಾಟದಲ್ಲಿ ಬಿರುಸಿನ 95 ರನ್ (52ಎ) ಸೇರಿಸಿ, ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಇದಕ್ಕೂ ಮೊದಲು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಬಾಂಗ್ಲಾ ತಂಡ ರನ್ ಖಾತೆ ತೆರೆಯುವ ಮೊದಲೇ 2 ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತ್ತು. ಒಂದು ಹಂತದಲ್ಲಿ ತಂಡವು 53 ರನ್‌ಗಳಾಗುವಷ್ಟರಲ್ಲಿ ನಾಯಕ ಲಿಟನ್


ವಿಕೆಟ್ ಪಡೆದ ಸಂಭ್ರಮದಲ್ಲಿ ಶ್ರೀಲಂಕಾ ತಂಡದ ವನಿಂದು ಹಸರಂಗ

ದಾಸ್ (28) ಅವರನ್ನೂ ಸೇರಿ (9.5 ಓವರ್) 5 ವಿಕೆಟ್ ಕಳೆದುಕೊಂಡು ಕುಸಿತ ಅನುಭವಿತ್ತು. ಆದರೆ ಜೇಕರ್ ಅಲಿ (ಅಜೇಯ 41, 34ಎ) ಮತ್ತು ಶಮೀಮ್ ಹುಸೇನ್ (ಅಜೇಯ 42, 34ಎ, 4x3, 6x1) ಮುರಿಯದ ಆರನೇ ವಿಕೆಟ್‌ಗೆ 86 ರನ್ ಸೇರಿಸಿ ತಂಡದ ನೆರವಿಗೆ ನಿಂತರು.

**ಸಂಕ್ಷಿಪ್ತ ಸ್ಕೋರು:** ಬಾಂಗ್ಲಾದೇಶ: 20 ಓವರುಗಳಲ್ಲಿ 5ಕ್ಕೆ 139 (ಲಿಟನ್ ದಾಸ್ 28, ಜೇಕರ್ ಅಲಿ ಔಟಾಗದೇ 41, ಶಮೀಮ್ ಹುಸೇನ್ ಔಟಾಗದೇ 42; ವನಿಂದು ಹಸರಂಗ 25ಕ್ಕೆ2). ಶ್ರೀಲಂಕಾ: 14.4 ಓವರ್‌ಗಳಲ್ಲಿ 4 ವಿಕೆಟ್‌ಗೆ 140: ಪಥುಮ್ ನಿಸಾಂಕ 50, ಕಮಿಲ್ ಮಿಶಾರ ಔಟಾಗದೇ 46; ಮೆಹದಿ ಹಸನ್ 29ಕ್ಕೆ 2). **ಫಲಿತಾಂಶ:** ಶ್ರೀಲಂಕಾಕ್ಕೆ 6 ವಿಕೆಟ್‌ಗಳ ಜಯ. **ಪಂದ್ಯದ ಆಟಗಾರ:** ಕಮಿಲ್ ಮಿಶಾರ

# ಡೇವಿಸ್ ಕಪ್ ಕ್ವಾಲಿಫೈಯರ್ಸ್‌ಗೆ ಭಾರತ

**ಬೀಲ್ (ಸ್ವಿಜರ್ಲೆಂಡ್), (ಪಿಟಿಐ):** ಅನುಭವಿ ಸುಮಿತ್ ನಗಾಲ್ ಅವರು ಆಕ್ರಮಣಕಾರಿ ಯುವ ಆಟಗಾರ ಹೆನ್ರಿ ಬೆರ್ನೆಟ್ ಅವರನ್ನು ಮೊದಲ ರಿವರ್ಸ್ ಸಿಂಗಲ್ಸ್‌ನಲ್ಲಿ ಸೋಲಿಸಿದರು. ಇದರೊಂದಿಗೆ ಭಾರತ ತಂಡವು ಡೇವಿಸ್ ಕಪ್ ವಿಶ್ವಗುಂಪಿನ (1) ಪಂದ್ಯದಲ್ಲಿ ಶನಿವಾರ ಸ್ವಿಜರ್ಲೆಂಡ್ ತಂಡವನ್ನು 3–1 ರಿಂದ ಸೋಲಿಸಿತು.

ಮೊದಲ ದಿನವಾದ ಶುಕ್ರವಾರ ದಕ್ಷಿಣೇಶ್ವರ ಸುರೇಶ್ ಮತ್ತು ಸುಮಿತ್ ನಗಾಲ್ ಸಿಂಗಲ್ಸ್ ಪಂದ್ಯಗಳನ್ನು ಗೆದ್ದು ಭಾರತಕ್ಕೆ 2–0 ಮುನ್ನಡೆ ಒದಗಿಸಿದ್ದರು. ಶನಿವಾರ ಮಧ್ಯಾಹ್ನ ಡಬಲ್ಸ್‌ನಲ್ಲಿ ಶ್ರೀರಾಮ್ ಬಾಲಾಜಿ ಮತ್ತು ರಿತ್ವಿಕ್ ಬೊಲ್ಲಿಪಲ್ಲಿ ಜೋಡಿ 1ಗಂಟೆ 26 ನಿಮಿಷಗಳ ಹೋರಾಟದಲ್ಲಿ 7–6 (3), 4–6, 5–7 ರಲ್ಲಿ ಜಾಕುಬ್ ಪಾಲ್–ಡೊಮಿನಿಕ್ ಸ್ಟ್ರಿಕರ್ ಅವರಿಗೆ ಮಣಿದ ಕಾರಣ ಭಾರತದ ಮುನ್ನಡೆ 2–1ಕ್ಕೆ ಇಳಿದಿತ್ತು.

ಮರು ಸಿಂಗಲ್ಸ್‌ನಲ್ಲಿ ನಗಾಲ್ ಅವರು ಜೆರೋಮ್ ಕಿಮ್ ಅವರನ್ನು ಎದುರಿಸಬೇಕಿತ್ತು. ಆದರೆ ಸ್ವಿಸ್ ತಂಡ ತನ್ನ ಪಾಲಿಗೆ ನಿರ್ಣಾಯಕ ಪಂದ್ಯಕ್ಕೆ ಹಾಲಿ ಆಸ್ಟ್ರೇಲಿಯನ್ ಓಪನ್ ಜೂನಿಯರ್ ಚಾಂಪಿಯನ್ ಬೆರ್ನೆಟ್ ಅವರನ್ನು ಕಣಕ್ಕಿಳಿಸಿತ್ತು. ಆದರೆ ನಗಾಲ್ ಈ ಪಂದ್ಯವನ್ನು ಸುಲಭವಾಗಿ 6–1, 6–3 ರಿಂದ ಗೆದ್ದರು.

ಇದು 1993ರ ನಂತರ ಭಾರತ ತಂಡವು ದೇಶದಿಂದ ಹೊರಗೆ ಯುರೋಪ್ ತಂಡದ ಮೇಲೆ ಸಾಧಿಸಿದ ಮೊದಲ ಜಯ. ಭಾರತವು ಆ ವರ್ಷ ಫ್ರಾನ್ಸ್ ತಂಡವನ್ನು ಸೋಲಿಸಿತ್ತು.

### ಭಾರತ ವನಿತೆಯರಿಗೆ ವಿಶ್ವಕಪ್ ತಾಲೀಮು

**ಮುಲ್ಲನಪುರ (ಪಿಟಿಐ):** ಮಹಿಳಾ ವಿಶ್ವಕಪ್‌ಗೆ ದಿನಗಣನೆ ಆರಂಭವಾಗಿರುವಂತೆ ಭಾರತ ತಂಡ ಅಂತಿಮ ತಾಲೀಮು ಆಗಿ ಆಸ್ಟ್ರೇಲಿಯಾ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿ ಆಡಲಿದೆ. ಈ ಸರಣಿಯ ಮೊದಲ ಪಂದ್ಯ ಭಾನುವಾರ ಇಲ್ಲಿ ನಡೆಯಲಿದೆ.

ಹರ್ಮನ್‌ಪ್ರೀತ್ ಕೌರ್ ಪಡೆಗೆ, ತವರಿನಲ್ಲಿ ನಡೆಯುವ ವಿಶ್ವಕಪ್‌ಗೆ ಸಂಯೋಜನೆಗಳನ್ನು ಅಂತಿಮಗೊಳಿಸಲು ಈ ಸರಣಿ ನೆರವಾಗಲಿದೆ. ಅಷ್ಟೇ ಅಲ್ಲ, 2024ರ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾ ಕೈಲಿ ಅನುಭವಿಸಿದ 0–3 ವೈಟ್‌ವಾಷ್‌ಗೆ ಸೇಡು ತೀರಿಸಲು ಸದವಕಾಶ.

ಆ ಹಿನ್ನಡೆಯ ನಂತರ ಭಾರತ ಉತ್ತಮ ಪ್ರದರ್ಶನ ನೀಡುತ್ತ ಬಂದಿದೆ. ಐರ್ಲೆಂಡ್ ವಿರುದ್ಧ ತವರಿನಲ್ಲಿ 3–0 ಗೆಲುವು, ದಕ್ಷಿಣ ಆಫ್ರಿಕಾ, ಶ್ರೀಲಂಕಾ ಒಳಗೊಂಡ ತ್ರಿಕೋನ ಸರಣಿಯಲ್ಲಿ ಜಯ. ಇಂಗ್ಲೆಂಡ್ ವಿರುದ್ಧ ಟಿ20 ಸರಣಿ (3–2) ಮತ್ತು ಏಕದಿನ ಸರಣಿ (2–1) ಗೆಲುವು ತಂಡದಲ್ಲಿ ಉತ್ಸಾಹ ಮೂಡಿಸಿದೆ. ಆಸ್ಟ್ರೇಲಿಯಾ ಕಡೆ ವಿಕೆಟ್ ಕೀಪರ್ – ಬ್ಯಾಟರ್ ಬೆತ್ ಮೂನಿ ಅವರು ಭಾರತ ವಿರುದ್ಧ ಉತ್ತಮ ಆಟದ ದಾಖಲೆ ಹೊಂದಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.30

## ದುಲೀಪ್ ಟ್ರೋಫಿ ಫೈನಲ್: ದ್ವಿಶತಕದಂಚಿನಲ್ಲಿ ಎಡವಿದ ಯಶ್ ರಾಥೋಡ್
# ಗೆಲುವಿನತ್ತ ಕೇಂದ್ರ ಚಿತ್ತ; ದಕ್ಷಿಣ ಮರುಹೋರಾಟ

• ಗಿರೀಶದೊಡ್ಡಮನಿ

**ಬೆಂಗಳೂರು:** ಭರ್ತಿ ಎಂಟು ಗಂಟೆ ಕ್ರೀಸ್‌ನಲ್ಲಿ ಕಳೆದ ಯಶ್ ರಾಥೋಡ್ ಕೇವಲ ಆರು ರನ್‌ಗಳ ಅಂತರದಿಂದ ‘ದ್ವಿಶತಕ’ದ ಸಂಭ್ರಮವನ್ನು ತಪ್ಪಿಸಿಕೊಂಡರು. ಆದರೆ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಕೇಂದ್ರ ವಲಯ ಬಳಗದ ಗೆಲುವಿನ ಅವಕಾಶವನ್ನು ‘ದುಪ್ಪಟ್ಟು’ ಮಾಡಿದರು.

ನಗರದ ಹೊರವಲಯದಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ನಡೆಯುತ್ತಿರುವ ದಕ್ಷಿಣ ವಲಯದ ಎದುರಿನ ಫೈನಲ್ ಪಂದ್ಯದ ಮೂರನೇ ದಿನದಾಟದಲ್ಲಿ ರಜತ್ ಪಾಟೀದಾರ್ ಬಳಗವು ಮೊದಲ ಇನಿಂಗ್ಸ್‌ನಲ್ಲಿ 511 ರನ್ ಗಳಿಸಿ 362 ರನ್‌ಗಳ ಭಾರಿ ಮುನ್ನಡೆ ಸಾಧಿಸಿತು. ಇದಕ್ಕುತ್ತರವಾಗಿ ಎರಡನೇ ಇನಿಂಗ್ಸ್ ಆರಂಭಿಸಿರುವ ದಕ್ಷಿಣ ವಲಯವು ದಿನದಾಟದ ಅಂತ್ಯಕ್ಕೆ 33 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 129 ರನ್ ಗಳಿಸಿದೆ. ಕನ್ನಡಿಗ ಸ್ಮರಣ್ ರವಿಚಂದ್ರನ್ (ಬ್ಯಾಟಿಂಗ್ 37) ಮತ್ತು ರಿಕಿ ಭುಯ್ (ಬ್ಯಾಟಿಂಗ್ 26) ಕ್ರೀಸ್‌ನಲ್ಲಿದ್ದಾರೆ.

ಪಂದ್ಯದಲ್ಲಿ ಇನ್ನೂ ಎರಡು ದಿನಗಳು ಬಾಕಿಯಿವೆ. ಕೇಂದ್ರ ವಲಯದ ಮೊದಲ ಇನಿಂಗ್ಸ್ ಮುನ್ನಡೆ ಚುಕ್ತಾ ಮಾಡಲು ದಕ್ಷಿಣ ವಲಯಕ್ಕೆ 233 ರನ್‌ಗಳು ಬೇಕು. ಅದರ ನಂತರ ಎದುರಾಳಿ ತಂಡಕ್ಕೆ ಕನಿಷ್ಠ 200 ರಿಂದ 250 ರನ್‌ಗಳ ಗುರಿ ನೀಡಬೇಕು. ನಂತರ ಎಲ್ಲ ವಿಕೆಟ್‌ಗಳನ್ನೂ ಕಬಳಿಸಿದರಷ್ಟೇ ಟ್ರೋಫಿಗೆ ಮುತ್ತಿಡಲು ಸಾಧ್ಯ. ಆದ್ದರಿಂದ ಸ್ಮರಣ್ ಮತ್ತು ರಿಕಿ ಮೇಲೆ ಈಗ ಎಲ್ಲರ ಕಣ್ಣು ನೆಟ್ಟಿದೆ.

ಆದರೆ ಕೇಂದ್ರ ತಂಡಕ್ಕೆ ಟ್ರೋಫಿ ಎತ್ತಿ ಹಿಡಿಯುವ ಹಾದಿ ಹೆಚ್ಚು ಕಠಿಣವೇನಿಲ್ಲ. ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿರುವುದರಿಂದ ತಂಡಕ್ಕೆ ಗೆಲ್ಲಲೇಬೇಕಾದ ಒತ್ತಡವೇನೂ ಇಲ್ಲ. ಡ್ರಾ ಆದರೂ ಸಾಕು. ಆದರೆ ದಕ್ಷಿಣ ವಲಯದ ಉಳಿದ ವಿಕೆಟ್


ಕೇಂದ್ರ ವಲಯದ ಯಶ್ ರಾಥೋಡ್ ಆಟದ ಸೊಬಗು
ಪ್ರಜಾವಾಣಿ ಚಿತ್ರ : ಪ್ರಶಾಂತ್ ಎಚ್‌.ಜಿ.

ಗಳಿಸಿ ‘ಇನಿಂಗ್ಸ್ ಗೆಲುವು’ ಸಾಧಿಸುವ ಛಲದಲ್ಲಿದೆ. ಆರ್‌ಸಿಬಿ ನಾಯಕನಾಗಿ ಮೂರು ತಿಂಗಳ ಹಿಂದೆ ಐಪಿಎಲ್ ಕಪ್ ಎತ್ತಿ ಹಿಡಿದಿದ್ದ ರಜತ್, ದುಲೀಪ್ ಟ್ರೋಫಿಗೂ ಮುತ್ತಿಕ್ಕುವ ಕನಸು ಕಾಣುತ್ತಿದ್ದಾರೆ.


**ಯಶ್ ಬ್ಯಾಟಿಂಗ್:** ಕೇಂದ್ರ ತಂಡವು ದೊಡ್ಡ ಮುನ್ನಡೆ ಪಡೆಯುವಲ್ಲಿ ಎಡಗೈ ಬ್ಯಾಟರ್ ಯಶ್ ಅವರ ಪಾಲು 194 (286ಎಸೆತ, 4X17, 6X2) ಉಳಿದ ಬ್ಯಾಟರ್‌ಗಳಿಗಿಂತ ಹೆಚ್ಚು.

ಶುಕ್ರವಾರ ರಜತ್ ಕೂಡ ಶತಕ ದಾಖಲಿಸಿದ್ದರು. ಅವರೊಂದಿಗೆ ಉಪಯುಕ್ತ ಜೊತೆಯಾಟವಾಡಿದ್ದ ಯಶ್ 137 ರನ್ ಗಳಿಸಿ ಕ್ರೀಸ್‌ನಲ್ಲಿ ಉಳಿದಿದ್ದರು. ಶನಿವಾರ ಬೆಳಿಗ್ಗೆ ಆಟ ಮುಂದುವರಿಸಿದರು. ಸಾರಾಂಶ್ ಜೈನ್ (69; 193ಎ, 4X7) ಜೊತೆ ಆರನೇ ವಿಕೆಟ್ ಜೊತೆಯಾಟದಲ್ಲಿ 176 ರನ್‌ಗಳನ್ನು ಸೇರಿಸಿದರು. ಯಶ್ ದ್ವಿಶತಕದತ್ತ ಹೆಜ್ಜೆಯಿಟ್ಟರು. ಚೆಂದದ ಡ್ರೈವ್, ಸ್ವೀಪ್‌ಗಳ ಮೂಲಕ ರನ್‌ಗಳನ್ನು ಸೂರೆ ಮಾಡಿದರು. ಆದರೆ ಊಟದ ವಿರಾಮದ ನಂತರ ಎಡಗೈ ವೇಗಿ ಗುರ್ಜಪನೀತ್ ಸಿಂಗ್ ಅವರ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದ ಯಶ್ ನಿರಾಸೆಯಿಂದ ನಿರ್ಗಮಿಸಿದರು. ನಂತರ 11 ರನ್‌ಗಳು ಸೇರುವಷ್ಟರಲ್ಲಿ ಉಳಿದ ಮೂರು ವಿಕೆಟ್‌ಗಳೂ ಪತನವಾದವು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: 63 ಓವರ್‌ಗಳಲ್ಲಿ 149. ಕೇಂದ್ರ ವಲಯ: 145.1 ಓವರ್‌ಗಳಲ್ಲಿ 511 (ಯಶ್ ರಾಥೋಡ್ 194, ಸಾರಾಂಶ್ ಜೈನ್ 69, ದೀಪಕ್ ಚಾಹರ್ 37, ಗುರ್ಜನಪ್ರೀತ್ ಸಿಂಗ್ 124ಕ್ಕೆ4, ಅಂಕಿತ್ ಶರ್ಮಾ 180ಕ್ಕೆ4) ಎರಡನೇ ಇನಿಂಗ್ಸ್: ದಕ್ಷಿಣ ವಲಯ: 33 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 129 (ತನ್ಮಯ್ ಅಗರವಾಲ್ 26, ಮೋಹಿತ್ ಕಾಳೆ 38, ಆರ್. ಸ್ಮರಣ್ ಬ್ಯಾಟಿಂಗ್ 37, ರಿಕಿ ಭುಯ್ ಬ್ಯಾಟಿಂಗ್ 26)

# ಫೈನಲ್‌ಗೆ ಲಕ್ಷ್ಯ, ಸಾತ್ವಿಕ್–ಚಿರಾಗ್

**ಹಾಂಗ್‌ಕಾಂಗ್ (ಪಿಟಿಐ):** ಭಾರತದ ಅಗ್ರ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಅವರು ಹಾಂಗ್‌ಕಾಂಗ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಗೆಲ್ಲುವ ಮೂಲಕ, ಎರಡು ವರ್ಷಗಳಲ್ಲಿ ಮೊದಲ ಬಾರಿ ಪ್ರಮುಖ ಟೂರ್ನಿಯೊಂದರ ಫೈನಲ್ ತಲುಪಿದರು. ಡಬಲ್ಸ್‌ನಲ್ಲಿ ಭಾರತದ ದಿಗ್ಗಜರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರೂ ಪ್ರಶಸ್ತಿ ಸುತ್ತಿಗೆ ಕಾಲಿಟ್ಟರು.


ಲಕ್ಷ್ಯ ಸೇನ್

ಉತ್ತರಾಖಂಡದ ಅಲ್ಮೋರಾದ ಲಕ್ಷ್ಯ ಅವರು ಶನಿವಾರ ತೀವ್ರ ಹೋರಾಟದ ನಂತರ 23–21 22–20 ರಿಂದ ಮೂರನೇ ಶ್ರೇಯಾಂಕದ ಆಟಗಾರ, ತೈವಾನ್‌ನ ಚೌ ಟಿಯೆನ್ ಚೆನ್ ಅವರನ್ನು ಹಿಮ್ಮೆಟ್ಟಿಸಿದರು. ಈ ಪಂದ್ಯ 56 ನಿಮಿಷ ನಡೆಯಿತು.

ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಆಗಿರುವ ಲಕ್ಷ್ಯ, 2023ರ ಜುಲೈನಲ್ಲಿ ಕೊನೆಯ ಬಾರಿಗೆ ಸೂಪರ್ 500 ಮಟ್ಟದ ಟೂರ್ನಿ ಗೆದ್ದಿದ್ದರು.

ಹಾಲಿ ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ಲಕ್ಷ್ಯ ಫೈನಲ್‌ನಲ್ಲಿ ಚೀನಾದ ಲಿ ಶಿ ಫೆಂಗ್ ಅವರನ್ನು ಎದುರಿಸಲಿದ್ದಾರೆ. ಎರಡನೇ ಶ್ರೇಯಾಂಕದ ಫೆಂಗ್ ಇನ್ನೊಂದು ಸೆಮಿಫೈನಲ್‌ನಲ್ಲಿ 21–18, 21–19 ರಿಂದ ಫ್ರಾನ್ಸ್‌ನ ಕ್ರಿಸ್ಟೊ ಪೊಪೋವ್ ಅವರನ್ನು ಪರಾಭವಗೊಳಿಸಿದರು.

**ಫೈನಲ್‌ಗೆ ಚಿರಾಗ್– ಸಾತ್ವಿಕ್:** ಒಂಬತ್ತನೇ ಕ್ರಮಾಂಕದ ಸಾತ್ವಿಕ್ ಸಾಯಿರಾಜ್– ಚಿರಾಗ್ ಜೋಡಿ 21–17, 21–15 ರಿಂದ ಚೀನಾ ತೈಪೆಯ ಬಿಂಗ್ ವೀ ಲಿನ್ ಮತ್ತು ಚೆನ್ ಚೆಂಗ್ ಕುವಾನ್ ಜೋಡಿಯನ್ನು ಸೋಲಿಸಿತು. ಸಾತ್ವಿಕ್–ಚಿರಾಗ್ ಜೋಡಿ ಈ ಋತುವಿನಲ್ಲಿ ಆರು ಟೂರ್ನಿಗಳ ಸೆಮಿಫೈನಲ್‌ನಲ್ಲಿ ಎಡವಿ ನಿರಾಸೆ ಅನುಭವಿಸಿತ್ತು.

ಈ ಟೂರ್ನಿಗೆ ಎಂಟನೇ ಶ್ರೇಯಾಂಕ ಗಳಿಸಿರುವ ಸಾತ್ವಿಕ್–ಚಿರಾಗ್ ಭಾನುವಾರ ನಡೆಯುವ ಫೈನಲ್‌ನಲ್ಲಿ ಚೀನಾದ ಲಿಯಾಂಗ್ ವೀ ಕೆಂಗ್– ವಾಂಗ್ ಚಾಂಗ್ ಜೋಡಿಯನ್ನು ಎದುರಿಸಲಿದೆ.

ಲಿಯಾಂಗ್– ವಾಂಗ್ ಜೋಡಿ ಇನ್ನೊಂದು ಸೆಮಿಫೈನಲ್‌ನಲ್ಲಿ ಚೀನಾ ತೈಪೆಯ ಫಾಂಗ್ ಚಿ ಲೀ– ಫಾಂಗ್ ಜೆನ್ ಲೀ ಜೋಡಿಯನ್ನು 21–19, 21–8 ರಿಂದ ನೇರ ಗೇಮ್‌ಗಳಲ್ಲಿ ಹಿಮ್ಮೆಟ್ಟಿಸಿತು.

# ಮೊದಲ ದಿನ ಭಾರತಕ್ಕೆ ನಿರಾಸೆ

**ಟೋಕಿಯೊ (ಪಿಟಿಐ):** ಭಾರತದ ರೇಸ್‌ವಾಕ್‌ರಗಳು, ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮೊದಲ ದಿನವಾದ ಶನಿವಾರ 35 ಕಿ.ಮೀ. ರೇಸ್‌ವಾಕ್ ಸ್ಪರ್ಧೆಯಲ್ಲಿ ನಿರಾಸೆ ಅನುಭವಿಸಿದರು. ಸಂದೀಪ್ ಕುಮಾರ್ ಅವರು ಪುರುಷರ ವಿಭಾಗದಲ್ಲಿ 23ನೇ ಸ್ಥಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ಪ್ರಿಯಾಂಕಾ 24ನೇ ಸ್ಥಾನ ಗಳಿಸಲಷ್ಟೇ ಶಕ್ತರಾದರು.

ಕಣದಲ್ಲಿದ್ದ ಭಾರತದ ಇನ್ನೊಬ್ಬ ಸ್ಪರ್ಧಿ ರಾಮ್ ಬಾಬೂ ಅವರನ್ನು ನಾಲ್ಕನೇ ರೆಡ್‌ಕಾರ್ಡ್ ಪಡೆದ ಕಾರಣ ಅನರ್ಹಗೊಳಿಸಲಾಯಿತು. ಅಷ್ಟರಲ್ಲಿ ಅವರು 24 ಕಿ.ಮೀ. ಕ್ರಮಿಸಿದ್ದರು. ಹಾಲಿ ರಾಷ್ಟ್ರೀಯ ಚಾಂಪಿಯನ್ (2ಗಂ.29 ನಿ. 56ಸೆ.) ಆಗಿರುವ ಅವರು ಎರಡು ವರ್ಷಗಳ ಹಿಂದೆ ಬುಡಾಪೆಸ್ಟ್ ಕೂಟದಲ್ಲಿ 27ನೇ ಸ್ಥಾನ ಪಡೆದಿದ್ದರು. ಇದೇ ತಪ್ಪಿಗೆ ರಾಮ್ ಸೇರಿದಂತೆ ಆರು ಮಂದಿ ಅನರ್ಹರಾದರು.

ಮಹಿಳೆಯರ 1,500 ಮೀ. ಓಟದ ಸ್ಪರ್ಧೆಯ ಎರಡನೇ ಹೀಟ್‌ನಲ್ಲಿ ಪೂಜಾ 11ನೇ ಸ್ಥಾನ ಗಳಿಸಿ ನಿರಾಶೆ ಅನುಭವಿಸಿದರು. 14 ಮಂದಿ ಆ ರೇಸ್‌ನಲ್ಲಿದ್ದರು.

## ಸಂಕ್ಷಿಪ್ತ ಸುದ್ದಿ

### ‘ವರ್ಷಾಂತ್ಯದೊಳಗೆ ರಾಷ್ಟ್ರೀಯ ಕ್ರೀಡಾ ಮಂಡಳಿ ರಚನೆ’

**ನವದೆಹಲಿ (ಪಿಟಿಐ):** ಕುತೂಹಲದಿಂದ ಕಾಯಲಾಗುತ್ತಿರುವ ರಾಷ್ಟ್ರೀಯ ಕ್ರೀಡಾ ಮಂಡಳಿಯನ್ನು ಡಿಸೆಂಬರ್ ಅಂತ್ಯದೊಳಗೆ ರೂಪಿಸಲಾಗುತ್ತದೆ. ರಾಷ್ಟ್ರೀಯ ಫೆಡರೇಷನ್‌ಗಳಿಗೆ ಮಾನ್ಯತೆ ನೀಡುವ ಅಥವಾ ಅಮಾನತು ಮಾಡುವ, ಅವುಗಳ ಹಣಕಾಸು ವ್ಯವಹಾರಗಳ ಕಣ್ಗಾವಲಿಡುವ ಪರಮಾಧಿಕಾರವನ್ನು ಈ ಮಂಡಳಿ ಹೊಂದಿದೆ.

ಬರುವ ಜನವರಿಯಿಂದ ಕ್ರೀಡಾನೀತಿ ಪೂರ್ಣಪ್ರಮಾಣದಲ್ಲಿ ಅನುಷ್ಠಾನಕ್ಕೆ ಬರಲಿದೆ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಭರವಸೆ ನೀಡಿದ್ದರು. ಈಗ ಕ್ರೀಡಾ ಮಂಡಳಿಯ ರಚನೆ ಈ ಪ್ರಕ್ರಿಯೆಯಲ್ಲಿ ಮಹತ್ವದ ಮೈಲಿಗಲ್ಲಾಗಲಿದೆ.

‘ರಾಷ್ಟ್ರೀಯ ಕ್ರೀಡಾ ಮಂಡಳಿಯನ್ನು ಮೂರು ತಿಂಗಳಲ್ಲಿ ರಚಿಸಲಾಗುತ್ತದೆ. ಪ್ರಕ್ರಿಯೆಗೆ ಈಗಾಗಲೇ ವೇಗ ನೀಡಲಾಗಿದೆ. ನಿಯಮಗಳನ್ನು ರೂಪಿಸುವ ಮತ್ತು ಕ್ರೀಡಾ ನೀತಿಯ ಜಾರಿ ಕೆಲಸವೂ ನಡೆಯುತ್ತಿದೆ’ ಎಂದು ಕ್ರೀಡಾ ಸಚಿವಾಲಯದ ಮೂಲವು ಶನಿವಾರ ಪಿಟಿಐಗೆ ತಿಳಿಸಿದೆ. ಆದರೆ ಇದಕ್ಕೆ ಸಂಬಂಧಿಸಿ ವಿವರಗಳನ್ನು ಬಹಿರಂಗಪಡಿಸಲಿಲ್ಲ.

### ಜೈಪುರಕ್ಕೆ ಮಣಿದ ಯೋಧಾಸ್

**ಜೈಪುರ (ಪಿಟಿಐ):** ನಿತಿನ್ ಕುಮಾರ್ ಮತ್ತು ಅಲಿ ಸಮದಿ ಅವರ ಅಮೋಘ ರೇಡಿಂಗ್ ಬಲದಿಂದ ಆತಿಥೇಯ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 41–29ರಿಂದ ಯು.ಪಿ. ಯೋಧಾಸ್ ತಂಡವನ್ನು ಮಣಿಸಿತು.

ಇಲ್ಲಿನ ಎಸ್‌ಎಂಎಸ್ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದ ಮೊದಲಾರ್ಧದಲ್ಲಿ 23–12ರಿಂದ ಮುನ್ನಡೆ ಪಡೆದ ಜೈಪುರ ತಂಡವು ದ್ವಿತೀಯಾರ್ಧದಲ್ಲೂ ಪಾರಮ್ಯ ಮೆರೆಯಿತು.

ಜೈಪುರ ಪರ ನಿತಿನ್ ಮತ್ತು ಸಮದಿ ಕ್ರಮವಾಗಿ 11 ಮತ್ತು 10 ಅಂಕ ಗಳಿಸಿದರು. ಯೋಧಾಸ್ ಪರ ಕನ್ನಡಿಗ ಗಗನ್ ಗೌಡ (15 ಅಂಕ) ಮಿಂಚಿದರು. ಎರಡು ಬಾರಿಯ ಚಾಂಪಿಯನ್ ಜೈಪುರ ತಂಡಕ್ಕೆ ಇದು ಆರು ಪಂದ್ಯಗಳಲ್ಲಿ ಮೂರನೇ ಗೆಲುವಾಗಿದೆ.

ದಿನದ ಮತ್ತೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು 39–33ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು. ಪುಣೇರಿ ತಂಡಕ್ಕೆ ಏಳು ಪಂದ್ಯಗಳಲ್ಲಿ ಇದು ಐದನೇ ಗೆಲುವಾಗಿದೆ. ಒಟ್ಟು 10 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

### ಬಾಕ್ಸಿಂಗ್: ಫೈನಲ್‌ಗೆ ಮೀನಾಕ್ಷಿ



**ಲಿವರ್‌ಪೂಲ್ (ಪಿಟಿಐ):** ಭಾರತದ ಯುವ ಬಾಕ್ಸರ್ ಮೀನಾಕ್ಷಿ ಅವರು ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ತಲುಪಿದರು.

ಇಲ್ಲಿ ಪ್ರಶಸ್ತಿ ಸುತ್ತು ತಲುಪಿದ ಭಾರತದ ಮೂರನೇ ಬಾಕ್ಸರ್ ಅವರಾಗಿದ್ದಾರೆ. ಇದಕ್ಕೂ ಮುನ್ನ ಜಾಸ್ಮಿನ್ ಲಂಬೋರಿಯಾ ಮತ್ತು ನೂಪುರ್ ಶ್ಯೊರಾನ್ ಫೈನಲ್ ಪ್ರವೇಶಿಸಿದ್ದಾರೆ.

ಮೀನಾಕ್ಷಿ ಅವರು ಮಹಿಳೆಯರ 48 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ ಶನಿವಾರ 5–0ಯಿಂದ ಎರಡು ಬಾರಿಯ ಏಷ್ಯನ್ ಕಂಚಿನ ಪದಕ ವಿಜೇತೆ ಲೂತ್ಸೈಖನಿ ಅಲ್ಟಾಂತ್ ಸೆಟ್ಸೆಗ್ (ಮಂಗೋಲಿಯಾ) ಅವರನ್ನು ಮಣಿಸಿದರು.

57 ಕೆಜಿ ವಿಭಾಗದಲ್ಲಿ ಜಾಸ್ಮಿನ್ 5-0ರಿಂದ ವೆನೆಜುವೆಲಾದ ಒಮೈಲಿನ್ ಅಲ್ಕಾಲಾ ಅವರನ್ನು ಮಣಿಸಿ, ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದ್ದರು. ಶ್ಯೊರಾನ್ (80+ ಕೆ.ಜಿ.) ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಟರ್ಕಿಯ ಸೆಮಾ ಡುಜ್ತಾಸ್ ಅವರನ್ನು 5–0ರಿಂದ ಹಿಮ್ಮೆಟ್ಟಿಸಿದ್ದರು.

ಪ್ರಶಸ್ತಿ ಸುತ್ತಿನಲ್ಲಿ ಜಾಸ್ಮಿನ್ ಅವರು ಪ್ಯಾರಿಸ್ ಒಲಿಂಪಿಕ್ ಬೆಳ್ಳಿ ಪದಕ ವಿಜೇತೆ ಪೋಲೆಂಡ್‌ನ ಜೂಲಿಯಾ ಸ್ಜೆರೆಮೆಟಾ ಅವರನ್ನು ಎದುರಿಸಲಿದ್ದಾರೆ. ನೂಪುರ್ ಅವರು ಹಲವು ಬಾರಿತ ಯುರೋಪಿಯನ್ ಚಾಂಪಿಯನ್‌ಷಿಪ್ ಪದಕ ವಿಜೇತೆ ಅಗಾಟಾ ಕಾಜ್ಮಾರ್ಸ್ಕಾ (ಪೋಲೆಂಡ್) ಅವರನ್ನು ಎದುರಿಸುವರು.

### ಶೂಟಿಂಗ್: ಇಶಾಗೆ ಚಿನ್ನ



**ನಿಂಗ್ಬೊ (ಚೀನಾ), (ಪಿಟಿಐ):** ಒಲಿಂಪಿಯನ್ ಇಶಾ ಸಿಂಗ್ ಅವರು 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಶನಿವಾರ ಚಿನ್ನದ ಪದಕ ಗೆದ್ದರು. ಆ ಮೂಲಕ ಐಎಸ್‌ಎಸ್‌ಎಫ್ ವಿಶ್ವಕಪ್ ರೈಫಲ್/ ಪಿಸ್ತೂಲ್ ವಿಶ್ವಕಪ್‌ನಲ್ಲಿ ಭಾರತದ ಪದಕದ ಬರವನ್ನು ನೀಗಿಸಿದರು.

ನಿಂಗ್ಬೊ ಒಲಿಂಪಿಕ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ನಡೆದ ಸ್ಪರ್ಧೆಯ ಫೈನಲ್‌ನಲ್ಲಿ, 20 ವರ್ಷ ವಯಸ್ಸಿನ ಇಶಾ 0.1 ಪಾಯಿಂಟ್‌ನಿಂದ ತವರಿನ ಫೇವರಿಟ್ ಯಾವೊ ಕ್ಸಿಯಾನ್ಸುನ್ ಅವರನ್ನು ಸೋಲಿಸಿದರು. ಕಂಚಿನ ಪದಕ ದಕ್ಷಿಣ ಕೊರಿಯಾದ ಓಹ್ ಯೆಜಿನ್ ಪಾಲಾಯಿತು. ಭಾರತ ಪದಕ ಪಟ್ಟಿಯಲ್ಲಿ ಐದನೇ ಸ್ಥಾನ ಪಡೆಯಿತು. ಚೀನಾ 2 ಚಿನ್ನ, 4 ಬೆಳ್ಳಿ, 1 ಕಂಚಿನ ಪದಕ ಪಡೆದು ಅಗ್ರಸ್ಥಾನದಲ್ಲಿದೆ.

# ಪ್ರಶಸ್ತಿಗೆ ಭಾರತ, ಚೀನಾ ಸೆಣಸಾಟ

**ಹಾಂಗ್‌ಝೌ (ಚೀನಾ) (ಪಿಟಿಐ):** ಭಾರತ ಮತ್ತು ಚೀನಾ ತಂಡಗಳು ಮಹಿಳಾ ಏಷ್ಯಾ ಕಪ್ ಹಾಕಿ ಟೂರ್ನಿ ಫೈನಲ್ ಪಂದ್ಯದಲ್ಲಿ ಭಾನುವಾರ ಮುಖಾಮುಖಿಯಾಗಲಿವೆ. ಪ್ರಶಸ್ತಿ ಗೆದ್ದ ತಂಡವು ಮುಂದಿನ ವರ್ಷ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಆತಿಥ್ಯದಲ್ಲಿ ನಡೆಯುವ ವಿಶ್ವಕಪ್‌ಗೆ ಅರ್ಹತೆ ಪಡೆಯಲಿದೆ.

ಶನಿವಾರ ನಡೆದ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಭಾರತದ ವನಿತೆಯರು 1–1 ಗೋಲುಗಳಿಂದ ಹಾಲಿ ಚಾಂಪಿಯನ್ ಜಪಾನ್ ವಿರುದ್ಧ ಡ್ರಾ ಸಾಧಿಸಿದರು. ಮತ್ತೊಂದು ಪಂದ್ಯದಲ್ಲಿ ಚೀನಾ ತಂಡವು 1–0ಯಿಂದ ದಕ್ಷಿಣ ಕೊರಿಯಾ ವಿರುದ್ಧ ಗೆಲುವು ಸಾಧಿಸಿತು.

ಸೂಪರ್ ಫೋರ್ ಹಂತದಲ್ಲಿ ಕ್ರಮವಾಗಿ ಮೊದಲೆರಡು ಸ್ಥಾನ ಪಡೆದ ಚೀನಾ ಮತ್ತು ಭಾರತ ತಂಡಗಳು ಪ್ರಶಸ್ತಿ ಸುತ್ತಿಗೆ ಮುನ್ನಡೆದವು. ಬಲಿಷ್ಠ ಚೀನಾ ತಂಡವು ಸೂಪರ್ ಫೋರ್ ಹಂತದ ಮೂರು ಪಂದ್ಯಗಳನ್ನು ಗೆದ್ದು, 9 ಅಂಕ ಕಲೆ ಹಾಕಿತು. ಭಾರತ ತಂಡವು ಒಂದು ಗೆಲುವು, ಒಂದು ಡ್ರಾ, ಮತ್ತೊಂದು ಸೋಲಿನೊಂದಿಗೆ 4 ಅಂಕ ಗಳಿಸಿತು. ಜಪಾನ್ (2 ಅಂಕ) ಮತ್ತು ಕೊರಿಯಾ (1 ಅಂಕ) ತಂಡಗಳು ಮೂರನೇ ಸ್ಥಾನಕ್ಕಾಗಿ ಸೆಣಸಾಡಲಿವೆ.

ಜಪಾನ್ ವಿರುದ್ಧದ ಪಂದ್ಯದಲ್ಲಿ ಭಾರತದ ಬ್ಯೂಟಿ ಡುಂಗ್ ಡುಂಗ್ (7ನೇ ನಿಮಿಷ) ಗೋಲು ದಾಖಲಿಸಿದರು. ಜಪಾನ್ ಪರ ಕೊಬಯಕಾವಾ ಶಿಹೊ (58ನೇ) ಗೋಲು ಗಳಿಸಿದರು. ಗುಂಪು ಹಂತದಲ್ಲೂ ಭಾರತ ಮತ್ತು ಜಪಾನ್ ಪಂದ್ಯ 2–2ರಿಂದ ಡ್ರಾ ಆಗಿತ್ತು.